# ಕರ್ನಾಟಕ ವಿಧಾನ ಪರಿಷತ್ತು

(159ನೇ ಅಧಿವೇಶನ)

ಗುರುವಾರ, 20ನೇ ಆಗಸ್ಟ್ 2026

## ವಿಷಯಾನುಕ್ರಮಣಿಕೆ (INDEX)


1. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

546 – ಸಿಂಧನೂರು ತಾಲ್ಲೂಕಿನಲ್ಲಿ ಅಕ್ರಮ ಚಟುವಟಿಕೆಗಳನ್ನು ನಿಯಂತ್ರಿಸುವ ಬಗ್ಗೆ.
- ಶ್ರೀ ಬಸನಗೌಡ ಬಾದರ್ಲಿ
- ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ಇ-ಆಡಳಿತ ಸಚಿವರು)

562 – ಕೆರೆ ಒತ್ತುವರಿ ಕುರಿತು
- ಡಾ: ಆರತಿ ಕೃಷ್ಣ
- ಶ್ರೀ ಕೃಷ್ಣ ಬೈರೇಗೌಡ (ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು)

541 – ಕೇಂದ್ರ ಕಾರಾಗೃಹವನ್ನು ಸ್ಥಳಾಂತರಿಸುವ ಕುರಿತು
- ಶ್ರೀ ಎನ್.ಎಸ್. ಬೋಸರಾಜು
- ಶ್ರೀ ಪ್ರಿಯಾಂಕ್ ಖರ್ಗೆ (ಗೃಹ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ಇ-ಆಡಳಿತ ಸಚಿವರು)

614 – BMTF ಕಾರ್ಯವಿಧಾನ ಬಗ್ಗೆ
- ಶ್ರೀ ರಾಮೋಜಿಗೌಡ
- ಶ್ರೀ ಕೃಷ್ಣ ಬೈರೇಗೌಡ (ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು)

530 – ರಾಜ್ಯದಲ್ಲಿ ಸ್ಟಾರ್ಟ್‌ಅಪ್‌ಗಳ ನೋಂದಣಿ ಕುರಿತು
- ಶ್ರೀ ಶಿವಣ್ಣ ಬಿ.ಎಸ್.
- ಶ್ರೀ ಪ್ರಿಯಾಂಕ್ ಖರ್ಗೆ (ಗೃಹ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ಇ-ಆಡಳಿತ ಸಚಿವರು)

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

2. ನಿಯಮ 58ಎ ಮೇರೆಗೆ ಶೂನ್ಯವೇಳೆ ಪ್ರಸ್ತಾವಗಳು

ಅ) ವಸತಿ ಶಾಲೆಗಳಲ್ಲಿ ಆಹಾರ ಸುರಕ್ಷತೆ ತಪಾಸಣೆ ಮಾಡುವ ಕುರಿತು.
- ಶ್ರೀ ಕೆ.ಅಬ್ದುಲ್ ಜಬ್ಬರ್
- ಡಾ: ಯತೀಂದ್ರ ಎಸ್. (ಸಭಾನಾಯಕರು)

**ಆ) ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜನ್ನು ಮಂಜೂರು ಮಾಡುವ ಕುರಿತು.**

– ಶ್ರೀ ಬಸನಗೌಡ ಬಾದರ್ಲಿ
– ಡಾ: ಯತೀಂದ್ರ ಎಸ್. (ಸಭಾನಾಯಕರು)

**ಇ) ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ಕಾವೇರಿ ವನ್ಯಧಾಮದಲ್ಲಿ ಘಟಿಸಿದ ಶೂಟೌಟ್ ಪ್ರಕರಣದಿಂದ ಮೃತಪಟ್ಟ ಕುಟುಂಬದವರಿಗೆ ಧನ ಸಹಾಯ ನೀಡುವ ಕುರಿತು.**

– ಶ್ರೀ ಐವನ್ ಡಿ'ಸೋಜಾ
– ಡಾ: ಯತೀಂದ್ರ ಎಸ್. (ಸಭಾನಾಯಕರು)

**ಈ) ರಾಜ್ಯದಲ್ಲಿರುವ ಮೂಲನಿವಾಸಿಗಳಿಗೆ ಪೌಷ್ಟಿಕ ಆಹಾರಗಳ ಕಿಟ್ ಕಳೆದ 05 ತಿಂಗಳುಗಳಿಂದ ಸ್ಥಗಿತ ಮಾಡಿರುವ ಕುರಿತು.**

– ಶ್ರೀ ಮಂಜುನಾಥ್ ಭಂಡಾರಿ
– ಡಾ: ಯತೀಂದ್ರ ಎಸ್. (ಸಭಾನಾಯಕರು)

**ಉ) ಪ್ರೌಢಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಗಣಿತ ಶಿಕ್ಷಕರ ನೇಮಕಾತಿ ಮಾಡುವ ಕುರಿತು.**

– ಶ್ರೀ ರಾಮೋಜಿ ಗೌಡ
– ಡಾ: ಯತೀಂದ್ರ ಎಸ್. (ಸಭಾನಾಯಕರು)

**ಊ) ಶಿವಮೊಗ್ಗ ನಗರದಲ್ಲಿ ನಾಗರಿಕ ಸೌಲಭ್ಯಗಳು ಹದಗೆಟ್ಟಿದ್ದು, ಮೂಲಸೌಕರ್ಯಗಳನ್ನು ಪೂರೈಸುವಲ್ಲಿ ವಿಳಂಬವಾಗುತ್ತಿರುವ ಕುರಿತು.**

– ಶ್ರೀಮತಿ ಬಲ್ಕೀಸ್ ಬಾನು
– ಡಾ: ಯತೀಂದ್ರ ಎಸ್. (ನಗರಾಭಿವೃದ್ಧಿ ಸಚಿವರು)

**ಋ) ಎಲ್ ನಿನೊ – ಲಾ ನಿನಾ ಸೇರಿದಂತೆ ಹವಾಮಾನ ವೈಪರೀತ್ಯದ ಹಿನ್ನೆಲೆಯಲ್ಲಿ ಕರಾವಳಿ ಕರ್ನಾಟಕದಲ್ಲಿ ಉಳಿದ ಮಳೆ ನೀರನ್ನು ಸಂರಕ್ಷಿಸಿ, ಅಂತರ್ಜಲ ಮರುಪೂರಣಕ್ಕೆ ತುರ್ತು ಕ್ರಮ ಕೈಗೊಳ್ಳುವ ಕುರಿತು.**

– ಶ್ರೀ ಪಿ.ವಿ. ಮೋಹನ್
– ಡಾ: ಯತೀಂದ್ರ ಎಸ್. (ಸಭಾನಾಯಕರು)

**ಎ) ವರದಕ್ಷಿಣೆ ಕಿರುಕುಳಕ್ಕೆ 617 ಮಹಿಳೆಯರು ಬಲಿಯಾಗಿರುವ ಬಗ್ಗೆ.**

– ಶ್ರೀ ಜಗದೇವ್ ಗುತ್ತೇದಾರ್
– ಡಾ: ಯತೀಂದ್ರ ಎಸ್. (ಸಭಾನಾಯಕರು)

**3. ನಿಯಮ 58ಎ ಅಡಿಯಲ್ಲಿ ಪ್ರಸ್ತಾಪಿಸಿದ ಶೂನ್ಯವೇಳೆ ಸೂಚನೆಗಳಿಗೆ ಸರ್ಕಾರದ ಲಿಖಿತ ಉತ್ತರಗಳು**

**ಅ) ರಾಜ್ಯದ ಮಲೆನಾಡು ಪ್ರದೇಶಗಳ ಜಿಲ್ಲೆಗಳಲ್ಲಿ ಜನವಸತಿ ಗ್ರಾಮಗಳನ್ನು ಪರಿಸರ ಸೂಕ್ಷ್ಮ ಪ್ರದೇಶಗಳೆಂದು ಕೇಂದ್ರ ಸರ್ಕಾರ ಘೋಷಿಸಿರುವ ಬಗ್ಗೆ.**

– ಡಾ: ಯತೀಂದ್ರ ಎಸ್ (ಸಭಾನಾಯಕರು) (ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರ ಪರವಾಗಿ)

**ಆ) ರಾಜ್ಯದ 27 ಜಿಲ್ಲೆಗಳ ಅಂತರ್ಜಲದಲ್ಲಿ ಅಪಾಯಕಾರಿ ನೈಟ್ರೇಟ್ ಸಾಂದ್ರತೆ ಹೆಚ್ಚಾಗಿದ್ದು, ಸಾರ್ವಜನಿಕ ಆರೋಗ್ಯ ಕ್ಷೀಣಿಸುತ್ತಿರುವ ಬಗ್ಗೆ.**

– ಡಾ: ಯತೀಂದ್ರ ಎಸ್ (ಸಭಾನಾಯಕರು) (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ)

**ಇ) ಕಲಬುರಗಿ ಜಿಲ್ಲೆಯ 110 ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಘಟಕಗಳಿಗೆ ರೂ.50 ಕೋಟಿ ಸಹಾಯಧನ ಬಿಡುಗಡೆ ಮಾಡುವ ಬಗ್ಗೆ.**

**– ಡಾ: ಯತೀಂದ್ರ ಎಸ್ (ಸಭಾನಾಯಕರು) (ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರ ಪರವಾಗಿ)**

**ಈ) ಬೆರಳಚ್ಚು ನೀಡದಿರುವುದರಿಂದ ಪಡಿತರ ಸಿಗದೇ ಹಿರಿಯರು ಪರದಾಡುತ್ತಿರುವ ಬಗ್ಗೆ.**

– ಡಾ: ಯತೀಂದ್ರ ಎಸ್ (ಸಭಾನಾಯಕರು) (ಆಹಾರ, ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಸಚಿವರ ಪರವಾಗಿ)

**ಉ) ಶಿಕ್ಷಣ ಇಲಾಖೆಯ ವಿವಿಧ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.**

– ಡಾ: ಯತೀಂದ್ರ ಎಸ್ (ಸಭಾನಾಯಕರು) (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರ ಪರವಾಗಿ)

**4. ವಿಶೇಷ ಜಂಟಿ ಸದನ ಸಮಿತಿಯ ಕಾಲಾವಕಾಶವನ್ನು ವಿಸ್ತರಿಸುವ ಪ್ರಸ್ತಾವ**

**5. ಗಮನ ಸೆಳೆಯುವ ಸೂಚನೆ**

**"ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಒಳಮೀಸಲಾತಿಯ ಹೊಸ ವರ್ಗೀಕರಣದಡಿಯಲ್ಲಿ ಅಗತ್ಯ ಪುರಾವೆ ಒದಗಿಸಲಾಗದೆ ವಿದ್ಯಾರ್ಥಿಗಳು/ಅಭ್ಯರ್ಥಿಗಳು ಆತಂಕಕ್ಕೀಡಾಗಿರುವ ಬಗ್ಗೆ."**

– ಶ್ರೀ ಕೆ. ಶಿವಕುಮಾರ್

– ಡಾ॥ ಶರಣ ಪ್ರಕಾಶ್ ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು) (ಉಪ ಮುಖ್ಯಮಂತ್ರಿ ಹಾಗೂ ಕಂದಾಯ ಸಚಿವರ ಪರವಾಗಿ)

**(ಭೋಜನ ವಿರಾಮ)**

**6. ವಿರೋಧ ಪಕ್ಷಗಳ ಧರಣಿಯ ನಡುವೆ ಸದನದ ಕಲಾಪಗಳನ್ನು ನಡೆಸುವುದು ಸೂಕ್ತವಲ್ಲವೆನ್ನುವ ಕುರಿತು.**

- ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ಶಿವಕುಮಾರ್ ಕೆ.
- ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು)
- ಶ್ರೀ ಎನ್.ಎಸ್. ಬೋಸರಾಜು
- ಶ್ರೀ ಎ.ವಸಂತ ಕುಮಾರ್

**7. ಕರ್ನಾಟಕದ ಸಾಮಾಜಿಕ ಕ್ರಾಂತಿಯ ರೂವಾರಿ ದಿವಂಗತ ಡಿ. ದೇವರಾಜ ಅರಸು ಅವರ ಸ್ಮರಣೆ ಹಾಗೂ ಕೊಡುಗೆಗಳ ಕುರಿತು.**

- ಶ್ರೀ ಶಿವಕುಮಾರ್ ಕೆ.
- ಶ್ರೀ ರಘು ಆರ್.
- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಎನ್.ಎಸ್.ಬೋಸರಾಜು
- ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಎಂ.ನಾಗರಾಜು
- ಶ್ರೀ ಯು.ಟಿ.ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)
- ಶ್ರೀ ಎಸ್.ರವಿ
- ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
- ಡಾ: ಉಮಾಶ್ರೀ (ಉಪ ಸಭಾಪತಿಯವರು)
- ಶ್ರೀ ಐವನ್ ಡಿ'ಸೋಜಾ
- ಶ್ರೀ ಶಿವಣ್ಣ ಬಿ.ಎಸ್.
- ಶ್ರೀ ಪಿ.ವಿ.ಮೋಹನ್
- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಡಾ: ಯತೀಂದ್ರ ಎಸ್. (ಸಭಾನಾಯಕರು)

**8. ಪ್ರಕಟಣೆ**

**"ವಿಧಾನಸಭೆಯಿಂದ ಅಂಗೀಕೃತಾಗಿರುವ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ಕೋರಿರುವ ಕುರಿತು."**

~ ~ ~ ~ ~ ~

(780) 20-08-2026 12-15 KH/BNS

# ಕರ್ನಾಟಕ ವಿಧಾನ ಪರಿಷತ್ತು

ಗುರುವಾರ, 20ನೇ ಆಗಸ್ಟ್ 2026

ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ

ಮಧ್ಯಾಹ್ನ 12 ಗಂಟೆ 29 ನಿಮಿಷಕ್ಕೆ ಸಮಾವೇಶಗೊಂಡಿತು.

ಮಾನ್ಯ ಸಭಾಪತಿಯವರಾದ ಶ್ರೀ ಸಲೀಂ ಅಹ್ಮದ್ ಅವರು ಪೀಠದಲ್ಲಿ ಉಪಸ್ಥಿತರಾದರು.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಆ ಕಡೆ (ಆಡಳಿತ ಪಕ್ಷದ ಕಡೆ) ಕುರ್ಚಿಗಳು ಖಾಲಿ, ಖಾಲಿ.

**ಸಭಾಪತಿಯವರು:-** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ಬರುತ್ತಾರೆ.

**ಶ್ರೀ ಶರವಣ ಟಿ.ಎ. (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಮಲ್ಲಿ ಒಂದು ಮನವಿಯೇನೆಂದರೆ, ವಿಧಾನಸೌಧದಲ್ಲಿ ಕೆಲಸ ಮಾಡುವಂತಹ ಹೆಣ್ಣು ಮಕ್ಕಳು ಮತ್ತು ಬೇರೆ ಬೇರೆ ಕಡೆಯಿಂದ ಕೆಲಸಕ್ಕೆ ಇಲ್ಲಿಗೆ ಬರುವಂತಹವರದ್ದು ಒಂದು ಬೇಡಿಕೆ ಇದೆ. ಅದೇನೆಂದರೆ, ನಾಳೆ ಶುಕ್ರವಾರ ಶ್ರೀ ವರಮಹಾಲಕ್ಷ್ಮಿ ಹಬ್ಬ ಇದೆ. ದಯಮಾಡಿ, ನಾಳೆ ಒಂದು ದಿನ ವಿನಾಯಿತಿ ಕೊಡಬೇಕೆಂದು ಕೆಲವರೆಲ್ಲಾ ಬಂದು ಕೇಳಿಕೊಳ್ಳುತ್ತಿದ್ದರು. ಇದರ ಬಗ್ಗೆ ತಾವು ಸರ್ಕಾರಕ್ಕೆ ಮನವಿ ಮಾಡಬೇಕೆಂದು ಕೇಳುತ್ತೇನೆ.

**ಸಭಾಪತಿಯವರು:-** ಮಾನ್ಯ ಟಿ.ಎ.ಶರವಣರವರೇ, ಈಗ ಸಚಿವರೆಲ್ಲರೂ ಸದನಕ್ಕೆ ಬರುತ್ತಾರೆ. ನಾನು ಮಾತನಾಡುತ್ತೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾವು ಚರ್ಚೆ ಮಾಡುವುದಕ್ಕೆ ಸಿದ್ಧರಿದ್ದೇವೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷ. ಅದಕ್ಕಿಂತ ಮುಂಚೆ ನಾನು ಮಾತನಾಡುತ್ತೇನೆ. ನಂತರ ತಾವು ಮಾತನಾಡಿ.

(ಮುಂದು)

(781) 20.8.2026 12.30 ಪಿಕೆ:ಬಿಎನ್ಎಸ್ (ಸಭಾಪತಿಗಳ ಉಪಸ್ಥಿತಿ)

**(ಗೊಂದಲ)**

**ಸಭಾಪತಿಯವರು (ಮುಂದು):-**

ಕಳೆದ 3 ದಿವಸಗಳಿಂದ ಪರಿ ಪರಿಯಾಗಿ ತಮ್ಮಲ್ಲಿ ಬೇಡಿಕೊಳ್ಳುತ್ತಿದ್ದೇನೆ. ಮೊದಲು ಪ್ರಶ್ನೋತ್ತರ ನಡೆಸಬೇಕು, ಯಾವತ್ತೂ ಕೂಡ ಇದನ್ನು ಬದಲಾವಣೆ ಮಾಡುವುದಕ್ಕೆ ಹೋಗಬಾರದು. ಈ ರೀತಿಯ ನಿಯಮಗಳನ್ನು ನಾವೇ ಹಾಕಿಕೊಂಡಿದ್ದೇವೆ. ನಾನು ನಿನ್ನೆ ಕೂಡ ಎರಡು ಬಾರಿ ಮನವಿ ಮಾಡಿಕೊಂಡೆ, ಇವತ್ತೂ ಕೂಡ ಹೇಳುತ್ತೇನೆ. ಬಹಳಷ್ಟು ಸದಸ್ಯರುಗಳ ಪ್ರಶ್ನೆಗಳು ಬಂದಿರುತ್ತವೆ, ಅದಕ್ಕೆ ಉತ್ತರ ಕೊಡಲು ಸಂಬಂಧಪಟ್ಟ ಮಂತ್ರಿಗಳು ತಯಾರಾಗಿ ಬಂದಿರುತ್ತಾರೆ. ಅಲ್ಲದೇ, ಗಮನ ಸೆಳೆಯುವ ಸೂಚನೆಗಳು, ನಿಯಮ 330ರ ಮೇಲಿನ ಚರ್ಚೆ, ಶೂನ್ಯವೇಳೆ

ಇವುಗಳ ಅಡಿ ಕೇಳುವ ಪ್ರಶ್ನೆಗಳಿಗೆ ಉತ್ತರ ಕೊಡಲು ಸಚಿವರುಗಳು ಬಂದಿರುತ್ತಾರೆ. ಈ ಎಲ್ಲಾ ಪ್ರಕ್ರಿಯೆಗಳಿಗೆ ಸಾಕಷ್ಟು ದುಡ್ಡು ಖರ್ಚಾಗಿರುತ್ತದೆ. ನಾನು ಮತ್ತೆ ತಮ್ಮಲ್ಲಿ ಮನವಿ ಮಾಡುತ್ತೇನೆ. ಮೊದಲು ಪ್ರಶ್ನೋತ್ತರ ಮುಗಿಯಲಿ. ನಂತರ, ನೀವು ಏನು ಬೇಕಾದರೂ ಕೇಳಿ, ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಹೇಳಿ, ಉತ್ತರ ಕೊಡಿಸುವುದಕ್ಕೆ ಹೇಳಿ. ಸರ್ಕಾರದಿಂದ ಉತ್ತರ ಕೊಡಿಸುವಂತಹ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ರಾಜ್ಯದ ಜನತೆ ನಮ್ಮನ್ನು ಗಮನಿಸುತ್ತಿದೆ. ನಿನ್ನೆ ಸಾಯಂಕಾಲದಿಂದ ಇಂದು ಬೆಳಗ್ಗೆವರೆಗೆ ನೂರಾರು ಕರೆಗಳು ಬಂತು. ನೀವೇಕೆ ವಿರೋಧ ಪಕ್ಷದವರ ಬಳಿ ಮಾತನಾಡುತ್ತಿಲ್ಲ, ಏಕೆ ಹೀಗೆ ಸದನ ನಡೆಯುತ್ತಿದೆ ಎಂದು ಕೇಳಿದರು. ಪ್ರಸ್ತುತ ಬರದ ಸಮಸ್ಯೆ ಇದೆ, ನೀರಿನ ಸಮಸ್ಯೆ ಇದೆ, ಹಲವಾರು ವಿಚಾರಗಳನ್ನು ಚರ್ಚೆ ಮಾಡಬೇಕಿದೆ. ಇದು ಹಿರಿಯರ ಸದನವಾಗಿದೆ. ಇಲ್ಲೇಕೆ ಹೀಗೆ ಆಗುತ್ತಿದೆ ಎಂದು ಕೇಳಿದರು. ಈ ಕುರಿತು ಅನೇಕ ಸಾಹಿತಿಗಳೂ ಕೂಡ ನನ್ನ ಜೊತೆ ಮಾತನಾಡಿದರು. ನಾನು ಅವರಿಗೆ, ಈ ವಿಷಯದ ಬಗ್ಗೆ ನಾನು ನನ್ನ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ. ಇವತ್ತು ಸಹ ನಾನು ವಿರೋಧ ಪಕ್ಷದ ನಾಯಕರ ಜೊತೆ ಮಾತನಾಡುತ್ತೇನೆ ಎಂಬ ಮಾತನ್ನು ಹೇಳಿದೆ. ನಾನು ತಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಪ್ರಶ್ನೋತ್ತರ ಆದ ಮೇಲೆ, ನೀವು ಪ್ರಸ್ತಾಪಿಸಬಯಸುತ್ತಿರುವ ವಿಷಯದ ಬಗ್ಗೆ ಮಾತನಾಡಲು ಅವಕಾಶ ಮಾಡಿಕೊಡುತ್ತೇನೆ. ಮಾನ್ಯ ಮಂತ್ರಿಗಳೂ ಕೂಡ ತಯಾರಾಗಿ ಬಂದಿದ್ದಾರೆ. ಇವತ್ತು ಸದನಕ್ಕೆ ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರೂ ಕೂಡ ಬಂದಿದ್ದಾರೆ. ನೀವು ಕೇಳುವ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಕೊಡುತ್ತಾರೆ. ಹಾಗಾಗಿ ಮೊದಲು ಪ್ರಶ್ನೋತ್ತರ ನಡೆಯುವುದಕ್ಕೆ ಅವಕಾಶ ಮಾಡಿಕೊಡಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ೩ ದಿವಸಗಳಿಂದ ತಮ್ಮ ಮನವಿಯನ್ನು ಕೇಳುತ್ತಿದ್ದೇವೆ. ಈಗ ನಮ್ಮದು ಸಣ್ಣ ಮನವಿ ಇದೆ. ತಾವು, ವಿರೋಧ ಪಕ್ಷಗಳು ಏಕೆ ಇಷ್ಟು ಹಠ ಮಾಡುತ್ತಿವೆ ಎಂದು ಜನ ಕೇಳುತ್ತಿದ್ದಾರೆ ಎನ್ನುವ ಮಾತನ್ನು ಹೇಳಿದಿರಿ. ಅದೇರೀತಿ ಜನ ನಮ್ಮನ್ನು, ಸರ್ಕಾರ ಈ ಒಂದು ವಿಚಾರಕ್ಕಾಗಿ ಇಷ್ಟೊಂದು ಹಠ ಮಾಡುತ್ತಿದೆಯಲ್ಲಾ, ಏಕೆ? ಎಂದು ಕೇಳುತ್ತಿದ್ದಾರೆ. ನಾವು ನಿನ್ನೆಯಿಂದ ನೋಡುತ್ತಿದ್ದೇವೆ. ನಾವು ಕೇಳುತ್ತಿರುವ ವಿಷಯಕ್ಕೆ ಸಂಬಂಧಪಟ್ಟಂತೆ ಚರ್ಚೆ ಬೇಕಾಗಿಲ್ಲ ಎಂದು ಹೇಳಿದೆವು. ಈ ವಿಷಯ ಚರ್ಚೆ ಆಗಿ, ಮಾನ್ಯ ಸಚಿವರು ರಾಜಿನಾಮೆ ಕೊಟ್ಟು, ಜೈಲಿಗೆ ಹೋಗಿ, ಅಲ್ಲಿಂದ ಬೇಲ್ ಮೇಲೆ ಹೊರಗಡೆ ಬಂದಿದ್ದಾರೆ. ಇದುಬಿಟ್ಟು ಬೇರೆ ಏನೂ ಆಗಿಲ್ಲ. ಮಾನ್ಯ ನಾಗೇಂದ್ರ ಅವರ ಬಗ್ಗೆ ನಮಗೂ ಗೌರವ ಇದೆ.

**ಸಭಾಪತಿಯವರು:-** ಇವೆಲ್ಲವನ್ನೂ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ನಾನು ಎರಡು ಮಾತುಗಳನ್ನು ಹೇಳುತ್ತೇನೆ, ದಯವಿಟ್ಟು ಕೇಳಿ. ಮಾನ್ಯ ನಾಗೇಂದ್ರ ಅವರ ಬಗ್ಗೆ ವೈಯಕ್ತಿಕವಾಗಿ ನಮ್ಮ ವಿರೋಧವಿಲ್ಲ. ಆದರೆ ಅವರು, ನಾನು ದಲಿತ ಎಂದು ನನ್ನನ್ನು ಎಲ್ಲರೂ ಟಾರ್ಗೆಟ್ ಮಾಡುತ್ತಿದ್ದಾರೆ ಎಂದು ನಿನ್ನೆ ಎಲ್ಲಾ ಕಡೆ ಹೇಳಿದ್ದಾರೆ. ದಲಿತರ ಹಣವನ್ನೇ ನುಂಗಿ . . .

**(ಗೊಂದಲ)**

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

**ಶ್ರೀ ಕೃಷ್ಣ ಭೈರೇಗೌಡ (ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಗಳೆ, ಈ ವಿಷಯವನ್ನು ಚರ್ಚೆ ಮಾಡಲು ಸರ್ಕಾರ ತಯಾರಿದೆ. ಚರ್ಚೆ ಮಾಡುವುದಕ್ಕೆ ನಾವು ತಯಾರಿದ್ದೇವೆ. ಅವರು ಯಾರ ಯಾರ ರಾಜಿನಾಮೆಯನ್ನು ಕೊಡಿಸಬೇಕೋ ಅಂಥವರ ರಾಜಿನಾಮೆ ಕೊಡಿಸಿ ನಂತರ ಮಾತನಾಡಲಿ. ನಾವೂ ಚರ್ಚೆ ಮಾಡುವುದಕ್ಕೆ ತಯಾರಿದ್ದೇವೆ. ಇವರ ಮನೆಯಲ್ಲಿ ಹೆಗ್ಗಣ ಬಿದ್ದಿದೆ; ಇವರ ತಟ್ಟೆಯಲ್ಲಿ ಹೆಗ್ಗಣ ಬಿದ್ದಿದೆ, ...

**(ಗೊಂದಲ)**

**ಡಾ: ಯತೀಂದ್ರ ಎಸ್. (ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಮಾನ್ಯ ನಾಗೇಂದ್ರರವರು ದಲಿತರ ಹಣ ನುಂಗಿದ್ದಾರೆ ಎಂದು ಹೇಳುವುದಕ್ಕೆ ಸಾಕ್ಷಿ ಎಲ್ಲಿದೆ? ಏಕೆ ಸುಳ್ಳು ಹೇಳುತ್ತಿದ್ದಾರೆ? ಆರೋಪ ಎಲ್ಲಿ ಸಾಬೀತಾಗಿದೆ? **(ಗೊಂದಲ)** ಮಾನ್ಯ **[XXX]** ಎಂದು ಪದೇ ಪದೇ ಹೇಳುವುದು ತಪ್ಪು. ಮಾನ್ಯ ನಾಗೇಂದ್ರ ಅವರು ರಾಜಿನಾಮೆ ಕೊಡಬೇಕೆಂದು ನ್ಯಾಯಯುತವಲ್ಲದ್ದನ್ನು ಕೇಳಿದರೆ ನಾವು ಹೇಗೆ ಒಪ್ಪಿಕೊಳ್ಳಲು ಸಾಧ್ಯವಾಗುತ್ತದೆ? ಕೇಂದ್ರ ಸರ್ಕಾರದಲ್ಲಿ ಮತ್ತು ಬಿ.ಜೆ.ಪಿ.ಶಾಸಿತ ಪ್ರದೇಶಗಳಲ್ಲಿ ಭ್ರಷ್ಟಾಚಾರ ನಡೆದಿದ್ದರೂ ಇನ್ನೂ ಅಧಿಕಾರದಲ್ಲಿ ಮುಂದುವರೆದಿದ್ದಾರೆ.

**(ಗೊಂದಲ)**

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಗಳೆ, ಯಾವುದೇ ವಿಷಯದ ಬಗ್ಗೆ ಚರ್ಚೆ ಮಾಡಬೇಕಾದರೂ ಮೊದಲು ನೋಟಿಸ್ ಕೊಟ್ಟು ಮಾತನಾಡಲಿ.

**(ಗೊಂದಲ)**

**ಡಾ: ಯತೀಂದ್ರ ಎಸ್.:-** ಬಿ.ಜೆ.ಪಿ. ಆಡಳಿತ ಇರುವ ಇತರ ರಾಜ್ಯಗಳ ಮಂತ್ರಿಗಳ ಮೇಲೂ ಆರೋಪ ಇದೆ. . . .

**(ಗೊಂದಲ)**

**ಶ್ರೀ ಕೃಷ್ಣ ಭೈರೇಗೌಡ (ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಗಳೆ, ಸರ್ಕಾರ ಚರ್ಚೆಗೆ ತಯಾರಿದೆ. ಇವರೇ ಚರ್ಚೆ ಮಾಡುವುದಕ್ಕೆ ತಯಾರಿಲ್ಲ. ಸದನದ ಸಮಯವನ್ನು ಹಾಳು ಮಾಡುತ್ತಿದ್ದಾರೆ. ರಾಜ್ಯದಲ್ಲಿರುವ ಸಮಸ್ಯೆಗಳ ಬಗ್ಗೆ ಸದನದಲ್ಲಿ ಚರ್ಚೆ ಆಗುತ್ತದೆಯೇ ಎಂದು ರಾಜ್ಯದ ಜನ ಎದುರು ನೋಡುತ್ತಿದ್ದಾರೆ. ಚರ್ಚೆ ಆಗಬೇಕು ಎಂದು ಜನ ಹೇಳುತ್ತಿದ್ದಾರೆ. ಇವರು ಸದನದ ಸಮಯವನ್ನು ಹಾಳು ಮಾಡುತ್ತಿದ್ದಾರೆ.

(ಗೊಂದಲ)

**ಡಾ: ಯತೀಂದ್ರ ಎಸ್.:-** ಮಾನ್ಯ ಸಭಾಪತಿಗಳೆ, ಮಾನ್ಯ ಸಚಿವರ ಮೇಲಿನ ಆರೋಪ ಸಾಬೀತಾಗಿಲ್ಲ . . .

(ಗೊಂದಲ)

**ಶ್ರೀ ಸಿ.ಟಿ.ರವಿ:- (ಗೊಂದಲ)** ಅವರು ಆತ್ಮಹತ್ಯೆ ಮಾಡಿಕೊಂಡಿದ್ದು ಸುಳ್ಳೇ? . . .

**ಸಭಾಪತಿಯವರು:-** ಈಗ ಪ್ರಶ್ನೋತ್ತರಗಳು.

**(ವಿರೋಧ ಪಕ್ಷದ ಮಾನ್ಯ ಸದಸ್ಯರು ನಿರಂತರವಾಗಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

## 1. ಪ್ರಶ್ನೋತ್ತರಗಳು

### ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

**ಪ್ರಶ್ನೆ ಸಂಖ್ಯೆ: 546**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಬಸವಗೌಡ ಬಾದರ್ಲಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ನಮ್ಮ ಸಿಂಧನೂರು ತಾಲ್ಲೂಕಿನಲ್ಲಿ ನಿರಂತರವಾಗಿ ಅಕ್ರಮ ಚಟುವಟಿಕೆಗಳು ನಡೆಯುತ್ತಿವೆ. ಅಕ್ರಮ ಚಟುವಟಿಕೆಗಳಿಗೆ ಪರೋಕ್ಷವಾಗಿ ಬೆಂಬಲ ನೀಡುತ್ತಿರುವ ಯಾವ ಹಾಗೂ ಎಷ್ಟು ಜನ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಕಾನೂನು ಕ್ರಮವಹಿಸಲಾಗಿದೆ ಎಂದು ಮಾನ್ಯ ಗೃಹ ಸಚಿವರಲ್ಲಿ ಪ್ರಶ್ನೆಗಳನ್ನು ಕೇಳಿದ್ದೆ. ಉತ್ತರದಲ್ಲಿ, ಅಕ್ರಮ ಚಟುವಟಿಕೆಗಳಿಗೆ ಪರೋಕ್ಷವಾಗಿ ಬೆಂಬಲ ನೀಡುತ್ತಿರುವ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಯಾವುದೇ ಪ್ರಕರಣ ದಾಖಲಾಗಿರುವುದಿಲ್ಲ ಎಂದು ಹೇಳಿದ್ದಾರೆ. ಆದರೆ ಅದೇ ವಿಚಾರವಾಗಿ 3 ಪೇದೆಗಳನ್ನು ಸಸ್ಪೆಂಡ್ ಮಾಡಿ ಕ್ರಮ ತೆಗೆದುಕೊಂಡಿದ್ದಾರೆ. ಅಂದರೆ, ಅಧಿಕಾರಿಗಳು ಸದನಕ್ಕೆ ತಪ್ಪು ಉತ್ತರ ಕೊಟ್ಟಿದ್ದಾರೆ, ಸಚಿವರನ್ನು ಮತ್ತು ಸರ್ಕಾರವನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ. ಅಲ್ಲಿ ಅಕ್ರಮ ಚಟುವಟಿಕೆಗಳು ಅವ್ಯಾಹತವಾಗಿ ನಡೆದಿವೆ. ಅಲ್ಲಿರತಕ್ಕ ಪಿ.ಎಸ್.ಐ. ಮೇಲಾಗಲಿ ಅಥವಾ ಸರ್ಕಲ್ ಇನ್ಸ್‌ಪೆಕ್ಟರ್ ಮೇಲಾಗಲಿ ಕ್ರಮವಾಗಿಲ್ಲ. 3 ಪೇದೆಗಳ ಮೇಲೆ ಕ್ರಮವಾಗಿದೆ. ಇದರ ಬಗ್ಗೆ ನಾನು ಮಾನ್ಯ ಸಚಿವರಲ್ಲಿ ಸ್ಪಷ್ಟನೆ ಕೇಳಬಯಸುತ್ತೇನೆ.

**ಡಾ: ಶರಣ ಪ್ರಕಾಶ್ ಆರ್.ಪಾಟೀಲ್ (ವೈದಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು) (ಗೃಹ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇ-ಆಡಳಿತ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗೆ ಸ್ಪಷ್ಟವಾಗಿ ಉತ್ತರ ಕೊಡಲಾಗಿದೆ. ಮಾನ್ಯ ಸದಸ್ಯರು, ಇದಕ್ಕೆ ಪರೋಕ್ಷವಾಗಿ ಯಾರು ಬೆಂಬಲ ಕೊಡುತ್ತಿದ್ದಾರೆ ಎಂದು ಕೇಳಿದರು. ಆದರೆ, ಅಲ್ಲಿ ಅಂತಹ ಯಾವುದೇ ರೀತಿಯ ಕೇಸ್ ದಾಖಲಾಗಿಲ್ಲ ಎಂದು ಬಹಳ ಸ್ಪಷ್ಟವಾಗಿ ಹೇಳಿದ್ದೇವೆ. ಅಧಿಕಾರಿಗಳು ಪರೋಕ್ಷವಾಗಿ ಬೆಂಬಲ ಕೊಡುತ್ತಿದ್ದಾರೆ ಎನ್ನುವ ಸಂಬಂಧ ಯಾವುದೇ ಕೇಸ್ ದಾಖಲಾಗಿಲ್ಲ; ಆದ್ದರಿಂದ ಯಾವುದೇ ಕ್ರಮವಾಗಿಲ್ಲ. 3 ಜನ ಪೇದೆಗಳ ಮೇಲೆ ಬೇರೆ ಬೇರೆ ಕಾರಣಗಳ ಹಿನ್ನೆಲೆಯಲ್ಲಿ ಕ್ರಮವಾಗಿದೆ. ಮಾನ್ಯ ಸದಸ್ಯರು ಪ್ರಸ್ತಾಪಿಸಿದ ಹಾಗೆ ಅಂತಹ ದಾಖಲೆಗಳೇನಾದರೂ ಅವರ ಹತ್ತಿರ ಇದ್ದರೆ, **ಪುರಾ**ವೆಗಳಿದ್ದರೆ ಅದನ್ನು ಸರ್ಕಾರಕ್ಕೆ ಕೊಡಲಿ, ನಾವು ಪರಿಶೀಲನೆ ಮಾಡುತ್ತೇವೆ.

**ಶ್ರೀ ಬಸನಗೌಡ ಬಾದರ್ಲಿ:-** ಮಾನ್ಯ ಸಭಾಪತಿಗಳೆ, ಇವತ್ತಿನ ಅನೇಕ ದಿನ ಪತ್ರಿಕೆಗಳಲ್ಲಿ ಈ ವಿಚಾರ ಸುದ್ದಿಯಾಗಿದೆ. "ವಿಜಯ ಕರ್ನಾಟಕ" ಪತ್ರಿಕೆಯಲ್ಲೂ ಆ ಸುದ್ದಿ ಬಂದಿದೆ. 3 ಪೇದೆಗಳು ಅಮಾನತ್ತು ಆಗಿದ್ದಾರೆ. ಇವರ ಮೇಲೆ ಎಫ್.ಐ.ಆರ್. ಕೂಡ ಆಗಿದೆ. ವರಿಷ್ಠ ಪೋಲೀಸ್ ಅಧಿಕಾರಿಗಳು ಸಚಿವರಿಗೆ ಮತ್ತು ಸರ್ಕಾರಕ್ಕೆ ತಪ್ಪು ಉತ್ತರವನ್ನು ಒದಗಿಸಿ ಕೊಟ್ಟಿದ್ದಾರೆ. ಇದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟನೆಯನ್ನು ಕೊಡಬೇಕು.

**ಡಾ: ಶರಣ ಪ್ರಕಾಶ್ ಆರ್.ಪಾಟೀಲ್:-** ಮಾನ್ಯ ಸಭಾಪತಿಗಳೆ, ನಮ್ಮ ಉತ್ತರದಲ್ಲಿ, ಕಾನೂನು ಬಾಹಿರ ಚಟುವಟಿಕೆಗಳು ಎಷ್ಟೆಷ್ಟಾಗಿವೆ ಎಂದು ಮತ್ತು ಏನು ಕ್ರಮ ಕೈಗೊಳ್ಳಲಾಗಿದೆ ಎಂದು ವರ್ಷಾವಾರು ಮಾಹಿತಿ ಒದಗಿಸಿ ಕೊಟ್ಟಿದ್ದೇವೆ. ಪರೋಕ್ಷವಾಗಿ ಇಂತಹ ಚಟುವಟಿಕೆಗಳಿಗೆ ಅಧಿಕಾರಿಗಳು ಪ್ರೋತ್ಸಾಹ ಕೊಡುತ್ತಿದ್ದಾರೆ ಎನ್ನುವುದು ಮಾನ್ಯ ಸದಸ್ಯರ ಪ್ರಶ್ನೆಯಾಗಿದೆ. ನಾವು ಇದಕ್ಕೆ ಸ್ಪಷ್ಟನೆ ಕೊಟ್ಟಿದ್ದೇವೆ. ಒಂದು ವೇಳೆ ಅಂತಹ ದಾಖಲೆಗಳು ಅವರ ಹತ್ತಿರ ಇದ್ದರೆ ಸರ್ಕಾರಕ್ಕೆ ಒದಗಿಸಿ ಕೊಡಲಿ.

**ಶ್ರೀ ಬಸನಗೌಡ ಬಾದರ್ಲಿ:-** ಮಾನ್ಯ ಸಭಾಪತಿಗಳೆ, ಪೊಲೀಸ್ ವರಿಷ್ಠ ಅಧಿಕಾರಿಗಳು ಸದನಕ್ಕೆ ತಪ್ಪು ಉತ್ತರ ಕೊಟ್ಟಿದ್ದಾರೆ. ನನ್ನ ಹತ್ತಿರ ಎಫ್.ಐ.ಆರ್.ನ ಪ್ರತಿ ಕೂಡ ಇದೆ.

**ಡಾ: ಶರಣ ಪ್ರಕಾಶ್ ಆರ್.ಪಾಟೀಲ್:-** ಮಾನ್ಯ ಸಭಾಪತಿಗಳೆ, ಅಧಿಕಾರಿಗಳು ಪರೋಕ್ಷವಾಗಿ ಬೆಂಬಲ ಕೊಡುತ್ತಿದ್ದಾರೆ ಎನ್ನುವುದಕ್ಕೆ ಏನಾದರೂ ಪುರಾವೆಗಳಿದ್ದರೆ ಮಾನ್ಯ ಸದಸ್ಯರು ಕೊಡಲಿ. 3 ಪೇದೆಗಳ ಮೇಲೆ ಏನು ಎಫ್.ಐ.ಆರ್.ಆಗಿದೆಯೋ ಅದು ನಿರ್ದಿಷ್ಟವಾದ ಕಾರಣಗಳ ಆಧಾರದ ಮೇಲೆ ಆಗಿದೆ. ಆದರೆ ಪರೋಕ್ಷ ಎಂದು ಹೇಳುವುದು, it is a very vague term. ಹೇಗೆ ಅದನ್ನು ಸಮರ್ಥನೆ ಮಾಡಿಕೊಳ್ಳುತ್ತಾರೆ ಎಂಬುದನ್ನು ಹೇಳಿದರೆ ಅದರ ಬಗ್ಗೆ ಸರ್ಕಾರ ಕ್ಲ್ಯಾರಿಫಿಕೇಷನ್ ಕೊಡುತ್ತದೆ.

**ಶ್ರೀ ಬಸನಗೌಡ ಬಾದರ್ಲಿ:-** ಮಾನ್ಯ ಸಭಾಪತಿಗಳೆ, ನನ್ನ ಹತ್ತಿರ ಎಫ್.ಐ.ಆರ್. ಕಾಪಿಗಳಿವೆ.

**ಡಾ: ಶರಣ ಪ್ರಕಾಶ್ ಆರ್.ಪಾಟೀಲ್:-** ಮಾನ್ಯ ಸಭಾಪತಿಗಳೆ, ಅವರ ಹತ್ತಿರ ಎಫ್.ಐ.ಆರ್. ಕಾಪಿ ಇದೆ ಎಂದು ಹೇಳುತ್ತಿದ್ದಾರೆ. 3 ಪೇದೆಗಳ ಮೇಲೆ ಕ್ರಮವಾಗಿದೆ ಎಂದು ಹೇಳುತ್ತಿದ್ದಾರೆ. ಅವರ ಹತ್ತಿರ ಇರುವಂತಹ ದಾಖಲೆಗಳನ್ನು ಕೊಟ್ಟರೆ ನಾವು ಪರಿಶೀಲನೆ ಮಾಡುತ್ತೇವೆ.

(ಮುಂದು)

(782) 20-8-2026 12.40 ಡಿಎಸ್-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಸನಗೌಡ ಬಾದರ್ಲಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ತಪ್ಪು ಉತ್ತರ ಕೊಟ್ಟಿದ್ದಾರೆ. ಮೂವರು ಅಧಿಕಾರಿಗಳನ್ನು ಅಮಾನತ್ತುಗೊಳಿಸಿದ್ದಾರೆ.

**ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್:-** ಮಾನ್ಯ ಸಭಾಪತಿಯವರೇ, ಅವರನ್ನು ಬೇರೆ ಕಾರಣಕ್ಕಾಗಿ ಅಮಾನತ್ತುಗೊಳಿಸಿದ್ದಾರೆ.

**ಶ್ರೀ ಬಸನಗೌಡ ಬಾದರ್ಲಿ:-** ಮಾನ್ಯ ಸಭಾಪತಿಯವರೇ, ಬೇರೆ ಕಾರಣಕ್ಕಾಗಿ ಅಲ್ಲ. ಗಾಂಜಾದಿಂದಲೇ ಅಮಾನತ್ತುಗೊಂಡಿರುವಂಥದ್ದು.

**ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್:-** ಮಾನ್ಯ ಸಭಾಪತಿಯವರೇ, ಅವರ ಮೇಲೆ ಎಫ್.ಐ.ಆರ್. ಹಾಕಿದ್ದು, ಅವರನ್ನು ಅಮಾನತ್ತು ಮಾಡಲು ಕಾರಣಗಳು ಇರುತ್ತವೆ.

**ಶ್ರೀ ಬಸನಗೌಡ ಬಾದರ್ಲಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ತಪ್ಪು ಉತ್ತರ ಕೊಟ್ಟಿದ್ದಾರೆ.

**ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್:-** ಮಾನ್ಯ ಸಭಾಪತಿಯವರೇ, ಉತ್ತರ ತಪ್ಪು ಕೊಟ್ಟಿಲ್ಲ. ಉತ್ತರ ಸರಿಯಾಗಿ ಕೊಟ್ಟಿದ್ದೇನೆ. ಅವರೇನಾದರೂ clarification ಕೇಳುವುದಾದರೆ ಕೇಳಲಿ.

**ಶ್ರೀ ಬಸನಗೌಡ ಬಾದರ್ಲಿ:-** ಮಾನ್ಯ ಸಭಾಪತಿಯವರೇ, ನಾನು ನಮ್ಮ ತಾಲ್ಲೂಕಿನ ಯುವಕರ ಹಿತದೃಷ್ಟಿಯಿಂದ ಹೇಳುತ್ತಿದ್ದೇನೆ. ಇವತ್ತು ಅನೇಕ ದುಶ್ಚಟಗಳು, ಅಕ್ರಮ ಚಟುವಟಿಕೆಗಳು ಇಲ್ಲಿ ನಡೆಯುತ್ತಿವೆ. ಇದನ್ನು ಕೂಡಲೇ ಬಂದ್ ಮಾಡಬೇಕು. ಇವತ್ತು ಮೂವರು ಪೊಲೀಸ್ ಸಿಬ್ಬಂದಿಗಳನ್ನು ಅಮಾನತ್ತು ಮಾಡಿದ್ದಾರೆ. ಪೊಲೀಸ್ ಸ್ಟೇಷನ್‌ನಲ್ಲಿರುವಂತಹ ಪಿ.ಎಸ್.ಐ., ಇನ್ಸ್‌ಪೆಕ್ಟರ್‌ಗಳ ಮೇಲೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಇವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಹೇಳುವುದಕ್ಕೆ ಬಯಸುತ್ತಿದ್ದೇನೆ.

**ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್:-** ಮಾನ್ಯ ಸಭಾಪತಿಯವರೇ, ಅಲ್ಲಿ ಯಾರಾದರೂ ಅಧಿಕಾರಿಗಳ ಮೇಲೆ ಏನಾದರೂ ನಿರ್ದಿಷ್ಟವಾದ ಆರೋಪಗಳಿದ್ದರೆ, ಅದನ್ನು ಪರಿಶೀಲಿಸಲಾಗುವುದು. ಸಾರಾಸಗಟಾಗಿ ಎಲ್ಲರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದರೆ ಸಾಧ್ಯವಿಲ್ಲ.

**ಶ್ರೀ ಬಸನಗೌಡ ಬಾದರ್ಲಿ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಡಿ.ಜಿ.ಯವರಿಗೆ, ಮಾನ್ಯ ಗೃಹ ಸಚಿವರಿಗೆ ಮನವಿ ಕೊಟ್ಟಿದ್ದೇನೆ. ಆದರೂ ಯಾವುದೇ ಸ್ಪಷ್ಟ ಉತ್ತರ ಸಿಕ್ಕಿಲ್ಲ.

**ಸಭಾಪತಿಯವರು:-** ಇದರ ಬಗ್ಗೆ ನಾನು ಮಾನ್ಯ ಗೃಹ ಸಚಿವರ ಗಮನಕ್ಕೆ ತರುತ್ತೇನೆ.

**ಪ್ರಶ್ನೆ ಸಂಖ್ಯೆ: 562**

**(ಉತ್ತರ ಲಗತ್ತಿಸಲಾಗಿದೆ)**

**ಡಾ॥ ಆರತಿ ಕೃಷ್ಣ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಮಾನ್ಯ ಸಚಿವರು ವಿವರವಾಗಿ ಉತ್ತರ ಒದಗಿಸಿದ್ದಾರೆ. ನನ್ನ ಮನವಿ ಏನೆಂದರೆ, ಚಿಕ್ಕಲಸಂದ್ರ ಗ್ರಾಮ ಸರ್ವೆ ನಂ.76 ರಲ್ಲಿ ಒಟ್ಟು 12 ಎಕರೆ 26 ಗುಂಟೆ ಚಿಕ್ಕಲಸಂದ್ರ ಕೆರೆ ಪ್ರದೇಶವಿದ್ದು, ಅದರಲ್ಲಿ ಸುಮಾರು 9 ಎಕರೆ ಪ್ರದೇಶವು 40 ವರ್ಷಗಳ ಹಿಂದೆಯೇ ಪಾಲಿಕೆಗೆ ಹಸ್ತಾಂತರಿಸುವ ಮುನ್ನವೇ ಒತ್ತುವರಿಯಾಗಿರುತ್ತದೆ. ಆದರೆ 3 ಎಕರೆ 26 ಗುಂಟೆ ಸರ್ಕಾರದ ವಶದಲ್ಲಿದ್ದರೂ ಕೂಡ ಅಲ್ಲಿ ಅನಧಿಕೃತ ಕಟ್ಟಡಗಳು ಹಾಗೂ ಕಸ ವಿಲೇವಾರಿ ನಡೆಯುತ್ತಿದೆ. ಅದನ್ನು ತೆರವುಗೊಳಿಸುವುದಕ್ಕೆ ಮಾನ್ಯ ಸಚಿವರು ಕ್ರಮ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಆಗ್ರಹ ಮಾಡುತ್ತೇನೆ.

**ಶ್ರೀ ಕೃಷ್ಣ ಬೈರೇಗೌಡ (ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಅಲ್ಲಿ ಸಮೀಪದಲ್ಲಿ ಬೇರೆ ಸ್ಥಳಾವಕಾಶ ಇಲ್ಲದಿರುವುದರಿಂದ, ಕಸ ವಿಲೇವಾರಿ ಅನಿವಾರ್ಯ ಇರುವುದರಿಂದ ಈ ಜಾಗದಲ್ಲಿ ಕಸ ವಿಲೇವಾರಿಗೆ ಇದನ್ನು transfer station ಆಗಿ ಬಳಕೆ ಮಾಡುತ್ತಿದ್ದೇವೆ.

**(ಗೊಂದಲ)**

ಮಾನ್ಯ ಸದಸ್ಯರು ಅದನ್ನು ಬೇರೆ ಕಡೆ ವರ್ಗಾಯಿಸಬೇಕೆಂದು ಹೇಳಿದ್ದಾರೆ. ನಾವು ಬೇರೆ ಸ್ಥಳವನ್ನು ಹುಡುಕುತ್ತಿದ್ದೇವೆ. ಒಂದು ಸ್ಥಳವನ್ನು ಗುರುತಿಸಿದ್ದೇವೆ. ಆ ಜಾಗ ಸರ್ಕಾರದ ಬೇರೆ ಇಲಾಖೆಗೆ ಸೇರಿದೆ. ನಾವು ಅವರ ಅನುಮತಿಯನ್ನು ಕೇಳುತ್ತಿದ್ದೇವೆ. ಈ ಜಾಗವನ್ನು ಬಳಕೆ ಮಾಡುವುದರ ಬದಲಿಗೆ ಬೇರೆ ಕಡೆ ವರ್ಗಾವಣೆ ಮಾಡುವುದಕ್ಕೆ ಇನ್ನೊಂದು ಇಲಾಖೆಯವರು ಅನುಮತಿ ಕೊಟ್ಟರೆ ಅಲ್ಲಿಗೆ shift ಮಾಡುತ್ತೇವೆ. ಇಲ್ಲೇ ಮುಂದುವರೆಸಬೇಕು ಎಂಬುದು ನಮ್ಮ ಉದ್ದೇಶವಲ್ಲ. ಆದರೆ ಅನಿವಾರ್ಯವಾಗಿ ಇಲ್ಲಿ ಮಾಡುತ್ತಿದ್ದೇವೆ. ಬೇರೆ ಜಾಗ ಸಿಕ್ಕಿದ ತಕ್ಷಣ ಅಲ್ಲಿಗೆ shift ಮಾಡುತ್ತೇವೆ.

**ಡಾ॥ ಆರತಿ ಕೃಷ್ಣ:-** ಧನ್ಯವಾದಗಳು.

**(ಗೊಂದಲ)**

**ಪ್ರಶ್ನೆ ಸಂಖ್ಯೆ: 541**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎನ್.ಎಸ್.ಬೋಸರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಮಾನ್ಯ ಸಚಿವರಿಗೆ ಗೊತ್ತಿದೆ. ಈ ವರ್ಷವಾದರೂ ಕಾರಾಗೃಹವನ್ನು ಸ್ಥಳಾಂತರಿಸಬೇಕು. ಈ ಕಾರಾಗೃಹವನ್ನು 1832 ನೇ ಇಸವಿಯಲ್ಲಿ ಪ್ರಾರಂಭ ಮಾಡಿದ್ದಾರೆ. ಇದಕ್ಕೆ ಇತಿಹಾಸದಲ್ಲಿ ನೂರು ವರ್ಷಗಳಿಗಿಂತ ಜಾಸ್ತಿಯಾಗಿದೆ. ಈ ಕಾರಾಗೃಹವನ್ನು ನಿಜಾಮರ ಕಾಲದಲ್ಲಿ ಮಾಡಿರುವಂಥದ್ದು. ಕಳೆದ ಹತ್ತು ವರ್ಷಗಳಿಂದ ಈ ಕಾರಾಗೃಹವನ್ನು ಸ್ಥಳಾಂತರಿಸಬೇಕೆಂದು ಕೇಳಿಕೊಳ್ಳುತ್ತಿದ್ದೇವೆ. ರಾಯಚೂರು ನೂತನ ಜಿಲ್ಲಾ ಕಾರಾಗೃಹ ನಿರ್ಮಾಣ ಕಾಮಗಾರಿಗೆ 500 ಲಕ್ಷ ರೂಪಾಯಿಗಳ ಅನುದಾನವನ್ನು ನಿಗದಿಪಡಿಸಿಕೊಂಡು, ಕ್ರಿಯಾ ಯೋಜನೆಗೆ ಅನುಮೋದನೆ ಪಡೆಯಲು, ನೂತನ ಕಾರಾಗೃಹ ನಿರ್ಮಾಣದ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ಹಾಗೂ ಅನುದಾನ ಬಿಡುಗಡೆಗೆ ಕ್ರಮ ವಹಿಸಲಾಗಿದೆ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಕೇವಲ 19 ಲಕ್ಷ ರೂಪಾಯಿಗಳನ್ನು ಕೊಟ್ಟು fencing ಮಾತ್ರ ಹಾಕಿದ್ದಾರೆ. ಹಾಗಾಗಿ ತಕ್ಷಣವೇ ಐದು ಕೋಟಿ ರೂಪಾಯಿಗಳನ್ನು ಸರ್ಕಾರ ಬಿಡುಗಡೆ ಮಾಡಬೇಕು.

**(ಗೊಂದಲ)**

ಕಲ್ಯಾಣ ಕರ್ನಾಟಕ 371(ಜೆ) ಅಡಿಯಲ್ಲಿ ರಾಯಚೂರು ಬರುವುದರಿಂದ ಐದು ಕೋಟಿ ರೂಪಾಯಿಗಳನ್ನು ಕೆ.ಕೆ.ಆರ್.ಡಿ.ಬಿ.ಯಿಂದ ತರಿಸಿ, ಈ ವರ್ಷ ಕನಿಷ್ಟ ಹತ್ತು ಲಕ್ಷ ರೂಪಾಯಿಗಳನ್ನು ಒದಗಿಸುವುದರ ಮೂಲಕ ಈ ಕಾರ್ಯಕ್ರಮಕ್ಕೆ ಚಾಲನೆ ಕೊಡಬೇಕೆಂದು ನಾನು ಮಾನ್ಯ ಸಚಿವರಿಗೆ ವಿನಂತಿ ಮಾಡುತ್ತೇನೆ.

**ಡಾ|| ಶರಣಪ್ರಕಾಶ್ ರುದ್ರಪ್ಪ ಪಾಟೀಲ್:-** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದ ಮಾನ್ಯ ಎನ್.ಎಸ್.ಬೋಸರಾಜುರವರು ಪ್ರಶ್ನೆ ಕೇಳಿದ್ದಾರೆ. ಈಗಾಗಲೇ ಇದಕ್ಕೆ 19.15 ಎಕರೆ ಜಮೀನು ಕೊಡಲಾಗಿದೆ. ಮಾನ್ಯ ಸದಸ್ಯರು ಹೇಳುವಂಥದ್ದು ಸರಿಯಿದೆ. ಈ ಕಾರಾಗೃಹವನ್ನು ವರ್ಗಾವಣೆ ಮಾಡುವ ಅವಶ್ಯಕತೆ ಇದೆ. ಹಾಗಾಗಿ ಇದಕ್ಕೆ ಈ ವರ್ಷ ಬಜೆಟ್‌ನಲ್ಲಿ ಘೋಷಣೆ ಆಗಿದೆ. ಇದಕ್ಕಾಗಿ ಐದು ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಇದಕ್ಕೆ ಡಿ.ಪಿ.ಆರ್. (Detailed Project Report) ತಯಾರು ಮಾಡಿ ಟೆಂಡರ್ ಕರೆದು ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

**(ಗೊಂದಲ)**

**ಸಭಾಪತಿಯವರು:-** ಪ್ರಶ್ನೋತ್ತರ ಬಿಟ್ಟು ಬೇರೆ ಯಾವುದೂ ಕಡತಕ್ಕೆ ಹೋಗಬಾರದು.

**ಪ್ರಶ್ನೆ ಸಂಖ್ಯೆ: 614**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಎರಡು ರೀತಿಯಲ್ಲಿ ಉತ್ತರ ಕೊಟ್ಟಿದ್ದಾರೆ. ಇದರ ವ್ಯಾಪ್ತಿ ಸ್ವಲ್ಪ ಹೆಚ್ಚು ಕಡಿಮೆ ಹೇಗಿದೆ ಎಂದರೆ, ಬೆಂಗಳೂರು ಸಿಟಿ ಕಾರ್ಪೊರೇಷನ್, ಬಿ.ಡಿ.ಎ., ಬಿ.ಡಬ್ಲ್ಯೂ.ಎಸ್.ಎಸ್.ಬಿ., ಸಿಟಿ ಮುನ್ಸಿಪಲ್ ಹಾಗೂ ಕೊಳಚೆ ನಿರ್ಮೂಲನ ಮಂಡಳಿ ಎಂದು ಕೊಟ್ಟಿದ್ದಾರೆ. ಆದರೆ ಆನೇಕಲ್ಲು ತಾಲ್ಲೂಕಿನಲ್ಲಿ ಅನಧಿಕೃತ ಬಡಾವಣೆಗಳಿಗೆ ನೋಟೀಸ್ ಕೊಡುತ್ತಾರೆ. ನೋಟೀಸ್ ಕೊಡುವ ಉದ್ದೇಶ ಬೇರೆ ಇದೆ. ಅನುಮೋದಿತ ಬಡಾವಣೆಯಾದರೂ ಅನಧಿಕೃತ ಬಡಾವಣೆ ಎಂದು ನೋಟೀಸ್ ಕೊಡುತ್ತಾರೆ. ಇವರ ಉದ್ದೇಶ ಏನಿದೆ ಎಂದರೆ, ಇವರೇ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ. ಅವರ ಕೈಯಲ್ಲಿ ನೋಟೀಸ್ ಕೊಡಿಸುವುದು, ಆಮೇಲೆ ಇವರೇ ಹೋಗಿ ಅನಧಿಕೃತ ಬಡಾವಣೆ ಎಂದು ಹೇಳುವುದು. ಆನೇಕಲ್ ವ್ಯಾಪ್ತಿಗೆ ಬಿ.ಎಂ.ಟಿ.ಎಫ್. (Bangalore Metropolitan Task Force) ನವರು ಏಕೆ ಹೋಗುತ್ತಾರೆ? ಇದಕ್ಕೆ ಮಾನ್ಯ ಸಚಿವರು ಉತ್ತರ ಕೊಟ್ಟ ಮೇಲೆ ನಾನು ಉಪ ಪ್ರಶ್ನೆಯನ್ನು ಕೇಳುತ್ತೇನೆ.

**ಶ್ರೀ ಕೃಷ್ಣ ಬೈರೇಗೌಡ (ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಭೂ ಕಂದಾಯ ಕಾಯ್ದೆಯಿಂದ ಹಿಡಿದು ಸುಮಾರು ಕಾಯ್ದೆಗಳಲ್ಲಿ ಬೇರೆ ಬೇರೆ ಸೆಕ್ಷನ್‌ಗಳಲ್ಲಿ ಬಿ.ಎಂ.ಟಿ.ಎಫ್.,ಗೆ ಅಧಿಕಾರವನ್ನು ಕೊಟ್ಟಿದ್ದಾರೆ. ಆನೇಕಲ್ ವ್ಯಾಪ್ತಿ ಇದರ ಹೊರಗಡೆ ಬರುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಈಗ ಉದಾಹರಣೆಗೆ, ಕರ್ನಾಟಕ ಭೂ ಕಂದಾಯ ಕಾಯ್ದೆ ಉಲ್ಲಂಘನೆಯಾಗಿದ್ದರೆ, ಬಿ.ಎಂ.ಟಿ.ಎಫ್.,ಗೆ ಅಧಿಕಾರವನ್ನು ಕೊಡುವುದಕ್ಕೆ ಕಾಯ್ದೆಯಲ್ಲಿ ಪ್ರಾವಿಷನ್ ಕೊಟ್ಟಿದ್ದಾರೆ. ಕರ್ನಾಟಕ ಮುನ್ಸಿಪಲ್ ಕಾಯ್ದೆಯಲ್ಲೂ ಇವರಿಗೆ ಕೆಲವು ಸೆಕ್ಷನ್‌ಗಳನ್ನು ಕೊಟ್ಟಿದ್ದಾರೆ. ಆನೇಕಲ್ ಮುನ್ಸಿಪಲ್ ಕಾಯ್ದೆಗೆ ಬರುವುದರಿಂದ ಅದರ ಅಡಿಯಲ್ಲೂ ಪ್ರಾವಿಷನ್ ಇರಬಹುದು. ನೋಟೀಸ್ ಕೊಡುವುದಕ್ಕೆ ಸಾಧ್ಯವಿಲ್ಲ, ಸರಿಯಲ್ಲ ಎಂದು ಹೇಳುತ್ತಿದ್ದಾರೆ. ಆದರೆ, ಕೊಟ್ಟಿರುವ ಉದ್ದೇಶ ಸರಿಯಿದೆ ಎಂದು ನಾನೇನು ಸಮಜಾಯಿಷಿ ಮಾಡಿಕೊಳ್ಳುವುದಕ್ಕೆ ಹೋಗುವುದಿಲ್ಲ. ದುರುದ್ದೇಶದಿಂದಲೇ ನೋಟೀಸ್ ಕೊಟ್ಟು ಅದರ ಲಾಭ ಪಡೆದುಕೊಳ್ಳುವುದಕ್ಕೆ ಯಾರಾದರೂ ಅಧಿಕಾರಿಗಳು ಪ್ರಯತ್ನ ಮಾಡಿರಬಹುದು. ಅದನ್ನು ನಾನು ಅಲ್ಲಗೆಳೆಯುವುದಕ್ಕೆ ಹೋಗುವುದಿಲ್ಲ. ಮಾನ್ಯ ಸದಸ್ಯರು ಮಾಹಿತಿಯನ್ನು ಒದಗಿಸಿ ಕೊಟ್ಟರೆ ಖಂಡಿತವಾಗಿಯೂ ಬಿ.ಎಂ.ಟಿ.ಎಫ್. ಅಧಿಕಾರಿಗಳನ್ನು ಕರೆಯಿಸಿ, ನೋಟೀಸ್ ಕೊಟ್ಟಿರುವುದು ಸರಿಯಿದೆಯೋ, ಇಲ್ಲವೋ, ಇವರ ಉದ್ದೇಶ ಏನು ಎನ್ನುವುದನ್ನು ನಾನೇ ವೈಯಕ್ತಿಕವಾಗಿ ಪರಿಶೀಲನೆ ಮಾಡುತ್ತೇನೆ. ಮಾನ್ಯ ಸದಸ್ಯರು ನಿರ್ದಿಷ್ಟ ಪ್ರಕರಣವನ್ನು ಕೊಟ್ಟರೆ ನಾನು ಪರಿಶೀಲನೆ ಮಾಡಿ ಹೇಳಬಹುದು. ಈಗ ನಾನು ಜನರಲ್ ಆಗಿ ಉತ್ತರ ಹೇಳುತ್ತಿದ್ದೇನೆ. ನಿರ್ದಿಷ್ಟ ಪ್ರಕರಣವನ್ನು ಹೇಳಿದರೆ, ಅವರು ಮಾಡಿರುವುದು ಸರಿಯೋ ತಪ್ಪೋ ಎಂದು ವಿಚಾರ ಮಾಡಿ ನಾನು ಸದಸ್ಯರಿಗೆ ಉತ್ತರ ಕೊಡಬಹುದು.

**ಶ್ರೀ ರಾಮೋಜಿಗೌಡ:-** ಮಾನ್ಯ ಸಭಾಪತಿಯವರೇ, ಇದು ಆನೇಕಲ್ ಅಲ್ಲ, ಆನೇಕಲ್‌ನಲ್ಲಿ ಗ್ರಾಮೀಣ ಪ್ರದೇಶ. ಇದು ಮುನ್ಸಿಪಾಲಿಟಿಗೆ ಬರುವುದಿಲ್ಲ. ಬಿ.ಎಂ.ಟಿ.ಎಫ್. ಕಳೆದ ಮೂರು ವರ್ಷಗಳಲ್ಲಿ ಬೆಂಗಳೂರು ಮಹಾನಗರದಲ್ಲಿ ಎಷ್ಟು ಅನಧಿಕೃತ ಬಡಾವಣೆಗಳಿಗೆ ನೋಟೀಸ್ ನೀಡಲಾಗಿದೆ; ಅವುಗಳಲ್ಲಿ ಎಷ್ಟು ಅನಧಿಕೃತ ಬಡಾವಣೆಗಳನ್ನು ತೆರವುಗೊಳಿಸಲಾಗಿದೆ ಮತ್ತು ಅವುಗಳಲ್ಲಿ ಎಷ್ಟು ಪ್ರಕರಣಗಳು ಮುಕ್ತಾಯಗೊಂಡಿವೆ ಎಂದು ಪ್ರಶ್ನೆ ಕೇಳಿದ್ದೇನೆ. ಅನಧಿಕೃತ ಬಡಾವಣೆಗಳನ್ನು ತೆರವುಗೊಳಿಸುವುದು ಬಿ.ಎಂ.ಟಿ.ಎಫ್. ಕಾರ್ಯವ್ಯಾಪ್ತಿಗೆ ಬರುವುದಿಲ್ಲ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಕಾರ್ಯವ್ಯಾಪ್ತಿಗೆ ಬರುವುದೇ ಇಲ್ಲ ಎಂದ ಮೇಲೆ ಇವರು ಏಕೆ ನೋಟೀಸ್ ಕೊಡುತ್ತಾರೆ? ನನಗೆ ಪ್ರತಿ ದಿನ 2-3 ದೂರುಗಳು ಬರುತ್ತಿವೆ ಎಂದು ನಾನೇ ಫೋನ್ ಮಾಡಿ ಹೇಳಿದ್ದೇನೆ. ದೂರು ಬಂದಿದ್ದರೆ ದಾಖಲೆಗಳನ್ನು ತೆಗೆದುಕೊಂಡು ಬರಲಿ ಎಂದು ಹೇಳುತ್ತಾರೆ. ಅವರಿಗೆ ಪರ್ಮಿಷನ್ ಇಲ್ಲದಿದ್ದರೂ ಈ ರೀತಿ ಮಾಡುತ್ತಿದ್ದಾರೆ. ಒಂದು ಊರಿನಲ್ಲಿ ಅಲ್ಲ, ಸುಮಾರು ಊರುಗಳಲ್ಲಿ ನಡೆಯುತ್ತಿರುತ್ತವೆ. ಎಲ್ಲಾ ದಾಖಲೆಗಳನ್ನು ತೆಗೆದುಕೊಂಡು ಹೋಗಬೇಕು, ದಾಖಲೆ ಇಲ್ಲದಿದ್ದರೆ ಯಾವುದನ್ನು ನೋಡುವುದಿಲ್ಲ. ಅಲ್ಲಿ ಬೇರೆ ಕೇಳುತ್ತಾರೆ. ಬೇರೆಯೇ ಆಗಬೇಕು.

**ಸಭಾಪತಿಯವರು:-** ನಿರ್ದಿಷ್ಟ ಪ್ರಕರಣ ಇದ್ದರೆ ಮಾನ್ಯ ಸಚಿವರಿಗೆ ಕೊಡಿ. ಅವರು ಪರಿಶೀಲಿಸುತ್ತಾರೆ.

**ಶ್ರೀ ರಾಮೋಜಿಗೌಡ:-** ಮಾನ್ಯ ಸಭಾಪತಿಯವರೇ, ನಾನು ಕಡತವನ್ನು ತಂದಿದ್ದೇನೆ. ಮಾನ್ಯ ಸಚಿವರಿಗೆ ನಾನು ಕಡತವನ್ನು ಕೊಡುತ್ತೇನೆ. ಅನಧಿಕೃತ ಬಡಾವಣೆಗಳ ಒಟ್ಟು 980 ಪ್ರಕರಣಗಳನ್ನು ಕೊಟ್ಟಿದ್ದಾರೆ.

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು. ಅನಧಿಕೃತ ಬಡಾವಣೆಯನ್ನು ತನಿಖೆ ಮಾಡುವ ಅಧಿಕಾರ ಬಿ.ಎಂ.ಟಿ.ಎಫ್.,ಗೆ ಇಲ್ಲ.

(ಮುಂದು)

(783) 20/08/2026 12:50 ಎಸ್‌ಪಿಆರ್/ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೃಷ್ಣಬೈರೇಗೌಡ (ಮುಂದು):-**

ಆದರೆ, ಅನಧಿಕೃತ ಬಡಾವಣೆಯೊಳಗಡೆ ಕಾಲುವೆ, ಪಾರ್ಕ್ ಇವುಗಳಿವೆ. ಅಲ್ಲಿ ಸರ್ಕಾರಿ ಜಾಗವಿದ್ದರೆ, ಅದನ್ನು ತನಿಖೆ ಮಾಡುವ ಅಧಿಕಾರಿ ಇವರಿಗೆ ಇದೆ. ಹೀಗಾಗಿ ಆ ಕೇಸು ಗೊತ್ತಿಲ್ಲದೇ, ನಾನು ಸ್ಪಷ್ಟವಾಗಿ ಹೇಳುವುದಕ್ಕಾಗುವುದಿಲ್ಲ ಎಂದು ಅದಕ್ಕಾಗಿಯೇ ನಾನು ಹೇಳಿದ್ದೇನೆ. ಅನಧಿಕೃತ ಬಡಾವಣೆಗಳ ತೆರವು ಕಾರ್ಯಾಚರಣೆಯನ್ನು ಈಗಿನ ಬಿ.ಎಂ.ಟಿ.ಎಫ್. ಗೆ ಕೊಟ್ಟಿಲ್ಲ. ಇದು ಸ್ಪಷ್ಟವಾಗಿದೆ. ಆದರೆ, ಅದರೊಳಗಡೆ ಯಾವುದಾದರೂ ಪಾರ್ಕ್, ರಸ್ತೆ, ಪ್ಲೇಗ್ರೌಂಡ್, ಕಾಲುವೆ ಇದ್ದರೆ, ಅದನ್ನು ಬಿ.ಎಂ.ಟಿ.ಎಫ್.ನವರಿಗೆ ಬೇರೆ ಬೇರೆ ಕಾಯ್ದೆಯಡಿ ಅಧಿಕಾರವಿರುತ್ತದೆ. ಅದನ್ನು ನಾವು correct ಆಗಿ ಸ್ವಲ್ಪ ಅರ್ಥ ಮಾಡಿಕೊಂಡರೆ, ಸಮಸ್ಯೆ ಏನು ಎನ್ನುವುದು ಗೊತ್ತಾಗುತ್ತದೆ.

**ಸಭಾಪತಿಯವರು:-** ಅದನ್ನು ಸಚಿವರಿಗೆ ಕಳುಹಿಸಿಕೊಡಿ.

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಕಂಪ್ಲೇಂಟ್ ಕಾಪಿಯನ್ನು ನಾನು ಕೊಡುತ್ತೇನೆ. ಆದರೆ, ಅಲ್ಲಿ ಇನ್ನೂ ಅಪ್ರೂವ್ ಆಗಿದ್ದು, ವರ್ಕ್ ನಡೆಯುತ್ತಿದೆ. ಆದರೂ ಯಾವುದೂ ಏನೂ ಸಹ ಇನ್ನೂ ಫೈನಲ್ ಆಗಿಲ್ಲ. ಆದರೂ ಸಹ ಆಗಲೇ ನೋಟೀಸ್ ಅನ್ನು ಕೊಟ್ಟಿದ್ದಾರೆ.

**ಸಭಾಪತಿಯವರು:-** ಸಚಿವರೇ, ಅವರನ್ನು ಕರೆಸಿ, ಮಾತನಾಡಿ, problem solve ಮಾಡಿ.

**ಶ್ರೀ ಕೃಷ್ಣಬೈರೇಗೌಡ (ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೆ, ಇಷ್ಟು ಹೊತ್ತು ಅನಧಿಕೃತ ಎಂದು ಸದಸ್ಯರು ಹೇಳಿದರು. ಆದರೆ, ಈಗ ಅಪ್ರೂವ್ ಆಗಿದೆ ಎಂದು ಹೇಳುತ್ತಿದ್ದಾರೆ. ಯಾವುದಾದರೂ ಒಂದು correct ಆಗಿ ಇರಬೇಕು. ಕೇಸ್ ನೋಡಿದರೆ, ನಾನೇನಾದರೂ ಹೇಳುವುದಕ್ಕಾಗುತ್ತದೆ.

**ಶ್ರೀ ರಾಮೋಜಿಗೌಡ:-** ಮಾನ್ಯ ಸಭಾಪತಿಯವರೆ, ನಾನು correct ಆಗಿಯೇ ಮಾತನಾಡುತ್ತಿದ್ದೇನೆ. No, no, no.

**ಶ್ರೀ ಕೃಷ್ಣಬೈರೇಗೌಡ:-** ಮಾನ್ಯ ಸಭಾಪತಿಯವರೆ, ಸದಸ್ಯರು ಜನರಲ್ ಆಗಿ ಹೇಳಿದರೆ, ನನಗೆ ಅದು ಗೊತ್ತಾಗುವುದಿಲ್ಲ. ಅವರು ಕೇಸ್ ಅನ್ನು ನೀಡಿದರೆ, ನಾನು ಅದನ್ನು examine ಮಾಡಿಸುತ್ತೇನೆ.

**ಸಭಾಪತಿಯವರು:-** ನೀವು ಸಚಿವರಿಗೆ ಮಾಹಿತಿಯನ್ನು ಕೊಡಿ.

**ಶ್ರೀ ರಾಮೋಜಿಗೌಡ:-** ಮಾನ್ಯ ಸಭಾಪತಿಯವರೆ, ಸದನಕ್ಕೆ ತಪ್ಪು ಮಾಹಿತಿ ಹೋಗಬಾರದು. ಇದು ಅಪ್ರೂವ್ ಆಗಿರುವ ಬಡಾವಣೆಯಾಗಿದೆ. ಆದರೂ ಸಹ ಅನಧಿಕೃತ ಬಡಾವಣೆ ಎಂಬುದಾಗಿ ಕೊಟ್ಟಿದ್ದಾರೆ ಎಂದು ಹೇಳುತ್ತಿದ್ದೇನೆ. ಅಲ್ಲಿ ಕೆಲಸ ನಡೆಯುತ್ತಿದೆ. ಅಪ್ರೂವ್ ಆದ ಮೇಲೆ ಕೆಲಸವನ್ನು start ಮಾಡಬೇಕಾಗಿರುವುದು. ಹೀಗಾಗಿ ನಾನು ಇದನ್ನು ಇಲ್ಲಿ ಕ್ಲೀಯರ್ ಮಾಡುತ್ತಿದ್ದೇನೆ.

**ಸಭಾಪತಿಯವರು:-** ಸಚಿವರೇ, ಅವರನ್ನು ಕರೆಸಿ ಮಾತನಾಡಿ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಎಸ್.ಎಲ್.ಭೋಜೇಗೌಡ, ಶ್ರೀ ಸಿ.ಟಿ.ರವಿ, ಶ್ರೀ ಹೆಚ್.ಎಸ್.ಗೋಪಿನಾಥ್, ಶ್ರೀ ಕಿಶೋರ್ ಕುಮಾರ್ ಪುತ್ತೂರ್ ರವರುಗಳು ಘೋಷಣೆಗಳನ್ನು ಕೂಗುತ್ತಿದ್ದುದರಿಂದ ಅವರು ತಮ್ಮ ಪ್ರಶ್ನೆಗಳನ್ನು ಕೇಳಿರುವುದಿಲ್ಲ)**

**ಪ್ರಶ್ನೆ ಸಂಖ್ಯೆ: 530**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಶಿವಣ್ಣ ಬಿ.ಎಸ್. (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನಾನು ಕೇಳಿರುವ ಪ್ರಶ್ನೆಗೆ ಸಚಿವರು ಬಹಳ ಸುದೀರ್ಘವಾದ ಉತ್ತರವನ್ನು ಒದಗಿಸಿದ್ದಾರೆ.

**ಸಭಾಪತಿಯವರು:–** ಈಗ ಪ್ರಶ್ನೋತ್ತರ ಅವಧಿಯು ಮುಕ್ತಾಯವಾಗಿದೆ.

## ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

**ಡಾ॥ ಶರಣಪ್ರಕಾಶ ಆರ್. ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ದಿನಾಂಕ: 20ನೇ ಆಗಸ್ಟ್ 2026, ಸಮೂಹ-4ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 141 ಪ್ರಶ್ನೆಗಳ ಪೈಕಿ 70 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರಗಳನ್ನು ಲಗತ್ತಿಸಲಾಗಿದೆ)**

**ಸಭಾಪತಿಯವರು:-** ಮಂಡಿಸಲಾಯಿತು.

## 2. ನಿಯಮ 58ಎ ಮೇರೆಗೆ ಶೂನ್ಯವೇಳೆ ಪ್ರಸ್ತಾವಗಳು

**ಸಭಾಪತಿಯವರು:–** ಶ್ರೀ ಪಿ.ವಿ.ಮೋಹನ್ ಮತ್ತು ಶ್ರೀ ಜಗದೇವ ಗುತ್ತೇದಾರ ನಿಮ್ಮ ಶೂನ್ಯ ವೇಳೆ ಪ್ರಸ್ತಾವ ಮಂಡಿಸಿ.

**(ಈ ಹಂತದಲ್ಲಿ ಶ್ರೀ ಪಿ.ವಿ.ಮೋಹನ್ ಮತ್ತು ಶ್ರೀ ಜಗದೇವ ಗುತ್ತೇದಾರ ರವರುಗಳು ಸದನದಲ್ಲಿ ಉಪಸ್ಥಿತರಿರಲಿಲ್ಲ)**

**ಅ) ವಿಷಯ:– ವಸತಿ ಶಾಲೆಗಳಲ್ಲಿ ಆಹಾರ ಸುರಕ್ಷತೆ ತಪಾಸಣೆ ಮಾಡುವ ಕುರಿತು.**

– – – – –

**ಶ್ರೀ ಕೆ.ಅಬ್ದುಲ್ ಜಬ್ಬರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. "ಆಹಾರ ಸುರಕ್ಷತೆ ತಪಾಸಣೆ ವಸತಿ ಶಾಲೆಗಳಲ್ಲಿ ಆಗಲಿ" ಎಂಬ ಸಾರ್ವಜನಿಕರ ಮಹತ್ವದ ಜರೂರು ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ಕೋರುತ್ತೇನೆ.

ರಾಜ್ಯದಲ್ಲಿ ಆಹಾರ ಸುರಕ್ಷತೆ ಮತ್ತು ಗುಣಮಟ್ಟವನ್ನು ಖಚಿತಪಡಿಸುವ ಉದ್ದೇಶದಿಂದ ಆಹಾರ ಸುರಕ್ಷತಾ ಅಧಿಕಾರಿಗಳು ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು ಹಾಗೂ ಆಹಾರ ಮಳಿಗೆಗಳ ಮೇಲೆ ದಾಳಿ ನಡೆಸಿ, ಆಹಾರ ಪದಾರ್ಥಗಳ ಗುಣಮಟ್ಟ, ಅಡುಗೆಮನೆಯ ಸ್ವಚ್ಛತೆ ಹಾಗೂ ಆಹಾರ ಸಂಗ್ರಹಣಾ ವ್ಯವಸ್ಥೆಯನ್ನು ಪರಿಶೀಲಿಸುತ್ತಿದ್ದಾರೆ. ನಿಯಮ ಉಲ್ಲಂಘಿಸುವ ಹೋಟೆಲ್‌ಗಳ ವಿರುದ್ಧ ಕ್ರಮ ಕೈಗೊಳ್ಳುತ್ತಿರುವುದು ಸ್ವಾಗತಾರ್ಹ.

ಆದರೆ, ಇದೇ ರೀತಿಯ ನಿಯಮಿತ ಹಾಗೂ ಹಠಾತ್ ಆಹಾರ ಸುರಕ್ಷತಾ ತಪಾಸಣೆಗಳನ್ನು ಸರ್ಕಾರಿ ವಸತಿ ಶಾಲೆಗಳು ಮತ್ತು ವಸತಿ ನಿಲಯಗಳಲ್ಲಿಯೂ ನಡೆಸುವುದು ಅತ್ಯಂತ ಅಗತ್ಯವಾಗಿದೆ. ಇತ್ತೀಚೆಗೆ ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿನ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ ಆಹಾರ ಸೇವಿಸಿದ ನಂತರ ವಿದ್ಯಾರ್ಥಿಗಳು ಅಸ್ವಸ್ಥರಾಗಿರುವ ಘಟನೆ ವರದಿಯಾಗಿರುವ ಹಿನ್ನೆಲೆಯಲ್ಲಿ ಈ ವಿಷಯ ಮತ್ತಷ್ಟು ಗಂಭೀರವಾಗಿದೆ. ವಸತಿ ಶಾಲೆಗಳಲ್ಲಿ ಮಕ್ಕಳು ಪ್ರತಿದಿನ ಅಲ್ಲಿಯೇ ತಯಾರಿಸುವ ಆಹಾರವನ್ನೇ ಅವಲಂಬಿಸಿರುವುದರಿಂದ, ಆಹಾರದ ಗುಣಮಟ್ಟದಲ್ಲಿ ಲೋಪವಾದರೆ ಏಕಕಾಲದಲ್ಲಿ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳ ಆರೋಗ್ಯದ ಮೇಲೆ ಪರಿಣಾಮ ಬೀರುವ ಅಪಾಯವಿದೆ. ಆದ್ದರಿಂದ ಸರ್ಕಾರವು ಹೋಟೆಲ್‌ಗಳ ಮೇಲೆ ನಡೆಸುವ ಆಹಾರ ಸುರಕ್ಷತಾ ದಾಳಿಯ ಮಾದರಿಯಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ವಸತಿ ಶಾಲೆಗಳಲ್ಲಿ ಆಹಾರ ಸುರಕ್ಷತಾ ಇಲಾಖೆಯಿಂದ ನಿಯಮಿತ ಹಾಗೂ ಹಠಾತ್ ತಪಾಸಣೆ ನಡೆಸಬೇಕು. ಅಡುಗೆಗೆ ಬಳಸುವ ಆಹಾರ ಪದಾರ್ಥಗಳ ಮಾದರಿಗಳನ್ನು ಸಂಗ್ರಹಿಸಿ ಪ್ರಯೋಗಾಲಯದಲ್ಲಿ ಪರೀಕ್ಷಿಸಬೇಕು. ಅಡುಗೆಮನೆ, ಕುಡಿಯುವ ನೀರು, ಆಹಾರ ಸಂಗ್ರಹಣೆ ಮತ್ತು ಆಹಾರ

ತಯಾರಿಕೆಯ ಸ್ವಚ್ಛತೆಯನ್ನೂ ಪರಿಶೀಲಿಸಬೇಕು. ವಿದ್ಯಾರ್ಥಿಗಳ ಆರೋಗ್ಯದ ವಿಚಾರದಲ್ಲಿ ಘಟನೆ ಸಂಭವಿಸಿದ ನಂತರ ಕೈಗೊಳ್ಳುವುದಕ್ಕಿಂತ ಮುನ್ನೆಚ್ಚರಿಕಾ ಕ್ರಮವಾಗಿ ಆಹಾರ ಸುರಕ್ಷತಾ ತಪಾಸಣೆಯನ್ನು ಕಡ್ಡಾಯಗೊಳಿಸುವುದು ಅತ್ಯಂತ ಮುಖ್ಯವಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಈ ವಿಚಾರವನ್ನು ತೀವ್ರವಾಗಿ ಪರಿಗಣಿಸಿ, ರಾಜ್ಯದ ಎಲ್ಲಾ ವಸತಿ ಶಾಲೆಗಳಲ್ಲಿ ಆಹಾರ ಸುರಕ್ಷತಾ ಇಲಾಖೆಯ ಮೂಲಕ ನಿಯಮಿತ ತಪಾಸಣಾ ವ್ಯವಸ್ಥೆ ಜಾರಿಗೆ ತಂದು, ವಿದ್ಯಾರ್ಥಿಗಳಿಗೆ ಸುರಕ್ಷಿತ ಮತ್ತು ಗುಣಮಟ್ಟದ ಆಹಾರ ದೊರೆಯುವಂತೆ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಶೂನ್ಯವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಡಾ॥ ಯತೀಂದ್ರ ಎಸ್.(ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಸಂಬಂಧಪಟ್ಟ ಸಚಿವರಿಂದ ನಂತರದಲ್ಲಿ ಉತ್ತರವನ್ನು ಕೊಡಿಸಲಾಗುವುದು.

ಮಾನ್ಯ ಸಭಾಪತಿಯವರೆ, ಸದನದಲ್ಲಿ ಇಲ್ಲದೇ ಇರುವವರ ಹೆಸರನ್ನು ವಿರೋಧ ಪಕ್ಷದವರು ಹೇಳಿಕೊಂಡು, ಇವರುಗಳು ಈ ರೀತಿಯಾಗಿ ಮಾಡುತ್ತಿದ್ದಾರೆ. ಇದು ಸರಿಯಲ್ಲ. ಸದನದ ಗೌರವ ಮತ್ತು ಘನತೆಗಳನ್ನು ಹಾಳು ಮಾಡುತ್ತಿದ್ದಾರೆ. ದಯವಿಟ್ಟು ಇವರುಗಳನ್ನು ಹೊರಗೆ ಹಾಕಿಸಿ.

**ಸಭಾಪತಿಯವರು:-** ಕಾರ್ಯದರ್ಶಿಗಳೇ, ಶೂನ್ಯ ವೇಳೆ ಪ್ರಸ್ತಾವಗಳು 150 ಪದಗಳನ್ನು ಮೀರಬಾರದು. ಇದನ್ನು ಗಮನಿಸಿ.

**ಆ) ವಿಷಯ:- ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜನ್ನು ಮಂಜೂರು ಮಾಡುವ ಕುರಿತು.**

- - - - -

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು.

ದಿನಾಂಕ: 19/08/2026 ರಂದು 'ವಿಜಯ ಕರ್ನಾಟಕ' ದಿನಪತ್ರಿಕೆಯಲ್ಲಿ 'ಮರಳಿ ಬಾರದ ಪಾಲಿಟೆಕ್ನಿಕ್ ಕಾಲೇಜು' ಎಂಬ ಶೀರ್ಷಿಕೆಯಡಿ ರಾಯಚೂರು ಜಿಲ್ಲೆಯಲ್ಲಿಯೇ ಅತೀ ಹೆಚ್ಚು, ಕಾಲೇಜುಗಳಿರುವ ಸಿಂಧನೂರಿನಲ್ಲಿ ಒಂದೂ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಇಲ್ಲವಾಗಿದೆ. 2018 ರಲ್ಲಿ ಸರ್ಕಾರದಿಂದ ಮಂಜೂರಾಗಿದ್ದ ಕಾಲೇಜನ್ನು ಬೇರೆಡೆಗೆ ಎತ್ತಂಗಡಿ ಮಾಡಿದ ಸರ್ಕಾರ ಬಳಿಕ ಮರು ಮಂಜೂರಿಗೆ ನಿರಾಸಕ್ತಿ ವಹಿಸಿರುವುದು, ಶೈಕ್ಷಣಿಕ ಪ್ರಗತಿಯ ಹಿನ್ನೆಡೆಗೆ ಕಾರಣವಾಗಿದೆ. ಸಿಂಧನೂರು ತಾಲ್ಲೂಕಿನಲ್ಲಿ ಸರ್ಕಾರಿ ಹಾಗೂ ಖಾಸಗೀ ಪದವಿ ಪೂರ್ವ ಕಾಲೇಜು, ಪದವಿ ಕಾಲೇಜು, ಸ್ನಾತಕೋತ್ತರ ಪದವಿ ಕಾಲೇಜುಗಳು 50ಕ್ಕೂ ಅಧಿಕ ಸಂಖ್ಯೆಯಲ್ಲಿ ಇದ್ದರೂ, ತಾಂತ್ರಿಕ ಶಿಕ್ಷಣಕ್ಕೆ ಬೇಕಾದ ಒಂದೂ ಕಾಲೇಜು ಇಲ್ಲಿ ಇಲ್ಲ. ಪ್ರತೀ ವರ್ಷ 'ಎಸ್‌ಎಸ್‌ಎಲ್‌ಸಿ'ಯಲ್ಲಿ 4 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಉತ್ತೀರ್ಣರಾಗುತ್ತಿದ್ದರೂ, ಬಹುತೇಕರು ತಾಂತ್ರಿಕ ಶಿಕ್ಷಣಕ್ಕಾಗಿ ಹೊರ ತಾಲ್ಲೂಕು ಹಾಗೂ ಜಿಲ್ಲೆಗಳಿಗೆ ತೆರಳುವ ಅನಿವಾರ್ಯತೆ ಇದೆ. 2017-18 ರಲ್ಲಿ ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ಪಕ್ಷದ ಅವಧಿಯಲ್ಲಿ, ಗ್ರಾಮೀಣ ಪ್ರದೇಶದ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ತಾಂತ್ರಿಕ ಶಿಕ್ಷಣ ಪಡೆಯುವುದಕ್ಕೆ ಉತ್ತೇಜನ ನೀಡಲು ಗ್ರಾಮೀಣ ಪ್ರದೇಶದಲ್ಲಿ ಹೊಸದಾಗಿ 25 ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳನ್ನು ಮಂಜೂರು ಮಾಡಲಾಗಿತ್ತು. ಆ ಪೈಕಿ ಸಿಂಧನೂರಿಗೂ ಕಾಲೇಜು ಮಂಜೂರಾಗಿತ್ತು. ಆದರೆ, ಕಾಲೇಜು ನಿರ್ಮಾಣಕ್ಕೆ ಸೂಕ್ತ ಸ್ಥಳ ದೊರೆಯದ ಕಾರಣ, ನಂತರ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರ ಸಿಂಧನೂರಿನಿಂದ ಬೇರೆ ಜಿಲ್ಲೆಗೆ ಕಾಲೇಜನ್ನು ಸ್ಥಳಾಂತರ ಮಾಡಿತು. ಇದಾಗಿ ವರ್ಷಗಳೇ ಕಳೆದರೂ, ತಾಂತ್ರಿಕ ಶಿಕ್ಷಣಕ್ಕೆ ಉತ್ತೇಜನ ನೀಡುವ ಕೆಲಸವಾಗಿಲ್ಲ. ಸ್ಥಳೀಯವಾಗಿ ಇರುವ ಖಾಸಗೀ ಶಿಕ್ಷಣ ಸಂಸ್ಥೆಗಳಲ್ಲಿ ಐ.ಟಿ.ಐ. ಶಿಕ್ಷಣ ಸಿಗುತ್ತಿದೆಯೇ ಹೊರತು, ಪಾಲಿಟೆಕ್ನಿಕ್ ಕಾಲೇಜುಗಳು ಇಲ್ಲವಾಗಿದೆ ಎಂದು ವರದಿಯಾಗಿರುತ್ತದೆ.

ಆದುದರಿಂದ, ಇಡೀ ಕಲ್ಯಾಣ ಕರ್ನಾಟಕ ಭಾಗದಲ್ಲೇ ಅತೀ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಹೊಂದಿರುವ ಹಾಗೂ ಶೈಕ್ಷಣಿಕವಾಗಿ ಮುಂದುವರೆಯುತ್ತಿರುವ ಹಾಗೂ ನೂತನವಾಗಿ ಜಿಲ್ಲಾ ಕೇಂದ್ರವಾಗಲು ಸೂಕ್ತವಾಗಿರುವ ಸಿಂಧನೂರು ತಾಲ್ಲೂಕು ಸಂಪೂರ್ಣವಾಗಿ ತಾಂತ್ರಿಕ ಶಿಕ್ಷಣದಿಂದ ವಂಚಿತವಾಗಿದ್ದು, ಸರ್ಕಾರ ಕೂಡಲೇ ಸಿಂಧನೂರು ತಾಲ್ಲೂಕಿಗೆ ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಸರ್ಕಾರಿ ಇಂಜಿನಿಯರಿಂಗ್ ಕಾಲೇಜನ್ನು ಮಂಜೂರು ಮಾಡಬೇಕೆಂದು ಶೂನ್ಯವೇಳೆಯಲ್ಲಿ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

**ಡಾ॥ ಯತೀಂದ್ರ ಎಸ್.(ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಸಂಬಂಧಪಟ್ಟ ಸಚಿವರಿಂದ ನಂತರದಲ್ಲಿ ಉತ್ತರವನ್ನು ಕೊಡಿಸಲಾಗುವುದು.

**ಸಭಾಪತಿಯವರು:-** ಶ್ರೀ ಹಣಮಂತ ರುದ್ರಪ್ಪ ನಿರಾಣಿಯವರೇ, ನಿಮ್ಮ ಶೂನ್ಯ ವೇಳೆ ಪ್ರಸ್ತಾವ ಮಂಡಿಸಿ.

**(ಈ ಹಂತದಲ್ಲಿ ಹಣಮಂತ ರುದ್ರಪ್ಪ ನಿರಾಣಿಯವರು ಸದನದಲ್ಲಿ ಉಪಸ್ಥಿತರಿರಲಿಲ್ಲ)**

**ಇ) ವಿಷಯ:- ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ಕಾವೇರಿ ವನ್ಯಧಾಮದಲ್ಲಿ ಘಟಿಸಿದ ಶೂಟೌಟ್ ಪ್ರಕರಣದಿಂದ ಮೃತಪಟ್ಟ ಕುಟುಂಬದವರಿಗೆ ಧನ ಸಹಾಯ ನೀಡುವ ಕುರಿತು.**

- - - - -

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು.

ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ಕಾವೇರಿ ವನ್ಯಧಾಮದಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳು ನಡೆಸಿದ ಗುಂಡಿನ ದಾಳಿಯಲ್ಲಿ ಮೃತಪಟ್ಟ ಮೂರು ಮಂದಿ ಅಮಾಯಕ ಮೃತರ ಅವಲಂಬಿತರಿಗೆ ತಲಾ ಒಂದು ಕೋಟಿ ರೂಪಾಯಿಗಳ ಸಹಾಯಧನ ನೀಡಬೇಕು ಮತ್ತು ಪ್ರಕರಣಗಳ ಸತ್ಯಾಂಶ ಬಯಲಿಗೆ ನ್ಯಾಯಾಂಗ ತನಿಖೆಯ ಜೊತೆ ವಿಶೇಷ ತನಿಖೆ ದಳವನ್ನು (ಎಸ್.ಐ.ಟಿ) ರಚಿಸಬೇಕೆಂದು ಶೂನ್ಯ ವೇಳೆಯಲ್ಲಿ ಪಸ್ತಾಪಿಸಲು ಬಯಸುತ್ತೇನೆ.

ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ಕಾವೇರಿ ವನ್ಯಧಾಮದಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳಿಂದ ರಾಕ್ಷಸೀ ಕೃತ್ಯ ನಡೆದಿದ್ದು, 3 ಮಂದಿ ಅಮಾಯಕರು ಗುಂಡಿನ ದಾಳಿಯಲ್ಲಿ ಮೃತಪಟ್ಟಿದ್ದು, ಅವರ ಕುಟುಂಬದ ಅವಲಂಬಿತರು ತೀರಾ ಬಡತನ ರೇಖೆಗಿಂತ ಕಡಿಮೆ ಆದಾಯವುಳ್ಳವರಾಗಿದ್ದು, ಮೃತಪಟ್ಟವರನ್ನು ಅಕ್ರಮ ಬೇಟೆಗಾರರು ಎಂದು ಬಣ್ಣಿಸುವ ಮೂಲಕ ಅವರ ಜೀವವನ್ನು ಬಲಿ ಪಡೆಯಲಾಗಿದೆ. ಈ ವಿಚಾರವು ಸಂಪೂರ್ಣ ಸುಳ್ಳಾಗಿರುತ್ತದೆ. ಈ ಪ್ರದೇಶಕ್ಕೆ ಭೇಟಿ ನೀಡಿದ ನಾನು ಅನೇಕ ಸಂಗತಿಗಳನ್ನು ಮೃತ ಕುಟುಂಬದವರಿಂದ ಮತ್ತು ಸಾರ್ವಜನಿಕರಿಂದ ಮಾಹಿತಿ ಸಂಗ್ರಹಿಸಲಾಗಿದ್ದು, ಅರಣ್ಯ ಇಲಾಖೆಯ ಅಧಿಕಾರಿಗಳು ರಾಕ್ಷಸೀ ಕೃತ್ಯವನ್ನು ಪ್ರದರ್ಶನ ಮಾಡಿದ್ದು, ಅಮಾಯಕರನ್ನು ಬಹಳ ಹತ್ತಿರದಿಂದ ಗುರಿ ಮಾಡಿ ಗುಂಡು ಹಾರಿಸಲಾಗಿ ಕೊಲೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ. ಈ ಬಗ್ಗೆ ತ್ವರಿತಾ ತನಿಖೆ ಅಗತ್ಯವಿದ್ದು, ಅರಣ್ಯ ಅಧಿಕಾರಿಗಳು ತಮ್ಮ ಇಲಾಖೆ ಬೆಂಬಲದಿಂದ ಕಾನೂನಿನಲ್ಲಿ ನೀಡಬೇಕಾದ ಅಂಶಗಳನ್ನು ಮರೆಮಾಚಿಸಿ, ಬಡಕುಟುಂಬಕ್ಕೆ ನ್ಯಾಯಾ ಸಿಗುವಲ್ಲಿ ತಪ್ಪಿಸಿಕೊಳ್ಳುವ ಸಂದರ್ಭಗಳಿದ್ದು, ಈ ವಿಚಾರವನ್ನು ವಿಶೇಷ ತನಿಖೆ ದಳ (ಎಸ್.ಐ.ಟಿ) ರಚಿಸಿದರೆ ಮಾತ್ರ ಶೀಘ್ರವಾಗಿ ನಿಗದಿತ ಅವಧಿ ಒಳಗೆ ನ್ಯಾಯವನ್ನು ಪಡೆಯಲು ಸಾಧ್ಯವಾಗುವುದು. ಆದುದರಿಂದ ಕೂಡಲೇ ವಿಶೇಷ ತನಿಖೆ ದಳ ರಚಿಸಿಬೇಕೆಂದು ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ. ಅಲ್ಲದೇ ಮೃತರ ಕುಟುಂಬದ ಅವಲಂಬಿತರು ತೀರಾ ಬಡತನ ರೇಖೆಯಲ್ಲಿದ್ದು, ಚಿಕ್ಕಮಕ್ಕಳ ಭವಿಷ್ಯವನ್ನು ಸರ್ಕಾರ ಸಹಾನುಭೂತಿಯಿಂದ ಪರಿಗಣಿಸಬೇಕಾಗಿದೆ. ಮೃತರ ಕುಟುಂಬದ ಆಧಾರ ಸ್ತಂಭವಾಗಿದ್ದು, ಕನಿಷ್ಠ ಒಂದು ಕೋಟಿ ರೂಪಾಯಿಗಳ ಸಹಾಯಧನ ಪರಿಹಾರ ಮತ್ತು ಮೃತಕುಟುಂಬದವರಿಗೆ ಸರ್ಕಾರಿ ನೌಕರಿ ನೀಡಬೇಕು ಮತ್ತು ಮಕ್ಕಳ ಸಂಪೂರ್ಣ ವಿದ್ಯಾಭ್ಯಾಸ ಭರಿಸಬೇಕು. ಕೃತ್ಯಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಸೂಕ್ತ ಕ್ರಮಕೈಗೊಳ್ಳಬೇಕು.

ಇಲಾಖೆ ಅಧಿಕಾರಿ ಎಂದು ಮಾತ್ರಕ್ಕೆ ಕಾನೂನಿನಲ್ಲಿ ತಪ್ಪಿಸಿಕೊಳ್ಳದಂತೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಸದನದ ಶೂನ್ಯ ವೇಳೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಅರಣ್ಯ ಸಚಿವರಲ್ಲಿ ಸಾರ್ವಜನಿಕ ಮಹತ್ವವುಳ್ಳ ವಿಚಾರವನ್ನು ಪ್ರಸ್ತಾಪಿಸಲು ಬಯಸುತ್ತೇನೆ.

**ಡಾ॥ ಯತೀಂದ್ರ ಎಸ್.(ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಸಂಬಂಧಪಟ್ಟ ಸಚಿವರಿಂದ ನಂತರದಲ್ಲಿ ಉತ್ತರವನ್ನು ಕೊಡಿಸಲಾಗುವುದು.

(ಮುಂದು)

(784)20-08-2026/1-00/bkp-md **(ಸಭಾಪತಿಯವರ ಉಪಸ್ಥಿತಿ)**

**ಈ) ವಿಷಯ: ರಾಜ್ಯದಲ್ಲಿರುವ ಮೂಲನಿವಾಸಿಗಳಿಗೆ ಪೌಷ್ಟಿಕ ಆಹಾರಗಳ ಕಿಟ್ ಕಳೆದ 05 ತಿಂಗಳುಗಳಿಂದ ಸ್ಥಗಿತ ಮಾಡಿರುವ ಕುರಿತು.**

- - - -

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ** ಸಭಾಪತಿಯವರೆ, ಅವಕಾಶ ಕೊಟ್ಟ ತಮಗೆ ಧನ್ಯವಾದಗಳು. "ಮೂಲನಿವಾಸಿಗಳಿಗೆ ಪೌಷ್ಟಿಕ ಆಹಾರಗಳ ಕಿಟ್ 5 ತಿಂಗಳುಗಳಿಂದ ಸ್ಥಗಿತ", ಮಕ್ಕಳು, ಗರ್ಭಿಣಿಯರು, ವೃದ್ಧರ ಆರೋಗ್ಯದ ಬಗ್ಗೆ ಹೆಚ್ಚಿದ ಕಳವಳ! ಟೆಂಡರ್ ಪ್ರಕ್ರಿಯೆ ಅಂತಿಮಗೊಳ್ಳದ, ಹಿನ್ನೆಲೆಯಲ್ಲಿ ಅಧ್ಯತೆ: 'ಇಲಾಖೆ' ಎಂಬ ಶೀರ್ಷಿಕೆಯಡಿ ದಿನಾಂಕ 20-07-2026ರ ವಾರ್ತಾಭಾರತಿ ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ರಾಜ್ಯದಲ್ಲಿರುವ ಸಾವಿರಾರು ಮೂಲನಿವಾಸಿಗಳ ಕುಟುಂಬದವರ ಹೊಟ್ಟೆ ತುಂಬಲು ಸಹಕಾರಿಯಾಗಬೇಕಿದ್ದ ಹಾಗೂ ಅವರ ಅಪೌಷ್ಟಿಕತೆಯನ್ನು ನಿವಾರಿಸಬೇಕಿದ್ದ ಸರ್ಕಾರದ ಉಚಿತ ಪೌಷ್ಟಿಕ ಆಹಾರದ ಕಿಟ್ ಐದು ತಿಂಗಳಿಂದ ಅವರಿಗೆ ಸಿಗುತ್ತಿಲ್ಲ ಎಂಬ ಗಂಭೀರ ಆರೋಪ ಕೇಳಿಬಂದಿದೆ. ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯಿಂದ ಜಾರಿಯಲ್ಲಿರುವ ಈ ಯೋಜನೆ ಸ್ಥಗಿತಗೊಂಡಿರುವ ಪರಿಣಾಮ, ಅರಣ್ಯ ಮತ್ತು ಅರಣ್ಯದಂಚಿನಲ್ಲಿರುವ ಮಕ್ಕಳು, ಗರ್ಭಿಣಿಯರು ಹಾಗೂ ವೃದ್ಧರು ಅಪೌಷ್ಟಿಕತೆಯ ಅಭಾವ ಎದುರಿಸುತ್ತಿದ್ದಾರೆ.

ಪ್ರತಿ ತಿಂಗಳು ತಲುಪಬೇಕಿದ್ದ ಪೌಷ್ಟಿಕ ಆಹಾರದ ಪೂರೈಕೆ ಸ್ಥಗಿತಗೊಂಡು ಬರೋಬ್ಬರಿ ಐದು ತಿಂಗಳುಗಳಾಗಿವೆ. ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯಡಿ ಜಾರಿಯಲ್ಲಿರುವ ಈ ಯೋಜನೆಯಡಿ ರಾಜ್ಯದ ಉಡುಪಿ, ದಕ್ಷಿಣ ಕನ್ನಡ, ಮೈಸೂರು, ಚಾಮರಾಜನಗರ, ಕೊಡಗು, ಉತ್ತರ ಕನ್ನಡ, ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗಳ 47,859 ಬುಡಕಟ್ಟು ಕುಟುಂಬಗಳು ಫಲಾನುಭವಿಗಳಾಗಿದೆ.

ಇವರಲ್ಲಿ ಅವಿಭಜಿತ ಕರಾವಳಿ ಜಿಲ್ಲೆಗಳಲ್ಲಿ ಕೊರಗ, ಮಲೆಕುಡಿಯ ಸಮುದಾಯವಿದ್ದು, ಉಳಿದ ಜಿಲ್ಲೆಗಳಲ್ಲಿ ಜೇನುಕುರುಬ, ಕಾಡುಕುರುಬ, ಸೋಲಿಗ, ಎರವ, ಕುಡಿಯ, ಸಿದ್ಧಿ, ಹಸಲರು, ಗೌಡಲು, ಗೊಂಡ ಹಾಗೂ ಬೆಟ್ಟಕುರುಬ ಸೇರಿದಂತೆ 13 ಬುಡಕಟ್ಟು ಸಮುದಾಯಗಳ ಫಲಾನುಭವಿಗಳು ಇಂದು ಸರ್ಕಾರದಿಂದ ಸಿಗುವ ಈ ನೆರವಿಗಾಗಿ ಕಾಯುವಂತಾಗಿದೆ.

ಕರಾವಳಿ ಜಿಲ್ಲೆಗಳಲ್ಲಿ ಮೂಲನಿವಾಸಿಗಳೆನಿಸಿಕೊಂಡಿರುವ ಕೊರಗ ಸಮುದಾಯ ಈಗಲೂ ಸಮಾಜದ ಮುಖ್ಯವಾಹನಿಗೆ ಬರುವಲ್ಲಿ ಹಿಂಜರಿಕೆ ತೋರುತ್ತಿವೆ. ಕೊರಗರು ಇಂದು ಬಹುತೇಕ ಕೂಲಿ ಕೆಲಸವನ್ನು ನೆಚ್ಚಿ

ಕೊಂಡವರು. ನಗರ ಪ್ರದೇಶಗಳಲ್ಲಿ ಪೌರಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ನಿತ್ಯ ದುಡಿದರೆ ಮಾತ್ರ ಊಟಕ್ಕೆ ಸಿಗುತ್ತದೆ. ಈ ಸಮುದಾಯದಲ್ಲಿ ಒಪ್ಪತ್ತಿನ ಊಟಕ್ಕೂ ಪರದಾಟ ಪಡುವ ಅದೆಷ್ಟೋ ಮಂದಿಯಿದ್ದಾರೆ.

ಮೂಲನಿವಾಸಿಗಳು, ಬುಡಕಟ್ಟು ಸಮುದಾಯದ (ಪಿವಿಟಿಜಿ) ಹಿತದೃಷ್ಟಿಯಿಂದ ೨೦೦೮-೦೯ರ ಸಾಲಿನಲ್ಲಿ ಕೊರಗ ಸಮುದಾಯವನ್ನು ಕೇಂದ್ರಿಕರಿಸಿಕೊಂಡು ಉಡುಪಿ ಜಿಲ್ಲೆಯಿಂದ ಪ್ರಥಮವಾಗಿ ಆರಂಭವಾದ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆ ಸಮುದಾಯಕ್ಕೆ ಉಚಿತ ಪೌಷ್ಟಿಕ ಆಹಾರಗಳ ಕಿಟ್ ನೀಡುವುದಾಗಿತ್ತು. ಬಳಿಕ ಪಿವಿಟಿಜಿ ಸಮುದಾಯವಾದ ಜೇನುಕುರುಬ ಸಹಿತ ಅರಣ್ಯ ಹಾಗೂ ಅರಣ್ಯದಂಚಿನ 13 ಸಮುದಾಯಕ್ಕೆ ವಿಸ್ತರಿಸಲಾಯಿತು. ಆದ್ದರಿಂದ, ಮೂಲನಿವಾಸಿಗಳ ಒಳಿತಿಗಾಗಿ ಉಚಿತ ಪೌಷ್ಟಿಕ ಆಹಾರಗಳ ಕಿಟ್‌ಗಳನ್ನು ತಕ್ಷಣವೇ ಶೀಘ್ರವಾಗಿ ವಿತರಿಸಲು ಕ್ರಮಕೈಗೊಳ್ಳಬೇಕಾಗಿ ಮಾನ್ಯ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಮಂತ್ರಿಗಳನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಯತೀಂದ್ರ ಎಸ್. (ಸಭಾನಾಯಕರು):-** ಇದಕ್ಕೆ ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಲಾಗುವುದು.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಸಿ.ಟಿ. ರವಿರವರು ಸರ್ಕಾರದ ವಿರುದ್ಧ ಘೋಷಣೆಯಲ್ಲಿ ನಿರತರಾಗಿದ್ದರು)**

**ಉ) ವಿಷಯ:- ಪ್ರೌಢಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಗಣಿತ ಶಿಕ್ಷಕರ ನೇಮಕಾತಿ ಮಾಡುವ ಕುರಿತು.**

- - - - -

**ಶ್ರೀ ರಾಮೋಜಿಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶ ಕೊಟ್ಟ ತಮಗೆ ಧನ್ಯವಾದಗಳು. ದಿನಾಂಕ 14.08.2026 ರ 'ವಿಜಯ ಕರ್ನಾಟಕ' ಪತ್ರಿಕೆಯಲ್ಲಿ ಪ್ರಕಟವಾಗಿರುವಂತೆ, ಪ್ರೌಢಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಗಣಿತ ಶಿಕ್ಷಕರ ನೇಮಕಕ್ಕೆ ಒತ್ತು ತೋರದೆ ಇರುವುದರಿಂದ ಗಣಿತ ಶಿಕ್ಷಕ ಹುದ್ದೆ ಆಕಾಂಕ್ಷಿಗಳು ಹೈಕೋರ್ಟ್ ಮೆಟ್ಟಿಲೇರಲು ಸಜ್ಜಾಗಿದ್ದಾರೆ. ಸರ್ಕಾರದ ಪ್ರೌಢಶಾಲಾ ಸಹ ಶಿಕ್ಷಕರ ನೇಮಕಾತಿ ಅಧಿಸೂಚನೆಯಲ್ಲಿ ಕನ್ನಡ, ಇಂಗ್ಲಿಷ್, ಸಮಾಜ ವಿಜ್ಞಾನ, ಜೀವ ವಿಜ್ಞಾನ ಮತ್ತು ದೈಹಿಕ ಶಿಕ್ಷಣ ಅಭ್ಯರ್ಥಿಗಳಿಗೆ ಅವಕಾಶ ನೀಡಲಾಗಿದೆ. ಆದರೆ, ಕರ್ನಾಟಕ ರಾಜ್ಯದ ಹಲವು ಭಾಗಗಳಲ್ಲಿ ಸರ್ಕಾರಿ ಶಾಲೆಗಳ ಮಕ್ಕಳಿಗೆ ಕಬ್ಬಿಣದ ಕಡಲೆಯಂತಿರುವ ಗಣಿತ ವಿಷಯಕ್ಕೆ ಶಿಕ್ಷಕರನ್ನು ನೇಮಕ ಮಾಡಲು ಕ್ರಮ ವಹಿಸದಿರುವುದು ಗ್ರಾಮೀಣ ವಿದ್ಯಾರ್ಥಿಗಳ ಗಣಿತ ಕಲಿಕೆಗೆ ಖಾಸಗಿ ಟ್ಯೂಷನ್‌ಗಳಿಗೆ ಮೊರೆ ಹೋಗುವ ಸ್ಥಿತಿ ನಿರ್ಮಾಣವಾಗಿದೆ ಎಂಬ ಆಕ್ಷೇಪ ಕೇಳಿ ಬಂದಿದೆ. ಅಲ್ಲದೆ, ಗಣಿತ ವಿಷಯದ ಅಭ್ಯರ್ಥಿಗಳನ್ನು ಮಾತ್ರ ನೇಮಕಾತಿಯಿಂದ ಸಂಪೂರ್ಣವಾಗಿ ಹೊರಗಿಟ್ಟಿರುವುದು ಭಾರತೀಯ ಸಂವಿಧಾನದ ವಿಧಿ 14 ಸಮಾನತೆಯ ಹಕ್ಕು ಮತ್ತು ವಿಧಿ 16 ಸಮಾನ ಸಾರ್ವಜನಿಕ ಉದ್ಯೋಗದಲ್ಲಿ ಸಮಾನ ಅವಕಾಶದ ನೇರ ಉಲ್ಲಂಘನೆಯಾಗಿದೆ ಎಂದು ಆಕಾಂಕ್ಷಿಗಳು ಆರೋಪಿಸಿದ್ದಾರೆ. ಗಣಿತದ ಜೊತೆಗೆ, ಭೌತಶಾಸ್ತ್ರ ವಿಷಯವನ್ನು ಕೂಡ ಕೈಬಿಡಲಾಗಿದ್ದು, ಇದರಿಂದ ಪ್ರೌಢಶಾಲಾ ಹಂತದ ವಿದ್ಯಾರ್ಥಿಗಳಿಗೆ ಮೂಲಭೂತವಾಗಿ ಕಲಿಯಬೇಕಾದ ವಿಷಯಗಳಲ್ಲಿ ಹಿನ್ನಡೆ ಉಂಟಾಗುವ ಸಾಧ್ಯತೆ ಹೆಚ್ಚಾಗಿದೆ. ಈಗಾಗಲೇ ಬಹುತೇಕ ಸರ್ಕಾರಿ ಶಾಲೆಗಳಲ್ಲಿ ಗಣಿತ ವಿಷಯದಲ್ಲಿ ವಿದ್ಯಾರ್ಥಿಗಳು ಹಿಂದುಳಿಯುತ್ತಿದ್ದು, ಈ ಗಣಿತ ಶಿಕ್ಷಕರ ಅಭಾವವಿರುವ ಶಾಲೆಗಳಿಗೆ ಹೊಸದಾಗಿ ಶಿಕ್ಷಕರನ್ನು ನೇಮಕ ಮಾಡದೆ ಇರುವುದು ಮಕ್ಕಳ ಕಲಿಕೆಗೆ ಮತ್ತಷ್ಟು ಸಮಸ್ಯೆ ತಂದೊಡ್ಡಲಿದೆ ಎಂಬುದು ಶಿಕ್ಷಕ ಹುದ್ದೆ ಆಕಾಂಕ್ಷಿಗಳ ವಾದವಾಗಿದೆ. 2015ರಲ್ಲಿ ಕಲಬುರಗಿ ವಿಭಾಗದಲ್ಲಿ ಗಣಿತ ಶಿಕ್ಷಕರ ನೇಮಕಾತಿ ನಡೆಸಲಾಗಿತ್ತು, ಅದಾದ ಬಳಿಕ, 12 ವರ್ಷ ಕಳೆದರೂ ಗಣಿತ ವಿಷಯಕ್ಕೆ ಶಿಕ್ಷಕರ ನೇಮಕ ಮಾಡಿಲ್ಲ. ಇದರಿಂದ ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಇಂದಿಗೂ ಗಣಿತ ವಿಷಯ ಬೋಧಿಸಲು ಶಿಕ್ಷಕರ ಕೊರತೆಯಿದ್ದರೂ, ಗಣಿತ ಶಿಕ್ಷಕರನ್ನು ನೇಮಕಾತಿಯಿಂದ ಹೊರಗಿಡಲಾಗಿದೆ. 12 ವರ್ಷಗಳಿಂದ ಕಾಯುತ್ತಿದ್ದರೂ ಬಹುತೇಕ ಅಭ್ಯರ್ಥಿಗಳು ಇಂದು ಸರ್ಕಾರಿ ಸೇವೆಯ ಗರಿಷ್ಠ ವಯೋಮಿತಿ ಅಂಚಿನಲ್ಲಿದ್ದಾರೆ. ಈ ನೇಮಕಾತಿಯಲ್ಲಿಯೂ ಗಣಿತ ವಿಷಯಕ್ಕೆ ಅವಕಾಶ ನೀಡದಿದ್ದರೆ, ಮುಂದಿನ ನೇಮಕಾತಿ ಬರುವಷ್ಟರಲ್ಲಿ ಇವರೆಲ್ಲರೂ "ಏಜ್ ಬಾರ್" ಆಗಲಿದ್ದಾರೆ. ಸರ್ಕಾರದ ವಿಳಂಬ ನೀತಿಯಿಂದಾಗಿ ಅಭ್ಯರ್ಥಿಗಳಿಗೆ ಅರ್ಹತೆ ಇದ್ದರೂ ವಯೋಮಿತಿ ಮೀರಿ ಯಾವುದೇ ಸರ್ಕಾರಿ ಉದ್ಯೋಗ ಪಡೆಯಲಾಗದೆ ಬೀದಿಗೆ ಬೀಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ, ಪ್ರೌಢಶಾಲಾ ಶಿಕ್ಷಕರ ನೇಮಕಾತಿ ಅಧಿಸೂಚನೆಯಲ್ಲಿ ತಕ್ಷಣವೇ ಗಣಿತ ಶಿಕ್ಷಕರ

ಹುದ್ದೆಗಳನ್ನು ಸೇರಿಸಬೇಕು ಮತ್ತು ಗಣಿತ ವಿಷಯದಲ್ಲಿ ಅರ್ಹತೆ ಇರುವ ಎಲ್ಲಾ ಅಭ್ಯರ್ಥಿಗಳಿಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಬೇಕೆಂದು ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರ ಬಳಿ ಪ್ರಸ್ತಾಪಿಸಬಯಸುತ್ತೇನೆ.

**ಶ್ರೀ ಯತೀಂದ್ರ ಎಸ್. (ಸಭಾನಾಯಕರು):-** ಇದಕ್ಕೆ ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಲಾಗುವುದು.

ಸಭಾಪತಿಯವರು:- ಶ್ರೀ ತಿಪ್ಪಣ್ಣ ಕಮಕನೂರ....

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರ ರವರು ಗೈರುಹಾಜರಾಗಿದ್ದರು)**

**ಊ) ಶಿವಮೊಗ್ಗ ನಗರದಲ್ಲಿ ನಾಗರಿಕ ಸೌಲಭ್ಯಗಳು ಹದಗೆಟ್ಟಿದ್ದು, ಮೂಲಸೌಕರ್ಯಗಳನ್ನು ಪೂರೈಸುವಲ್ಲಿ ವಿಳಂಬವಾಗುತ್ತಿರುವ ಕುರಿತು.**

- - - -

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಸಾರ್ವಜನಿಕ ಮಹತ್ವದ ವಿಷಯವನ್ನು ಶೂನ್ಯವೇಳೆಯಲ್ಲಿ ಮಂಡಿಸಲು ಅವಕಾಶ ನೀಡಿದ್ದಕ್ಕೆ ತಮಗೆ ಧನ್ಯವಾದಗಳು.

ದಿನಾಂಕ 20/08/2026 ರಂದು ರಾಜ್ಯದ ಪ್ರತಿಷ್ಠಿತ ದಿನಪತ್ರಿಕೆಯಾದ 'ಪ್ರಜಾವಾಣಿ' ಪತ್ರಿಕೆಯಲ್ಲಿ ಶಿವಮೊಗ್ಗದಲ್ಲಿ ನಾಗರಿಕ ಸೌಲಭ್ಯಗಳ ಹದಗೆಟ್ಟ ಸ್ಥಿತಿ: ಜನಪ್ರತಿನಿಧಿಗಳ ಸೂಚನೆಗೂ ಅಧಿಕಾರಿಗಳ ಸ್ಪಂದನೆ ಇಲ್ಲವೇ? ನಗರದ ಅಭಿವೃದ್ಧಿಗೆ ₹165 ಕೋಟಿ ಅನುದಾನ: 100 ದಿನ ಕಳೆದರೂ ಕಾಮಗಾರಿ ಆರಂಭವಾಗಿಲ್ಲ! ಎಂಬ ಶೀರ್ಷಿಕೆಯಲ್ಲಿ ವರದಿ ಪ್ರಕಟವಾಗಿದೆ.

ನಗರದ ಮೂಲಭೂತ ನಾಗರಿಕ ಸೌಲಭ್ಯಗಳ ಸಮಸ್ಯೆಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಸಾರ್ವಜನಿಕರಲ್ಲಿ ಅಸಮಾಧಾನ ತೀವ್ರಗೊಳ್ಳುತ್ತಿದೆ. ಕುಡಿಯುವ ನೀರು, ಹದಗೆಟ್ಟ ರಸ್ತೆಗಳು, ಚರಂಡಿ, ಸ್ವಚ್ಛತೆ ಹಾಗೂ ಕಸ ವಿಲೇವಾರಿ ಸೇರಿದಂತೆ ಹಲವು ಸಮಸ್ಯೆಗಳು ಇನ್ನೂ ಪರಿಹಾರ ಕಾಣದೆ ಉಳಿದಿವೆ. ನಗರಾಭಿವೃದ್ಧಿ ಸಚಿವರು ₹165 ಕೋಟಿ ಮೊತ್ತದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿ 100 ದಿನ ಕಳೆದರೂ ಹಲವು ಕಾಮಗಾರಿಗಳು ಇನ್ನೂ ಆರಂಭವಾಗಿಲ್ಲ ಎಂಬ ಆರೋಪ ಕೇಳಿಬರುತ್ತಿದೆ. ಅಭಿವೃದ್ಧಿ ಕಾಮಗಾರಿಗಳಿಗೆ ವೇಗ ನೀಡುವಂತೆ ಸಾರ್ವಜನಿಕರು ಆಗ್ರಹಿಸುತ್ತಿದ್ದಾರೆ.

ನಗರದಲ್ಲಿ 24/X7 ಕುಡಿಯುವ ನೀರು ಪೂರೈಕೆ ಯೋಜನೆ ಜಾರಿಯಲ್ಲಿದ್ದರೂ, ಹಲವು ಪ್ರದೇಶಗಳಲ್ಲಿ ನೀರಿನ ಸಮಸ್ಯೆ ಮುಂದುವರಿದಿದೆ. ಕೆಲವೆಡೆ ಪೈಪ್‌ಲೈನ್ ಅಳವಡಿಸಿ ವರ್ಷ ಕಳೆದರೂ ಮನೆಗಳಿಗೆ ನೀರಿನ ಸಂಪರ್ಕ ಕಲ್ಪಿಸಿಲ್ಲ ಎಂಬ ದೂರುಗಳಿವೆ. ಈ ಕುರಿತು ಅಧಿಕಾರಿಗಳನ್ನು ಪ್ರಶ್ನಿಸಿದಾಗ ಯೋಜನೆಯ ಮಾಹಿತಿ ಇಲ್ಲ ಎಂಬ ಉತ್ತರ ಸಿಗುತ್ತಿದೆ ಎಂದು ನಾಗರಿಕರು ಆರೋಪಿಸಿದ್ದಾರೆ.

ರಸ್ತೆ, ನೀರು, ಸ್ವಚ್ಛತೆ ಸೇರಿದಂತೆ ತುರ್ತು ಸಮಸ್ಯೆಗಳನ್ನು ಪರಿಹರಿಸುವಂತೆ ಜನಪ್ರತಿನಿಧಿಗಳು ಅಧಿಕಾರಿಗಳಿಗೆ ಸೂಚಿಸುತ್ತಿದ್ದರೂ, ನಿರೀಕ್ಷಿತ ವೇಗದಲ್ಲಿ ಕ್ರಮ ಕೈಗೊಳ್ಳುತ್ತಿಲ್ಲ ಎಂಬ ಆರೋಪಗಳು ಕೇಳಿಬರುತ್ತಿವೆ. ಸರ್ಕಾರಿ ಸೇವೆಗಳಿಗೆ ಸಂಬಂಧಿಸಿದ ಅರ್ಜಿಗಳು ಹಾಗೂ ದೂರುಗಳಿಗಾಗಿ ನಾಗರಿಕರು ಕಚೇರಿಗಳಿಗೆ ಅಲೆದಾಡಬೇಕಾಗಿದೆ ಎಂಬ ದೂರುಗಳೂ ಇವೆ. ಕೆಲವು ಸೇವೆಗಳಿಗೆ ಅನಗತ್ಯವಾಗಿ ಹಣದ ಬೇಡಿಕೆ ಇದೆ ಎಂಬ ಆರೋಪಗಳೂ ಕೇಳಿಬರುತ್ತಿದ್ದು, ಇಂತಹ ದೂರುಗಳಲ್ಲಿ ನಿಷ್ಪಕ್ಷಪಾತ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂಬ ಒತ್ತಾಯ ಕೇಳಿಬಂದಿದೆ.

ನಗರದ ಪ್ರತಿಯೊಂದು ವಾರ್ಡ್‌ನಲ್ಲೂ ಕುಡಿಯುವ ನೀರು, ರಸ್ತೆ, ಚರಂಡಿ, ಸ್ವಚ್ಛತೆ ಮತ್ತು ಬೀದಿ ದೀಪ ಸೇರಿದಂತೆ ಮೂಲಸೌಕರ್ಯಗಳ ಕುರಿತು ವಾರ್ಡ್‌ವಾರೂ ಸಮೀಕ್ಷೆ ನಡೆಸಿ, ಬಾಕಿ ಕಾಮಗಾರಿಗಳ ಪಟ್ಟಿಯನ್ನು ಸಿದ್ಧಪಡಿಸಿ ಕಾಲಮಿತಿಯೊಳಗೆ ಕಾಮಗಾರಿ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲು ಮಾನ್ಯ ನಗರಾಭಿವೃದ್ಧಿ ಸಚಿವರನ್ನು ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

(ಮುಂದು)

**(785) 20.08.2026 01.10 ಎಸ್‌ವಿ-ಎಂಡಿ (ಸಭಾಪತಿಯವರ ಉಪಸ್ಥಿತಿ)**

**(ವಿರೋಧ ಪಕ್ಷದ ಮಾನ್ಯ ಸದಸ್ಯರು ನಿರಂತರವಾಗಿ ಘೋಷಣೆಗಳನ್ನು ಕೂಗುತ್ತಿದ್ದರು)**

**ಡಾ: ಯತೀಂದ್ರ ಎಸ್. (ನಗರಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀಮತಿ ಬಲ್ಕೀಸ್ ಬಾನು ಅವರು ಶಿವಮೊಗ್ಗ ಪಟ್ಟಣದಲ್ಲಿ ನಡೆಯುತ್ತಿರುವ ರೂ.165 ಕೋಟಿ ವೆಚ್ಚದ ರಸ್ತೆ ಮತ್ತು ಒಳಚರಂಡಿ ಕಾಮಗಾರಿಗಳು ಮತ್ತು ನೀರಿನ ಸಂಪರ್ಕ ಕಾಮಗಾರಿಗಳು ವಿನಾಕಾರಣ ವಿಳಂಬವಾಗಿವೆಯೆಂದು ಹೇಳಿದ್ದಾರೆ. ನಾನು ಅಧಿಕಾರಿಗಳ ಹತ್ತಿರ ಈಗಷ್ಟೇ ಮಾಹಿತಿ ತೆಗೆದುಕೊಂಡಿದ್ದೇನೆ. ರೂ.120 ಕೋಟಿಯಷ್ಟು ಕಾಮಗಾರಿಗಳನ್ನು ಮಹಾತ್ಮಾ ಗಾಂಧಿ ನಗರ ವಿಕಾಸ ಯೋಜನೆಯಡಿಯಲ್ಲಿ ತೆಗೆದುಕೊಂಡಿದ್ದೇನೆ. ಆದರೆ ಮಳೆ ಕಾರಣದಿಂದ ಕಾಮಗಾರಿ ವಿಳಂಬವಾಗಿದೆಯೆಂದು ಹೇಳಿದ್ದಾರೆ. ಅದೇ ರೀತಿ ರೂ. 40 ಕೋಟಿ ವೆಚ್ಚದಲ್ಲಿ ಕೆ.ಯು.ಐ.ಡಿ.ಎಫ್.ಸಿ. ಯಿಂದ ಕಾಮಗಾರಿಗಳನ್ನು ತೆಗೆದುಕೊಂಡಿದ್ದಾರೆ. ಅದು ಕೂಡ ಮಳೆ ಕಾರಣದಿಂದಾಗಿ ವಿಳಂಬವಾಗಿದೆಯೆಂದು ಹೇಳಿದ್ದಾರೆ. ಕೆಲವು ಕಾಮಗಾರಿಗಳನ್ನು ಮಾಡುವುದಕ್ಕೆ ಅಧಿಕಾರಿಗಳು ಹಣ ಬೇಡಿಕೆ ಇಟ್ಟಿದ್ದಾರೆಂದು ಅವರು ಹೇಳಿದ್ದಾರೆ. ನಾನು ಇನ್ನಷ್ಟು ವಿವರವಾದ ಮಾಹಿತಿಯನ್ನು ಪಡೆದುಕೊಂಡು ಪರಿಶೀಲನೆ ಮಾಡಿ, ಈ ಕಾಮಗಾರಿಗಳು ಆದಷ್ಟು ಬೇಗ ಪ್ರಗತಿ ಹೊಂದಿ ಕಾಲಮಿತಿಯೊಳಗೆ ಕಾಮಗಾರಿಯನ್ನು ಮುಗಿಸುವುದಕ್ಕೆ ಅಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ. ಹಣಕ್ಕೇನಾದರೂ ಬೇಡಿಕೆಯಿಟ್ಟಿದ್ದರೆ ಅಂಥ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುತ್ತೇನೆಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

**ಸಭಾಪತಿಯವರು:-** ಒಂದು written reply ಕೊಡಿ.

**ಡಾ: ಯತೀಂದ್ರ ಎಸ್:-** ಮಾನ್ಯ ಸಭಾಪತಿಯವರೆ, ಲಿಖಿತ ರೂಪದ ಉತ್ತರವನ್ನು ಕೊಡುತ್ತೇನೆ.

**ಸಭಾಪತಿಯವರು:-** ಮಾನ್ಯ ಪಿ.ವಿ.ಮೋಹನ್ ಅವರೆ, ಶೂನ್ಯವೇಳೆಯಲ್ಲಿ ಅವಕಾಶ ಕೇಳಿದ ಮೇಲೆ ತಾವು ದಯವಿಟ್ಟು ತಮ್ಮ ಸ್ಥಾನದಲ್ಲಿ ಕುಳಿತಿರಬೇಕು. ಅವಕಾಶ ಕೇಳಿ ಆಚೆ ಹೋಗುವುದಲ್ಲ. You should be on time.

**ಋ) ವಿಷಯ:- ಎಲ್ ನಿನೊ – ಲಾ ನಿನಾ ಸೇರಿದಂತೆ ಹವಾಮಾನ ವೈಪರೀತ್ಯ ಹಿನ್ನೆಲೆಯಲ್ಲಿ ಕರಾವಳಿ ಕರ್ನಾಟಕದಲ್ಲಿ ಉಳಿದ ಮಳೆ ನೀರನ್ನು ಸಂರಕ್ಷಿಸಿ, ಅಂತರ್ಜಲ ಮರುಪೂರಣಕ್ಕೆ ತುರ್ತು ಕ್ರಮ ಕೈಗೊಳ್ಳುವ ಕುರಿತು.**

– – – – –

**ಶ್ರೀ ಪಿ.ವಿ. ಮೋಹನ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕದ ಕರಾವಳಿ ಎಂದರೆ ನಮಗೆ ಮೊದಲು ನೆನಪಾಗುವುದು ಮಳೆ. ಆದರೆ ಈ ವರ್ಷ ಇದೇ ಮಳೆಯ ನಾಡಿನಲ್ಲಿ ಬೇಸಿಗೆಯ ಕುಡಿಯುವ ನೀರಿನ ಬಗ್ಗೆ ಈಗಲೇ ಆತಂಕ ಮೂಡುತ್ತಿದೆ. ಇದು ಸಾಮಾನ್ಯವಾಗಿ ಕಾಣುವ ಹವಾಮಾನ ಬದಲಾವಣೆಯಲ್ಲ; ಮಳೆ ಬೀಳುವ ಪ್ರಮಾಣಕ್ಕಿಂತ ಮಳೆ ಬೀಳುವ ರೀತಿಯೇ ಬದಲಾಗುತ್ತಿರುವ ಸೂಚನೆ ಎಂದು ಇದನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಸಾಮಾನ್ಯವಾಗಿ, ಕರಾವಳಿಯಲ್ಲಿ ಮೇ ತಿಂಗಳಲ್ಲೇ ಮುಂಗಾರು ಪೂರ್ವದ ಮಳೆಯ ಚಟುವಟಿಕೆ ಆರಂಭವಾಗಿ, ಜೂನ್‌ನಲ್ಲಿ ಮುಂಗಾರು ವ್ಯಾಪಕವಾಗಿ ಆವರಿಸುತ್ತದೆ. ಈ ಬಾರಿ ಮಳೆಯ ಆರಂಭ ಮತ್ತು ಹಂಚಿಕೆಯಲ್ಲಿ ವ್ಯತ್ಯಾಸ ಕಂಡು ಬಂದಿದೆ. ಜೂನ್‌ನಲ್ಲಿ ಮಳೆ ತಡವಾಗಿ ಆರಂಭಗೊಂಡಿತು. ಜುಲೈ ಮಧ್ಯಭಾಗದಲ್ಲಿ ಮಳೆ ಚುರುಕಾದರೂ, ಒಟ್ಟಾರೆ ಮಳೆಯ ಹಂಚಿಕೆ ಸಮಾನವಾಗಿಲ್ಲ.

ಎಲ್ ನಿನೊ ಮತ್ತು ಲಾ ನಿನಾ ಸೇರಿದಂತೆ ಜಾಗತಿಕ ಹವಾಮಾನ ವಿದ್ಯಮಾನಗಳು ಮುಂಗಾರು ಮಳೆ, ಉಷ್ಣಾಂಶ ಮತ್ತು ಸಮುದ್ರದ ಪರಿಸ್ಥಿತಿಗಳ ಮೇಲೆ ಪರಿಣಾಮ ಬೀರುತ್ತವೆ. ಎಲ್ ನಿನೊ ಸಂದರ್ಭದಲ್ಲಿ ಭಾರತದ ಮುಂಗಾರು ದುರ್ಬಲವಾಗುವ ಸಾಧ್ಯತೆ ಇದ್ದರೆ, ಲಾ ನಿನಾ ಅವಧಿಯಲ್ಲಿ ಮುಂಗಾರು ಹೆಚ್ಚು ಸಕ್ರಿಯವಾಗುವ ಸಾಧ್ಯತೆ ಇದೆ. ಆದರೆ ಇದರ ಪರಿಣಾಮ ಪ್ರತಿವರ್ಷವೂ ಒಂದೇ ರೀತಿಯಾಗಿರುತ್ತದೆ ಎಂದು ಹೇಳಲಾಗದು. ಕೆಲವೆಡೆ ಭಾರಿ ಮಳೆ, ಮತ್ತೊಂದೆಡೆ ಕಡಿಮೆ ಮಳೆ; ಕೆಲವೇ ದಿನಗಳಲ್ಲಿ ಅಪಾರ ನೀರು, ನಂತರ ದೀರ್ಘ ವಿರಾಮ ಈ ರೀತಿಯ ಅಸಮತೋಲನವೇ ಮುಂದಿನ ದಿನಗಳ ದೊಡ್ಡ ಸವಾಲಾಗಬಹುದು. ಕರಾವಳಿಯ ಭೌಗೋಳಿಕ ಸ್ವರೂಪದಿಂದಾಗಿ ಭಾರಿ ಮಳೆಯ ಸಂದರ್ಭದಲ್ಲಿ ಅಪಾರ ಪ್ರಮಾಣದ ನೀರು ನದಿಗಳು ಮತ್ತು ತೊರೆಗಳ ಮೂಲಕ ವೇಗವಾಗಿ ಸಮುದ್ರ ಸೇರುತ್ತದೆ. ಮಳೆಗಾಲದಲ್ಲಿ ನೀರು ಹೆಚ್ಚಿದ್ದರೂ, ಬೇಸಿಗೆಯಲ್ಲಿ ಬಾವಿಗಳು ಬತ್ತುವುದು, ಅಂತರ್ಜಲ ಮಟ್ಟ ಕುಸಿಯುವುದು ಮತ್ತು ಕುಡಿಯುವ ನೀರಿನ ಸಮಸ್ಯೆ ಎದುರಾಗುತ್ತಿದ್ದು, ಹಾಗೂ ಉಳಿದ ಮುಂಗಾರು ಮಳೆಯ ಪ್ರತಿಯೊಂದು ಹನಿಯನ್ನೂ ಮುಂದಿನ ಬೇಸಿಗೆಯ ನೀರಿನ ಭದ್ರತೆಗಾಗಿ ಪರಿವರ್ತಿಸುವ ಸಮಗ್ರ ಕರಾವಳಿ ಜಲಸಂರಕ್ಷಣಾ ಕಾರ್ಯಯೋಜನೆಯನ್ನು" ಕೂಡಲೇ ಜಾರಿಗೆ ತರುವ ವಿಷಯವನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿ, ಈ ಸಮಸ್ಯೆಗಳನ್ನು ಪರಿಹರಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸರ್ಕಾರವನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಡಾ: ಯತೀಂದ್ರ ಎಸ್ (ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಲಾಗುವುದು.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಸದನವು ಆರ್ಡರ್‌ನಲ್ಲಿ ಇಲ್ಲದಿದ್ದರೂ, ತಾವು ಹಠಕ್ಕೆ ಬಿದ್ದು ನಡೆಸಿಯೇ ನಡೆಸುತ್ತೇವೆಂದು ಮಾಡುತ್ತಿದ್ದೀರಿ.

**(ಗೊಂದಲ)**

**ಸಭಾಪತಿಯವರು:–** ನಿಮ್ಮ ಮೊಂಡು ವಾದವನ್ನು ರಾಜ್ಯದ ಜನರು ನೋಡುತ್ತಿದ್ದಾರೆ.

**(ಗೊಂದಲ)**

**ಡಾ: ಯತೀಂದ್ರ ಎಸ್:–** ಮಾನ್ಯ ಸಚಿವರು ಇಲ್ಲಿಗೆ ಬರುತ್ತಾರೆ. ನಿಮಗೇನು ಪ್ರಶ್ನೆ ಬೇಕೋ ಅವರನ್ನು ಕೇಳಿ, ಅವರು ಉತ್ತರ ಕೊಡುತ್ತಾರೆ. ನಿಮ್ಮದು ಮೊಂಡು ವಾದ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಬರಲಿ. ಅವರಿಗೆ ಉತ್ತರ ಕೊಡುವುದಕ್ಕಾಗುವುದಿಲ್ಲ.

**(ಗೊಂದಲ)**

**ಡಾ: ಯತೀಂದ್ರ ಎಸ್:–** ಏಕೆ ಆಗುವುದಿಲ್ಲ? ನಾವು ಉತ್ತರ ಕೊಡುವುದಕ್ಕೆ ಸಿದ್ಧರಿದ್ದೇವೆ. ಕೇಳುವುದಕ್ಕೆ ನೀವು ಸಿದ್ಧರಿಲ್ಲ. ಜನ ಬರದಿಂದ ತತ್ತರಿಸುತ್ತಿದ್ದಾರೆ. ಅವರ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಇವರು ಕೇವಲ ರಾಜಕೀಯ ಮಾಡುತ್ತಿದ್ದಾರೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಜಗದೇವ್ ಗುತ್ತೇದಾರ್ ಅವರೆ, ನಾನು ಕರೆದಾಗ ನೀವು ನಿಮ್ಮ ಸ್ಥಾನದಲ್ಲಿರಬೇಕು. ಇಲ್ಲದಿದ್ದರೆ ಪುನಃ ನಾನು ಅವಕಾಶ ಕೊಡುವುದಿಲ್ಲ.

**ಎ) ವಿಷಯ:- ವರದಕ್ಷಿಣೆ ಕಿರುಕುಳಕ್ಕೆ 617 ಮಹಿಳೆಯರು ಬಲಿಯಾಗಿರುವ ಬಗ್ಗೆ**

- - - - -

**ಶ್ರೀ ಜಗದೇವ್ ಗುತ್ತೇದಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ವರದಕ್ಷಿಣೆ ಕಿರುಕುಳ 617 ಮಹಿಳೆಯರು ಬಲಿ ಎಂಬ ಆಘಾತಕಾರಿ ವಿಷಯವು ವಿಜಯವಾಣಿ ಪತ್ರಿಕೆಯಲ್ಲಿ ಸುದ್ದಿ ಪ್ರಕಟವಾಗಿದೆ. ಕಳೆದ 4 ವರ್ಷಗಳಿಂದ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ 617 ಮಹಿಳೆಯರು ವರದಕ್ಷಿಣೆ ಕಿರುಕುಳದಿಂದ ಮೃತಪಟ್ಟಿದ್ದಾರೆ. ರಾಜ್ಯ ಮಹಿಳಾ ಆಯೋಗ 2022 ರಿಂದ 2026ರ ಜೂನ್‌ವರೆಗೆ ರಾಜ್ಯದಲ್ಲಿ ದಾಖಲಾಗಿರುವ ಮಹಿಳೆಯರ ಮೇಲಿನ ಅಪರಾಧ ಪ್ರಕರಣಗಳ ಅಂಕಿ-ಅಂಶ ಬಿಡುಗಡೆ ಮಾಡಿದ್ದು, ಅದರಲ್ಲಿ ಈ ಅಂಶ ಬೆಳಕಿಗೆ ಬಂದಿದೆ. ವರದಕ್ಷಿಣೆ ಕಿರುಕುಳದಿಂದ ಮಹಿಳೆಯರ ಸಾವು, ಅತ್ಯಾಚಾರ, ಲೈಂಗಿಕ ದೌರ್ಜನ್ಯ, ಪತಿಯ ಕ್ರೌರ್ಯದ ಪ್ರಕರಣಗಳನ್ನು ವರದಿಯಲ್ಲಿ ದಾಖಲಾಗಿಸಲಾಗಿದೆ. 617 ವರದಕ್ಷಿಣೆ ಸಾವಿನ ಪ್ರಕರಣಗಳ ಪೈಕಿ 32 ನಕಲಿ ಪ್ರಕರಣಗಳಾಗದ್ದರೆ, ನಾಲ್ಕೂವರೆ ವರ್ಷದಲ್ಲಿ 7 ಮಂದಿಗೆ ಮಾತ್ರ ಶಿಕ್ಷೆಯಾಗಿದೆ. 467 ಪ್ರಕರಣಗಳು ಇನ್ನೂ ವಿವಿಧ ನ್ಯಾಯಾಲಯದಲ್ಲಿವೆ. ಸಾವಿನ ಪ್ರಕರಣಗಳಲ್ಲಿ ಕೂಡ ಶಿಕ್ಷೆಯ ಪ್ರಮಾಣ ಬಹಳಷ್ಟು ಕಡಿಮೆಯಾಗಿದ್ದು, ಶಿಕ್ಷೆಯ ಪ್ರಮಾಣದ ಬಗ್ಗೆ ಪ್ರಶ್ನೆಗಳು ಎತ್ತುತ್ತಿವೆ. ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಕುರಿತು 2022ರಲ್ಲಿ 5,857 ಪ್ರಕರಣಗಳು ದಾಖಲಾಗಿವೆ. ತನಿಖೆ ವೇಳೆ 559 ನಕಲಿ ಪ್ರಕರಣಗಳು ಎಂದು ತಿಳಿದು ಬಂದಿದೆ. 2025ರಲ್ಲಿ 5843 ಪ್ರಕರಣಗಳು ದಾಖಲಾಗಿದ್ದರೆ, 610 ನಕಲಿ ಪ್ರಕರಣಗಳನ್ನು ಪತ್ತೆ ಮಾಡಲಾಗಿದೆ ಹೀಗೆ ಒಟ್ಟಾರೆ ನಾಲ್ಕುವರೆ ವರ್ಷಗಳಲ್ಲಿ ಲೈಂಗಿಕ ದೌರ್ಜನ್ಯದ ಒಟ್ಟು) 27,828 ಪ್ರಕರಣ ದಾಖಲಾಗಿವೆ.

ವರದಕ್ಷಿಣೆ, ಲೈಂಗಿಕ ದೌರ್ಜನ್ಯ, ಅತ್ಯಾಚಾರಗಳಂತಹ ಪ್ರಕರಣಗಳು ನಡೆಯುತ್ತಿದ್ದರೂ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮಗಳು ಕಡಿಮೆಯಾಗುತ್ತಿರುವುದು ಕಳವಳಕಾರಿಯಾದ ವಿಷಯವಾಗಿದೆ. ಆದ್ದರಿಂದ ಸದರಿ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿ ಸರ್ಕಾರದಿಂದ ಉತ್ತರವನ್ನು ಬಯಸಲು ಅನುಮತಿ ಕೋರುತ್ತಿದ್ದೇನೆ.

**ಡಾ: ಯತೀಂದ್ರ ಎಸ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**(ಗೊಂದಲ)**

**3. ನಿಯಮ 58ಎ ಅಡಿಯಲ್ಲಿ ಪ್ರಸ್ತಾಪಿಸಿದ ಶೂನ್ಯವೇಳೆ ಸೂಚನೆಗಳಿಗೆ ಸರ್ಕಾರದ ಲಿಖಿತ ಉತ್ತರಗಳು**

**ಅ) ವಿಷಯ: ರಾಜ್ಯದ ಮಲೆನಾಡು ಪ್ರದೇಶಗಳ ಜಿಲ್ಲೆಗಳಲ್ಲಿ ಜನವಸತಿ ಗ್ರಾಮಗಳನ್ನು ಪರಿಸರ ಸೂಕ್ಷ್ಮ ಪ್ರದೇಶಗಳೆಂದು ಕೇಂದ್ರ ಸರ್ಕಾರ ಘೋಷಿಸಿರುವ ಬಗ್ಗೆ.**

- - - - -

**ಡಾ: ಯತೀಂದ್ರ ಎಸ್** (ಸಭಾನಾಯಕರು) **(ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀಮತಿ ಎ.ವಿ.ಗಾಯತ್ರಿ ಶಾಂತೇಗೌಡರವರು ದಿನಾಂಕ 18.08.2026ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಆ) ವಿಷಯ: ರಾಜ್ಯದ 27 ಜಿಲ್ಲೆಗಳ ಅಂತರ್ಜಲದಲ್ಲಿ ಅಪಾಯಕಾರಿ ನೈಟ್ರೇಟ್ ಸಾಂದ್ರತೆ ಹೆಚ್ಚಾಗಿದ್ದು, ಸಾರ್ವಜನಿಕ ಆರೋಗ್ಯ ಕ್ಷೀಣಿಸುತ್ತಿರುವ ಬಗ್ಗೆ**

- - - - -

**ಡಾ: ಯತೀಂದ್ರ ಎಸ್ (ಸಭಾನಾಯಕರು) (ಗ್ರಾ,ಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರರವರು ದಿನಾಂಕ 17.08.2026ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

(ಉತ್ತರವನ್ನು ಲಗತ್ತಿಸಲಾಗಿದೆ)

**ಇ) ವಿಷಯ: ಕಲಬುರಗಿ ಜಿಲ್ಲೆಯ 110 ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಘಟಕಗಳಿಗೆ ರೂ.50 ಕೋಟಿ ಸಹಾಯಧನ ಬಿಡುಗಡೆ ಮಾಡುವ ಬಗ್ಗೆ.**

– – – – –

**ಡಾ: ಯತೀಂದ್ರ ಎಸ್** (ಸಭಾನಾಯಕರು) **(ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರರವರು ದಿನಾಂಕ 19.08.2026ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

(ಉತ್ತರವನ್ನು ಲಗತ್ತಿಸಲಾಗಿದೆ)

**ಈ) ವಿಷಯ: ಬೆರಳಚ್ಚು ನೀಡದಿರುವುದರಿಂದ ಪಡಿತರ ಸಿಗದೇ ಹಿರಿಯರು ಪರದಾಟ ಪಡುತ್ತಿರುವ ಬಗ್ಗೆ.**

– – – – –

**ಡಾ: ಯತೀಂದ್ರ ಎಸ್ (ಸಭಾನಾಯಕರು) (ಆಹಾರ, ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀ ಅಬ್ದುಲ್ ಜಬ್ಬಾರ್‌ರವರು ದಿನಾಂಕ 19.08.2026ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

(ಉತ್ತರವನ್ನು ಲಗತ್ತಿಸಲಾಗಿದೆ)

**ಉ) ವಿಷಯ: ಶಿಕ್ಷಣ ಇಲಾಖೆಯ ವಿವಿಧ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ**

- - - - -

**ಡಾ: ಯತೀಂದ್ರ ಎಸ್** (**ಸಭಾನಾಯಕರು**) (**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರ ಪರವಾಗಿ**)**:-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀ ಡಿ.ಟಿ.ಶ್ರೀನಿವಾಸ್‌ರವರು ದಿನಾಂಕ 17.08.2026ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

## 4. ವಿಶೇಷ ಜಂಟಿ ಸದನ ಸಮಿತಿಯ ಕಾಲಾವಕಾಶವನ್ನು ವಿಸ್ತರಿಸುವ ಪ್ರಸ್ತಾವ

**ಶ್ರೀ ಎಸ್. ವ್ಹಿ. ಸಂಕನೂರ, ಅಧ್ಯಕ್ಷರು, ವಿಶೇಷ ಜಂಟಿ ಸದನ ಸಮಿತಿ:–** ಮಾನ್ಯ ಸಭಾಪತಿಯವರೆ, ರಾಜ್ಯದಲ್ಲಿ 2020–21ನೇ ಸಾಲಿನಲ್ಲಿ ಹೊಸದಾಗಿ ನರ್ಸಿಂಗ್ ಮತ್ತು ಅಲೈಡ್ ಹೆಲ್ತ್ ಸೈನ್ಸಸ್ ಕಾಲೇಜುಗಳಿಗೆ ಮೂಲ ಸೌಕರ್ಯಗಳಿಲ್ಲದಿದ್ದರೂ ಅನುಮತಿ ನೀಡಿ, ಇಂಡಿಯನ್ ನರ್ಸಿಂಗ್ ಕೌನ್ಸಿಲ್ ಅವರು ಹೊರಡಿಸಿರುವ ಮಾರ್ಗಸೂಚಿಗಳನ್ನು ಉಲ್ಲಂಘಿಸಿರುವ ವಿಷಯವನ್ನು ಪರಿಶೀಲಿಸಿ ವರದಿಯನ್ನು ಸಲ್ಲಿಸಲು ರಚಿಸಲಾಗಿರುವ ವಿಶೇಷ ಜಂಟಿ ಸದನ ಸಮಿತಿಯ ಅವಧಿಯನ್ನು ದಿನಾಂಕ 14.07.2026ರಿಂದ ಮುಂದಿನ 12 ತಿಂಗಳವರೆಗೆ ಕಾಲಾವಕಾಶವನ್ನು ಸದನದ ಸಹಮತಿಯನ್ನು ಕಾಯ್ದಿರಿಸಿ ವಿಸ್ತರಿಸಲಾಗಿರುವ ಪ್ರಸ್ತಾವನೆಗೆ ಸದನದ ಸಹಮತಿ ಕೋರಿ ಪ್ರಸ್ತಾವನೆಯನ್ನು ಮಂಡಿಸುತ್ತಿದ್ದೇನೆ.

**ಸಭಾಪತಿಯವರು:** ಮಾನ್ಯ ಸದಸ್ಯರಾದ ಶ್ರೀ ಎಸ್. ವ್ಹಿ. ಸಂಕನೂರರವರು ಮಂಡಿಸಿರುವ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಏನೆಂದರೆ, ರಾಜ್ಯದಲ್ಲಿ 2020–21ನೇ ಸಾಲಿನಲ್ಲಿ ಹೊಸದಾಗಿ ನರ್ಸಿಂಗ್ ಮತ್ತು ಅಲೈಡ್ ಹೆಲ್ತ್ ಸೈನ್ಸಸ್ ಕಾಲೇಜುಗಳಿಗೆ ಮೂಲ ಸೌಕರ್ಯಗಳಿಲ್ಲದಿದ್ದರೂ ಅನುಮತಿ ನೀಡಿ, ಇಂಡಿಯನ್ ನರ್ಸಿಂಗ್ ಕೌನ್ಸಿಲ್ ಅವರು ಹೊರಡಿಸಿರುವ ಮಾರ್ಗಸೂಚಿಗಳನ್ನು ಉಲ್ಲಂಘಿಸಿರುವ ವಿಷಯವನ್ನು ಪರಿಶೀಲಿಸಿ ವರದಿಯನ್ನು ಸಲ್ಲಿಸಲು ರಚಿಸಲಾಗಿರುವ ವಿಶೇಷ ಜಂಟಿ ಸದನ ಸಮಿತಿಯ ಅವಧಿಯನ್ನು ದಿನಾಂಕ 14.07.2026ರಿಂದ ಮುಂದಿನ 12 ತಿಂಗಳವರೆಗೆ ಕಾಲಾವಕಾಶವನ್ನು ವಿಸ್ತರಿಸುವ ಬಗ್ಗೆ ಸದನದ ಒಪ್ಪಿಗೆ ಪಡೆಯುವುದು.

**"ಪ್ರಸ್ತಾವನೆಯು ಅಂಗೀಕಾರಗೊಂಡಿತು ಹಾಗೂ ಕಾಲಾವಕಾಶ ವಿಸ್ತರಣೆಗೆ ಸದನವು ಅನುಮೋದನೆ ನೀಡಿತು."**

## 5. ಗಮನ ಸೆಳೆಯುವ ಸೂಚನೆ

**ವಿಷಯ:- ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಒಳಮೀಸಲಾತಿಯ ಹೊಸ ವರ್ಗೀಕರಣದಡಿಯಲ್ಲಿ ಅಗತ್ಯ ಪುರಾವೆ ಒದಗಿಸಲಾಗದೆ ವಿದ್ಯಾರ್ಥಿಗಳು/ಅಭ್ಯರ್ಥಿಗಳು ಆತಂಕಕ್ಕೀಡಾಗಿರುವ ಬಗ್ಗೆ**

- - - - -

**ಶ್ರೀ ಕೆ. ಶಿವಕುಮಾರ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಒಳಮೀಸಲಾತಿಯ ಹೊಸ ವರ್ಗೀಕರಣದ ಅಡಿಯಲ್ಲಿ ಅರ್ಹ ಉಪಜಾತಿಗಳನ್ನು ಗುರುತಿಸಲು ಅನಗತ್ಯ ಪುರಾವೆಗಳನ್ನು ಕೇಳುತ್ತಿರುವುದರಿಂದ ಶೈಕ್ಷಣಿಕ ಪ್ರವೇಶಾತಿ ಹಾಗೂ ವಿದ್ಯಾರ್ಥಿ ವೇತನಕ್ಕೆ ಮತ್ತು ಸರ್ಕಾರಿ ಹುದ್ದೆಗಳ ನೇಮಕಾತಿಗೆ ನಿಗದಿ ಸಮಯಕ್ಕೆ ಪುರಾವೆಗಳನ್ನು ಒದಗಿಸಲು ಸಾಧ್ಯವಾಗದೆ ಮೀಸಲಾತಿ ಸೌಲಭ್ಯದಿಂದ ವಂಚಿತರಾಗಿ ವಿದ್ಯಾರ್ಥಿಗಳು/ ಅಭ್ಯರ್ಥಿಗಳು ಆತಂಕಕ್ಕೀಡಾಗುತ್ತಿರುವ ಕುರಿತು ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ.

(ಮುಂದು)

(786) ದಿ:20-08-2026, (1.20), ಕೆಜಿ-ಎಕೆ (ಸಭಾಪತಿಯವರ ಉಪಸ್ಥಿತಿ)

**(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಮಾನ್ಯ ಸದಸ್ಯರು ಸ್ವಸ್ಥಾನಗಳಲ್ಲಿ ನಿಂತು ಒಟ್ಟಾಗಿ ಸರ್ಕಾರದ ವಿರುದ್ಧ ನಿರಂತರವಾಗಿ ಘೋಷಣೆಗಳನ್ನು ಕೂಗುತ್ತಿದ್ದರು)**

**ಶ್ರೀ ಶಿವಕುಮಾರ್ ಕೆ. (ಮುಂದು):-**

ಮಾನ್ಯ ಸಭಾಪತಿಯವರೇ, ಇವತ್ತು ಪರಿಶಿಷ್ಟ ಜಾತಿಯವರಿಗೆ ಕೊಡುತ್ತಿರುವ ಜಾತಿ ಪ್ರಮಾಣ ಪತ್ರ A, B, C ಎಂದು ವರ್ಗೀಕರಣವಾಗಿದೆ. ಆದರೆ, ಜಾತಿ ಪ್ರಮಾಣ ಪತ್ರ ಕೊಡುವುದರಲ್ಲಿ ವಿಳಂಬವಾಗುತ್ತಿದೆ ಎಂದು ಹೇಳಿರುವುದಕ್ಕೆ ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರು ಸುದೀರ್ಘವಾದಂತಹ ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ನಾನು ಹೇಳುವುದಕ್ಕೆ ಬಯಸುವುದೇನೆಂದರೆ, ಅವರು ತಲಾತಲಾಂತರದಿಂದ Scheduled Caste ಆಗಿ, ಅವರ ತಾತ, ಅವರ ಮುತ್ತಾತ, ಅವರು ಮತ್ತು ಅವರ ಅಪ್ಪ ಎಲ್ಲರೂ Scheduled Caste ಆಗಿರುತ್ತಾರೆ. ಆದರೆ, ಇವತ್ತು ಈ ಪ್ರಮಾಣಪತ್ರವನ್ನು ತೆಗೆದುಕೊಳ್ಳುವುದಕ್ಕೆ, ಈ ಜಾತಿಯಲ್ಲಿ ಹುಟ್ಟಿದ್ದೇನೆಂದು ಒಂದು

seal ಹಾಕುವುದಕ್ಕೆ ತಾಲ್ಲೂಕು ಕಛೇರಿಗಳಲ್ಲಿ 5,000 ರೂಪಾಯಿಗಳ ಲಂಚವನ್ನು ಕೇಳುತ್ತಿದ್ದಾರೆ. ಆ Taluk Office ಗಳಲ್ಲಿ R.I. ಗಳು (Revenue Inspectors), Village Accountants ದುಡ್ಡು ಕೇಳುತ್ತಿದ್ದಾರೆ. ಇದರಿಂದ ನಮಗೆ ಇವತ್ತು ಪ್ರಮಾಣ ಪತ್ರ ಸಿಗುವುದು ತಡವಾಗುತ್ತಿದೆ. ಇದು ಏಕೆ ತಡವಾಗುತ್ತಿದೆ ಎಂದರೆ, ಇವತ್ತು ನಗರ ಪ್ರದೇಶದಲ್ಲಿರುವ ದಲಿತರು 5 ಜನರು ಮಹಜರ್ ಮಾಡಬೇಕೆಂದು ಹೇಳುತ್ತಿದ್ದಾರೆ. ಅವರ ಮನೆಯ ಅಕ್ಕ-ಪಕ್ಕದವರಿಗೆ ಅವರು Scheduled Caste ಎಂದು ಹೇಳಿರುವುದಿಲ್ಲ. ಅವರು ಬಾಡಿಗೆ ಮನೆಯನ್ನು ತೆಗೆದುಕೊಂಡಿರುತ್ತಾರೆ. ಆ ಬಾಡಿಗೆ ಮನೆ ತೆಗೆದುಕೊಂಡಿರುವವರು S.C. ಎಂದು ಎಲ್ಲಿ certify ಮಾಡುವುದಕ್ಕೆ ಆಗುತ್ತದೆ? ಸರ್ಕಾರ ಇದನ್ನು ಕೂಡಲೇ ಕೈಬಿಡಬೇಕು. ಇದೇ ತರಹ ತಪ್ಪು ಮಾಡಿ ನ್ಯಾಯಮೂರ್ತಿ ಸದಾಶಿವ ಆಯೋಗ ಇರಬಹುದು, ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗದಲ್ಲಿ ನ್ಯಾಯವಾಗಿ ಮಾಹಿತಿ ಸಿಗದೇ ಇವತ್ತು lapses ಆಗಿದೆ. ಈ ತರಹದ lapses ಆಗಿರುವುದಕ್ಕೆ ಇವತ್ತು ಮಾಹಿತಿ ಸಿಕ್ಕಿಲ್ಲ. ನಾವು ಏಕೆ 5 ಜನರ proof ಅನ್ನು ಹೇಳಬೇಕು. ನಾವು Scheduled Caste ಎಂದು ನಮಗೆ ಗೊತ್ತಿದೆ. ನನ್ನ ಪ್ರಮಾಣ ಪತ್ರ ಇದೆ. ಆದರೆ, ಇದಕ್ಕೆ ನಮ್ಮ ತಂದೆಯವರ T.C. (Transfer Certificate) ಏಕೆ ಬೇಕು? ಅವರಿಗೆ ಈಗ 84 ವರ್ಷ ವಯಸ್ಸು ಆಗಿದೆ. ನಮ್ಮ ತಂದೆಯವರ T.C. ಅನ್ನು ನಾನು ಏಕೆ ತೆಗೆದುಕೊಂಡು ಹೋಗಬೇಕು? ನಾವು ಯಾವುದೇ ತರಹದ ವಿಳಂಬ ನೀತಿಯನ್ನು ಮಾಡುತ್ತಿಲ್ಲವೆಂದು ನಾಡ ಕಛೇರಿಯಲ್ಲಿ ಹೇಳುತ್ತಾರೆ. ಪ್ರಮಾಣಪತ್ರ ಮಾಡಿಸುತ್ತಿರುವವರು ಬೆಳಗ್ಗೆ 4.00 ಗಂಟೆಗೆ ಅವರ ಮಕ್ಕಳನ್ನು ಎತ್ತಿಕೊಂಡು ಹೋಗಿ R.I. office ಅಥವಾ ತಾಲ್ಲೂಕು ಕಛೇರಿಯಲ್ಲಿ ನಿಂತುಕೊಳ್ಳಬೇಕು. ಅಲ್ಲಿ long queue ಇರುತ್ತದೆ. ಇವತ್ತು ಬೆಳಗ್ಗೆ 4.00 ಗಂಟೆಗೆ ಹೋಗಿ ಜಾತಿಪ್ರಮಾಣ ಪತ್ರಕ್ಕೆ ಕಾಯುವಂತಹ ಪರಿಸ್ಥಿತಿ ಬಂದಿದೆ. ಇದಕ್ಕೆ ಇಷ್ಟೊಂದು ತಡ ಏಕೆ ಮಾಡಬೇಕು? ಆದಷ್ಟು ಬೇಗನೆ ಈ ಪ್ರಮಾಣ ಸಿಗುವಂತೆ ಮಾಡಬೇಕು. 6 K.Y.C. (Know Your Customer) ಬರುತ್ತದೆ. ನಾವು 6 ಬಾರಿ number ಹೇಳಬೇಕು. ಯಾರ ಹತ್ತಿರ ಮೊಬೈಲ್ ಇರುತ್ತದೆ? ಯಾರೋ ಒಬ್ಬ ದಲಿತ ಊರಿನಲ್ಲಿ ಇರುವವರು ಕಡಿಮೆ ಬೆಲೆಯ keypad ಇರುವ ಮೊಬೈಲ್‌ನ್ನು ಇಟ್ಟುಕೊಂಡಿರುವವರು 6 ಬಾರಿ K.Y.C. ಅನ್ನು ಹೇಳುವುದಕ್ಕೆ ಆಗುತ್ತದೆಯೇ? ಇಂತಹ rules ಏಕೆ ಬೇಕಾಗಿತ್ತು? ಈ ತರಹದ್ದನ್ನು drop ಮಾಡಬೇಕು. If his father is a Scheduled Caste and his Grand Father is a Scheduled Caste, please give them the Caste Certificate. ನಾವು ತಲಾತಲಾಂತರದಿಂದ ಜಾತಿ ಪ್ರಮಾಣ ಪ್ರಮಾಣ ಪತ್ರವನ್ನು ತೆಗೆದುಕೊಂಡು ಬಂದಿದ್ದೇವೆ. ಇದಕ್ಕೆ ಸರ್ಕಾರ ಮತ್ತೆ ಏಕೆ ತೊಂದರೆ ಕೊಡುತ್ತಿದೆ?

**ಸಭಾಪತಿಯವರು:–** ಮಾನ್ಯ ಸಚಿವರೇ, ತಾವು ಉತ್ತರ ಕೊಡಿ.

**ಡಾ॥ ಶರಣಪ್ರಕಾಶ್ ಆರ್. ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು) (ಉಪ ಮುಖ್ಯಮಂತ್ರಿ ಹಾಗೂ ಕಂದಾಯ ಸಚಿವರ ಪರವಾಗಿ):–** ಮಾನ್ಯಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಕೆ.ಶಿವಕುಮಾರ್‌ರವರು ಕೇಳಿರುವಂತಹ ಪ್ರಶ್ನೆಗೆ ಸುದೀರ್ಘವಾದಂತಹ ಉತ್ತರವನ್ನು ಒದಗಿಸಿದ್ದೇವೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

ಮಾನ್ಯ ಸದಸ್ಯರು ತಾಲ್ಲೂಕು ಕಛೇರಿಗಳಲ್ಲಿ ಜಾತಿ ಪ್ರಮಾಣ ಪತ್ರ ಕೊಡುವುದಕ್ಕೆ ಅಧಿಕಾರಿಗಳು ಹಣ ಕೇಳುತ್ತಿದ್ದಾರೆಂಬ ಕೆಲವೊಂದು ಆಕ್ಷೇಪಣೆಗಳನ್ನು ಎತ್ತಿದ್ದಾರೆ. ಅಲ್ಲದೇ, ಇದನ್ನು ಸರಳೀಕರಣ ಮಾಡಬೇಕೆಂದು ಸಹ ಹೇಳಿದ್ದಾರೆ. ಇದಕ್ಕೆ 5 ಜನ ಪಂಚರು ಬೇಕಾಗಿರುವುದರಿಂದ ಇದು ವಿಳಂಬವಾಗುತ್ತಿದೆ ಎಂದು ಹೇಳುತ್ತಿದ್ದಾರೆ. ನಾನು ಇದಕ್ಕೆ ಸಂಬಂಧಪಟ್ಟ ಉಪ ಮುಖ್ಯಮಂತ್ರಿಯವರ ಹಾಗೂ ಕಂದಾಯ ಸಚಿವರ ಗಮನಕ್ಕೆ ತಂದು ಇದರಲ್ಲಿ ಏನು ಸರಳೀಕರಣ ಮಾಡಬೇಕಾಗಿದೆ ಅದನ್ನು ಮಾಡಿಸಿಕೊಡುತ್ತೇನೆ.

**ಶ್ರೀ ಶಿವಕುಮಾರ್ ಕೆ. (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಇದಕ್ಕೆ 6 ಬಾರಿ K.Y.C. ಬರುತ್ತದೆ. ಈಗ ನಾನು ಪ್ರಮಾಣ ಪತ್ರವನ್ನು ಮಾಡಿಸುವುದಕ್ಕೆ ಹೋದರೆ, 6 ಬಾರಿ number ಅನ್ನು ಹೇಳಬೇಕು. ಇದಕ್ಕೆ ಅಷ್ಟೊಂದು ಏಕೆ ಬೇಕು? ಅಷ್ಟು ಅಗತ್ಯ ಏನಿದೆ?

**(ಈ ಹಂತದಲ್ಲಿ ಸಚಿವರಾದ ಶ್ರೀ ಯು.ಟಿ.ಖಾದರ್ ಹಾಗೂ ಮಾನ್ಯ ಸಭಾನಾಯಕರಾದ ಡಾ॥ ಯತೀಂದ್ರ. ಎಸ್ ಇವರು ಒಟ್ಟಿಗೆ ಮಾತನಾಡತೊಡಗಿದರು)**

**(ಗೊಂದಲ)**

**ಶ್ರೀ ಶಿವಕುಮಾರ್ ಕೆ. :-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ ಏನೆಂದರೆ, ನಗರ ಪ್ರದೇಶಗಳಲ್ಲಿ ಈ 5 ಜನರ mahajar ಏನು ಮಾಡಿಕೊಳ್ಳಬೇಕಾಗಿದೆ, ಇದನ್ನು drop ಮಾಡಬೇಕು. No one living in a rented house is ready to disclose himself as a Scheduled Caste. If he discloses, he will never get the house. It is very illogical and inhuman. The government should drop it. And the second thing is, ಸರ್ಕಾರ 48 ಗಂಟೆಗಳಲ್ಲಿ ಪ್ರಮಾಣ ಪತ್ರವನ್ನು ಕೊಡಬೇಕು. ಸರ್ಕಾರ ಇದನ್ನು ಕೊಡುವುದರಲ್ಲಿ ಬಹಳ ವಿಳಂಬ ಮಾಡುತ್ತಿದೆ. ಇದಕ್ಕೆ ಮುಂಜಾನೆ 4.00 ಗಂಟೆಗೆ ಹೋಗಿ ಅಲ್ಲಿ ಕುಳಿತುಕೊಳ್ಳಬೇಕಾಗಿದೆ. ಪ್ರತಿ ದಿವಸ ನಾಡ ಕಛೇರಿಯಲ್ಲಿ 15 ಪ್ರಮಾಣ ಪತ್ರ ಮಾತ್ರ ಮಾಡುವುದಕ್ಕೆ ಅವಕಾಶ ಇದೆ. ಮತ್ತೆ ಅಲ್ಲಿನ ಅಧಿಕಾರಿಗಳು software problem ಎಂದು ಹೇಳುತ್ತಾರೆ. ಪತ್ರಿ ದಿವಸ 15 ಜನರಿಗೆ ಮಾತ್ರ ಪ್ರಮಾಣ ಪತ್ರ ಕೊಡುವುದಕ್ಕೆ ಆಗುತ್ತಿದೆ. ಈಗ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ರಾಮನಗರ, ಮಂಡ್ಯ, ಮೈಸೂರು ಮತ್ತು ಗುಲ್ಬರ್ಗಾದಲ್ಲಿ Scheduled Caste population ಹೆಚ್ಚಿಗೆ ಇದೆ. ಹಾಗಾಗಿ, ಪ್ರತಿದಿವಸ 15 ಪ್ರಮಾಣ ಪತ್ರಗಳನ್ನು ಕೊಟ್ಟುಕೊಂಡು ಹೋದರೆ, ಯಾವ ಕಾಲಕ್ಕೆ ಪ್ರಮಾಣ ಪತ್ರಗಳನ್ನು ಕೊಡುತ್ತೀರಿ? ಈ ತೊಂದರೆಯಿಂದ ಬಹಳ ವಿದ್ಯಾರ್ಥಿಗಳು ಸರ್ಕಾರ ಕರೆದಿರುವಂತಹ ಹುದ್ದೆಗಳಿಗೆ ಅರ್ಜಿ ಹಾಕುವುದಕ್ಕೆ ಆಗಿರುವುದಿಲ್ಲ. ಸರ್ಕಾರ ಮೊನ್ನೆ ದಿವಸ B.C.M. (Backward Classes and Minorities) Hostels ಗಳ ಹುದ್ದೆಗೆ ಅರ್ಜಿಗಳನ್ನು ಕರೆದಿತ್ತು. ಆದರೆ, ಈ ತೊಂದರೆಯಿಂದ ಅಲ್ಲಿಗೆ ಅರ್ಜಿ ಹಾಕುವುದಕ್ಕೆ

ಆಗಲಿಲ್ಲ. last date ಆಗಿದೆ. ಅವರಿಗೆ A, B, C ಎಂದು certificate ಸಿಗುತ್ತಿಲ್ಲ. ಸರ್ಕಾರ 70,000 ಹುದ್ದೆಗಳನ್ನು ತುಂಬುತ್ತಿದೆ. ಇದಕ್ಕೆ ನಾನು ಸರ್ಕಾರವನ್ನು welcome ಮಾಡುತ್ತೇನೆ. ಇಂತಹ ಒಂದು ಅವಕಾಶವನ್ನು ಜಾತಿ ಪ್ರಮಾಣ ಪತ್ರ ಇಲ್ಲದೆ ವಿದ್ಯಾರ್ಥಿಗಳು ಅವಕಾಶ ಕಳೆದುಕೊಂಡು ಬಿಟ್ಟರೆ, ಬಹಳ ತೊಂದರೆಯಾಗುತ್ತದೆ. ಈ ತೊಂದರೆಯನ್ನು ಸರ್ಕಾರ immediate ಆಗಿ ನಿವಾರಣೆ ಮಾಡಬೇಕು.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಆಯಿತು ಬಿಡಿ. ಮಾನ್ಯ ಸಚಿವರು ಉತ್ತರವನ್ನು ಹೇಳುತ್ತಾರೆ.

**ಶ್ರೀ ಶಿವಕುಮಾರ್ ಕೆ. :-** ಮಾನ್ಯ ಸಭಾಪತಿಯವರೇ, ಒಂದು ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ. ಮಾನ್ಯ ಸಚಿವರು ನೀಡಿರುವಂತಹ ಉತ್ತರಲ್ಲಿ "ಇಲ್ಲಿ ಯಾವುದೇ ತರಹದ ವಿಳಂಬವಾಗುತ್ತಿಲ್ಲ, ನಾವು ಇದನ್ನು ಬಿಟ್ಟು ಬೇರೆ ಏನು ಕೇಳುತ್ತಿಲ್ಲವೆಂದು" ಹೇಳಿದ್ದಾರೆ. It is blatant lie. ಸರ್ಕಾರ ಹಲವಾರು ದಾಖಲೆಗಳನ್ನು ಕೇಳುತ್ತಿದೆ. ನಾವು ನಮ್ಮ ತಂದೆಯವರ T.C. ಅನ್ನು ಶಾಲೆಯಿಂದ ಏಕೆ ತರಬೇಕು? ನಮ್ಮ ತಾತನವರದ್ದು ಏಕೆ ಬರೆಸಿಕೊಂಡು ಬರಬೇಕು? ಒಂದು ವೇಳೆ, ನಮ್ಮ ತಂದೆಯವರು uneducated ಆದರೆ, ನಾವು ಎಲ್ಲಿಂದ T.C. ಅನ್ನು ಬರೆಸಿಕೊಂಡು ಬರಬೇಕು? ಈ ತರಹದ ಒಂದು ತಾರತಮ್ಯವನ್ನು ಸರ್ಕಾರ ತೆಗೆಯಬೇಕು. ಇದನ್ನು ಬಹಳ simplify ಮಾಡಬೇಕು. ಮಾನ್ಯ ಕಂದಾಯ ಸಚಿವರು ಈಗ ಸದನದಲ್ಲಿ ಇದ್ದಿದ್ದರೆ, ಒಂದು ವಿಷಯವನ್ನು ಅವರಿಗೆ ಹೇಳುತ್ತಿದ್ದೆ. ಮಹಾರಾಷ್ಟ್ರದಲ್ಲಿ Blockchain software ಅನ್ನು ತೆಗೆದುಕೊಂಡು ಬಂದಿದ್ದಾರೆ. You please adopt this in Karnataka so that there will be no fabrication of Caste Certificates. ಬೇಡ ಜಂಗಮದವರು ತೆಗೆದುಕೊಂಡಿದ್ದಾರೆ, ನೀವು ಏನು ಮಾಡುವುದಕ್ಕೆ ಆಯಿತು? Supreme Court intervene ಆಗಬೇಕಾಗಿತ್ತು. T.C. ಅನ್ನು manipulate ಮಾಡುತ್ತಾರೆ. Records ಅನ್ನು manipulate ಮಾಡುತ್ತಾರೆ, ಆಮೇಲೆ P.D.O. (Panchayat Development Officer) ಹತ್ತಿರ ಬರೆಸಿಕೊಂಡು ಬರುತ್ತಾರೆ. Family Tree ಅನ್ನು manipulate ಮಾಡುತ್ತಾರೆ. ನೀವು ಪ್ರಮಾಣ ಪತ್ರ ಕೊಡುತ್ತಿದ್ದಿರಿ. ಈ ವರದಿ ಸರ್ಕಾರದ್ದು. ನನ್ನ ವರದಿ ಅಲ್ಲ. ಇದು National Commission for Scheduled Castes and Scheduled Tribes ವರದಿ. It says, "Karnataka is leading in giving fake Caste Certificates." ಇದರಲ್ಲಿ 700 ಜನರಿಗೆ fake Caste Certificate ನೀವು ಕರ್ನಾಟಕದಲ್ಲಿ ಕೊಟ್ಟಿದ್ದೀರಿ. ಇದನ್ನು National Commission for SC/ST ರವರ ವರದಿ ಹೇಳುತ್ತಿದೆ. It is not my report. It's the report of the National Commission for SC/ST. Please see that these things

are stopped. You bring the Blockchain software in Karnataka so that Death Certificate, Birth Certificate, Caste Certificate or any land records cannot be tampered so easily. This has been experimented in Maharashtra and the Government of Maharashtra has been felicitated by the Union Government. It is my humble request, please don't harass the Scheduled Caste people to get that certificate and see that the new software is adopted.

**ಡಾ॥ ಶರಣ ಪ್ರಕಾಶ್ ಆರ್. ಪಾಟೀಲ್:-** ಮಾನ್ಯಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಕೆ.ಶಿವಕುಮಾರ್‌ರವರ ಕಳಕಳ ನನಗೆ ಅರ್ಥವಾಗುತ್ತದೆ. ಅವರೀಗ ಕೆಲವೊಂದು ವಿಷಯಗಳನ್ನು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಈಗ ನಗರ ಪ್ರದೇಶದಲ್ಲಿರುವಂತಹ ತೊಡಕುಗಳ ಬಗ್ಗೆ ಹೇಳಿದ್ದಾರೆ. ಏಕೆಂದರೆ, ಅಲ್ಲಿ identify ಮಾಡುವುದಕ್ಕೆ ಜನರು ಬರುವುದಿಲ್ಲ. They don't want to be identified also. ಈ ರೀತಿಯ ಎಲ್ಲಾ ಸಮಸ್ಯೆಗಳು ಇವೆ. ಇದರಲ್ಲಿ ಏನು ಸರಳೀಕರಣ ಮಾಡಬೇಕು, ಅದನ್ನು ಸರಳೀಕರಣ ಮಾಡುವುದಕ್ಕೆ ಮಾನ್ಯ ಉಪ ಮುಖ್ಯಮಂತ್ರಿಯವರ ಗಮನಕ್ಕೆ ತರುತ್ತೇನೆ.

ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು "you bring a Blockchain software like in Maharashtra" ಎಂದು ಇನ್ನೊಂದು ಸಲಹೆಯನ್ನು ಕೊಟ್ಟಿದ್ದಾರೆ. ಏಕೆಂದರೆ, ಅಲ್ಲಿ ಯಾವುದೇ duplication ಆಗಲಿ ಅಥವಾ ಯಾವುದೇ fabricate ಮಾಡುವುದಕ್ಕೆ ಅವಕಾಶ ಇಲ್ಲದಿರುವಂತಹ software ತೆಗೆದುಕೊಂಡು ಮಾಡಬೇಕೆಂಬುದು ಅವರ ಸಲಹೆ ಇದೆ. ಅವರು ಹೇಳಿರುವಂತಹದ್ದು ಸೂಕ್ತವಾದಂತಹ ಸಲಹೆ ಆಗಿದೆ. ನಾನು ಈ ವಿಷಯವನ್ನು ಮಾನ್ಯ ಉಪ ಮುಖ್ಯಮಂತ್ರಿಯವರ ಗಮನಕ್ಕೆ ತಂದು, ಇದರಲ್ಲಿ ಏನೇನು ಸರಳೀಕರಣ ಮಾಡಬೇಕು, ಅವರು public interest ನಲ್ಲಿ ಇರುವುದರಿಂದ ಹೇಳುತ್ತಿದ್ದಾರೆ. ಅದನ್ನು ಅಳವಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

**ಶ್ರೀ ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಈಗ Caste Certificate ಸಿಗದೇ ತಡವಾಗುತ್ತಿರುವುದರಿಂದ, ಸರ್ಕಾರ ಕರೆದಿರುವಂತಹ ಸರ್ಕಾರಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಇರುವ ಕೊನೆಯ ದಿನಾಂಕವನ್ನು ದಯಮಾಡಿ ಇನ್ನು 20 ದಿವಸಗಳ ಕಾಲ ಮುಂದಕ್ಕೆ ಹಾಕಬೇಕು. ಸರ್ಕಾರ ಆ ಕೊನೆಯ ದಿನಾಂಕವನ್ನು 20 ದಿವಸ ಅಥವಾ ಒಂದು ತಿಂಗಳು ಕೊನೆಯ ದಿನಾಂಕವನ್ನು postpone ಮಾಡಿದರೆ, ಇದರಿಂದ ಬಹಳ ಜನರಿಗೆ ಅನುಕೂಲವಾಗುತ್ತದೆ. ಇದರಿಂದ ಸರ್ಕಾರಕ್ಕೂ ಒಳ್ಳೆಯ ಹೆಸರು ಬರುತ್ತದೆ.

**ಡಾ॥ ಶರಣ ಪ್ರಕಾಶ್ ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರುವಂತಹದ್ದನ್ನು ಪರಿಶೀಲಿಸಲಾಗುವುದು.

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಶ್ರೀ ಹೆಚ್.ಎಸ್. ಗೋಪಿನಾಥ್‌ರವರೇ, ತಾವು ತಮ್ಮ ವಿಷಯವನ್ನು ಮಂಡಿಸಿ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಹೆಚ್.ಎಸ್. ಗೋಪಿನಾಥ್‌ರವರು ಘೋಷಣೆ ಕೂಗುವುದರಲ್ಲಿ ನಿರತರಾಗಿದ್ದುದರಿಂದ ಅವರು ತಮ್ಮ ವಿಷಯದ ಬಗ್ಗೆ ಸರ್ಕಾರದ ಗಮನ ಸೆಳೆದಿರುವುದಿಲ್ಲ)**

**6. ವಿರೋಧ ಪಕ್ಷಗಳ ಧರಣಿಯ ನಡುವೆ ಸದನದ ಕಲಾಪಗಳನ್ನು ನಡೆಸುವುದು ಸೂಕ್ತವಲ್ಲವೆನ್ನುವ ಕುರಿತು.**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ರೀತಿ ಹೌಸ್ ನಡೆಸೋದು ಏನಾದ್ರು ಸರಿಯೇ?

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸದಸ್ಯರೇ, ನಾವು ಯಾರಿಗೆ ಹೇಳುವುದು, ಅವರಿಗೆ ನಾನು ಮನವಿ ಮಾಡಿದ್ದೇನೆ.

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಎಲ್ಲರಿಗೂ ಹೇಳ್ತಾ ಇದ್ದೀನಿ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸದಸ್ಯರೇ, ನಾನು ಪ್ರತಿದಿವಸ ಅವರಲ್ಲಿ ಮನವಿ ಮಾಡುತ್ತಿದ್ದೇನೆ. ನಾವು ಮಾಡಿದಂತಹ rules... ಪಾಲನೆ ಆಗುತ್ತಿಲ್ಲ. ಅವರಿಗೆ ನೀವು ಹೇಳಿ.

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ನೀವು House ಅನ್ನು adjourn ಮಾಡಿ ಮಾತಾಡಿ.,

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಏಕೆ ಸದನವನ್ನು adjourn ಮಾಡಬೇಕು? ಈಗ ಸದನ ನಡೆಯುತ್ತಿದೆ ಅಲ್ಲವೇ? Question Hour ಆಗಬೇಕಲ್ವಾ? Zero Hour ಆಗಬೇಕಲ್ವಾ? Calling Attention ಆಗಬೇಕಲ್ವಾ? ನಿಯಮ 330 ರಡಿಯದ್ದು ಚರ್ಚೆ ಆಗಬೇಕಲ್ವಾ? ಇದು ಅವರ ಮೊಂಡು ವಾದ. ಇದನ್ನು ಯಾರ ಹತ್ತಿರ ಹೇಳುವುದು?

**(ಗೊಂದಲ)**

**ಡಾ॥ ಯತೀಂದ್ರ.ಎಸ್ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಆ ರೀತಿಯಾದರೆ, ನಾವು ನಮ್ಮ ಪ್ರಶ್ನೆಗಳನ್ನು ಕೇಳುವ ಅವಕಾಶವನ್ನು ಕಳೆದುಕೊಳ್ಳುತ್ತೇವೆಯಲ್ಲವೇ; ನಮಗೆ ಅವಕಾಶ ತಪ್ಪಿ ಹೋಗುತ್ತದೆ ಅಲ್ಲವೇ; ಅದಕ್ಕೆ ಮಾನ್ಯ ಸದಸ್ಯರಾದ ಹೊರಟ್ಟಿಯವರು ಅವರಿಗೆ ಮನವೊಲಿಸಲಿ.

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಇದಕ್ಕೆ ಒಂದು ತೀರ್ಮಾನ ಮಾಡಬೇಕು ಅಲ್ಲವೇ? ಇದಕ್ಕೆ ಒಂದು solution ಅನ್ನು ಕಂಡುಕೊಳ್ಳಬೇಕಲ್ವಾ?

**ಗೊಂದಲ)**

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಮಾನ್ಯ ಸದಸ್ಯರಾದ ಬಸವರಾಜ ಹೊರಟ್ಟಿಯವರು ಹೇಳುತ್ತಾರೆ, ಕೇಳಿ.

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾನಾಯಕರೇ, ಇದಕ್ಕೆ ಏನಾದರೊಂದು solution ಬೇಕಲ್ಲವೇ; ಎಲ್ಲಿಯವರೆಗೆ ಈ ರೀತಿ ಸದನವನ್ನು ನಡೆಸುತ್ತೀರಿ? ಇದರಿಂದ ಜನರು ಏನು ತಿಳಿದುಕೊಳ್ಳುತ್ತಾರೆ. ಈ ಸದನದ ಮರ್ಯಾದೆ ಏನು? ಇದನ್ನು ಶಾಲಾ ಮಕ್ಕಳು ನೋಡುತ್ತಾರೆ. ಈ ರೀತಿ ಸದನವನ್ನು ನಡೆಸುವುದು ಬೇಡ. House adjourn ಮಾಡಿ ತೀರ್ಮಾನ ಮಾಡಿ.,

**(ಗೊಂದಲ)**

**ಡಾ॥ ಯತೀಂದ್ರ. ಎಸ್ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಈ ಸದನ 10 ದಿವಸಗಳ ಕಾಲ ಇದೆ. ಇದರಲ್ಲಿ ಪ್ರಶ್ನೋತ್ತರವನ್ನು ಕೇಳಬೇಕು. ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದೇವೆ. ರಾಜ್ಯದಲ್ಲಿ ಬರಗಾಲ ಇದ್ದು, ಅದರ ಬಗ್ಗೆ ಚರ್ಚೆ ಮಾಡಬೇಕು. ಸದನವನ್ನು ಮುಂದೂಡಿದರೆ, ಅದರಿಂದ ನಾವೆಲ್ಲರೂ ಅವಕಾಶ ಕಳೆದುಕೊಳ್ಳುತ್ತೇವೆ. ಮಾನ್ಯ ಸದಸ್ಯರಾದ ಬಸವರಾಜ ಹೊರಟ್ಟಿಯವರು ಅವರ ಮನವೊಲಿಸಲಿ. ಇಲ್ಲವೆಂದರೆ, ಸಭಾಪತಿಯವರಾದ ತಾವೇ ದಿಟ್ಟ ನಿರ್ಧಾರ ತೆಗೆದುಕೊಂಡು ಯಾರು ಗಲಾಟೆ ಮಾಡುತ್ತಾರೋ ಅವರನ್ನು ಹೊರಗೆ ಹಾಕಿ.

**(ಗೊಂದಲ)**

**ಸಭಾಪತಿಯವರು:–** ಈಗ ಸದನವನ್ನು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 3.00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಮಧ್ಯಾಹ್ನ 01 ಗಂಟೆ 30 ನಿಮಿಷಗಳಿಗೆ ಭೋಜನ ವಿರಾಮಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 03.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)**

(ಮುಂದು)

(787) 20.08.2026 ವೈಎಲ್-ಆರ್‌ಎನ್ 3.20

**(ಸದನವು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 01 ಗಂಟೆ 29 ನಿಮಿಷಕ್ಕೆ ಮುಂದೂಡಲ್ಪಟ್ಟು, ಪುನಃ ಮಧ್ಯಾಹ್ನ 03 ಗಂಟೆ 25 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠದಲ್ಲಿ ಉಪಸ್ಥಿತರಾದರು)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಪೀಠಕ್ಕೆ ಗೌರವ ಸಿಗುವಂತೆ ನಾವೆಲ್ಲರೂ ಕಾಪಾಡಬೇಕು. ಆದರೆ, ತಾವು ನಿನ್ನೆ ದಿವಸ ಬಳಸಿದ ಸಣ್ಣ ಪದ ಬಳಕೆ ಇಡೀ ಸೋಷಿಯಲ್ ಮೀಡಿಯಾದಲ್ಲಿ ನಮ್ಮ ಸಭಾಪತಿಯವರನ್ನು criticize ಮಾಡುವ ರೀತಿ ಮಾತನಾಡುತ್ತಿದ್ದಾರೆ. ನಮಗೂ ಕೂಡ ಅದು ಸರಿದೂಗುವುದಿಲ್ಲ. ತಾವು ಸಹ ವಿರೋಧ ಪಕ್ಷದವರು ಯಾರೇ ಮಾತನಾಡಿದರೂ ಕಡತಕ್ಕೆ ಹೋಗಬಾರದೆಂದು ಆತುರದಲ್ಲಿ ಹೇಳಿರಬಹುದೇ ವಿನಃ ಹೇಳಬೇಕೆಂದು ಹೇಳಿರುವುದಿಲ್ಲ. ಅದನ್ನು ಸೋಷಿಯಲ್ ಮೀಡಿಯಾದವರು ಕೂಡ,...

**ಸಭಾಪತಿಯವರು:-** ವಿರೋಧ ಪಕ್ಷದವರು, ಯಾರು ಈ ಸದನದ ಸದಸ್ಯರಲ್ಲದವರನ್ನು ಬಾಯಿಗೆ ಬಂದ ಹಾಗೆ 'ಕಳ್ಳರು' ಎಂದೆಲ್ಲಾ ಬೈಯುವುದನ್ನು ಕೇಳಿಸಿಕೊಂಡು ನಾನು ಸುಮ್ಮನೆ ಕುಳಿತುಕೊಳ್ಳಬೇಕೇನು?

**(ಗೊಂದಲ)**

**ಶ್ರೀ ಯತೀಂದ್ರ ಎಸ್. (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಪ್ರತಿಭಟನೆ ಮಾಡದೇ ಮಾತನಾಡಲಿ. ಅದನ್ನು ಬಿಟ್ಟು ಪ್ರತಿಭಟನೆ ಮಾಡಿಕೊಂಡು ಮಾತನಾಡುವುದು ಹೇಗೆ ಕಡತಕ್ಕೆ ಹೋಗುತ್ತದೆ?

**(ಗೊಂದಲ)**

**ಸಭಾಪತಿಯವರು:-** ಕಡತಕ್ಕೆ ಯಾವ ವಿಚಾರ ಹೋಗಬೇಕು ಅದನ್ನು allow ಮಾಡುತ್ತೇನೆ. ಅದನ್ನು ಬಿಟ್ಟು ಬಾಯಿಗೆ ಬಂದ ಹಾಗೆ ಮಾತನಾಡುವುದನ್ನು ಮಾತ್ರ allow ಮಾಡುವುದಕ್ಕಾಗುವುದಿಲ್ಲ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾಧ್ಯಮದವರು ಯಾವುದನ್ನು ದಾಖಲು ಮಾಡಬಾರದೆಂದು ಹೇಳಿರುವುದರಿಂದ,...

**(ಗೊಂದಲ)**

**ಸಭಾಪತಿಯವರು:–** ಹೌದು, ವಿರೋಧ ಪಕ್ಷದವರು ಬಾಯಿಗೆ ಬಂದ ಹಾಗೆ ಮಾತನಾಡುವುದು ಯಾವುದೂ ಕಡತಕ್ಕೆ ಹೋಗಬಾರದೆಂದು ಹೇಳಿದ ಮೇಲೆ ಮಾಧ್ಯಮದವರು cancel ಮಾಡಬೇಕೆಂದು ಹೇಳಿದ್ದೇನೆ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಹಾಗಾದರೆ, ಮಾಧ್ಯಮದವರು ಯಾವುದೇ ವಿಚಾರವನ್ನು ಕೂಡ ಪ್ರಚಾರ ಮಾಡಬಾರದು.

**ಸಭಾಪತಿಯವರು:–** ನನ್ನ ಹತ್ತಿರ ಎಲ್ಲಾ guidelines ಇವೆ. ನಿಯಮಾವಳಿಗಳು ಇವೆ. ತಮಗೆ ಅದನ್ನು ಕಳುಹಿಸಿಕೊಡುತ್ತೇನೆ. You have to follow rules in the House. **(ಗೊಂದಲ)** ತಾವು ಬಾಯಿಗೆ ಬಂದ ಹಾಗೆ ಮಾತನಾಡಿದರೆ, ಯಾವುದೇ ಕಾರಣಕ್ಕೂ allow ಮಾಡುವುದಿಲ್ಲ.

**(ಗೊಂದಲ)**

**ಡಾ॥ ಯತೀಂದ್ರ ಎಸ್.:–** ಮಾನ್ಯ ಸಭಾಪತಿಯವರೇ, ತಾವು ನಿಯಮಾವಳಿ ಪ್ರಕಾರವೇ ಹೇಳಿದ್ದೀರಿ. ಸದನದಲ್ಲಿ ಇಲ್ಲದವರ ಹೆಸರನ್ನು ಉಲ್ಲೇಖ ಮಾಡಿ, ಅವರ ಮೇಲೆ ಆರೋಪ ಮಾಡುವುದು ಎಷ್ಟರ ಮಟ್ಟಿಗೆ ಸರಿ?

**(ಗೊಂದಲ)**

**ಸಭಾಪತಿಯವರು:–** ವಿರೋಧ ಪಕ್ಷದವರು ಅವರಿಗೆ 'ಅಂಥವನು, ಇಂಥವನು' ಎಂದು ಹೇಗೆ ಸಂಬೋಧನೆ ಮಾಡುತ್ತೀರಿ. **(ಗೊಂದಲ)** ತಾವು ಅವಶ್ಯಕತೆ ಇರುವ ವಿಚಾರಗಳ ಬಗ್ಗೆ ಮಾತನಾಡಲಿಕ್ಕೆ ಅವಕಾಶ ನೀಡಿದರೆ, ಮಾತನಾಡಲು ತಯಾರಿಲ್ಲ. **(ಗೊಂದಲ)** ತಮಗೆ ಅಷ್ಟು ಸಹ ಸೌಜನ್ಯತೆ ಇಲ್ಲವೇ? **(ಗೊಂದಲ)** ನನಗೆ ಯಾವುದು ಕಡತಕ್ಕೆ ಹೋಗಬೇಕು, ಹೋಗಬಾರದೆಂಬುದು ಗೊತ್ತಿದೆ.

**(ಗೊಂದಲ)**

**ಡಾ॥ ಯತೀಂದ್ರ ಎಸ್.:–** ಮಾನ್ಯ ಸಭಾಪತಿಯವರೇ, ನಾವು ಸಹ ಈ ದೇಶದ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿ ಹಾಗೂ ಗೃಹ ಸಚಿವರಾದ ಶ್ರೀ ಅಮಿತ್ ಶಾ ಬಗ್ಗೆ ಮಾತನಾಡಿದರೆ, ಅದು ಮಾಧ್ಯಮದಲ್ಲಿ

ಹರಿದಾಡಬೇಕಾ? ಮಾನ್ಯ ನರೇಂದ್ರ ಮೋದಿ ಹಾಗೂ ಮಾನ್ಯ ಅಮಿತ್ ಶಾ ರವರುಗಳು ಈ ಸದನದಲ್ಲಿಲ್ಲ. ಹಾಗೆಂದು ಅವರುಗಳ ಬಗ್ಗೆ ಇಲ್ಲದ, ಸಲ್ಲದ ವಿಚಾರಗಳನ್ನು ಮಾತನಾಡಿದರೆ, ಮಾಧ್ಯಮದಲ್ಲಿ ಹರಿದಾಡಬೇಕಾ?

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಸ್ವಲ್ಪ ನನ್ನ ಕಡೆ ನೋಡಿ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ಹೇಳುವುದನ್ನು ಕೇಳಿಸಿಕೊಳ್ಳಿ. ಎಲ್ಲಿಯವರೆಗೂ ತಾವು ಮಾತನಾಡುವಂಥ ಭಾಷೆ ಸರಿ ಇರುವುದಿಲ್ಲ, ಅಲ್ಲಿಯವರೆಗೂ we are not going to accept this. ಸದನವನ್ನು ವೀಕ್ಷಿಸಲು ಶಾಲಾ ವಿದ್ಯಾರ್ಥಿಗಳು ಬಂದು ಕುಳಿತುಕೊಳ್ಳುತ್ತಾರೆ. ಇದನ್ನೇ ನಾವು ಆ ವಿದ್ಯಾರ್ಥಿಗಳಿಗೆ ಕಲಿಸಬೇಕಾ? Is it, what they learn in discussion?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಸರ್ಕಾರದ ಹಠಮಾರಿತನವನ್ನು ನಾವು ಪ್ರಶ್ನೆ ಮಾಡಿದ್ದೇವೆ.

**ಸಭಾಪತಿಯವರು:–** ಸರ್ಕಾರದ ಹಠಮಾರಿತನವಾಗಿಲ್ಲ, ನೀವು ಬಾಯಿಗೆ ಬಂದ ಹಾಗೆ ಮಾತನಾಡಬೇಡಿ. ತಾವು ವಿಚಾರಗಳ ಕುರಿತು ಚರ್ಚೆ ಮಾಡಿ. ಧೈರ್ಯ ಇದ್ದರೆ ಚರ್ಚೆಗೆ ಬನ್ನಿ. ಚರ್ಚೆ ಮಾಡುವುದಕ್ಕಾಗುವುದಿಲ್ಲ, **(ಗೊಂದಲ)** ಕೂಗಾಡುತ್ತೀರಾ?

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾವು ಏನೆಂದು ಚರ್ಚೆ ಮಾಡಬೇಕು?

**(ಗೊಂದಲ)**

**ಸಭಾಪತಿಯವರು:–** ತಾವುಗಳು ಯಾವುದೇ ಪ್ರಶ್ನೋತ್ತರಗಳಿಗೆ, ಶೂನ್ಯವೇಳೆ, ಗಮನ ಸೆಳೆಯುವ ಸೂಚನೆ, ನಿಯಮ 330 ಅಡಿಯಲ್ಲಿ ಚರ್ಚೆ ಕೈಗೆತ್ತಿಕೊಳ್ಳಲು ಅವಕಾಶ ನೀಡುತ್ತಿಲ್ಲ. **(ಗೊಂದಲ)** ಹಾಗಾದರೆ, ಏತಕ್ಕಾಗಿ ಈ ಸದನಕ್ಕೆ ಬಂದಿದ್ದೀರಿ? ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೇ, ಏನೆಂದು ಹೇಳಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ನಿನ್ನೆ ದಿವಸ ತೆಗೆದುಕೊಂಡ ನಿರ್ಣಯ ಸರಿಯಾಗಿದೆ. **(ಗೊಂದಲ)** ಈ ಸದನದಲ್ಲಿ ಏನಾದರೂ ಚರ್ಚೆಯಾಗಬೇಕೆಂದರೆ, ನಿಯಮಾವಳಿ ಚೌಕಟ್ಟಿನಡಿ ಚರ್ಚೆಯಾಗಬೇಕು. **(ಗೊಂದಲ)** ಮನಸ್ಸಿಗೆ ಬಂದ ಹಾಗೆ ಚರ್ಚೆ ಮಾಡಲಿಕ್ಕಾಗುವುದಿಲ್ಲ. **(ಗೊಂದಲ)** ತಾವು ತೆಗೆದುಕೊಂಡ ನಿರ್ಣಯ ಸರಿಯಾಗಿದೆ. **(ಗೊಂದಲ)** ಒಂದು ವೇಳೆ ಅವರೇನಾದರೂ ಚರ್ಚೆ ಮಾಡಬೇಕೆಂದು, ಮಾಡಲಿ. ಮಾನ್ಯ ವಿರೋಧ ಪಕ್ಷದ ನಾಯಕರು ಸೋಷಿಯಲ್ ಮೀಡಿಯಾದಲ್ಲಿ ಬಹಳ ಕೆಟ್ಟದಾಗಿ ಪ್ರಚಾರವಾಗುತ್ತಿದೆ ಎಂದು ಹೇಳಿದ್ದು, **(ಗೊಂದಲ)** ಈ ಸದನದಲ್ಲಿ ಚರ್ಚೆಯಾಗಬೇಕಾಗಿರುವುದು, ಸದನದ ನಿಯಮಾವಳಿಯಲ್ಲಿರುವಂಥ ವಿಚಾರದ ಮೇಲೆ ಏನೇ ವಿಚಾರ ಮಂಡಿಸಿದರೂ ಅದು ಚರ್ಚೆಯಾಗಬೇಕು. **(ಗೊಂದಲ)** ಅದನ್ನು ಬಿಟ್ಟು ನಿಯಮಾವಳಿ ಪ್ರಕಾರ ಯಾವುದೇ ವಿಚಾರವನ್ನು ಮಂಡಿಸದೇ ಮನಸ್ಸಿಗೆ ಬಂದ ಹಾಗೆ ಚರ್ಚೆ ಮಾಡಿದರೆ, ಏನು ಮಾಡಬೇಕು? **(ಗೊಂದಲ)** ಈ ಸದನದ ಗೌರವವನ್ನು ಉಳಿಸಬೇಕು. ಆದರೆ, ಅವರು ಚರ್ಚೆ ಮಾಡಲಿಕ್ಕೆ ಬಿಡುತ್ತಿಲ್ಲ.

(ಮುಂದು)

**(788) 20.08.2026/3.30/ಎಸ್‌ಕೆ-ವಿಕೆ** **(ಸಭಾಪತಿಯವರ ಉಪಸ್ಥಿತಿ)**

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳೆಲ್ಲರೂ ಸ್ವಸ್ಥಾನಗಳಲ್ಲಿ ಒಟ್ಟಿಗೆ ಎದ್ದು ನಿಂತು ನಿರಂತರವಾಗಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಇಲ್ಲಿ ಚರ್ಚೆಯಾಗುವುದಕ್ಕೆ ಏನೂ ಉಳಿದಿಲ್ಲ.

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಅವರು ಇಲ್ಲಿ ಚರ್ಚೆ ಮಾಡುವುದಕ್ಕೆ ಬಿಡಲಿಲ್ಲ. ವಿರೋಧ ಪಕ್ಷದವರು ಘೋಷಣೆ ಕೂಗಿದರೆ ಇನ್ನೇನು?

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಭ್ರಷ್ಟಾಚಾರದಲ್ಲಿ ಮುಖ್ಯಮಂತ್ರಿಗಳು....

**ಶ್ರೀ ಬಿ.ಕೆ. ಹರಿಪ್ರಸಾದ್:-** ಹೌದು ಭ್ರಷ್ಟಚಾರದ ಆರೋಪವಿದೆ. ಅದರ ಬಗ್ಗೆ ಚರ್ಚೆಯಾಗಲಿ. ನಿಯಮದ ಮೂಲಕ ಕೊಡಲಿ. ಅದರ ಬಗ್ಗೆ ಚರ್ಚೆಯಾಗಲಿ.

**ಡಾ॥ ಯತೀಂದ್ರ ಎಸ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಬೇಕಂತಲೇ frame ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:–** ಅದರ ಬಗ್ಗೆ ಚರ್ಚೆಯಾಗಲಿ.

**ಡಾ॥ ಯತೀಂದ್ರ ಎಸ್:–** ಈಗಿನ ಅಧಿಕಾರಿಗಳಿಗೆ ಸಿ.ಎಂ. ಅವರ ಹೆಸರು ಹೇಳಿ ಅಂತಾ ಹೇಳಿದ್ದು ಸುಳ್ಳಾ?

**ಸಭಾಪತಿಯವರು:–** ಮಾನ್ಯ ಶಿವಕುಮಾರ್‌ರವರೇ, ತಾವು ಮಾತನಾಡಿ.

**ಡಾ॥ ಯತೀಂದ್ರ ಎಸ್:–** ಸಿ.ಎಂ., ಅವರ ಹೆಸರು ಹೇಳಿ ಎಂದು ಹೇಳಿದ್ದು ಸುಳ್ಳಾ? ಸಿ.ಎಂ. ಅವರ ಹೆಸರು ಟೀಕೆ ಮಾಡಿ ಎಂದು ಹೇಳಿದ್ದು ಸುಳ್ಳಾ?

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಅವರಿಗೆ ಕೊಟ್ಟಿರುವುದನ್ನು ಅವರ ತಂದೆಯವರಿಗೆ …..

**ಡಾ॥ ಯತೀಂದ್ರ ಎಸ್:–** ಆಯಿತು ತಂದೆಯವರೇ ಹೇಳಿರುವುದು. ಅವರು ಇದೇ ಸದನದಲ್ಲಿ ಹೇಳಿದ್ದಾರೆ. ಇದೇ ಸದನದಲ್ಲಿ ಅವರು ಇದ್ದಿದ್ದರೆ ಅವರು ಕೂಡ defend ಮಾಡಿಕೊಳ್ಳುತ್ತಿದ್ದರು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಈ ರೀತಿ ಹಲವಾರು ಖಾತೆಗಳಿಗೆ ಹೋಗಿದೆ ಎಂದು ಅವರ ತಂದೆಯವರು ಮುಖ್ಯಮಂತ್ರಿಯಾಗಿದ್ದಾಗ….

**ಡಾ॥ ಯತೀಂದ್ರ ಎಸ್:–** ನಮ್ಮ ತಂದೆಯವರು ಮುಖ್ಯಮಂತ್ರಿಯಾಗಿದ್ದಾಗ, ಈ ವಿಷಯದಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಎಲ್ಲಿಯೂ ಕೂಡ ಹಣ ಹೋಗಿಲ್ಲ. **(ಗೊಂದಲ)** ಅವರ E.D. ಅವರು ನಮ್ಮ Ex-Chief Minister ಅವರಿಗೆ implicate ಮಾಡಿ ಎಂದು ಅಧಿಕಾರಿಗಳಿಗೆ ಹೇಳಿದ್ದಾರೆ. ಮುಖ್ಯಮಂತ್ರಿಗಳ ಹೆಸರು ತೋರಿಸಿಕೊಳ್ಳಿ ಎಂದು ಹೇಳಿದ್ದಾರೆ. ಉಪ ಮುಖ್ಯಮಂತ್ರಿಗಳ ಹೆಸರನ್ನು ತೋರಿಸಿಕೊಳ್ಳಿ ಎಂದು ಹೇಳಿದ್ದಾರೆ. ತನಿಖೆ fair ಆಗಿದೆ ಎಂಬುದು ಒಪ್ಪಿಕೊಳ್ಳಬೇಕಾ?

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರು ಸ್ವಸ್ಥಾನಗಳಲ್ಲಿ ಒಟ್ಟಿಗೆ ಎದ್ದು ನಿಂತು ನಿರಂತರವಾಗಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

**ಸಭಾಪತಿಯವರು:–** ಮಾನ್ಯ ಶಿವಕುಮಾರ್‌ರವರೇ, ತಾವು ಮಾತನಾಡಿ.

**ಶ್ರೀ ಕೆ. ಶಿವಕುಮಾರ್ ಕೆ. (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ,

**ಸಭಾಪತಿಯವರು:–** ಮಾನ್ಯ ಶಿವಕುಮಾರ್‌ರವರೇ, ಒಂದು ನಿಮಿಷವಿರಿ. ಮಾನ್ಯ ವಿರೋಧ ಪಕ್ಷದ ಸದಸ್ಯರೇ, ಒಂದು ನಿಮಿಷವಿರಿ. ಇವತ್ತು ದಿವಂಗತರಾದ ಶ್ರೀ ಡಿ. ದೇವರಾಜ ಅರಸುರವರ ಜನ್ಮ ದಿನಾಚರಣೆಯಾಗಿದೆ.

**(ಗೊಂದಲ)**

**ಶ್ರೀ ಶಿವಕುಮಾರ್ ಕೆ. (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಮಾನ್ಯ ವಿರೋಧ ಪಕ್ಷದ ಗೌರವಾನ್ವಿತ ಸದಸ್ಯರೆಲ್ಲರಿಗೂ ನಾನು ಮನವಿ ಮಾಡುತ್ತಿದ್ದೇನೆ. ಅಧಿವೇಶನ ಪ್ರಾರಂಭವಾಗಿ ಇವತ್ತಿಗೆ ನಾಲ್ಕು ದಿನವಾಗಿದೆ. ಸದನ ಮುಗಿಸಿಕೊಂಡು, ಸದನವನ್ನು ಸಾಯಂಕಾಲ ಮುಗಿಸಿಕೊಂಡು ಹೋಗಿ,

ಪುನಃ ಬೆಳಗ್ಗೆ 130 ಕಿಲೋ ಮೀಟರ್‌ಗಳಷ್ಟು ದೂರದಿಂದ ಇಲ್ಲಿಗೆ ಬರುತ್ತೇವೆ. ನಮ್ಮ ಮನೆಯಲ್ಲಿರುವ ಹೆಂಡತಿ ಮಕ್ಕಳು "ನೀನು ಇಷ್ಟೊಂದು ಮಾಹಿತಿಗಳನ್ನು ತೆಗೆದುಕೊಂಡು ಹೋಗುತ್ತಿದ್ದೀಯಾ, ನಿನಗೇನೂ ಕೆಲಸವಿಲ್ಲವೇ" ಎಂದು ಕೇಳುತ್ತಿದ್ದಾರೆ. ಈ ಪರಿಸ್ಥಿತಿ ನಮಗೆ ಬಂದಿದೆ. ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಮಾನ್ಯ ಹಿರಿಯರಾದಂತಹ ಮಾನ್ಯ ಹರಿಪ್ರಸಾದ್‌ರವರು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಸೇರಿದಂತೆ ಅನೇಕರ ಬಳಿ ಬಹಳಷ್ಟು ವಿಚಾರಗಳಿದ್ದು, ಗಂಟೆಗಟ್ಟಲೆ ನಾವೆಲ್ಲರೂ ಚರ್ಚೆ ಮಾಡುವುದಕ್ಕೆ ತಯಾರಿದ್ದೇವೆ. ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ವಿರೋಧ ಪಕ್ಷದವರಿಗೆ ಪ್ರತಿಭಟನೆಯನ್ನು ಇಲ್ಲಿಗೆ ಕೈಬಿಡಬೇಕೆಂದು ಅವರಿಗೆ ಮನವಿ ಮಾಡುತ್ತೇನೆ. ಇವತ್ತು ನಾಡು ಕಂಡ ಪ್ರಬುದ್ಧ ರಾಜಕಾರಣಿ, ಸಾಮಾಜಿಕ ಪರಿವರ್ತನೆಯ ಹರಿಕಾರದ ಪರ್ವಕ್ಕೆ ತೆಗೆದುಕೊಂಡು ಹೋಗಿದ್ದಾರೆ. ಧ್ವನಿ ಇಲ್ಲದೇ ಇರುವವರು, ಚಡ್ಡಿ ಇಲ್ಲದೇ ಇರುವವರು (ತುಂಡು ಬಟ್ಟೆಗೂ ಗತಿ ಇಲ್ಲದೇ ಇರುವವರು) ಸಮಾಜದ ಅತ್ಯಂತ ಹಿಂದುಳಿದ ಬಡವರು ಹಾಗೂ ಭೂಮಿ ಇಲ್ಲದೇ ಇರುವವರು ವಿಧಾನಪರಿಷತ್ತು ಮತ್ತು ವಿಧಾನಸಭೆಗೆ ಬರುವಂತಹದ್ದಕ್ಕೆ ನಮಗೆಲ್ಲರಿಗೂ ಅವಕಾಶ ಮಾಡಿಕೊಟ್ಟಂತಹ, ಒಂದು ದೊಡ್ಡ ಕ್ರಾಂತಿಕಾರಕ ಬದಲಾವಣೆಯನ್ನು ತಂದಂತಹ ದಿವಂಗತರಾದ ಶ್ರೀ ಡಿ. ದೇವರಾಜು ಅರಸುರವರ ಇವತ್ತು ಜನ್ಮ ದಿನವಾಗಿದೆ.

ಮಾನ್ಯ ಸಭಾಪತಿಯವರೇ, ನಾನು ತಮ್ಮಲ್ಲಿ ಮನವಿ ಮಾಡುವುದೇನೆಂದರೆ, ನಾವೆಲ್ಲರೂ ಮಾತನಾಡುವುದಕ್ಕೆ ಸಾಮಾಜಿಕ ನ್ಯಾಯ ಅವತ್ತಿನ ಕಾಲದಲ್ಲಿ ಹೇಗಿತ್ತು? ಇವತ್ತು ಕಾಂಗ್ರೆಸ್ ಸರ್ಕಾರದ ಸಿದ್ಧಾಂತ ಎಲ್ಲಿಯವರೆವಿಗೂ ನಮ್ಮನ್ನು ತಂದಿದೆ. ನಾವು ಏನು ಮಾಡಿಕೊಂಡು ಬಂದಿದ್ದೇವೆ ಎಂದು ಹೇಳುವುದಕ್ಕೆ ಅವಕಾಶ ಮಾಡಿಕೊಡಬೇಕು. ನಾವು present ಮಾಡಬೇಕಾಗಿದೆ. ಇವತ್ತು ಇಬ್ಬರು ಮಹನೀಯರುಗಳಾದ ದಿವಂಗತ ಶ್ರೀ ರಾಜೀವ್ ಗಾಂಧಿ ಮತ್ತು ದಿವಂಗತ ಶ್ರೀ ಡಿ. ದೇವರಾಜ ಅರಸುರವರುಗಳ ಜನ್ಮ ದಿನವಾಗಿದೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ,

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಶಿವಕುಮಾರ್‌ರವರೇ, ತಾವು ಮಾತನಾಡಿ.

**(ಗೊಂದಲ)**

**ಶ್ರೀ ಶಿವಕುಮಾರ್ ಕೆ.:-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟರೆ, ನಾನು ನನ್ನ ಮಾತನ್ನು ಮುಂದುವರೆಸುತ್ತೇನೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಇವತ್ತು ದಿವಂಗತರಾದ ಶ್ರೀ ಡಿ.ದೇವರಾಜ ಅರಸುರವರ ಜನ್ಮ ದಿನವಾಗಿದೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅದಕ್ಕೆ ನಾನು ....

**(ಗೊಂದಲ)**

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷವಿರಿ. ಅವರ ಜನ್ಮ ದಿನವಾಗಿರುವ ಹಿನ್ನೆಲೆಯಲ್ಲಿ ಮಾನ್ಯ ಸದಸ್ಯರೆಲ್ಲರೂ ಐದು ನಿಮಿಷಗಳ ಕಾಲ ಮಾತನಾಡಿ ಎಂದು ನಾನು ಮನವಿ ಮಾಡುತ್ತಿದ್ದೇನೆ. ತಾವು ಅದಕ್ಕೂ ವಿರೋಧ ಮಾಡುವುದಾದರೆ, ಶ್ರೀ ಡಿ. ದೇವರಾಜ ಅರಸುರವರಿಗೆ ವಿರೋಧ ಮಾಡಿದಂತಾಗುತ್ತದೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ವಿರೋಧ ಮಾಡುತ್ತಿಲ್ಲ. ನಾವು ಅವರ ಪರವಾಗಿ ಇದ್ದೇವೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಮಾತನಾಡಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರ ಬಗ್ಗೆ ಕೊಂಡಾಡುವಂತಹದ್ದು ನಮಗೂ ಕೂಡ ಇದೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಮಾತನಾಡಿ. ಈಗ ತಾವು ಮನವಿ ಮಾಡಿದಂತೆ ದಿವಂಗತರಾದ ಶ್ರೀ ಡಿ. ದೇವರಾಜ ಅರಸುರವರ ಬಗ್ಗೆ ಮಾತನಾಡುವುದಕ್ಕೆ ನಾನು ಅವರಿಗೆ ಅವಕಾಶ ಮಾಡಿಕೊಡುತ್ತೇನೆ.

**(ಗೊಂದಲ)**

**ಶ್ರೀ ಶಿವಕುಮಾರ್ ಕೆ.:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲಿ. ನಮ್ಮದೇನೂ ಅಭ್ಯಂತವಿಲ್ಲ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಮಾತನಾಡಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಮನವಿ ಮಾಡಿಕೊಂಡಿಲ್ಲ. ಹಾಗಾಗಿ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ.

**ಡಾ॥ ಯತೀಂದ್ರ ಎಸ್.:-** ಮಾನ್ಯ ಸಭಾಪತಿಯವರೇ,

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಒಂದು ನಿಮಿಷವಿರಿ.

**ಡಾ॥ ಯತೀಂದ್ರ ಎಸ್.:-** ಮಾನ್ಯ ಸಭಾಪತಿಯವರೇ, ಇವತ್ತು ದಿವಂಗತರಾದ ಶ್ರೀ ಡಿ. ದೇವರಾಜ ಅರಸುರವರ ಜನ್ಮ ದಿನದ ಅಂಗವಾಗಿ ಪ್ರತಿಪಕ್ಷದವರಿಗೂ ಮಾತನಾಡುವುದಕ್ಕೆ ಅವಕಾಶ ಕೊಟ್ಟರೂ ಕೂಡ ಅವರು ಮಾತನಾಡುವುದಿಲ್ಲ ಎಂದು ಹೇಳಿದ್ದಾರೆ. ಅವರು ಎಷ್ಟೊಂದು ಗೌರವ ಇಟ್ಟುಕೊಂಡಿದ್ದಾರೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ದಿವಂಗತರಾದ ಶ್ರೀ ಡಿ. ದೇವರಾಜ ಅರಸುರವರ ಗೌರವದ ಬಗ್ಗೆ....

**ಸಭಾಪತಿಯವರು:–** ಮಾನ್ಯ ಛಲವಾದಿ ಟಿ. ನಾರಾಯಣಸ್ವಾಮಿಯವರೇ, ತಾವು ಶ್ರೀ ಡಿ. ದೇವರಾಜ ಅರಸುರವರ ಬಗ್ಗೆ ಮಾತನಾಡುವುದಿಲ್ಲವೇ?

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಶ್ರೀ ಡಿ. ದೇವರಾಜ ಅರಸುರವರು ನಮ್ಮ ಮುಖ್ಯಮಂತ್ರಿಗಳಾಗಿದ್ದರು.

**ಸಭಾಪತಿಯವರು:–** ಮಾನ್ಯ ಛಲವಾದಿ ಟಿ. ನಾರಾಯಣಸ್ವಾಮಿಯವರೇ, ತಮ್ಮ ಪಕ್ಷದ ಸದಸ್ಯರೆಲ್ಲರಿಗೂ ಕುಳಿತುಕೊಳ್ಳುವುದಕ್ಕೆ ಹೇಳಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವರು ಹಿಂದುಳಿದ ವರ್ಗಗಳು, ದಲಿತರು, ಸರ್ವ ಜನಾಗಂಗಳ ಬಗ್ಗೆ ಕಾಳಜಿಯನ್ನಿಟ್ಟುಕೊಂಡವರು. ಶ್ರೀಯುತರ ಜನ್ಮದಿನವಾದ ಈ ಸಂದರ್ಭದಲ್ಲಿ ಅವರು ಸಮಾಜಕ್ಕೆ ಕೊಟ್ಟಂತಹ ಕೊಡುಗೆಯನ್ನು ನಾವು ಸ್ಮರಿಸುತ್ತೇವೆ. ಅವರಿಗೆ ಜನ್ಮ ದಿನದ ಶುಭಾಷಯಗಳನ್ನು ಹೇಳಬಯಸುತ್ತೇನೆ.

**ಸಭಾಪತಿಯವರು:–** ಮಾನ್ಯ ಎನ್. ರವಿಕುಮಾರ್‌ರವರೇ, ತಾವು ಮಾತನಾಡಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ನಾವು ಅವರಿಗೆ ಗೌರವ ಸಲ್ಲಿಸಿದ್ದಾಯಿತು.

**ಶ್ರೀ ಎಂ.ಬಿ. ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು):–** ಅದಾನಿ, ಅಂಬಾನಿಗೂ ಆಯಿತು. ಅವರು ರಾಮನ ಹುಂಡಿಯನ್ನು ಬಿಡಲಿಲ್ಲ. **(ಗೊಂದಲ)** ರಾಮನ ಹುಂಡಿ ಕೈಹಾಕಿದರು. ಮಾನ್ಯ ಪ್ರಧಾನ ಮಂತಿಯವರಿಗೂ ರಾಜೀನಾಮೆ ಕೊಡಿಸಲಿ. ರಾಮನ ಹುಂಡಿಗೆ ಚಂದಾ ಚೂರಿ

**ಡಾ॥ ಯತೀಂದ್ರ ಎಸ್.:–** ಇವತ್ತು ಶ್ರೀ ದೇವರಾಜ ಡಿ ಅರಸುರವರ ಜನ್ಮ ದಿನದ ಅಂಗವಾಗಿ ಮಾನ್ಯ ವಿರೋಧ ಪಕ್ಷದ ನಾಯಕರು ಏತಕ್ಕೆ ಮಾತನಾಡುತ್ತಿಲ್ಲ?

**(ಗೊಂದಲ)**

**ಶ್ರೀ ಎಂ.ಬಿ. ಪಾಟೀಲ್:–** ರಾಮನ ಹೆಸರಿನಲ್ಲಿ ಅಧಿಕಾರಕ್ಕೆ ಬಂದರು. ರಾಮನ ಹೆಸರಿನ ಮೇಲೆ ಅಧಿಕಾರಕ್ಕೆ ಬಂದು, ರಾಮನ ಹುಂಡಿಯನ್ನು ನುಂಗಿ ಬಿಟ್ಟರು.

**(ಗೊಂದಲ)**

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭಾ ಕ್ಷೇತ್ರ):–** ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ.

**(ಗೊಂದಲ)**

**ಶ್ರೀ ಎಂ.ಬಿ. ಪಾಟೀಲ್:–** ರಾಮನ ಹುಂಡಿಯನ್ನು ಬಿಟ್ಟಿಲ್ಲ. ಹುಂಡಿಯನ್ನು ನುಂಗಿ ಬಿಟ್ಟಿದ್ದರಿಂದ ಪ್ರಧಾನ ಮಂತ್ರಿಯವರಿಗೆ ರಾಜೀನಾಮೆ ಕೊಡಿಸಲಿ.

**(ಗೊಂದಲ)**

**ಡಾ॥ ಯತೀಂದ್ರ ಎಸ್.:-** ಮಾನ್ಯ ವಿರೋಧ ಪಕ್ಷದ ನಾಯಕರು ಯಾವುದೇ ವಿಷಯವನ್ನು ಕೊಟ್ಟರೂ ಕೂಡ ತಾವು ಗಂಟೆಗಟ್ಟಲೆ ಮಾತನಾಡುತ್ತಾರೆ ಅವರು ಇನ್ನೂ ಸ್ವಲ್ಪ ವಿಚಾರಗಳನ್ನು ಹೇಳಬೇಕು. ನಾವು ಅವರಿಂದ ಇನ್ನೂ ಸ್ವಲ್ಪ ತಿಳಿದುಕೊಳ್ಳುತ್ತೇನೆ. ದಯವಿಟ್ಟು, ಮಾತನಾಡಬೇಕು.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಸಾಹೇಬರೇ, ತಾವು ಶ್ರೀ ಡಿ. ದೇವರಾಜ ಅರಸುರವರ ಬಗ್ಗೆ ಮಾತನಾಡುತ್ತೀರಾ? ಅವರು ಯಾರು ಮಾತನಾಡುವುದಿಲ್ಲ. ತಾವು ಶ್ರೀ ಡಿ. ದೇವರಾಜ ಅರಸುರವರ ಬಗ್ಗೆ ಮಾತನಾಡಿ. ಈ ದೇಶ ಮತ್ತು ರಾಜ್ಯ ಕಂಡಂತಹ ಅಪರೂಪದ ರಾಜಕಾರಣಿ ಶ್ರೀ ಡಿ. ದೇವರಾಜ ಅರಸುರವರು.

**(ಗೊಂದಲ)**

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರು ಸ್ವಸ್ಥಾನಗಳಲ್ಲಿ ಒಟ್ಟಿಗೆ ಎದ್ದು ನಿಂತು ನಿರಂತರವಾಗಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಸಾಹೇಬರಿಗೆ ಸ್ವಲ್ಪ ಮಾತನಾಡುವುದಕ್ಕೆ ಹೇಳಿ.

**ಸಭಾಪತಿಯವರು:-** ಮಾನ್ಯ ಬೋಸ್‌ರಾಜುರವರೇ, ನಾನು ಅವರಿಗೆ ನಾನು ಮಾತನಾಡುವುದಕ್ಕೆ ಹೇಳಿದ್ದೇನೆ.

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಸಾಹೇಬರು ಅವರಿಗೆ ಬುದ್ಧಿ ಹೇಳುವುದಕ್ಕೆ ತಾವು ಹೇಳಿ.

**ಸಭಾಪತಿಯವರು:-** ಮಾನ್ಯ ಶಿವಕುಮಾರ್‌ರವರೇ, ಈಗ ತಾವು ಮಾತನಾಡಿ.

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಶಿವಕುಮಾರ್‌ರವರೇ, ತಾವು ಮಾತನಾಡಿ.

**ಶ್ರೀ ಎ. ವಸಂತ ಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವರು ಅಲ್ಲಿ ಏನೂ ಬೇಕಾದರೂ ಪ್ರತಿಭಟನೆ ಮಾಡಲಿ. ಈ ಸದನ ಜನರ ಸಮಸ್ಯೆಗಳನ್ನು ಚರ್ಚೆ ಮಾಡುವುದಕ್ಕೆ ಇರುವಂತಹದ್ದು. ಜನರ ಸಮಸ್ಯೆಗಳೇನಿವೆ, ಅದರ ಬಗ್ಗೆ ಚರ್ಚೆ ಮಾಡಲಿ.

**ಶ್ರೀ ಶಿವಕುಮಾರ್ ಕೆ.:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಪ್ರತಿಭಟನೆ ಮಾಡುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಒಬ್ಬ ಮಹಾನ್ ವ್ಯಕ್ತಿಯ ಬಗ್ಗೆ ಮಾತನಾಡುವಾಗ ಈ ತರಹ ಪ್ರತಿಭಟನೆ

ಮಾಡುವುದು ತಪ್ಪು. ನಾನು ಹೇಳುವುದೇನೆಂದರೆ, ಒಂದು ಸಂವಿಧಾನದಿಂದ ಬಂದವರು, ಇವರು ಧೀಮಂತ ನಾಯಕರು ಮತ್ತು ಈ ರಾಜ್ಯದ ಮುಖ್ಯಮಂತ್ರಿಗಳು.... ದಿವಂಗತರಾದ ಶ್ರೀ ಡಿ. ದೇವರಾಜ ಅರಸುರವರಿಗೆ ಅವಮಾನ ಮಾಡುವುದು ಸರಿಯಿಲ್ಲ. **(ಗೊಂದಲ)** ದಯವಿಟ್ಟು, ....you should restrain.

**ಶ್ರೀ ಎಂ.ಬಿ. ಪಾಟೀಲ್:-** ಅದ್ವಾನಿ, ಯಡಿಯೂರಪ್ಪಯವರನ್ನು ಬಿಟ್ಟಿಲ್ಲ.

**ಶ್ರೀ ಎ. ವಸಂತ್ ಕುಮಾರ್:-** ಈ ರೀತಿ ಪ್ರತಿಭಟನೆ ಮಾಡುವುದು ಸರಿಯಲ್ಲ.

**ಶ್ರೀ ಶಿವಕುಮಾರ್ ಕೆ.:-** ಮಾನ್ಯ ಸಭಾಪತಿಯವರೇ, ಬೇರೆ ಬೇರೆ ವಿಚಾರದಲ್ಲಿ ನಮ್ಮದೇನು ಅಭ್ಯಂತರವಿಲ್ಲ. ಶ್ರೀ ಡಿ. ದೇವರಾಜ ಅರಸುರವರ ಬಗ್ಗೆ ಮಾತನಾಡುವಾಗ ಈ ರೀತಿ ಏತಕ್ಕೆ ಮಾಡುತ್ತಿದ್ದಾರೆ. ಈ ರೀತಿ ಮಾಡುವುದು ತಪ್ಪು ಮತ್ತು ಈ ರೀತಿ ಮಾಡುವುದು ಸರಿಯಲ್ಲ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಶಿವಕುಮಾರ್‌ರವರೇ, ಈಗ ತಾವು ಮಾತನಾಡಿ. ಶ್ರೀ ಡಿ. ದೇವರಾಜ ಅರಸುರವರ ಬಗ್ಗೆ ಮಾತನಾಡುವುದಕ್ಕೆ ಕೆಲವು ಮುಖಂಡರಿಗೆ ಭಾಷಣ ಮಾಡುವುದಕ್ಕೂ ಅವಕಾಶ ಮಾಡಿಕೊಟ್ಟರೂ ಮಾತನಾಡುತ್ತಿಲ್ಲ. ಇದೊಂದು ದುರ್ದೈವ. ದೇವರಾದಂತಹ ಮಹಾನ್ ಚೇತನರ ಹುಟ್ಟು ಹಬ್ಬ ದಿನವಾಗಿ ಅವರ ಗುಣಗಾನ ಮಾಡುವುದಕ್ಕೆ ಕೂಡ ಕೆಲವರಿಗೆ ಆಗುತ್ತಿಲ್ಲ. ಇದೊಂದು ದುರಂತವಾಗಿದೆ. ಮಾನ್ಯ ಶಿವಕುಮಾರ್‌ರವರೇ, ಈಗ ತಾವು ಮಾತನಾಡಿ.

**ಶ್ರೀ ಶಿವಕುಮಾರ್ ಕೆ.:-** ಮಾನ್ಯ ಸಭಾಪತಿಯವರೇ, ...

**ಶ್ರೀ ಎಂ.ಬಿ. ಪಾಟೀಲ್:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಅವರಿಗೆ ನಮನ ಸಲ್ಲಿಸಿದ ನಂತರ ಗಲಾಟೆ ಮಾಡಲಿ. ಶ್ರೀ ಡಿ. ದೇವರಾಜ ಅರಸುರವರ ಜನ್ಮ ದಿನದ ಸಲುವಾಗಿ ಅವರಿಗಾದರೂ respect ಕೊಟ್ಟು ಅವರು ಮಾತನಾಡಬೇಕು. **(ಗೊಂದಲ)** ಅಲ್ಲಿಯವರೆವಿಗೂ ಸುಮ್ಮನಿರಬೇಕು. ಶ್ರೀ ಡಿ. ದೇವರಾಜ ಅರಸುರವರ ಬಗ್ಗೆ ಮಾತನಾಡಲಿ, ಈ ರೀತಿಯಾದರೆ ನಾವು ಏನು ಮಾತನಾಡುವುದು? ಶ್ರೀ ಡಿ. ದೇವರಾಜ ಅರಸುರವರ ಬಗ್ಗೆ ಮಾತನಾಡಿದ ನಂತರ ಗಲಾಟೆ ಮಾಡಲಿ.

**ಸಭಾಪತಿಯವರು:-** ವಿರೋಧ ಪಕ್ಷದವರು ಮಾತನಾಡುವುದಿಲ್ಲ ಬಿಡಿ. ಈಗ ಮಾನ್ಯ ಎಂ.ಬಿ. ಪಾಟೀಲ್‌ರವರೇ, ತಾವು ಮಾತನಾಡಿ.

**(ಗೊಂದಲ)**

**ಶ್ರೀ ಎಂ.ಬಿ. ಪಾಟೀಲ್:-** ಅದಾನಿ, ಅಂಬಾನಿ ಆಯಿತು. ಈಗ ರಾಮನ ಹುಂಡಿ ಕೂಡ ಬಿಟ್ಟಿಲ್ಲ. ರಾಮನ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಮೇಲೆ ರಾಮನು ಖಲಾಸ್.

**(ಗೊಂದಲ)**

**ಶ್ರೀ ಎನ್.ಎಸ್. ಬೋಸ್‌ರಾಜು:-** ದಿವಂಗತರಾದ ಶ್ರೀ ಡಿ. ದೇವರಾಜ ಅರಸುರವರ ಬಗ್ಗೆ ಮಾತನಾಡುವುದಿಲ್ಲವೇ?

**(ಗೊಂದಲ)**

**ಡಾ॥ ಯತೀಂದ್ರ ಎಸ್.:-** ಶ್ರೀ ಡಿ. ದೇವರಾಜ ಅರಸುರವರು ಮುಖ್ಯಮಂತ್ರಿಯಾಗಬೇಕಾಗಿದ್ದರೆ ಕಾಂಗ್ರೆಸ್ ಪಕ್ಷ ಅವಕಾಶ ಕೊಟ್ಟಿದ್ದು. ಇವತ್ತು ಶ್ರೀ ಡಿ. ದೇವರಾಜ ಅರಸುರವರ ಇಷ್ಟೆಲ್ಲಾ ಒಳ್ಳೆಯ ಕೆಲಸ ಮಾಡಿದ್ದರೆ ಕಾಂಗ್ರೆಸ್ ಪಕ್ಷ ಮುಖ್ಯಮಂತ್ರಿಯನ್ನಾಗಿ ಮಾಡಿ, ಅವರನ್ನು ಸಾರ್ಥಕ ಮಾಡಿದೆ. ಅವರು ಬಿ.ಜೆ.ಪಿ. ಪಕ್ಷದಲ್ಲಿ ಇದ್ದಿದ್ದರೆ ಆಗುತ್ತಿರಲಿಲ್ಲ. ಜನ ಸಂಘದಲ್ಲಿ ಇದ್ದಿದ್ದರೆ ಆಗುತ್ತಿರಲಿಲ್ಲ. ಆರ್.ಎಸ್.ಎಸ್., ನಲ್ಲಿ ಇದ್ದಿದ್ದರೆ ಆಗುತ್ತಿರಲಿಲ್ಲ.

**ಶ್ರೀ ಎಂ.ಬಿ. ಪಾಟೀಲ್:-** ಶ್ರೀ ಡಿ. ದೇವರಾಜ ಅರಸುರವರ ಬಗ್ಗೆ ಮಾತನಾಡಿದ ನಂತರ protest ಮಾಡಿ.

**ಶ್ರೀ ಶಿವಕುಮಾರ್ ಕೆ.:-** ಮಾನ್ಯ ಸಭಾಪತಿಯವರೇ, ...

**(ಗೊಂದಲ)**

(ಮುಂದು)

(789) 20.08.2026 3.40 TCH-VK (ಸಭಾಪತಿಯವರ ಉಪಸ್ಥಿತಿ)

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರು ಒಟ್ಟಿಗೆ ಎದ್ದು ನಿಂತು ನಿರಂತರವಾಗಿ ಘೋಷಣೆಗಳನ್ನು ಕೂಗುತ್ತಿದ್ದರು)**

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಶ್ರೀ ಶಿವಕುಮಾರ್.ಕೆ ರವರನ್ನು ಹೊರತುಪಡಿಸಿ ಬೇರೆ ಯಾವ ಸದಸ್ಯರು ಮಾತನಾಡಿದರೂ ಕೂಡ ಕಡತಕ್ಕೆ ಹೋಗಬಾರದು.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಶಿವಕುಮಾರ್ .ಕೆ ರವರನ್ನು ಹೊರತುಪಡಿಸಿ, ಮಾನ್ಯ ವಿರೋಧ ಪಕ್ಷದ ನಾಯಕರಾದ ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿ, ವಿರೋಧ ಪಕ್ಷದ ಮುಖ್ಯ ಸಚೇತಕರಾದ ಶ್ರೀ ಎನ್.ರವಿಕುಮಾರ್, ಹಾಗೂ ಇತರೆ ಮಾನ್ಯ ಸದಸ್ಯರು ಮಾತನಾಡಿದ್ದನ್ನು ನಡೆವಳಿಯಲ್ಲಿ ದಾಖಲಿಸಿರುವುದಿಲ್ಲ)**

**ಶ್ರೀ ಶಿವಕುಮಾರ್.ಕೆ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಶ್ರೀ ಶಿವಕುಮಾರ್.ಕೆ ರವರೇ, ಒಂದು ನಿಮಿಷ.

**(ಗೊಂದಲ)**

**ಡಾ: ಯತೀಂದ್ರ. ಎಸ್ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, **(ಗೊಂದಲ)** ಇಂದಿರಾ ಗಾಂಧಿಗೆ ಜೈ, ಶ್ರೀ ಡಿ. ದೇವರಾಜ ಅರಸ್‌ಗೆ ಜೈ, ಪಂಡಿತ್ ಜವಾಹರ್ ಲಾಲ್ ನೆಹರುರವರಿಗೆ ಜೈ, ಶ್ರೀ ಸರ್ಧಾರ್ ವಲ್ಲಭ ಬಾಯಿ ಪಟೇಲ್‌ರವರಿಗೆ ಜೈ, ಶ್ರೀ ಎಲ್.ಕೆ.ಅಡ್ವಾನಿಯವರಿಗೆ ಜೈ ಮತ್ತು ಎಲ್ಲಾ ಸ್ವಾತಂತ್ರ್ಯ ಹೋರಾಟಗಾರರಿಗೂ ಜೈ. **(ಗೊಂದಲ)** ಏಕೆಂದರೆ ನಮ್ಮ ಪಕ್ಷದವರು ಮಾತ್ರ ಸ್ವಾತಂತ್ರ್ಯ ಹೋರಾಟಗಾರರು.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬಿ.ಜೆ.ಪಿ ಅಧಿಕಾರಕ್ಕೆ ಬರುವುದಕ್ಕೆ ಕಾರಣರಾದ ಶ್ರೀ ಎಲ್.ಕೆ.ಅಡ್ವಾಣಿಯವರನ್ನು ಅವರು ನಡುನೀರಿನಲ್ಲಿ ಕೈಬಿಟ್ಟಿದ್ದಾರೆ. ಮಾನ್ಯ ಎಲ್.ಕೆ.ಅಡ್ವಾಣಿಯವರಿಗೆ Margdarshak Mandal ಕಳಿಸಿರುವುದು. ಬಿ.ಜೆ.ಪಿಯವರು, ಮಾನ್ಯ ಎಲ್.ಕೆ.ಅಡ್ವಾಣಿಯವರಿಗೆ ಒಂದು ನಮಸ್ಕಾರವೂ ಮಾಡದೇ ಇರತಕ್ಕಂಥ ಹೀನ ಸಂಸ್ಕೃತಿ ಇರತಕ್ಕಂಥವರು. ಅವರು ಮಾನ್ಯ ಎಲ್.ಕೆ.ಅಡ್ವಾಣಿಯವರಿಗೆ ಒಂದು ನಮಸ್ಕಾರ ಕೂಡ ಮಾಡುವುದಿಲ್ಲ. ಬಿ.ಜೆ.ಪಿ ಅಧಿಕಾರಕ್ಕೆ ಬರಲು ಕಾರಣರಾದ ಮಾನ್ಯ ಎಲ್.ಕೆ.ಅಡ್ವಾಣಿಯವಗೆ ಅವರು ಒಂದೇ ಒಂದು ನಮಸ್ಕಾರ ಮಾಡುವ ಯೋಗ್ಯತೆ ಇಲ್ಲ. ಇವತ್ತು ಮಾನ್ಯ ಡಿ. ದೇವರಾಜ ಅರಸ್‌ರವರದ್ದು ಕಾಂಗ್ರೆಸ್ ಪಕ್ಷ ಅವರನ್ನು ಸೃಷ್ಟಿ ಮಾಡಿರುವುದು. ಬಿ.ಜೆ.ಪಿ ಮತ್ತು ಆರ್.ಎಸ್.ಎಸ್ ಅಲ್ಲ.

**(ಗೊಂದಲ)**

**ಶ್ರೀ ಶಿವಕುಮಾರ್. ಕೆ:–** ಮಾನ್ಯ ಸಭಾಪತಿಯವರೇ, ನನಗೆ ಗೊತ್ತು, ನಾನು ಅವರಿಗೆ ಉತ್ತರ ಕೊಡುತ್ತೇನೆ ಬಿಡಿ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:–** ಮಾನ್ಯ ಸಭಾಪತಿಯವರೇ, **(ಗೊಂದಲ)** ಅವರಿಗೆ ನಾಚಿಕೆ ಆಗಬೇಕು.

**(ಗೊಂದಲ)**

**ಸಭಾಪತಿಯವರು:–** ಈಗ ಸದನವನ್ನು 10 ನಿಮಿಷಗಳ ಕಾಲ ಮುಂದೂಡಿದ್ದೇನೆ.

**(ಈ ಹಂತದಲ್ಲಿ ಸದನವನ್ನು ಮಧ್ಯಾಹ್ನ 3 ಗಂಟೆ 42 ನಿಮಿಷದಿಂದ 10 ನಿಮಿಷಗಳ ಕಾಲ ಮುಂದೂಡಲಾಯಿತು)**

(790) 20-08-2026 4-00 KH/BNS

**(ಮಧ್ಯಾಹ್ನ 03 ಗಂಟೆ 42 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ 4 ಗಂಟೆ 04 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**7. ಕರ್ನಾಟಕದ ಸಾಮಾಜಿಕ ಕ್ರಾಂತಿಯ ರೂವಾರಿ ದಿವಂಗತ ಡಿ. ದೇವರಾಜ ಅರಸು ಅವರ ಸ್ಮರಣೆ ಹಾಗೂ ಕೊಡುಗೆಗಳ ಕುರಿತು.**

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರೇ ಹಾಗೂ ಮಾನ್ಯ ಸದಸ್ಯರುಗಳೇ, ಈಗ ದಿವಂಗತ ಡಿ.ದೇವರಾಜ ಅರಸುರವರ ಬಗ್ಗೆ ಗುಣಗಾನ ಮಾಡಬೇಕೆಂದು ನನ್ನ ಕಛೇರಿಯಲ್ಲಿ ಚರ್ಚೆ ಮಾಡಿದ್ದೇವೆ. ಇದನ್ನು ಒಪ್ಪಿಕೊಂಡಿರುವುದಕ್ಕೆ ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಮಾನ್ಯ ಸಭಾನಾಯಕರಿಗೆ ಮತ್ತು ಮಾನ್ಯ ಸದಸ್ಯರುಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈಗ ಆಡಳಿತ ಪಕ್ಷದಿಂದ 4-5 ಜನ ಮಾನ್ಯ ಸದಸ್ಯರುಗಳು ಮತ್ತು ವಿರೋಧ ಪಕ್ಷದಿಂದ 4-5 ಜನ ಮಾನ್ಯ ಸದಸ್ಯರುಗಳು ಮಾತನಾಡಿ, ಅವರಿಗೆ ನಮನವನ್ನು ಸಲ್ಲಿಸೋಣ.

**ಶ್ರೀ ಶಿವಕುಮಾರ್.ಕೆ:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಶಿವಕುಮಾರ್‌ರವರೇ, ಇದಕ್ಕೆ ಟೈಮ್ ಲಿಮಿಟ್ ಇದೆ. ನಾನು ಬೆಲ್ ಮಾಡುವುದಕ್ಕಿಂತ ಮುಂಚೆ ತಾವು ಮಾತನಾಡುವುದನ್ನು ನಿಲ್ಲಿಸಬೇಕು.

**ಶ್ರೀ ಶಿವಕುಮಾರ್.ಕೆ:-** ಹೌದಾ ಸರ್. ನಿಮ್ಮ ಕೈ ಬೆಲ್ ಕಡೆ ಹೋಗುವುದನ್ನು ನೋಡುತ್ತೀರಾ ಬೇಕೇ?

**ಸಭಾಪತಿಯವರು:-** ಮಾನ್ಯ ಶಿವಕುಮಾರ್‌ರವರೇ, ತಾವು 5 ನಿಮಿಷದಲ್ಲಿ ಮಾತನಾಡಿ ಮುಗಿಸಬೇಕು.

**ಶ್ರೀ ಶಿವಕುಮಾರ್.ಕೆ:-** ಮಾನ್ಯ ಸಭಾಪತಿಯವರೇ, ಆಯಿತು.

**ಸಭಾಪತಿಯವರು:-** ಮಾನ್ಯ ಶಿವಕುಮಾರ್‌ರವರೇ, ಒಂದು ನಿಮಿಷ ಕೇಳಿ. ಇವತ್ತು important event ಇರುವುದರಿಂದ ಕೆಲವು ಮಾನ್ಯ ಸದಸ್ಯರುಗಳು ಮಾತನಾಡುವವರು ಇದ್ದಾರೆ. ತಾವು ಏನು ಹೇಳಬೇಕೋ ಅದನ್ನು 5 ನಿಮಿಷದಲ್ಲಿ ಮಾತನಾಡಿ ಮುಗಿಸಿ. ಏಕೆಂದರೆ, ವಿರೋಧ ಪಕ್ಷದವರಿಗೂ ಅವಕಾಶ ಕೊಡಬೇಕು. ಆಡಳಿತ ಪಕ್ಷದವರಿಗೂ ಅವಕಾಶ ಕೊಡಬೇಕು. ಹಾಗೆಯೇ ತಮಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಶಿವಕುಮಾರ್‌ರವರೇ, ತಾವು ಬಹಳ ಮಾತನಾಡುತ್ತೀರಿ ಎಂದು ಮಾನ್ಯ ಸಭಾಪತಿಯವರಿಗೆ ಗೊತ್ತಿದೆ. ಅದಕ್ಕೆ ಅವರು ಆ ರೀತಿ ಹೇಳುತ್ತಿದ್ದಾರೆ.

**ಸಭಾಪತಿಯವರು:–** ಮಾನ್ಯ ಶಿವಕುಮಾರ್‌ರವರು ಒಂದು ಗಂಟೆ ಭಾಷಣ ಮಾಡುತ್ತಾರೆ ಎನ್ನುವುದು ಸಹ ಗೊತ್ತಿದೆ. ಆದ್ದರಿಂದ, 5 ನಿಮಿಷದಲ್ಲಿ ಮಾತನಾಡುವುದನ್ನು ಮುಗಿಸಿ.

**ಶ್ರೀ ಶಿವಕುಮಾರ್.ಕೆ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಇವತ್ತು ಕರ್ನಾಟಕ ರಾಜಕೀಯ ಇತಿಹಾಸದಲ್ಲಿ ಈ ದೇಶದ ಸಾಮಾಜಿಕ ನ್ಯಾಯದ ವಿಚಾರ ಬಂದಾಗ ದಿವಂಗತ ಮಾಜಿ ಮುಖ್ಯಮಂತ್ರಿಗಳು ಹಾಗೂ ನಮ್ಮ ಮೈಸೂರು ಜಿಲ್ಲೆ ಕಲ್ಲಳ್ಳಿಯ ಡಿ.ದೇವರಾಜ ಅರಸುರವರನ್ನು ನೆನೆಯದೇ ನಾವು ಮಾತು ಮುಗಿಸುವುದಕ್ಕೆ ಆಗುವುದಿಲ್ಲ. ಆ ಕಾಲದಲ್ಲಿ ವಿಧಾನಸೌಧ ನಮ್ಮದಲ್ಲ. ವಿಧಾನಸೌಧದ ಪ್ರವೇಶ ನಮಗಲ್ಲ. ಮೂರನೇ ಮಹಡಿ ನಮಗಲ್ಲ. ಭೂಮಿ ನಮಗಲ್ಲ. ಎತ್ತುಗಳು ನಮ್ಮದಲ್ಲ. ಗೇಣಿದಾರರು ನಾವಾಗಲ್ಲ ಎಂದು ತಿಳಿದುಕೊಂಡು ಬದುಕುತ್ತಿದ್ದಂತಹ ಕಾಲದಲ್ಲಿ ಉದಯವಾದಂತಹ ಒಂದು ಆಶಾಕಿರಣವೆಂದರೆ, ಅದು ಡಿ.ದೇವರಾಜ ಅರಸುರವರು. ಇವರಿಗೆ ಶ್ರೀಮಂತಿಕೆ ಇಲ್ಲದಿದ್ದರೂ ಮಹಾರಾಜರ ಮನೆತನಕ್ಕೆ ಸಂಬಂಧಿಕರಾಗಿ ಆ ಒಂದು ಒಡನಾಟ ಇತ್ತು. ಇವರು 24 ಎಕರೆ ಜಮೀನು ಇಟ್ಟುಕೊಂಡು, ವ್ಯವಸಾಯಸ್ಥರ ಕುಟುಂಬದಿಂದ ಬಂದ ಡಿ.ದೇವರಾಜ ಅರಸು ರವರು ಮೈಸೂರಿನಲ್ಲಿ ಮತ್ತು ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡಿ, ರಾಜಕಾರಣಕ್ಕೆ ಬಂದು ಇವತ್ತು ಒಂದು ದೊಡ್ಡ ಆಶಾಕಿರಣ ಆಗಿದ್ದಾರೆ. ಬಹುತೇಕ ಇಲ್ಲಿ ಇರುವಂತಹ ನಾಯಕರು ಇರಬಹುದು, ಸದಸ್ಯರುಗಳು ಇರಬಹುದು, ಇಲ್ಲಿ ಹಿಂದೆ ಇದ್ದು ಹೋದಂತಹ ಮಾನ್ಯ ಸದಸ್ಯರುಗಳು ಇರಬಹುದು, ಅವರುಗಳಿಗೆ ಕೆಲವೇ ಕೆಲವು ರಾಜಕಾರಣಿಗಳು ಸ್ಫೂರ್ತಿದಾಯಕವಾಗಿ ಅವರ ಜೀವನದಲ್ಲಿ ಇದ್ದಾರೆ ಎಂದರೆ, ಡಿ.ದೇವರಾಜ ಅರಸುರವರ ಹೆಸರು ಇದ್ದೇ ಇರುತ್ತದೆ. Political history ಪುಸ್ತಕವನ್ನು ತೆಗೆದುಕೊಂಡಾಗ, we cannot go through that book without referring to Sri D. Deveraja Arasu. 1972ನೇ ಇಸವಿಯಿಂದ 1980ನೇ ಇಸವಿಯವರೆಗೂ ಸುಮಾರು 8 ವರ್ಷಗಳ ಕಾಲ ನಡೆಸಿದಂತಹ ಆಡಳಿತ . . . 1972 ರಿಂದ 1977ನೇ ಇಸವಿಯವರೆಗೂ ಒಂದು ರೀತಿಯ ಆಡಳಿತವನ್ನು ನಡೆಸಿದರೆ, 1978 ರಿಂದ 1980ನೇ ಇಸವಿಯವರೆಗೂ ಅವರ ಆಡಳಿತ ಇನ್ನೊಂದು ರೀತಿಯಲ್ಲಿ ಇತ್ತು. ಆವತ್ತು ಕರ್ನಾಟಕ ರಾಜಕಾರಣದಲ್ಲಿ ಪ್ರಬಲವಾಗಿ ಅಧಿಕಾರ ಕೇಂದ್ರೀಕೃತವಾದಂತಹ ಕಾಲದಲ್ಲಿ ಸಣ್ಣ ಸಮುದಾಯದಿಂದ ಬಂದಂತಹ ಶ್ರೀ ಡಿ.ದೇವರಾಜ ಅರಸುರವರು ಮುಖ್ಯಮಂತ್ರಿಗಳಾದ ಮೇಲೆ . . . ಬಹುಶಃ ಅವರು ಸಣ್ಣ ಜಾತಿಯವರು ಆಗಿದ್ದ ಕಾರಣಕ್ಕೋಸ್ಕರ ಅವರು ಜಾತಿ ನಾಯಕರಾಗುವುದಕ್ಕೆ ಆಗಲಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಹುಶಃ ಅವರು ಪ್ರಬಲವಾದ ಒಂದು ದೊಡ್ಡ ಸಮುದಾಯದ ಜಾತಿಯಲ್ಲಿ ಹುಟ್ಟಿದ್ದರೆ, ಜಾತಿವಾದಿಗಳು ಆಗುತ್ತಿದ್ದರೋ ಏನೋ ಎನ್ನುವಂತಹ ಅನುಮಾನ ನನಗೂ ಇದೆ. ಒಂದು ಸಣ್ಣ ಜಾತಿಯಿಂದ ಬಂದಂತಹ ಶ್ರೀ ಡಿ.ದೇವರಾಜ ಅರಸುರವರು ಯಾವತ್ತೂ ಜಾತಿ-ಭೇದ ಮಾಡಲಿಲ್ಲ. ಏಕೆಂದರೆ, ಇವತ್ತು ಅವರು ಚುನಾವಣೆಯಲ್ಲಿ ರಾಜಕಾರಣಕ್ಕೆ ತಂದಂತಹವರು, ನಮ್ಮ ಎ.ಐ.ಸಿ.ಸಿ. ಅಧ್ಯಕ್ಷರಾದಂತಹ ಶ್ರೀ ಮಲ್ಲಿಕಾರ್ಜುನ ಖರ್ಗೆಯವರಿಂದ ಹಿಡಿದು ಮಾನ್ಯ ವೀರಪ್ಪ ಮೊಯ್ಲಿ ಇರಬಹುದು, ಮಾನ್ಯ ಎನ್.ಧರಮ್ ಸಿಂಗ್‌ರವರು ಇರಬಹುದು, ಬಹಳಷ್ಟು ಜನರು ಇರಬಹುದು, ಹಿಂದೆ ಇದೇ ಮನೆಯಲ್ಲಿ ಇದ್ದಂತಹ

ವಿಶ್ವನಾಥ್‌ರವರು ಇರಬಹುದು. ಅವರ ಅವಧಿಯಲ್ಲಿ 73 ಹೊಸ ಮುಖಗಳು ಆಯ್ಕೆಯಾದರು. ಅಲ್ಪಸಂಖ್ಯಾತರಲ್ಲಿ ಬಹುತೇಕ ಜನರು, ಅದರಲ್ಲಿ ಉಪ್ಪಾರರು ಇರಬಹುದು, ಗಾಣಿಗರು ಇರಬಹುದು, ಪೌರ ಕಾರ್ಮಿಕರು ಇರಬಹುದು, ಕುಂಬಾರರು ಇರಬಹುದು. ಬಹುತೇಕ ಜನರನ್ನು ಆಯ್ಕೆ ಮಾಡಿಕೊಂಡು ಬಂದರು. ನಾನು ಇತಿಹಾಸಕ್ಕೆ ಹೋಗುವುದಿಲ್ಲ. ನಾವು ಅವರಿಗೆ ಗೌರವ ಸಲ್ಲಿಸಬೇಕಾಗಿರುವುದರಿಂದ, ಕೆಲವು ವಿಚಾರಗಳ ಬಗ್ಗೆ ನಾನು ಮಾತನಾಡುವುದಿಲ್ಲ. ಎಷ್ಟೇ ವಿರೋಧ ಇದ್ದರೂ, ಕ್ಯಾಬಿನೆಟ್‌ನಲ್ಲಿ ವಿರೋಧ ಇದ್ದರೂ, ಅಂದಿನ ಮಹಾನ್ ಚೇತನ ಬಿ.ಬಸವಲಿಂಗಪ್ಪನವರು ಇರಬಹುದು, ಶ್ರೀ ಕೆ.ಎಚ್.ರಂಗನಾಥ್‌ರವರು ಇರಬಹುದು, ಇವರನ್ನೆಲ್ಲಾ ಇಟ್ಟುಕೊಂಡು ಒಂದು ಒಳ್ಳೆಯ ಕಾರ್ಯಕ್ರಮಗಳನ್ನು ತೆಗೆದುಕೊಂಡು ಬಂದರು. ಮಾನ್ಯ ಡಿ.ದೇವರಾಜ ಅರಸುರವರ ಜೊತೆ ಶ್ರೀ ಕೆ.ಎಚ್.ರಂಗನಾಥ್‌ರವರು Co-operation Minister ಇದ್ದರು. Co-operative sectorನಲ್ಲಿ reservation ತೆಗೆದುಕೊಂಡು ಬಂದರು. ಹಾಗೆಯೇ ಮಲ ಹೊರುವ ಪದ್ಧತಿಯನ್ನು ತೆಗೆಯುವಂತಹ ಕೆಲಸ ಮಾಡುವುದಕ್ಕೆ ಸ್ಫೂರ್ತಿದಾಯಕರು ಶ್ರೀ ಬಿ.ಬಸವಲಿಂಗಪ್ಪನವರ ಚಿಂತನೆಯಾಗಿತ್ತು.

(ಮುಂದು)

(791) 20.8.2026 4.10 ಪಿಕೆ:ಕೆಎಸ್ (ಸಭಾಪತಿಗಳ ಉಪಸ್ಥಿತಿ)

**ಶ್ರೀ ಕೆ.ಶಿವಕುಮಾರ್(ಮುಂದು)**

Tiller is the owner of the land. ಉಳುವವನೇ ಭೂಮಿಗೆ ಒಡೆಯ ಎನ್ನುವ ಕಾರ್ಯಕ್ರಮವನ್ನು ತಂದಿದ್ದರಿಂದ ಲಕ್ಷಾಂತರ ಜನರನ್ನು ಜೀತಮುಕ್ತರನ್ನಾಗಿ ಮಾಡಿದರು. ಚೆಲುವ ಎನ್ನುವ ಒಬ್ಬ ದಲಿತ ಶ್ರೀ ಡಿ.ದೇವರಾಜ ಅರಸುರವರ ಮನೆಯಲ್ಲಿ ಉಳುಮೆ ಮಾಡುತ್ತಿರುತ್ತಾನೆ. ಆತನಿಗೆ 4 ಎಕರೆ ಜಮೀನನ್ನು ಕೊಟ್ಟರು. ಕೋಲಾರ ಜಿಲ್ಲೆಯಲ್ಲಿ ಬೇತಮಂಗಲ ಡ್ಯಾಂ ಇದೆ. ಶ್ರೀ ಎಂ.ವಿ.ಕೃಷ್ಣಪ್ಪನವರ ಮನೆಯವರು ನೂರಾರು ಎಕರೆ ಜಾಗವನ್ನು ದಾನ ಮಾಡಿದರು. ಉತ್ತರ ಕರ್ನಾಟಕದ ದೇಸಾಯಿಗಳು, ಉಡುಪಿಯ ಅನೇಕ ಜನ ಭೂಮಿಯನ್ನು ಬಿಟ್ಟುಕೊಟ್ಟರು. ಆದರೆ ಇವತ್ತು, urban centric power centers ಏನಿವೆ dominant feudalism power centers ಏನಿವೆ, ಅದನ್ನು ಸಾಮಾನ್ಯ ಜನರಿಗೆ ಶಿಫ್ಟ್ ಮಾಡಿ, rural marginalized sectors ಗಳಿಂದ ಬರುವಂಥವರು, marginalized communities ಗಳಿಂದ ಬರುವ ಸಣ್ಣಪುಟ್ಟ ಸಮುದಾಯದವರು ರಾಜಕಾರಣಕ್ಕೆ ಬರಬಹುದು ಎಂಬುದನ್ನು ಶ್ರೀ ಡಿ.ದೇವರಾಜ ಅರಸುರವರು ತೋರಿಸಿಕೊಟ್ಟರು. ಇವತ್ತು ಸಾವಿರಾರು ಜನ ನಾಯಕರು ಹುಟ್ಟಿಕೊಂಡಿದ್ದಾರೆ. ಪವರ್ ಎನ್ನುವುದು ಎಲ್ಲರಿಗೂ ಸಿಗುತ್ತದೆ, ಆದರೆ social transformation ಆಗುವುದಿಲ್ಲ. ಆ social transformation ದಾರಿಯಲ್ಲಿ ಹೋದಂತಹ ಕೆಲವೇ ಕೆಲವು ದೇಶದ ನಾಯಕರಲ್ಲಿ ಶ್ರೀ ಡಿ.ದೇವರಾಜ ಅರಸುರವರು ಒಬ್ಬರು. ಶ್ರೀಮತಿ ಇಂದಿರಾಗಾಂಧಿಯವರ "ಗರೀಬಿ ಹಟಾವೋ" ಕಾರ್ಯಕ್ರಮದ ಅಡಿ ಏನು 20 ಅಂಶಗಳಿತ್ತೋ, ಅದನ್ನು ಚಾಚೂ ತಪ್ಪದೇ ಕಾರ್ಯಗತ ಮಾಡಿ, ಒಂದು ಹೆಜ್ಜೆ ಮುಂದಕ್ಕೆ ಹೋದಂಥವರು ಶ್ರೀ ಡಿ.ದೇವರಾಜ ಅರಸುರವರು. ಸನ್ಮಾನ್ಯರು ಮೈಸೂರಿನ

ಟೌನ್‌ಹಾಲ್‌ಗೆ ಬಂದು ಭಾಷಣ ಮಾಡುವ ಸಂದರ್ಭದಲ್ಲಿ, ಮುಂದಿನ ಭಾಗದಲ್ಲಿದ್ದಂಥವರು ಗಲಾಟೆ ಮಾಡುತ್ತಾರೆ. Land Reforms ವಿರುದ್ಧ ಇದ್ದವರು, ಈ ಸಮುದಾಯಗಳಿಗೆ ಅಧಿಕಾರ ಕೊಡುವಂಥದ್ದಕ್ಕೆ ವಿರುದ್ಧವಾಗಿದ್ದವರು ಅವರ ವಿರುದ್ಧ ಮಾತನಾಡುತ್ತಾರೆ. ಆಗ ಮಾನ್ಯ ಡಿ.ದೇವರಾಜ ಅರಸುರವರು, 'ನೀವು ಏನೇ ಮಾತನಾಡಿ ನಾನೇ ಅಧಿಕಾರಕ್ಕೆ ಬರುತ್ತೇನೆ' ಎಂದು ಹೇಳುತ್ತಾರೆ. ಅವರಿಗೆ ಎಷ್ಟು confidence ಅಂದರೆ, ನನಗೆ silent voters ಗಳೇ ರಕ್ಷಣೆ ಕೊಡತ್ತಾರೆ, ಯಾರು ಮಾತನಾಡದೇ ಮನೆಯಲ್ಲಿದ್ದಾರೋ, "ಯಾರು ನನ್ನ ಕಾರ್ಯಕ್ರಮಗಳ benefits ಪಡೆದುಕೊಂಡಿದ್ದಾರೋ, ಅವರೇ ನನನ್ನು ರಕ್ಷಣೆ ಮಾಡುತ್ತಾರೆ, ನನ್ನನ್ನು ಅಧಿಕಾರಕ್ಕೆ ತರುತ್ತಾರೆ" ಎಂದು ಹೇಳುತ್ತಾರೆ. ಮತ್ತೆ ಅವರೇ ಅಧಿಕಾರಕ್ಕೆ ಬರುತ್ತಾರೆ. ಇವತ್ತೇನು Gen Z (Generation Z) ಗಳೆಂದು ಹೇಳುತ್ತೇವೆಯೋ, ಅವತ್ತು 30 ವಯಸ್ಸಿಗಿಂತ ಕಡಿಮೆ ಇದ್ದ 71 ಜನ Gen Z ಗಳು ಗೆದ್ದು ಬರುತ್ತಾರೆ. ಸಾಮಾನ್ಯ ವಿಧಾನಸಭಾ ಕ್ಷೇತ್ರದಿಂದ ಪರಿಶಿಷ್ಟ ಜಾತಿಯ ಅಭ್ಯರ್ಥಿ ಗೆಲ್ಲುತ್ತಾರೆ, ಶಿಕಾರಿಪುರದಲ್ಲಿ ಉಪ್ಪಾರ ಸಮುದಾಯದವರು ಗೆಲ್ಲುತ್ತಾರೆ, ಬಳೇಪೇಟೆಯಲ್ಲಿ ಇನ್ನೊಬ್ಬರು ಗೆಲ್ಲುತ್ತಾರೆ. ಆಗ 23 ಜನ ಮುಸ್ಲಿಂ ಜನಾಂಗದವರು ಗೆಲ್ಲುತ್ತಾರೆ. ಇದೊಂದು ದೊಡ್ಡ ಕ್ರಾಂತಿಯಾಗಿತ್ತು. ಇವತ್ತು ಹೆಪ್ಪುಗಟ್ಟಿದಷ್ಟು ಜಾತಿಯತೆ ಆವತ್ತು ಹೆಪ್ಪುಗಟ್ಟಿರಲಿಲ್ಲ. ಆವತ್ತು ಹಸಿವು ಇತ್ತು. ಮನೆ, ಭಾಗ್ಯಜ್ಯೋತಿ ದೀಪ ಇತ್ಯಾದಿ ಮೂಲ ಸೌಕರ್ಯದ ಅವಶ್ಯಕತೆ ಇತ್ತು. ಜನ ಏನು ಬಯಸುತ್ತಿದ್ದಾರೆ; ನಾವು ಏನು ಕೊಡಬೇಕು ಎನ್ನುವುದು ಮಾನ್ಯ ಡಿ.ದೇವರಾಜ ಅರಸುರವರಿಗೆ ಗೊತ್ತಿತ್ತು. ಹಾಗಾಗಿ ಅವರು ಯಾವುದೇ, ಎಷ್ಟೇ ಕಾರ್ಯಕ್ರಮಗಳನ್ನು ಮಾಡಿದರೂ ಅದರಿಂದ deviate ಆಗಲಿಲ್ಲ. 1975ರಲ್ಲಿ ಹಾವನೂರು ಕಮಿಷನ್ ಅನ್ನು ತಂದರು. Backward Classes Commission ಅನ್ನು ಮಾಡಿ, ಅದನ್ನು ಜಾರಿಗೆ ತಂದ ಕೀರ್ತಿ ಶ್ರೀ ಡಿ.ದೇವರಾಜ ಅರಸು ಅವರಿಗೆ ಸಲ್ಲುತ್ತದೆ. ಹಾವನೂರು ಕಮಿಷನ್ ವಿರುದ್ಧ ಈ ಸದನದಲ್ಲಿ ಏನಾಯಿತು, ಆ ಸದನದಲ್ಲಿ ಏನಾಯಿತು, ರಸ್ತೆಗಳಲ್ಲಿ ಯಾವರೀತಿ ಹೋರಾಟಗಳಾಯಿತು ಎನ್ನುವುದು ಇತಿಹಾಸ. ಯಾರು ಮೂಲ ಅಸ್ಪೃಶ್ಯರಾಗಿದ್ದರೋ, ಅವರಿಗೆ ಸ್ವಲ್ಪ ನೋವಾಗಿದ್ದು ನಿಜ. ಆದರೆ ಆವತ್ತಿನ larger perspective ನಲ್ಲಿ ಬಹಳಷ್ಟು ಸಮುದಾಯಗಳನ್ನು Backward Classes Commission ನಲ್ಲಿ ತಂದು, ಹಾವನೂರು ವರದಿಯನ್ನು ಕಾರ್ಯಗತ ಮಾಡಿದರು. ಇವತ್ತೇನಾದರೂ human dignity ಎನ್ನುವುದಿದ್ದರೆ, ಅವರ ಗೌರವವನ್ನು ಕಾಪಾಡಿದವರೆಂದರೆ ಶ್ರೀ ಡಿ.ದೇವರಾಜ ಅರಸುರವರು ಎಂದು ಹೇಳಬೇಕಾಗುತ್ತದೆ. 15 ಲಕ್ಷ ಜನ ಉಳುಮೆ ಮಾಡುತ್ತಿದ್ದರು. Land Reforms ಎಷ್ಟು ದೊಡ್ಡ ಕಾರ್ಯ ಎಂದರೆ, ಅದರಲ್ಲಿ 22 ಲಕ್ಷ ಎಕರೆ ಭೂಮಿ ಬಂತು.

ಮಾನ್ಯ ಸಭಾಪತಿಗಳೆ, ನಮ್ಮ ಮನೆಯಲ್ಲೇ ಆದಂತಹ ಒಂದು ಕಥೆಯನ್ನು ಸದನಕ್ಕೆ ತಿಳಿಸಬಯಸುತ್ತೇನೆ. ನಮ್ಮ ತಾತನವರು ತಾಲ್ಲೂಕು ಬೋರ್ಡ್ ಅಧ್ಯಕ್ಷರಾಗಿದ್ದರು. ನಮ್ಮದು ಕಾಂಗ್ರೆಸ್ ಫ್ಯಾಮಿಲಿಯಾಗಿತ್ತು. ಡಿ.ಸಿ.ಸಿ. ಬ್ಯಾಂಕ್ ಚುನಾವಣೆಯಲ್ಲಿ ಜನರಲ್‌ನಲ್ಲಿ ಗೆದ್ದಿದ್ದರು. ಕೋಲಾರ, ಮೈಸೂರು, ಚಾಮರಾಜನಗರ ಜಿಲ್ಲೆಗಳ ಬಹುತೇಕ ಜನರ ಪರಿಸ್ಥಿತಿ ಹೇಗಿತ್ತು ಎಂದರೆ, ನಾವು ಸತ್ತು ಹೋದರೆ ನಮ್ಮನ್ನು ಹೂಳುವುದಕ್ಕೆ ಜಾಗ ಇರಲಿಲ್ಲ. ಸಾವಾದ

ಮೇಲೆ dignity ಯಿಂದ ಅಂತ್ಯ ಕ್ರಿಯೆ ಮಾಡಲು ಒಂದು ಜಾಗ ಕೊಟ್ಟಿದ್ದರೆ ಅದಕ್ಕೆ ಕಾರಣ ಶ್ರೀ ಡಿ.ದೇವರಾಜ ಅರಸುರವರು ಎಂದು ಹೇಳಬೇಕಾಗುತ್ತದೆ. ಆದರೆ ಒಂದು ನೋವಿದೆ. ಈ ದೇಶದಲ್ಲಿ ಎಲ್ಲಾ social reformers ಗಳನ್ನು ಮರೆತು ಹೋಗಿದ್ದಾರೆ. ಶ್ರೀ ನಾರಾಯಣ ಗುರುಗಳಿರಬಹುದು, ಶ್ರೀ ರವಿದಾಸರಿರಬಹುದು, ಇಂಥವರನ್ನು ಸಮಾಜ ಮರೆತು ಹೋಗಿದೆ. ಬಹುಶಃ ಜನಸಂಖ್ಯೆ ಜಾಸ್ತಿ ಇರುವುದರಿಂದ ಬಸವಣ್ಣನವರನ್ನು ಜನ ಮರೆತಿಲ್ಲ, ಅವರ ವಚನಗಳನ್ನು ನೆನಪಿಸಿಕೊಂಡು ನಡೆಯುತ್ತಿದ್ದೇವೆ. ಇದೇರೀತಿ ಬುದ್ಧನನ್ನು ನೆನಪಿಸಿಕೊಳ್ಳುತ್ತಿರುತ್ತೇವೆ. ನಾನು ಬಡ ಜನರ ಮನೆಯಲ್ಲಿ ಶ್ರೀ ಡಿ.ದೇವರಾಜ ಅರಸುರವರ ಭಾವಚಿತ್ರವನ್ನು ನೋಡಿಲ್ಲ. ಮಾನ್ಯ ಸಭಾಪತಿಗಳೆ, ಒಂದು ಸಲ ನಾನು ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ದರಾಮಯ್ಯನವರ ಜೊತೆ ಗಾಡಿಯಲ್ಲಿ ಹೋಗುತ್ತಿದೆ. ಆಗ ಅವರು, 'ನೋಡಯ್ಯ, ವರುಣಾ ಕೆನಾಲ್ ಎಷ್ಟು ಚೆನ್ನಾಗಿ ಆಯಿತು, ಆದರೂ ನನ್ನನ್ನು ಜನ ಸೋಲಿಸಿದರು' ಎನ್ನುವ ಮಾತನ್ನು ಹೇಳಿದರು. ನಾನು, 'ಸರ್, ಲಕ್ಷಾಂತರ ಜನಕ್ಕೆ ಭೂಮಿ ಕೊಟ್ಟು, ಬಿತ್ತನೆ ಮಾಡಿ, ಆಹಾರ ಸಂಪಾದನೆ ಮಾಡಿಕೊಳ್ಳುವವರು ಅವರನ್ನೇ ಮರೆತ್ತಿದ್ದಾರೆ; ಹಾಗಿರುವಾಗ ನಿಮ್ಮನ್ನು ಜ್ಞಾಪಕ ಇಟ್ಟುಕೊಳ್ಳುತ್ತಾರೆಯೇ? ಎಂದು ನೇರವಾಗಿ ಕೇಳಿದೆ. ವರುಣಾ ಕೆನಾಲ್ ನಿರ್ಮಿಸಲು ನಡೆದ ಮೆರವಣಿಗೆ, ಹೋರಾಟ, ಗಲಾಟೆಗಳನ್ನು ನೆನಪಿಸಿಕೊಳ್ಳುತ್ತಾ ನನ್ನ ಜೊತೆ ಮಾತನಾಡುತ್ತಿದ್ದರು. ಶ್ರೀ ಡಿ.ದೇವರಾಜ ಅರಸು ಅವರ presence ಎಷ್ಟೊಂದು important ಆಗಿದೆ ಎಂದರೆ, ಹೆಸರನ್ನು ಹೇಳುವಾಗ ಅವರಿಗೆ ಎಷ್ಟೊಂದು ಸಹಿಷ್ಣುತೆ (tolerance) ಇತ್ತು ಎಂಬುದರ ಬಗ್ಗೆ ನೆನಪಿಸಿಕೊಳ್ಳಬೇಕಾಗುತ್ತದೆ. ಅವರಿಗಿದ್ದ ಸಹಿಷ್ಣುತೆ ಪ್ರತಿಯೊಬ್ಬ ರಾಜಕೀಯ ಮುಖಂಡರಿಗೂ ಬರಬೇಕು. ಆ ಸಹಿಷ್ಣುತೆ ಇಲ್ಲದಿದ್ದರೆ ಸಮಾಜವನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಸಮಾಜವನ್ನು ಅರ್ಥ ಮಾಡಿಕೊಂಡಿದ್ದಕ್ಕೆ ಇಷ್ಟೊಂದು ಸುಧಾರಣೆ ತರಲು ಸಾಧ್ಯವಾಯಿತು. ನಾನು ಆಗಲೇ ಹೇಳಿದ ಹಾಗೆ, ಅವರ ಕ್ಯಾಬಿನೆಟ್‌ನಲ್ಲಿದ್ದ, ಶ್ರೀ ರಂಗನಾಥ್‌ರವರು, ಶ್ರೀ ಹುಚ್ಚಮಾಸ್ತಿ ಗೌಡರು, ಶ್ರೀ ಬಸವಲಿಂಗಪ್ಪನವರು ಮತ್ತು ಮೈಸೂರು ಜಿಲ್ಲೆಯಿಂದ ಆಯ್ಕೆಯಾಗಿದ್ದ ಇಬ್ಬರು-ಮೂವರು ಜನ ಸೇರಿದಂತೆ, ಇವರನ್ನು ವಿರೋಧ ಮಾಡಿದರೂ. ಅವರೆಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸುಧಾರಣಾ ಕಾರ್ಯಕ್ರಮಗಳನ್ನು ಮಾಡಿದರು. ಅವರು ಮಾಡಿದಂತಹ ಬಹುದೊಡ್ಡ ಪ್ರಯೋಗವನ್ನು ಹೇಳಲೇ ಬೇಕಾಗುತ್ತದೆ. ಇದರಿಂದ ಮಾನ್ಯ ಬಿ.ಕೆ.ಹರಿಪ್ರಸಾದ್ ಅವರಿಗೂ ಪ್ರೇರಣೆ ಸಿಗುತ್ತದೆ ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಮಾನ್ಯ ಡಿ.ದೇವರಾಜ ಅರಸುರವರು, ಭೂಮಿ ಕೊಡಲು, ಮನೆಗಳನ್ನು ಹಂಚಲು, ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೆ ತರಲು ಕಾರ್ಯಕರ್ತರನ್ನು ಉಪಯೋಗಿಸಿಕೊಂಡರು, ಪಕ್ಷವನ್ನು ಕಟ್ಟಿದ್ದರು. ನಾನು ನನ್ನ ತಂದೆಯವರ ಜೊತೆ ಮಾತನಾಡುತ್ತಿದ್ದಾಗ ಅವರು ಈ ವಿಷಯವನ್ನು ಹೇಳಿದರು. ಯಾವಾಗ ಎಲ್ಲರೂ ಇವರ ವಿರುದ್ಧವಾಗಿ ಇನ್ನೊಂದು ಪಾರ್ಟಿಯನ್ನು ಕಟ್ಟಿದರೋ, ಆ ಸಂದರ್ಭದಲ್ಲಿ, ಯಾವ ಕಾರ್ಯಕರ್ತರನ್ನು ಉಪಯೋಗಿಸಿಕೊಂಡಿದ್ದರೋ, ಅವರನ್ನೇ ಅಭ್ಯರ್ಥಿಗಳನ್ನಾಗಿ ಮಾಡಿದರು. ಹೆಚ್.ಡಿ.ಕೋಟೆಯಲ್ಲಿ ಒಬ್ಬ ಮಹಿಳೆ ಸೇರಿದಂತೆ, ಹೆಸರು ಗೊತ್ತಿಲ್ಲದೇ ಇದ್ದವರನ್ನು ಚುನಾವಣೆಗೆ ನಿಲ್ಲಿಸಿ

ಗೆಲ್ಲಿಸಿಕೊಂಡು ಬಂದರು. ಆವತ್ತಿನ ಹುಚ್ಚು ಹೊಳೆಯ ಅಲೆಯಿಂದ ಬಂದಂಥ ಕೆಲವು ಮೀನುಗಳು ಈ ಕಲ್ಲು ಕಟ್ಟಡಕ್ಕೆ ಬಂದು ಸೇರಿದವು. ನಮ್ಮ ತರಹದವರು, ಶ್ರೀ ನಾರಾಯಣಸ್ವಾಮಿ ತರಹದವರು, ಮಾನ್ಯ ವಸಂತ ತರಹದವರು, ಮಾನ್ಯ ಜಕ್ಕಪ್ಪನ ತರಹದವರು, ನಮ್ಮ ಶಿವಣ್ಣನ ತರಹದವರು ಮತ್ತು ಮಾನ್ಯ ನಾಗರಾಜ ಯಾದವ್ ತರಹದವರು ಅಲ್ಲಿ-ಇಲ್ಲಿ ಕಾಣಿಸಿಕೊಳ್ಳುತ್ತಿದ್ದೇವೆ. ನಾವು ಸೈಡ್‌ನಲ್ಲಿ ಹೋಗುವ ಮೀನುಗಳು. ನಾವು main stream ನಲ್ಲಿ ಬರುವಂತಹ ಮೀನುಗಳಲ್ಲ. ಆ ಹುಚ್ಚು ಹೊಳೆಯಲ್ಲಿ ಬಂದಂಥ, ಕಾಂಗ್ರೆಸ್ ಸಿದ್ಧಾಂಥದಿಂದ ಬಂದಂಥ legacy ಇವತ್ತು ಮುಂದುವರೆಯುತ್ತಿದೆ. ಮಾನ್ಯ ಸಭಾಪತಿಗಳೆ, ಆಡಳಿತ ಭಾಷೆಯನ್ನು ಕನ್ನಡವಾಗಿ . . . ಆವತ್ತು ಶ್ರೀ ಚದುರಂಗ ಅವರದು ಸಂದರ್ಶನ ಇತ್ತು . . .

**ಸಭಾಪತಿಯವರು:-** ಮಾನ್ಯ ಶಿವಕುಮಾರ್‌ರವರೇ, ನಿಮಗೆ ಆಗಲೇ ಹೇಳಿದ್ದೆ. ನಾನು ಒಂದು ಬಾರಿ ಬೆಲ್ ಬಾರಿಸಿದ ಮೇಲೆ ನೀವು ಮುಂದೆ ಹೋಗಬಾರದು. ಸಮಯವನ್ನು ನಿಗದಿ ಮಾಡಿದ ಮೇಲೆ ಆ ಅವಧಿಯಲ್ಲೇ ಮುಗಿಸಬೇಕು. I do not appreciate it.

**ಶ್ರೀ ಕೆ.ಶಿವಕುಮಾರ್:-** ಮಾನ್ಯ ಸಭಾಪತಿಗಳೆ, I adhere to your directions. I will finish off. I am speaking about the towering personality. He is not an ordinary man. ಎರಡೇ ನಿಮಿಷದಲ್ಲಿ ಮುಗಿಸುತ್ತೇನೆ. ದೊಡ್ಡ ವ್ಯಕ್ತಿಗಳ ಬಗ್ಗೆ ಮಾತನಾಡುವಾಗ ಹೆಚ್ಚು ಸಮಯ ಬೇಕಾಗುತ್ತದೆ. ಮಾನ್ಯ ಸಭಾಪತಿಗಳೆ, ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಿ . . . ನಾನು ಮೈಸೂರು ಸ್ಟೇಟ್‌ನಲ್ಲಿ ಹುಟ್ಟಿದ್ದೆ. 1973ರಲ್ಲಿ ಕರ್ನಾಟಕ ರಾಜ್ಯ ಎಂದಾಯಿತು. ಶ್ರೀ ಡಿ. ದೇವರಾಜ ಅರಸುರವರು ಬಹಳ democratic ಅಗಿದ್ದರು. ಒಂದು ಬಾರಿ ಮಾನ್ಯ ವಿ. ರಾಚಯ್ಯನವರು ಕೋಪ ಮಾಡಿಕೊಂಡರು. ಅದು ಮೈಸೂರು ಸ್ಟೇಟ್ ಅಗಿಯೇ ಇರಬೇಕು ಎಂದು ಹೇಳಿದರು. ಆಗ ಶ್ರೀ ಡಿ.ದೇವರಾಜ ಅರಸುರವರು, ತಾವೇ ಸ್ವತ: ಕಾರನ್ನು ಓಡಿಸಿಕೊಂಡು ಶ್ರೀ ವಿ. ರಾಚಯ್ಯನವರ ಮನೆಗೆ ಹೋದರು. ನಾವು "ಕರ್ನಾಟಕ" ಎಂದು ನಾಮಕರಣ ಮಾಡೋಣ, ದಯವಿಟ್ಟು ಒಪ್ಪಿಕೊಳ್ಳಿ ಎಂದು ಅವರನ್ನು ಒಪ್ಪಿಸಿದ್ದರು. ಅಷ್ಟು ದೊಡ್ಡ ಘನತೆ ಇರುವ ಒಬ್ಬ ಮನುಷ್ಯ, ಎಲ್ಲವನ್ನೂ dictate ಮಾಡುತ್ತಿದ್ದ ಕಾಲದಲ್ಲಿ, ಅವರ ಮನೆಗೆ ಹೋಗಿ convince ಮಾಡುತ್ತಾರೆ. ರಾಜಕಾರಣಗಳಿಗೆ ಅಂತಹ ಒಂದು ಗುಣ ಇರಬೇಕು.

(ಮುಂದು)

(792) 20-8-2026 4.20 ಡಿಎಸ್-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಶಿವಕುಮಾರ್ ಕೆ (ಮುಂದು):-**

ಅಧಿಕಾರಿಗಳಿಗೆ ಆ ಗುಣ ಇರಬೇಕು. ಏಕೆಂದರೆ, we are not above everything. Ego should be set aside, because we will be models for many of them. I expect, a towering personality like Sri D. Devaraja Urs and, a great Prime Minister like Sri Rajiv Gandhi, their efforts for Computerization, Panchayat or technological centers ಹಾಗೂ ಈ ತರಹದ್ದೆಲ್ಲಾ ಮಾಡಿ ಈ ದೇಶವನ್ನು ಐ.ಟಿ. ಹಬ್ ಕಡೆಗೆ, ಹೊಸ economic policy ಕಡೆಗೆ ತೆಗೆದುಕೊಂಡು ಹೋದಂತಹ ಇವರಿಬ್ಬರು ಬಹಳ ಜನರಿಗೆ, ನಮಗೆಲ್ಲಾ ಸ್ಫೂರ್ತಿಯಾಗಲಿ. ಇವರ ಚಿಂತನೆಗಳು, ಇವರ ಕಾರ್ಯಕ್ರಮಗಳು ಇನ್ನಷ್ಟು ಮುಂದುವರೆಯಬೇಕು. ಶ್ರೀ ರಾಜೀವ್ ಗಾಂಧಿಯವರ ಕಣ್ಣಿಗೆ ಬಿದ್ದು, ಅವರ ನೆರಳಿನಲ್ಲಿ ಸಭಾಪತಿಯವರಾದಂತಹ ತಾವು ಈ ಸ್ಥಾನಕ್ಕೆ ಬರುವುದಕ್ಕೆ ಸ್ಫೂರ್ತಿಯಾಗಿದ್ದಾರೆ. ನನಗೆ ಮಾತನಾಡುವುದಕ್ಕೆ ತಾವು ಅವಕಾಶ ಮಾಡಿ ಕೊಟ್ಟಿದ್ದೀರಿ. ತಾವು ಬೆಲ್ ಹೊಡೆದ ಮೇಲೂ ನಾನು ಒಂದೆರಡು ನಿಮಿಷ ಮಾತನಾಡಿದರೂ ಕೂಡ ತಾವು ಸಹಿಸಿಕೊಂಡಿರುವುದಕ್ಕೆ ತಮಗೆ ಧನ್ಯವಾದಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:-** ಮುಂದೆ ಈ ರೀತಿ ಮಾಡಬಾರದು.

**ಶ್ರೀ ರಘು ಆರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಕರ್ನಾಟಕದ ಇತಿಹಾಸದಲ್ಲಿ 12ನೇ ಶತಮಾನದ ಬಸವಣ್ಣನವರ ನಂತರ ಸಮಾನತೆಯ ಯೋಚನೆಯನ್ನು ಸ್ವಾತಂತ್ರ್ಯ ಪೂರ್ವದಲ್ಲಿ ಮೈಸೂರಿನ, ಏಕೆಂದರೆ ಮೈಸೂರು ಭಾಗದಿಂದಲೇ ಸಾಮಾಜಿಕ ನ್ಯಾಯ ಬಂದಿರುವಂಥದ್ದು. ಈ ಸದನವನ್ನು ಪ್ರಾರಂಭ ಮಾಡಿರುವಂತಹ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಮಿಲ್ಲರ್ ಆಯೋಗವನ್ನು ತಂದರು. ಶೇಕಡ 75 ರಷ್ಟು ಮೀಸಲಾತಿಯಿಂದ ಸಾಮಾಜಿತ ನ್ಯಾಯವನ್ನು ಹಂಚುತ್ತಾರೆ. ಸ್ವಾತಂತ್ರ್ಯ ನಂತರದಲ್ಲಿ ಸನ್ಮಾನ್ಯ ಡಿ.ದೇವರಾಜ ಅರಸುರವರು ಸಂವಿಧಾನದ ಆಶಯಕ್ಕೆ ಪೂರಕವಾಗಿ ಪ್ರಜಾಪ್ರಭುತ್ವದ ವ್ಯವಸ್ಥೆ, ಅಂದರೆ ಸಾಮಾಜಿಕ ಪ್ರಜಾಪ್ರಭುತ್ವದ ಸ್ಥಾಪನೆಗಾಗಿ ಹಾವನೂರ ಆಯೋಗವನ್ನು ನೇಮಕ ಮಾಡಿ ಕೇವಲ ಮೂರು ವರ್ಷಗಳಲ್ಲಿ ಆ ವರದಿಯನ್ನು ತೆಗೆದುಕೊಂಡು ಜಾರಿ ಮಾಡಿ ಸಾಮಾಜಿಕ ನ್ಯಾಯದ ಹರಿಕಾರ ಎನ್ನುವ ಹೆಸರನ್ನು ಅವರ ಹೆಸರಿನೊಂದಿಗೆ ಶಾಶ್ವತಗೊಳಿಸಿದ್ದಾರೆ. ಶ್ರೀ ಡಿ. ದೇವರಾಜ ಅರಸುರವರು ನಡೆದಾಡುವ ಸುಧಾರಣೆಯ ಸಂವಿಧಾನದ ರಾಯಭಾರಿ ಎಂದು ಹೇಳಿದರೆ ತಪ್ಪಾಗಲಾರದು.

ಬಹುಶಃ ಭಾರತದ ಇತಿಹಾಸದಲ್ಲಿ ಶ್ರೀ ಡಿ. ದೇವರಾಜ ಅರಸರು ತಂದಂತಹ ಸುಧಾರಣೆಗಳು, ಕಾನೂನುಗಳು, ಯೋಜನೆಗಳು ಯಾವತ್ತಿಗೂ ಕೂಡ ಯುಗದಲ್ಲಿ ಕೂಡ ಮರೆಯಲಿಕ್ಕೆ ಸಾಧ್ಯವಿಲ್ಲದಿರತಕ್ಕಂತ ಒಂದು ಸಾಮಾಜಿಕವಾದ ಬಹುದೊಡ್ಡ ಕ್ರಾಂತಿ ಎಂದು ಹೇಳಲಿಕ್ಕೆ ನಾನು ಬಯಸುತ್ತೇನೆ. ಅಂತಹವರು ಈ ನೆಲದಲ್ಲಿ ಹುಟ್ಟಿದ್ದು, ಬಹುಶಃ ಅವರ ಒಂದು ದಾಖಲೆಯನ್ನು ಮುರಿಯೋದಕ್ಕೆ ಯಾರ ಕೈಯಿಂದಲೂ ಸಾಧ್ಯವಿಲ್ಲ. ಮಾನ್ಯ ಶಿವಕುಮಾರ್.ಕೆ ಅವರು ಹೇಳಿದ ಹಾಗೆ ಮಾಧ್ಯಮಗಳ ಒಂದು ಬೆಂಬಲ ಇಲ್ಲದೇ ಇರುವಂತ ಸಮಯದಲ್ಲಿ ಅಥವಾ ಮಾಧ್ಯಮಗಳ ವಿಶ್ಲೇಷಣೆ ವ್ಯತಿರಿಕ್ತವಾಗಿದ್ದಂತಹ ಸಂದರ್ಭದಲ್ಲಿ, ಚುನಾವಣಾ ಸಂದರ್ಭದಲ್ಲಿ ಅವರು ಹೇಳುತ್ತಾರೆ: ಯಾವ ಸಾಮಾಜಿಕ ಶೋಷಣೆ, ದಬ್ಬಾಳಿಕೆಗೆ ಒಳಗಾಗಿರತಕ್ಕಂತ ಜನ, "ಅದೃಶ್ಯ ಮತದಾರರು" ಎಂದು ಹೇಳುತ್ತಾರೆ. ಅದೃಶ್ಯ ಮತದಾರರು ನನ್ನ ಜೊತೆಯಲ್ಲಿ ಇದ್ದಾರೆ ಎಂದು ಹೇಳುತ್ತಾರೆ, ಅದೇ ಪ್ರಕಾರವಾಗಿ ಅವರ ಪರವಾಗಿ ಚುನಾವಣಾ ಫಲಿತಾಂಶ ಬರುತ್ತದೆ. ಶ್ರೀ ಡಿ. ದೇವರಾಜ ಅರಸರವರು ಎಂದರೆ ಒಂದು ದಂತಕಥೆ. ಯಾವ ಶೋಷಿತ ಸಮುದಾಯಗಳಿಗೆ ಯಾವತ್ತಿಗೂ ಕೂಡ ಒಂದು ಪ್ರೇರಕ ಶಕ್ತಿ. ಬಹುಶಃ ಮೈಸೂರು ಭಾಗದಲ್ಲಿದ್ದು, ಮೈಸೂರು ಅಂದರೆ ಈಗಲೂ ನಾವೆಲ್ಲ ಮೈಸೂರು ಭಾಗದವರು ಎಂದರೆ ಬಹಳ ಪ್ರೀತಿ. ಆದರೆ ಇಡೀ ಸಮಗ್ರ ಕರ್ನಾಟಕದ ಚಿಂತನೆಯನ್ನು ಜೊತೆಯಲ್ಲಿ ಇಟ್ಟುಕೊಂಡು, 'ಕರ್ನಾಟಕ' ಎಂದು ನಾಮಕರಣ ಮಾಡುವ ಮೂಲಕ ಇಡೀ ಕರ್ನಾಟಕದ ಒಂದು ಸಮಗ್ರ ಸಾಮಾಜಿಕ ವ್ಯವಸ್ಥೆ ಮತ್ತು ಆರ್ಥಿಕವಾದಂತಹ, ಔದ್ಯೋಗಿಕವಾದಂತಹ ಎಲ್ಲಾ ರೀತಿಯಾದಂತಹ ಒಂದು ಸಮಾನತೆಯನ್ನು ಸಾರಲಿಕ್ಕೆ ಅವರು ಕೆಲಸ ಮಾಡುತ್ತಾರೆ. ಬಹುಶಃ ಅವರು ಉಂಡಷ್ಟು ನೋವು, ಅವರು ಉಂಡಷ್ಟು ಯಾತನೆಗಳನ್ನು ಯಾವ ರಾಜಕಾರಣಿಯೂ ಕರ್ನಾಟಕದಲ್ಲಿ ಅನುಭವಿಸಿಲ್ಲ ಎನ್ನತಕ್ಕಂಥದ್ದು ಕೂಡ ವಾಸ್ತವ. ಏಕೆಂದರೆ ಜಾತಿಯ ಬೆನ್ನೆಲುಬುಯಿಲ್ಲದೆ ಒಬ್ಬ ಮನುಷ್ಯ ದಿಟ್ಟತನದಿಂದ "ಉಳುವವನಿಗೆ ಭೂಮಿ" ಎನ್ನತಕ್ಕಂತ ಒಂದು ಬಹುದೊಡ್ಡ ಕ್ರಾಂತಿಕಾರಕ ಯೋಜನೆ ತರುತ್ತಾರೆ ಎಂದರೆ ಅಷ್ಟೊಂದು ಸುಲಭ ಅಲ್ಲ. ನಾನು ಕೆಲವು ಸಂದರ್ಭದಲ್ಲಿ ಅಂದುಕೊಳ್ಳುತ್ತಿರುತ್ತೇನೆ, ಇವತ್ತಿನ ರಾಜಕೀಯ ವ್ಯವಸ್ಥೆಗಳನ್ನು ನೋಡುತ್ತಿದ್ದಾಗ, ಬಹಳ ಜನ ಒಂದು ರೀತಿ "ನಾಲ್ಕು ಸೈಟ್ ಮಾರಿಬಿಟ್ಟರೆ ನಾವು ಎಂಎಲ್ಎ ಆಗಿಬಿಡಬಹುದು" ಎನ್ನುವಂತಹ ಭಾವನೆ ಇದೆ. ಬಹುಶಃ ಶ್ರೀ ಡಿ. ದೇವರಾಜ ಅರಸುರವರು ಏನಾದರೂ ಉಳುವವನಿಗೆ ಭೂಮಿ ಎನ್ನುವ ಕಾಯ್ದೆ ತಂದಾಗ ಇವತ್ತು ಈ ರೀತಿಯಾದಂತಹ ರಿಯಲ್ ಎಸ್ಟೇಟ್ ತಲೆ ಎತ್ತುತ್ತದೆ ಎಂದು ಗೊತ್ತಿದ್ದರೆ, "ಮನೆ ಕಟ್ಟುವವನಿಗೆ ಮಾತ್ರ ನಿವೇಶನ" ಎಂದು ಹೇಳಿ ಒಂದು ದೊಡ್ಡ ಕ್ರಾಂತಿಕಾರಕ ಕಾಯ್ದೆ ತರುತ್ತಿದ್ದರೇನೋ ಎನ್ನುವ ನನ್ನ ಭಾವನೆಯನ್ನು ಈ ಸದನದಲ್ಲಿ ಹಂಚಿಕೊಳ್ಳಲಿಕ್ಕೆ ಇಷ್ಟಪಡುತ್ತೇನೆ. ಇಂತಹ ಒಂದು ಕ್ರಾಂತಿಕಾರಕ

ಹೆಜ್ಜೆ ಇಟ್ಟಿದ್ದಂತಹ ಒಂದು ಘಟನೆ ಇದೆ. ಸಮಯ ಕಡಿಮೆ ಇದೆ ಎಂದು ನಿರ್ದಿಷ್ಟವಾಗಿ ಹೇಳಿರುವುದರಿಂದ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗೋದಿಲ್ಲ. ಅಧಿಕಾರದಲ್ಲಿ ಕುಳಿತವರಿಗೆ, ಮುಖ್ಯಮಂತ್ರಿ ಸ್ಥಾನದಲ್ಲಿ ಕುಳಿತವರಿಗೆ ಮಾತೃಹೃದಯ ಇರಬೇಕು. ಅವರು ಒಂದು ಬಾರಿ ಗೆದ್ದು ಬಂದಾಗ, ನಾನು ಪುಸ್ತಕದಲ್ಲಿ ಓದಿರೋ ಘಟನೆಯನ್ನು ಹೇಳುತ್ತೇನೆ. ಬಹುತೇಕ ಶೇಕಡ 70-80 ರಷ್ಟು ಸಂಖ್ಯೆಯಲ್ಲಿ ಯುವಕರು ಇರುತ್ತಾರೆ. ಅವರು ಮೊದಲ ಶಾಸಕಾಂಗ ಸಭೆಯಲ್ಲಿ ಹೇಳುತ್ತಾರೆ: "ನೋಡ್ರಪ್ಪ, ನೀವೆಲ್ಲ ಗೆದ್ದುಕೊಂಡು ಬಂದ್ಬುಟ್ಟಿದ್ದೀರಿ. ಜನ ಆಶೀರ್ವಾದ ಮಾಡಿದ್ದಾರೆ. ನೀವು ಗೆಲ್ಲುವವರೆಗೆ ಪಕ್ಷ, ನನ್ನವರು, ನಮ್ಮ, ನನ್ನ ಮನೆ, ನನ್ನ ಜನ ಎನ್ನುವ ಭಾವನೆ ಇತ್ತು. ಗೆದ್ದಮೇಲೆ ನೀವು ಇಲ್ಲ ಕೊಡುತ್ತೀರಿ." ಅವರ ಮುಂದೆ ಒಂದು ತುಂಬಿದ ನೀರಿನ ಲೋಟ ಇರುತ್ತದೆ. ಅದನ್ನು ತೋರಿಸಿ, "ಈ ಲೋಟ ಸರ್ಕಾರದ ಒಂದು ಯೋಜನೆ. ಇದನ್ನು ನಾನು ನಿಮ್ಮ ಕೈಯಲ್ಲಿ ಕೊಡುತ್ತೇನೆ. ನೀವು ಇದನ್ನು ತೆಗೆದುಕೊಂಡು ಹೋಗಿ ಜನರಿಗೆ ಹಂಚಬೇಕಾದರೆ ಇವನು ನನ್ನ ಪಕ್ಷದವನಾ, ಇವನು ನನ್ನ ನೆಂಟನಾ, ಇವನು ನನ್ನ ಕಾರ್ಯಕರ್ತನಾ ಎಂದು ಅದೆಲ್ಲಾ ನೋಡುವ ಹಾಗಿಲ್ಲ. ಗೆಲ್ಲುವವರೆಗೆ ಅಷ್ಟೇ ಪಕ್ಷ, ಮತ್ತೊಂದು, ಇನ್ನೊಂದು. ಗೆದ್ದಮೇಲೆ ನಾವೆಲ್ಲ ನ್ಯಾಯಯುತವಾಗಿ ನಡೆದುಕೊಳ್ಳಬೇಕು. ಈ ಲೋಟದಲ್ಲಿ ತುಂಬಾ ನೀರಿದೆ, ಇದನ್ನು ತೆಗೆದುಕೊಂಡು ಹೋಗಬೇಕಾದರೆ ಚೆಲ್ಲುತ್ತದೆ, ಸ್ವಲ್ಪ ತುಳುಕಾಡುತ್ತದೆ, ತೊಟ್ಟಿಕ್ಕುತ್ತದೆ, ತೊಟ್ಟಿಕ್ಕಲಿ. ಆದ್ರೆ ತಳ ಕಚ್ಚಬಾರದು" ಎಂದು ಅತ್ಯಂತ ಮಾರ್ಮಿಕವಾಗಿ ಹೇಳುತ್ತಾರೆ. ಆ ರೀತಿ ಬಹಳ practical ಆಗಿ ಇದ್ದಂಥವರು. ಬಹುಶಃ ಇವತ್ತಿನ ದಿನದ ರಾಜಕಾರಣಿಗಳು ಶ್ರೀ ಡಿ.ದೇವರಾಜ ಅರಸುರವರ ಬಗ್ಗೆ ಓದಿಕೊಂಡರೆ ಸಾಮಾಜಿಕ ವ್ಯವಸ್ಥೆಯಲ್ಲಿ, ಆಡಳಿತದಲ್ಲಿ ಏನೆಲ್ಲ ಸುಧಾರಣೆ ತರಬಹುದು ಎನ್ನತಕ್ಕಂಥ ಒಂದು ನಿಜವಾದ ಕಾಳಜಿ ಇರತಕ್ಕಂಥವರು ದೇವರಾಜ ಅರಸುರವರ ಬಗ್ಗೆ ಓದಿಕೊಳ್ಳಬೇಕು ಎನ್ನುವುದು ನನ್ನ ಭಾವನೆ. ನನಗೆ ತಿಳಿದಂತೆ ಯಾವ ಕರ್ಪೂರಿ ಠಾಕೂರ್ ಅವರಿಗೆ ಇವತ್ತು ಭಾರತ ರತ್ನ ಕೊಟ್ಟರೋ ಅವರು ಕೂಡ ಶ್ರೀ ಡಿ.ದೇವರಾಜ ಅರಸರ ಹತ್ತಿರ ಬಂದು ಸಾಮಾಜಿಕ ನ್ಯಾಯವನ್ನು ಕೊಡುವುದರ ಬಗ್ಗೆ ಸಲಹೆ ಪಡೆದುಕೊಂಡು ಹೋಗುತ್ತಿದ್ದರು. ಬಹುಶಃ ಶ್ರೀ ಬಿ.ಕೆ.ಹರಿಪ್ರಸಾದ್‌ರವರು ಕೂಡ ಇದನ್ನು ಒಪ್ಪುತ್ತಾರೆ ಎಂದು ತಿಳಿದುಕೊಳ್ಳುತ್ತೇನೆ. ಈ ದೃಷ್ಟಿಯಲ್ಲಿ ಇವತ್ತು ಶ್ರೀ ಡಿ. ದೇವರಾಜ ಅರಸರನ್ನು ಶಾಶ್ವತವಾಗಿ ಸ್ಮರಿಸಬೇಕು. ಬಹಳ ವ್ಯಥೆಯಾಗುತ್ತದೆ, ಇವತ್ತು ಯಾರಾದರೂ ಒಬ್ಬ ದೊಡ್ಡ ಮನುಷ್ಯ ಇದ್ದರೆ ಅವರನ್ನು ಆರಾಧಿಸುವುದಕ್ಕೆ ಜಾತಿ ಇರಬೇಕು. ಶ್ರೀ ಡಿ.ದೇವರಾಜ ಅರಸರು ಕೊಟ್ಟಂತಹ ಕಾರ್ಯಕ್ರಮಗಳಿಗೆ ಕೋಟ್ಯಾಂತರ ಜನ ಇವತ್ತು ಫಲಾನುಭವಿಗಳಿದ್ದಾರೆ. ಆದರೆ ಏನಾದರೂ ಇಲ್ಲಿ ಸ್ಮರಣೆ ಮಾಡಬೇಕಾದರೆ ಅವರ ಜಾತಿಯವರು ಇದ್ದರೆ ಮಾತ್ರ ಜಯಂತಿ ನಡೆಯುತ್ತದೆ. ಅವರು ಕೊಟ್ಟಂತಹ ಫಲವನ್ನು

ಅನುಭವಿಸಿದವರು ಕೃತಜ್ಞತೆಯಿಂದ ಇವತ್ತು ಏನಾದರೂ ಸಂಭ್ರಮ ಮಾಡುವುದಾದರೆ, ಇವತ್ತು ಸರ್ಕಾರಿ ರಜಾದಿನ ಆಗುತ್ತಿತು. ಇಡೀ ರಾಜ್ಯದಲ್ಲಿ ಇವತ್ತು ಶ್ರೀ ಡಿ.ದೇವರಾಜ ಅರಸುರವರ ಜಾತ್ರೆ ಆಗುತ್ತಿತ್ತು. ಇವತ್ತು ನಮ್ಮ ಶ್ರೀ ಕೃಷ್ಣರಾಜ ಒಡೆಯರ್ ಆಗಲಿ, ಅರಸರಾಗಲಿ, ಅವರು ಎಲ್ಲವನ್ನು ಸಮಾಜಕ್ಕೆ ಕೊಟ್ಟು ಎಲ್ಲವನ್ನು ತ್ಯಾಗ ಮಾಡಿದ್ರು. ಆದರೆ ನಮ್ಮಲ್ಲಿ ಉಪಕಾರಸ್ಮರಣೆಯ ಕೊರತೆ ಇದೆ ಎನ್ನತಕ್ಕಂಥಾದ್ದನ್ನು ಅತ್ಯಂತ ನಾನು ನೋವಿನಿಂದ ಹೇಳಲಿಕ್ಕೆ ಬಯಸುತ್ತೇನೆ. ಈ ದಿಕ್ಕಿನಲ್ಲಿ ಇವತ್ತು ಸರ್ಕಾರ ಎಷ್ಟು ದುರಂತ ಎಂದು ಹೇಳಿದರೆ, ಶ್ರೀ ಡಿ.ದೇವರಾಜ ಅರಸರು nonstop ಮುಖ್ಯಮಂತ್ರಿ. ಅವರ ದಾಖಲೆ ಯಾರೂ ಮುರಿಯೋಕೆ ಆಗಲ್ಲ. ಒಂದು ಮ್ಯಾಚ್‌ನಲ್ಲಿ 50 ಹೊಡೆದುಬಿಟ್ಟು, ಇನ್ನೊಂದು ಮ್ಯಾಚ್‌ನಲ್ಲಿ ಸೋತು, ಇನ್ನೊಂದು ಮ್ಯಾಚ್‌ನಲ್ಲಿ 50 ರನ್ ಹೊಡೆದರೆ ದಾಖಲೆ ಆಗಲ್ಲ. nonstop ಮುಖ್ಯಮಂತ್ರಿ ದಾಖಲೆಯನ್ನು ಇವತ್ತು, ಯಾವತ್ತಿಗೂ ಸದ್ಯಕ್ಕಂತೂ ಯಾರೂ ಮುರಿಯಲಿಕ್ಕೆ ಆಗಲ್ಲ ಎನ್ನತಕ್ಕಂತದ್ದನ್ನು ಹೇಳುತ್ತೇನೆ. ಮಾನ್ಯ ಹರಿಪ್ರಸಾದ್ ಹೇಳಿದರು, ಶ್ರೀ ಡಿ.ದೇವರಾಜ ಅರಸರು ಕಾರಲ್ಲಿ ಕುಳಿತುಕೊಂಡು ಬಂದರೆ ದೇವರಾಜ ಅರಸುರವರು ಆಗುವುದಕ್ಕೆ ಆಗುವುದಿಲ್ಲ ಎಂದರು. ಆ ದೃಷ್ಟಿಯಲ್ಲಿ ಅದನ್ನು ಉಲ್ಲೇಖಿಸುತ್ತೇನೆ. ಇವತ್ತು ಶ್ರೀ ಡಿ.ದೇವರಾಜ ಅರಸುರವರನ್ನು ಸ್ಮರಿಸಬೇಕು, ಅವರು ಕೊಟ್ಟಂತಹ ಕಾರ್ಯಕ್ರಮಗಳನ್ನು ನಾವು ನಡೆಸಬೇಕು. ಮಾತೃ ಹೃದಯ ಹೇಗಿರಬೇಕು ಎನ್ನುವುದಕ್ಕೆ ಒಂದು ಘಟನೆ ಹೇಳುತ್ತೇನೆ. ಅವರು ಕಾಡಿನ ದಾರಿಯಲ್ಲಿ ಹೋಗುತ್ತಿರುತ್ತಾರೆ. ಅಲ್ಲಿ ಕೆಲವು ಹೆಣ್ಣುಮಕ್ಕಳು ತಲೆಯ ಮೇಲೆ ಸೌದೆಪುಳ್ಳೆಗಳನ್ನು ಹೊತ್ತುಕೊಂಡು ಹೋಗುತ್ತಿರುತ್ತಾರೆ. ಶ್ರೀ ಡಿ.ದೇವರಾಜ ಅರಸುರವರು ಕಾರನ್ನು ನಿಲ್ಲಿಸಿ, ಎಸ್.ಪಿ. ಯವರನ್ನು ಕರೆದು ಆ ಹೆಣ್ಣುಮಕ್ಕಳ ಹತ್ತಿರ ಮಾತನಾಡಬೇಕೆಂದು ಹೇಳುತ್ತಾರೆ. ಈ ಪೋಲೀಸರನ್ನು ನೋಡಿ ಹೆಣ್ಣುಮಕ್ಕಳು ಸೌದೆಪುಳ್ಳೆಗಳನ್ನು ಬಿಸಾಕಿ ಓಡಿ ಹೋಗುತ್ತಿರುತ್ತಾರೆ. ಆಗ ಅವರು "ಬನ್ನಿ, ಬುದ್ಧಿಯವರು ಕರೆಯುತ್ತಿದ್ದಾರೆ, ನಿಮ್ಮ ಹತ್ತಿರ ಮಾತನಾಡಬೇಕೆಂದು" ಹೇಳುತ್ತಾರೆ. ಅವರನ್ನು ಕೆಳಗಡೆ ಕೂರಿಸಿ "ಏನು ತಾಯಿ, ಮುಸ್ಸಂಜೆ, ಕಾಡು ಎಲ್ಲಿಗೆ ಹೋಗುತ್ತಿದ್ದೀರಿ, ನಿಮ್ಮ ಕಷ್ಟ ಏನು" ಎಂದಾಗ "ಬುದ್ಧಿ ನಮ್ಮ ಗಂಡಂದಿರು ಸರಿಯಾಗಿ ಕೆಲಸ ಮಾಡುವುದಿಲ್ಲ ಕುಡುಕರು, ಮನೆಗೆ ಅಕ್ಕಿ ತರುವುದಿಲ್ಲ, ಈ ಪುಳ್ಳೆ ತೆಗೆದುಕೊಂಡು ಹೋಗಿ ಪೇಟೆಯಲ್ಲಿ ಮಾರಿದರೆ ನಾಲ್ಕು ಕಾಸು ಬರುತ್ತದೆ. ಅದರಲ್ಲಿ ಅರ್ಧ ಪಾವು ಅಕ್ಕಿ, ಅರ್ಧ ಲೀಟರ್ ಸೀಮೆಎಣ್ಣೆ ತೆಗೆದುಕೊಂಡು ನಮ್ಮ ಮನೆಗೆ ಹೋದರೆ ನಮ್ಮ ಮಕ್ಕಳಿಗೆ ಓದುವುದಕ್ಕೆ ಲೈಟ್ ಇಲ್ಲ, ಸೀಮೆಎಣ್ಣೆ ಬುಟ್ಟಿಯಲ್ಲಿ ಓದಿಕೊಳ್ಳುತ್ತಾರೆ. ಅಲ್ಲಿಯೇ ಶ್ರೀ ಡಿ.ದೇವರಾಜ ಅರಸುರವರು ಭಾವುಕರಾಗುತ್ತಾರೆ. ಜೇಬಿನಲ್ಲಿ ಇದ್ದಷ್ಟು ಹಣವನ್ನು ಆ ಹೆಣ್ಣಮಕ್ಕಳಿಗೆ ನೀಡಿ ಹೊರಡಿ ತಾಯಿ ಎಂದು ಹೇಳುತ್ತಾರೆ. ಶ್ರೀ ಡಿ.ದೇವರಾಜ ಅರಸುರವರು ಕಾರಿನಲ್ಲಿ ಕುಳಿತು ಅಲ್ಲಿಂದಲೇ ಈ

ವಿಚಾರವನ್ನು ನಾಳೆ ಕ್ಯಾಬಿನೆಟ್‌ಗೆ ತರಬೇಕೆನ್ನುತ್ತಾರೆ. ಇವತ್ತಿನ ರೀತಿ Whatsapp, Facebook ಎಲ್ಲಾ ಇದ್ದಿದ್ದರೆ ಏನು ಮಾಡುತ್ತಿದ್ದರೋ ಗೊತ್ತಿಲ್ಲ. "ಉಚಿತ ಭಾಗ್ಯ ಜ್ಯೋತಿ" ಯೋಜನೆಯನ್ನು ನೋಡಿದ ಕ್ಷಣದಲ್ಲೇ, ಮಾರನೆಯ ದಿನವೇ ಜಾರಿಗೆ ತರುವ ಮೂಲಕ ಅವರ ಮಾತೃ ಹೃದಯವನ್ನು, ಅವರ ಬದ್ಧತೆಯನ್ನು ತೋರಿಸುತ್ತಾರೆ. ನಡೆದಲ್ಲಿ, ಕುಳಿತಲ್ಲಿ, ನಿಂತಲ್ಲಿ ಸಾಮಾಜಿಕ ನ್ಯಾಯದ ಬಗ್ಗೆ ಯಾವ ಕಟ್ಟಕಡೆಯ ಮನುಷ್ಯನಿಗೆ ಏನೆಲ್ಲಾ ದುಃಖಗಳಿವೆ, ಅದನ್ನು ನೋಡಿ ಜಾರಿಗೆ ತರುತ್ತಿದ್ದ ಅನೇಕ ಯೋಜನೆಗಳಲ್ಲಿ ಇದು ಒಂದು.

(ಮುಂದು)

(793) 20/08/2026 4:30 ಎಸ್‌ಪಿಆರ್/ಎಂಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ರಘು ಆರ್ (ಮುಂದು):-**

ತಮಗೆಲ್ಲಾ ಗೊತ್ತಿರುವ ಎರಡು ಮಾತುಗಳನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಮ್ಮ ಕಾಲದ ಎಲ್ಲರಿಗೂ ಗೊತ್ತಿದೆ. ಯಾರಾದರೂ ಮನೆಯಲ್ಲಿ ವಿಧವೆಯಾದರೆ, ಅವರನ್ನು ಅವರ ತಾಯಿಯೂ ಸಹ ಮಾತನಾಡಿಸುತ್ತಿರಲಿಲ್ಲ. ಅವರ ಅಣ್ಣ-ತಮ್ಮಂದಿರು ಮುಖವನ್ನು ತಿರುಗಿಸಿಕೊಂಡು ಬಿಡುವರು. ಅಂತಹ ಸಮಯದಲ್ಲಿ ವೃದ್ಧಾಪ್ಯ ವೇತನವನ್ನು ಜಾರಿಗೊಳಿಸಿದರು. ಯಾರಿಗಾದರೂ age ಆಗಿದ್ದರೆ, ಅವರನ್ನು ಬೈದು ಮೂಲೆಯಲ್ಲಿ ಕೂಡಿಸಿ ಬಿಡುತ್ತಿದ್ದರು. ಕೊನೆಗೆ ಯಾವಾಗ ದೇವರಾಜ ಅರಸು ರವರು ಕೊಟ್ಟ ವೃದ್ಧಾಪ್ಯ ವೇತನ ಜಾರಿಗೆ ಬಂತೋ, ಅವರನ್ನು ಕೂಸು ಮರಿಯನ್ನಾಗಿ ಮಾಡಿ, ಕರೆದುಕೊಂಡು ಹೋಗಿ ಪೋಸ್ಟ್ ಆಫೀಸಿನಲ್ಲಿ ದುಡ್ಡು ತೆಗೆದುಕೊಂಡು ಬಂದು, ಅವರನ್ನು ಆರೈಕೆ ಮಾಡುತ್ತಿದ್ದರು. ಇಂತಹ ವಿಧವಾ ವೇತನ ಅಥವಾ ವೃದ್ಧಾಪ್ಯ ವೇತನಗಳು ಆಗಿರಬಹುದು, ಇಂತಹ ಪ್ರತಿಯೊಂದರ ಬಗ್ಗೆ ಹೇಳುತ್ತಾ ಹೋದರೆ, ಸಮಯವಾಗುತ್ತದೆ. ಈ ಬಗ್ಗೆ ಮಾತನಾಡುವವರು ಕೂಡ ಬಹಳ ಇದ್ದಾರೆ. ಅವರ ಬಗ್ಗೆ ಒಂದು ವಿಷಯವನ್ನು ಹೇಳುವುದಾದರೆ, ಹಾವನೂರು ವರದಿಯಿಂದ...

**ಶ್ರೀ ಕೆ.ಶಿವಕುಮಾರ್:-** ಶ್ರೀ ರಘುರವರೇ, ಅವರ ಕೊನೆಯ ದಿನಗಳು ಎಷ್ಟು ಕಷ್ಟವಾಗಿತ್ತು ಎನ್ನುವುದರ ಬಗ್ಗೆ ಸ್ವಲ್ಪ ಹೇಳಿ.

**ಶ್ರೀ ರಘು ಆರ್.(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಈ ಬಗ್ಗೆ ನಾನು ಹೇಳುತ್ತೇನೆ. ಅವರ ಕೊನೆಯ ದಿನದಲ್ಲಿ ಅವರಿಗೆ ಅಧಿಕಾರ ಹೋಗಿ ಬಿಟ್ಟಿರುತ್ತದೆ. ನಾಯಕ ಸಮುದಾಯದ ಶ್ರೀ ಶ್ರೀನಿವಾಸ ಎಂಬುವ ನಿವೃತ್ತ ಅಧಿಕಾರಿಯು ಅವರ ಜೊತೆ ಯಲಹಂಕ ಕೆರೆಯ ಬಳಿ ಫಿಯೆಟ್ ಕಾರಿನಲ್ಲಿ ಹೋಗಿ ಕುಳಿತಿರುತ್ತಾರೆ. "ಅಯ್ಯೋ! ಹಾವನೂರು ರವರ ವರದಿ ಬಂತು, ಈ ವರದಿ ನೋಡಿದೆ; ಅದರಲ್ಲಿ ಮಡಿವಾಳರಿಗೆ, ಸವಿತಾ ಸಮಾಜದವರಿಗೆ, ಹಡಪದರಿಗೆ, ವಿಶ್ವಕರ್ಮ ಇಂತಹ ಸಣ್ಣ ಸಣ್ಣ ಸಮುದಾಯಗಳಿಗೆ ಏನೂ ಇದರಿಂದ ಅಷ್ಟು ಉಪಯೋಗವಾಗುತ್ತಿಲ್ಲ" ಎಂಬುದಾಗಿ ಹೇಳಿ, ಶ್ರೀ ಆರ್.ಗುಂಡೂರಾವ್ ರವರಿಗೆ ಪತ್ರವನ್ನು ಬರೆಯುತ್ತಾರೆ. "ಈ

ಸಮುದಾಯಗಳಿಗೆ ಪ್ರತ್ಯೇಕವಾಗಿ ಏನಾದರೂ ಮೀಸಲಾತಿಯನ್ನು ಮಾಡಬೇಕು, ಇಷ್ಟು ದೊಡ್ಡ ಸಮುದಾಯಗಳ ಜೊತೆಗೆ ಅವರು ಹೋರಾಟವನ್ನು ಮಾಡುವುದಕ್ಕಾಗುವುದಿಲ್ಲ" ಎಂದು ತಿಳಿಸುತ್ತಾರೆ. ಕೊನೆಗೆ ಇವರ ಬಗ್ಗೆಯೂ ಸಹ ಮಿಡಿಯುತ್ತಾರೆ. ಅವರು ಬಹುಶಃ ಇನ್ನೆರೆಡು ವರ್ಷ ಮುಂದುವರೆದಿದ್ದರೆ ಈ ರಾಜ್ಯದ ಒಂದು ವ್ಯವಸ್ಥೆಯಲ್ಲಿ ಬಹುಶಃ ಇನ್ನಷ್ಟು ಸುಧಾರಣೆಗಳಾಗುತ್ತಿದ್ದವೋ ಏನೋ? ಅವರ ಕಡೆಯ ದಿನಗಳ ಬಗ್ಗೆ ತಮಗೆ ಗೊತ್ತಿದೆ. ಅದನ್ನು ರಾಜಕಾರಣವಾಗಿ ಬಳಸಿಕೊಳ್ಳುವುದಿಲ್ಲ. ಆದರೆ, ಎಷ್ಟೂ ಮಾನಸಿಕವಾಗಿ ಮತ್ತು ಉಪಕಾರ ಸ್ಮರಣೆ ಇಲ್ಲದೇ, ಯಾರು ಯಾರು ಅವರಿಂದ ಎಲ್ಲವನ್ನೂ ಅನುಭವಿಸಿದ್ದರೋ, ಅದೆಲ್ಲವೂ ಆದ ದುರಂತಗಳು. ಅವರನ್ನು ಕೆಳಗೆ ಇಳಿಸಿದ ಪರಿ ಕರ್ನಾಟಕದ, ಭಾರತದ ರಾಜಕೀಯ ಇತಿಹಾಸದಲ್ಲಿ ಕಪ್ಪು ಚುಕ್ಕೆ. ರಾಜಕೀಯ ಏನೇ ಇರಲಿ; ರಾಜಕೀಯ ಎಂದರೆ, ಚಾಡಿಕೋರರ ಸಂತೆ. ಆ ಚಾಡಿಕೋರರ ನಡುವೆ, ಏಕೆಂದರೆ ಯಾರಾದರೂ ಒಂದು ಬಲಿಷ್ಠ ಜಾತಿಯವನು ಇದ್ದರೆ, ಆ ಲೀಡರ್ ಹತ್ತಿರ ಅವನ ರಕ್ಷಣೆಯಾಗುತ್ತದೆ. "ಅಣ್ಣಾ ಬಿಡಣ್ಣಾ, ಇವನು ನಮ್ಮವನು ತಿದ್ದಿಕೊಳ್ಳುತ್ತಾನೆ, ಬಿಡಣ್ಣಾ" ಎಂದು ಹೇಳುತ್ತಾರೆ. ಆದರೆ, ಪಾಪ! ದೇವರಾಜ ಅರಸರಿಗೆ ಈ ರೀತಿಯಾಗಿ ಹೇಳುವುದಕ್ಕೆ ಯಾರು ಇದ್ದರು? ಒಬ್ಬರ ಮೇಲೆ ಒಬ್ಬರು ಚಾಡಿ ಹೇಳುವುದಕ್ಕೆ start ಮಾಡಿದರು. ಈ ವರ್ತುಲದಲ್ಲಿ ಸಿಕ್ಕಿ ಬಹುಶಃ ಅವತ್ತಿನ ದಿವಸ ಕಾಂಗ್ರೆಸ್ ವರಿಷ್ಠ ಮಂಡಳಿ ತೆರೆದ ಹೃದಯದಿಂದ, ಯಾವ ಇಂದಿರಾ ಗಾಂಧಿಯವರನ್ನು ಕರೆದುಕೊಂಡು ಬಂದು, ಒಂದು ರಾಜಕೀಯ ಪುನರ್ಜನ್ಮವನ್ನು ಕೊಟ್ಟಂತಹ ಒಬ್ಬ ಮಹಾತ್ಮನನ್ನು, ಈ ಭಾಗದಲ್ಲಿ ಆ ಪಕ್ಷವನ್ನು ಕಟ್ಟಿದವರನ್ನು ಸ್ವಲ್ಪ ತೆರೆದ ಹೃದಯದಿಂದ ನೋಡಿದರೆ, ದೇವರಾಜ ಅರಸುರಂತಹ ಒಬ್ಬ ಐತಿಹಾಸಿಕ ಪುರುಷ ಕರ್ನಾಟಕದಲ್ಲಿ ಬಹುದೊಡ್ಡ ಕ್ರಾಂತಿಯನ್ನು ಮಾಡಲು ಅವಕಾಶವಾಯಿತು. ನಾನು ಇನ್ನು ಒಂದೇ ಒಂದು ಮಾತನ್ನು ಹೇಳುತ್ತೇನೆ. ದೇವರಾಜ ಅರಸುರವರು ಮೈಸೂರು ಜಿಲ್ಲೆಯವರು. ಮೈಸೂರಿನಲ್ಲಿ ಯಾರ ಯಾರದ್ದೋ ಪ್ರತಿಮೆ ಇದೆ. ಶ್ರೀ ಬಿ.ಕೆ.ಹರಿಪ್ರಸಾದ್ ರವರನ್ನೂ ಸಹ ನಾನು ಕೇಳಿದ್ದೇನೆ. ಅವರು ಇವರ ಬಗ್ಗೆ ಪ್ರಶ್ನೆಯನ್ನು ಎತ್ತಿದರು. ಆದರೆ, ಅವರ ಪ್ರತಿಮೆ ಆಗಲಿಲ್ಲ. ನಾನು ದೇವರಾಜ ಅರಸು ಅಭಿವೃದ್ಧಿ ನಿಗಮದ ಅಧ್ಯಕ್ಷನಿದ್ದಾಗ, ಮಾನ್ಯ ಶ್ರೀ ಬಿ.ಎಸ್.ಯಡಿಯೂರಪ್ಪನವರ ಹತ್ತಿರ ಹೋಗಿದ್ದೆ. ಅಂದರೆ, ಶ್ರೀ ಬಿ.ಎಸ್.ಯಡಿಯೂರಪ್ಪನಂತಹವರಿಗೆ ಮಾತೃ ಹೃದಯ ಇದ್ದಿದ್ದು; ರಾಜಕೀಯ ಸಣ್ಣತನ ಇಲ್ಲದೇ ಇರುವುದಕ್ಕೆ. ಆ ಕ್ಷಣದಲ್ಲಿ ಬರೆದರು. ಆ ದಾಖಲೆಯನ್ನು ಶ್ರೀ ಬಿ.ಕೆ.ಹರಿಪ್ರಸಾದ್ ರವರಿಗೆ ಕಳುಹಿಸಿಕೊಟ್ಟೆನು. 92 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿ, ಮೈಸೂರು ಜಿಲ್ಲಾಧಿಕಾರಿಯ ಕಛೇರಿಯ ಮುಂದೆ ನೂತನ ಆಳೆತ್ತರದ ಒಂದು ಪ್ರತಿಮೆಯಾಗಬೇಕೆಂದು ಹೇಳಿದರು. ಆದರೆ ಈ ಸರ್ಕಾರ ಅಧಿಕಾರಕ್ಕೆ ಬಂದಾಗ, ಅದು ಜಾರಿಯಾಗಲಿಲ್ಲ. ಕೊನೆಗೆ ನಾವು ಈ ಕುರಿತಾಗಿ ಧರಣಿಯನ್ನು ಮಾಡಬೇಕಾಯಿತು. ಆದರೆ, ಮಾತೃ ಹೃದಯ, ಔದಾರ್ಯಗಳಿರಬೇಕು. ಬಹುಶಃ ದೇವರಾಜ ಅರಸರು ಈ ರಾಜ್ಯ ಕಂಡಂತಹ ಶಾಶ್ವತವಾದ ನಡೆದಾಡುವ ಸುಧಾರಣೆಯ ಮಹಾರತ್ನ ಎಂದು ಹೇಳಲಿಕ್ಕೆ ಬಯಸುತ್ತೇನೆ.

ಇನ್ನೊಂದು ಘಟನೆಯ ಬಗ್ಗೆ ಹೇಳಬಯಸುತ್ತೇನೆ. ಅವರನ್ನು ಲಂಚ ತಿಂದರು ಮತ್ತೊಂದು ತಿಂದರು ಎಂಬ ಬಗ್ಗೆ ಬಹಳ ಅಪಪ್ರಚಾರ ಮಾಡಿದ್ದಾರೆ. ಏಕೆಂದರೆ, ಜಾತಿ ಇಲ್ಲದೇ ಇರುವವರ

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೆ, ದೇವರಾಜು ಅರಸು ರವರ ಪ್ರತಿಮೆಯನ್ನು ಮೈಸೂರು ನಗರದಲ್ಲಿ ಸ್ಥಾಪನೆ ಮಾಡಬೇಕೆಂದು ಹೋರಾಟ ಮಾಡಿದರು. ಇವರು ಬೇರೆ ಪಕ್ಷದಲ್ಲಿದ್ದರೂ ಸಹ ನನಗೆ ಚೀಟಿಯನ್ನು ಬರೆದು, ನೀವು ಈ ಬಗ್ಗೆ ಸ್ವಲ್ಪ ಮಾತನಾಡಿ, ಎಂದು ಹೇಳಿದರು. ದೇವರಾಜ ಅರಸು ರವರ ಪ್ರತಿಮೆಯನ್ನು ನಿಲ್ಲಿಸಿದ್ದಕ್ಕೋಸ್ಕರ ಅವರಿಗೆ ಐದು ನಿಮಿಷಗಳ ಹೆಚ್ಚಿನ ಕಾಲಾವಕಾಶವನ್ನು ಕೊಡಿ; ಪರವಾಗಿಲ್ಲ.

**ಸಭಾಪತಿಯವರು:-** ಇವರು ಈಗಾಗಲೇ ಮಾತನಾಡಿದ್ದಾರೆ. ಇವರು ಮೊದಲ ಬಾರಿಗೆ ಮಾತನಾಡುತ್ತಿರುವುದರಿಂದ ನಾನು ಇವರಿಗೆ ಹೆಚ್ಚಿನ ಕಾಲಾವಕಾಶವನ್ನು ನೀಡಿದ್ದೇನೆ. ಇಲ್ಲವೆಂದರೆ, ನಾನು ಆವಾಗಲೇ ಬೆಲ್ ಮಾಡುತ್ತಿದ್ದೆ. ಇನ್ನು ಎರಡು ನಿಮಿಷದಲ್ಲಿ ಮುಗಿಸಿ.

**ಶ್ರೀ ರಘು ಆರ್:-** ಮಾನ್ಯ ಸಭಾಪತಿಯವರೆ, ಧನ್ಯವಾದಗಳು. ಕೊನೆಯ ಒಂದು ಘಟನೆಯ ಬಗ್ಗೆ ಹೇಳಬಯಸುತ್ತೇನೆ. ಅವರಿಗೆ ಎಷ್ಟು ಆಸ್ತಿ ಇತ್ತು, ಅವರು ಇದ್ದ ಮನೆ ಏನು ಆಯಿತು ಇವುಗಳೆಲ್ಲದರ ಬಗ್ಗೆ ಗೊತ್ತಿದೆ. ಈ ಸಂದರ್ಭದಲ್ಲಿ ಸರ್ಕಾರಕ್ಕೆ ಹೇಳಬಯಸುವುದೇನೆಂದರೆ, ದೇವರಾಜ ಅರಸು ರವರು ಒಂದು ವ್ಯಕ್ತಿ ಅಲ್ಲ; ಒಂದು ಶಕ್ತಿ, ಒಂದು ಸುಧಾರಣೆ ಆಗಿದ್ದರು. ಇವತ್ತಿನ ದಿವಸ ನಾವು ಬಸವಣ್ಣನವರನ್ನು, ನಾಲ್ವಡಿ ಕೃಷ್ಣರಾಜ ಒಡೆಯರ್ ರವರುಗಳು ಕೊಟ್ಟಂತಹ ಕೊಡುಗೆಗಳನ್ನು ನೆನಪಿಸಿಕೊಳ್ಳುತ್ತೇವೆ.

ಇವತ್ತಿನ ದಿವಸ ವಿಧಾನಸೌಧದಲ್ಲಿ ಮಾಡಿರುವ Photo Exhibition ಅದನ್ನು ಅಧಿವೇಶನ ನಡೆಯುವವರೆಗೆ ಸ್ವಲ್ಪ ಅವಧಿಯವರೆಗೆ ವಿಸ್ತರಿಸಿದರೆ, ಇಲ್ಲಿಗೆ ಬರುವ ವಿದ್ಯಾರ್ಥಿಗಳಿಗೆಲ್ಲಾ ಅದನ್ನು ನೋಡುವುದಕ್ಕಾಗುತ್ತದೆ. ಈ ಬಗ್ಗೆ ತಾವು ವಿಧಾನಸಭೆಯ ಸಭಾಧ್ಯಕ್ಷರೊಂದಿಗೆ ಹೇಳಿ ಮಾಡಿಸಬೇಕು.

ಕೊನೆಯ ಒಂದು ಘಟನೆಯ ಬಗ್ಗೆ ಹೇಳುತ್ತೇನೆ. ಅವರು ಕಾಂಗ್ರೆಸ್ ಪಕ್ಷವನ್ನು ಬಿಟ್ಟಿರುತ್ತಾರೆ. ಶ್ರೀ ಚರಣ್‌ಸಿಂಗ್ ರವರನ್ನು ನೋಡಲಿಕ್ಕೆ ಹೋಗಬೇಕಾಗಿರುತ್ತದೆ. ಮನೆಯಿಂದ ಹೊರಟು, ಕಾರಿನಲ್ಲಿ ಕುಳಿತುಕೊಳ್ಳುತ್ತಾರೆ. ಆಗ ಅವರ ಆಪ್ತ ಸಹಾಯಕರು ಬಂದು, ಬುದ್ಧಿ ಒಂದೆರೆಡು ನಿಮಿಷ ಒಳಗೆ ಬನ್ನಿ ಎಂದು ಅವರನ್ನು ಕರೆಯುತ್ತಾರೆ. ಶ್ರೀ ಡಿ.ದೇವರಾಜ ಅರಸು ರವರನ್ನು ಲಂಚಕೋರ, ಅವರ ಹತ್ತಿರ ಲಂಚ ಇತ್ತು ಎಂದೆಲ್ಲಾ ಹೇಳುತ್ತಾರೆ. ಅದು ಸಾಂದರ್ಭಿಕವಾಗಿ ಏನಾದರೂ ಇರಬಹುದು. ಆದರೆ, ಅವರು ಯಾವತ್ತೂ ಲಂಚಕೋರ ಆಗಿರಲಿಲ್ಲ. ಲಂಚವನ್ನು ಮುಟ್ಟುತ್ತಿರಲಿಲ್ಲ ಎನ್ನುವುದಕ್ಕೆ ಈ ಘಟನೆ ಸಾಕ್ಷಿ. ಅವರು ಒಳಗಡೆ ಹೋದಾಗ, ಅವರ ಪಿ.ಎ. ಹೇಳುತ್ತಾರೆ; ಬುದ್ಧಿ ಫ್ಲೈಟ್ ಟಿಕೆಟ್‌ನ ಬ್ಯಾಲೆನ್ಸ್ ಜಾಸ್ತಿ ಆಗಿ ಬಿಟ್ಟಿದೆ. ಹೀಗಾಗಿ ಫ್ಲೈಟ್ ಟಿಕೆಟ್ ಬುಕ್ ಆಗಿಲ್ಲ ಬುದ್ಧಿ ಎಂದು ಹೇಳುತ್ತಾರೆ. ವಾಪಸ್ಸು ಅವರು ಕಾರಿನಿಂದ ಇಳಿದು, ರೂಮಿಗೆ ಹೋಗಿ ಮಲಗಿಕೊಂಡು ಬಿಡುತ್ತಾರೆ. ಒಂದು ಫ್ಲೈಟ್ ಟಿಕೆಟ್‌ಗೂ ಸಹ ಕಷ್ಟದ ಪರಿಸ್ಥಿತಿಯಲ್ಲಿ ಅವರು ಸಿಕ್ಕಿಹಾಕಿಕೊಳ್ಳುತ್ತಾರೆ ಎಂದರೆ, ಅವರು ಎಷ್ಟು ನೊಂದಿರಬೇಕು. ಅಂದರೆ, ಆರ್ಥಿಕವಾಗಿಯೂ ಕೂಡ ಅವರು ರಾಜಕಾರಣದ ದೂರದೃಷ್ಟಿತ್ವದಿಂದ, ನಾನು ಇನ್ನೊಮ್ಮೆ ಮುಖ್ಯಮಂತ್ರಿಯಾಗಬೇಕು, ನಾನು ಇಷ್ಟು ಕೋಟಿ ರೂಪಾಯಿಗಳನ್ನು ಮಾಡಿಟ್ಟುಕೊಳ್ಳಬೇಕು; ನಾನು ಇಲ್ಲಿ ಆಸ್ತಿಯನ್ನು ಮಾಡಬೇಕು ಎಂದು ಅವರು ಕೆಲಸವನ್ನು ಮಾಡಲಿಲ್ಲ. ಅವರು ಏನಾದರೂ ಸಹಾಯ ಮಾಡಿದ್ದರೆ,

ಯಾರಿಗಾದರೂ ಕೊಟ್ಟಿದ್ದರೆ, ಅದು ಅವರ ಕಷ್ಟ, ಸುಖಗಳಿಗೆ, ಅವರ ದುಃಖ-ದುಮ್ಮಾನಗಳಿಗೆ..., ವಿರೋಧಿ ಕೋಣಂದೂರು ಲಿಂಗಪ್ಪನಂತಹವರು ಕಷ್ಟದಲ್ಲಿರುತ್ತಾರೆ, ಇವರು ದೇವರಾಜ ಅರಸುರವರ ವಿರುದ್ಧ ಧಿಕ್ಕಾರಗಳನ್ನು ಕೂಗುತ್ತಿರುತ್ತಾರೆ ಹಾಗೂ ಅವರ ವಿರುದ್ಧ ಚಳುವಳಿಗಳನ್ನು ಮಾಡುತ್ತಿರುತ್ತಾರೆ. ಅವರು ತುಂಬಾ ಕಷ್ಟದಲ್ಲಿದ್ದಾರೆ ಎಂದು ತಿಳಿದು, ಅವರನ್ನು ಮನೆಗೆ ಕರೆಸಿ, ಅವರಿಗೆ ಆರ್ಥಿಕವಾಗಿ ಸಹಾಯವನ್ನು ಮಾಡುತ್ತಾರೆ. ಇಂತಹ ಒಂದು ಮಾತೃ ಹೃದಯ ಇರುವಂತಹ ದೇವರಾಜ ಅರಸು ರವರು ಬಹುಶಃ ಕರ್ನಾಟಕದಲ್ಲಿ ಹುಟ್ಟಿದ್ದು, ನಮ್ಮ ಸೌಭಾಗ್ಯ. ವರುಣಾ ನಾಲೆಯ ಬಗ್ಗೆ ಅವರು ಈಗಾಗಲೇ ಹೇಳಿದರು. ವರುಣಾ ನಾಲೆಯ ನಿರ್ಮಾಣದ ಸಂದರ್ಭದಲ್ಲಿ ಅವರು ಪಟ್ಟಂತಹ ಕಷ್ಟ, ಅಲ್ಲಿ ನಡೆದಂತಹ ದುರಂತ..., ಇವತ್ತಿನ ದಿವಸ ವರುಣಾ ನಾಲೆಯ ಎರಡೂ ಪಕ್ಕ ಎಲ್ಲಾ ಲೇಔಟ್‌ಗಳಾಗಿವೆ. ತಮಿಳುನಾಡಿನ ರಾಜ್ಯದ ಆಯೋಗದವರು ಏನಾದರೂ ಬಂದು ಇದನ್ನು ನೋಡಿದರೆ, ನಿಮ್ಮ ಕರ್ನಾಟಕಕ್ಕೆ ಏಕೆ ನೀರು ಬೇಕು ಎಂದು ಕೇಳುತ್ತಾರೆ. Atleast, ದೇವರಾಜ ಅರಸುರವರು ವರುಣಾ ನಾಲೆಯನ್ನು ಹರಿಸಿ ಹೋದರು. ಅದನ್ನು ರೈತರಿಗಾಗಿ ಉಳಿಸಬಾರದಿತ್ತೇ? ಅದನ್ನು ಹಸಿರು ವಲಯ ಎಂಬುದಾಗಿ ಸರ್ಕಾರವು ಏನಾದರೂ ಅಧಿಸೂಚನೆಯನ್ನು ಹೊರಡಿಸಬಾರದಾಗಿತ್ತೇ? ಅದರ ಎರಡೂ ಕಡೆ ಸುಮ್ಮನೆ ನೀರು ಹರಿದುಕೊಂಡು ಹೋಗುತ್ತಿದೆ. ಈ ವಿಚಾರದ ಬಗ್ಗೆ ಹೇಳಬೇಕೋ ಅಥವಾ ಬಿಡಬೇಕೋ ಗೊತ್ತಿಲ್ಲ. ಆ ವರುಣಾ ನಾಲೆಯನ್ನು ತರುವುದಕ್ಕೆ ಅವರು ಎಷ್ಟು ನೋವು, ಅವಮಾನ ಹಾಗೂ ದೌರ್ಜನ್ಯಗಳನ್ನು ಅನುಭವಿಸುತ್ತಾರೆ ಎಂದರೆ, ಚಿರಜೀವಿ ಸಿಂಗ್ ಎನ್ನುವವರು ಅವತ್ತಿನ ದಿವಸ ಮಂಡ್ಯ ಜಿಲ್ಲೆಯ ಜಿಲ್ಲಾಧಿಕಾರಿಗಳಾಗಿರುತ್ತಾರೆ. ಇವರು ಅವರ ಗಡ್ಡ ಕಿತ್ತು ಹಾಕಿ, ಅವರಿಗೆ ಕೊಡಬಾರದ ತೊಂದರೆಯನ್ನು ಕೊಡುತ್ತಾರೆ. ಇವುಗಳೆಲ್ಲವನ್ನೂ ಅವರು ಮೆಟ್ಟಿ ಅವರು ಸಾಧನೆಯನ್ನು ಮಾಡುತ್ತಾರೆ. ಇವರು ಯುವಕರಿಗೆ ಆದ್ಯತೆಯನ್ನು ಕೊಟ್ಟಿರುತ್ತಾರೆ.

ಮತ್ತೊಂದು ಜೈಲಿನ ಪ್ರಸಂಗವನ್ನು ನಾನು ಇಲ್ಲಿ ಉಲ್ಲೇಖಿಸಬಯಸುತ್ತೇನೆ. ಜೈಲಿನ ಘಟನೆಯ ಬಗ್ಗೆ ಹೇಳುತ್ತೇನೆ. ಬ್ರಿಗೇಡಿಯರ್ ಮಲ್ಲಪ್ಪ ಎನ್ನುವವರು ಅವತ್ತಿನ ದಿವಸ ಜೈಲಿನ ಡಿ.ಜಿ.ಪಿ. ಆಗಿದ್ದರು. ಇವರು ದೇವರಾಜ ಅರಸುರವರನ್ನು ಒಂದು ಸಿನೆಮಾಗೆ ಕರೆದುಕೊಂಡು ಹೋಗುತ್ತಾರೆ. ಆ ಸಿನೆಮಾದಲ್ಲಿ ಜೈಲಿನ ಸುಧಾರಣೆಯ ಬಗ್ಗೆ ತಿಳಿಸಿರುತ್ತಾರೆ. ದೇವರಾಜ ಅರಸು ರವರು ತಾವು ನಿಂತಕಡೆ, ಕೂತಕಡೆ ಒಂದೊಂದನ್ನೂ ನೋಡುತ್ತಿದ್ದರು. ಈ ಸಂಬಂಧ ನಾನು ಎರಡು ಘಟನೆಗಳನ್ನು ಇಲ್ಲಿ ತಿಳಿಸುತ್ತೇನೆ. ಆಗ ಜೈಲಿನೊಳಗೆ ಕರೆದುಕೊಂಡು ಹೋಗಿ, ಒಳಗೆ ಹಾಕಿದರೆ ಮುಗಿದ ಹೋಯಿತು. ಅವರ ಆ ಸಿನೆಮಾ ನೋಡಿದ ಮೇಲೆ..., ಇವತ್ತಿನ ದಿವಸ ನಾವು ಅಲ್ಲಿ ತರಕಾರಿ ಬೆಳೆಯುವುದನ್ನು ನೋಡುತ್ತೇವೆ. ಅಪರಾಧಿಗಳು ಅಥವಾ ಖೈದಿಗಳಲ್ಲಿ ಇರುವ ಕೌಶಲ್ಯತೆಯನ್ನು ನೋಡಿ..., ಅವರುಗಳು ಜೈಲಿನ ನಾಲ್ಕು ಗೋಡೆಗಳ ಮಧ್ಯೆ ಇದ್ದು, ಮಾನಸಿಕವಾಗಿ ಕುಗ್ಗಿ ಹೋಗುವ ಪರಿಸ್ಥಿತಿಯಲ್ಲಿದ್ದ ಜೈಲಿನಲ್ಲಿರುವವರನ್ನೂ ಕೂಡ ಒಂದು ಮಾನವ ಸಂಪನ್ಮೂಲವನ್ನಾಗಿ ಮಾಡಿದರು. ಇದು ಹೇಗೆ ಎಂದರೆ, ಶ್ರೀ ಕೆಂಗಲ್ ಹನುಮಂತಯ್ಯ ರವರು ಈ ವಿಧಾನಸೌಧವನ್ನು ಕಟ್ಟುವುದಕ್ಕಾಗಿ ಖೈದಿಗಳನ್ನು

ಬಳಸಿಕೊಂಡರೋ, ಹಾಗೆಯೇ, ಜೈಲಿನಲ್ಲಿಯೇ ಒಂದು ಉತ್ಪನ್ನ ಕ್ಷೇತ್ರವನ್ನು ಮಾಡಿದ, ಅಲ್ಲಿ ಸುಧಾರಣೆ ತಂದ ಕೀರ್ತಿ ದೇವರಾಜ ಅರಸುರವರಿಗೆ ಸೇರುತ್ತದೆ.

ನಾವು ಚಿಕ್ಕವರಾಗಿದ್ದಾಗ, ಸೊಸೈಟಿಯಿಂದ ಸೌದೆಯನ್ನು ಕೊಡುತ್ತಿದ್ದರು. ನಾವು ರಾತ್ರಿ ಹೊತ್ತಿನಲ್ಲಿ ಹೋಗಿ, ಅಲ್ಲಿ ಮಲಗಿ ಆ ಸೌದೆಯನ್ನು ತರುತ್ತಿದ್ದೆವು. ಇದು ನಮಗೆ ಇನ್ನೂ ನೆನಪು ಇದೆ. ಇದರಿಂದ ಕಾಡು ನಾಶವಾಗುತ್ತಿತ್ತು. ನಾವು ನಿನ್ನೆಯಷ್ಟೇ ಕಾಡಿನ ಬಗ್ಗೆ ಚಿಂತನೆಯನ್ನು ಮಾಡಿದ್ದೇವೆ. ಯಲ್ಲಪ್ಪ ಮತ್ತು ಲಕ್ಷ್ಮಣ ಎನ್ನುವಂತಹ ಅಧಿಕಾರಿಗಳು ಇವರನ್ನು ನಾಗರಹೊಳೆಗೆ ಒಂದು ದಿನ ಕರೆದುಕೊಂಡು ಹೋಗಿ, ನೋಡಿ, ಈ ರೀತಿಯಾಗಿ ಕಾಡು ನಾಶವಾಗಿ ಹೋಗಿದೆ. ಕಾಡು ಮರದ ಹೆಸರಿನಲ್ಲಿ ಗಂಧ, rosewood and teakwood ಮರಗಳನ್ನು ಕಡೆಯುತ್ತಾರೆ. ಇದರಿಂದಾಗಿ ಇಡೀ ಕಾಡು ನಾಶವಾಗುತ್ತಿದ್ದು, ಇದನ್ನು ನಿಲ್ಲಿಸಬೇಕು ಬುದ್ಧಿ ಎಂದು ಹೇಳುತ್ತಾರೆ. ಅಯ್ಯಯ್ಯೋ ಬಡವರು ಸದನದಲ್ಲಿ ಉತ್ತರ ಕೊಡಕ್ಕಾಗುತ್ತೇನಪ್ಪಾ! ಎಂದು ಹೇಳಿದರು. ಆದರೆ, ಅವರನ್ನು ಕಾಡಿಗೆ ಕರೆದುಕೊಂಡು ಹೋಗಿ ತೋರಿಸುತ್ತಾರೆ. ಬೆಳಗ್ಗಿನ ಜಾವದ 5:00 ಗಂಟೆಯ ಸಮಯದಲ್ಲಿ ಈ ವೇಸ್ಟೇಜ್ ಕಾಡು ಮರಗಳನ್ನು ಕಡಿಯುವ ಜಾಗದಲ್ಲಿ ಶ್ರೀಗಂಧ, rosewood ಇತ್ಯಾದಿ ಮರಗಳನ್ನು ಕಡಿಯುತ್ತಿರುತ್ತಾರೆ. ಇದಾಗಿ ಮಾರನೇಯ ದಿನವೇ ಅವರು ಬಂದು..., ಇವತ್ತಿನ ದಿವಸ ವೃಕ್ಷ ಸಂರಕ್ಷಣಾ ಕಾಯ್ದೆ ಎನ್ನುವುದು ಏನಿದೆ, ಇದನ್ನು ಜಾರಿಗೊಳಿಸಿ, ಕಾಡನ್ನು ಉಳಿಸಿದ, ಪ್ರಕೃತಿಯನ್ನು ಬೆಳೆಸಿದ ಹಾಗೂ ಇವತ್ತಿಗೂ ಗಾಳಿಯಾಡುವುದಕ್ಕೆ ಕಾರಣರಾದವರು ದೇವರಾಜ ಅರಸು ರವರು ಆಗಿದ್ದಾರೆ. ಇವರ ಬಗ್ಗೆ ಮಾತನಾಡಲು ಸಿದ್ಧತೆ ಮಾಡಿಕೊಂಡು ಬಂದರೆ, ಎರಡ್ಮೂರು ಗಂಟೆಗಳಾಗುತ್ತವೆ. ಇಲ್ಲಿಯವರೆಗೆ ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ವಂದನೆಗಳು. ಮತ್ತೊಂದು ತಮ್ಮಲ್ಲಿ ಹೃದಯಪೂರ್ವಕವಾದ ಮನವಿ ಮಾಡಿಕೊಳ್ಳುವುದು ಏನೆಂದರೆ, ಈಗ ಸದನದಲ್ಲಿ ಎಲ್ಲರೂ ಇರುವುದರಿಂದ, ದೇವರಾಜ ಅರಸರಿಗೆ ಅಂದರೆ, ಯಾರಿಗೆ ಜಾತಿ ಬೆನ್ನೆಲುಬು ಇರುವುದಿಲ್ಲವೋ, ಅವರು ದೊಡ್ಡ ಇತಿಹಾಸ ಮಾಡಿದರೂ ಚಿಕ್ಕದಾಗಿ ನೆನಪಿಸುತ್ತೇವೆ. ಅವರು ಮಾಡಿರುವ ದೊಡ್ಡ ಇತಿಹಾಸವನ್ನು ಸರ್ಕಾರಕ್ಕೆ ಒತ್ತಾಯಿಸುವುದೇನೆಂದರೆ, ದಯಮಾಡಿ ಸರ್ಕಾರವು ಶಾಶ್ವತವಾದ ಅವರಿಗೆ ಒಂದು ಮ್ಯೂಸಿಯಂ ಅನ್ನು ಹಾಗೂ ಅವರ ಹೆಸರಿನಲ್ಲಿ ಒಂದು ರಾಜಕೀಯ ಅರಿವು ಮೂಡಿಸುವ ಒಂದು ತರಬೇತಿಯ ಕೇಂದ್ರವನ್ನು ಅಥವಾ ಒಂದು ದೊಡ್ಡ ಮೂಸಿಯಂ ಅನ್ನು ಮಾಡಬೇಕೆಂದು ಕೋರುತ್ತೇನೆ. ಒಂದಿಷ್ಟು ಕಾನೂನು, ರಾಜಕೀಯ ವಿದ್ಯಾರ್ಥಿಗಳು ಇದನ್ನು ನೋಡುವ ಅವಕಾಶವಾಗಲಿ. ಇವರ ಹೆಸರು ಶಾಶ್ವತವಾಗಿ ಉಳಿಯಲಿ. ಅವರ ಸ್ಮರಣೆಯನ್ನು ಮಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮತ್ತೊಮ್ಮೆ ತಮಗೆ ಧನ್ಯವಾದಗಳನ್ನು ಸಲ್ಲಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಮುಂದು)

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಗಳೇ, ಈ ಒಂದು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೂ ಮತ್ತು ವಿರೋಧ ಪಕ್ಷದ ಮುಖಂಡರಿಗೂ ಸಹ ಧನ್ಯವಾದಗಳನ್ನು ಹೇಳುತ್ತೇನೆ. ಏಕೆಂದರೆ, ಏಕೋ ಏನೋ ನಮ್ಮ ಮಾನ್ಯ ಮಾಜಿ ಸಭಾಪತಿಯವರು ಕೂಡ ಇದಕ್ಕೆ ಸಾಕ್ಷಿ, ಮಾನ್ಯ ಡಿ. ದೇವರಾಜ ಅರಸ್ ಅವರ ರಾಜಕೀಯ ವಿಚಾರ ಮಾತನಾಡುವಾಗ ಸುಮ್ಮನೆ ಕುಳಿತಿದ್ದಾರೆ. ಮಾನ್ಯ ಡಿ. ದೇವರಾಜ ಅರಸ್ ರವರು 1969ನೇ ಇಸವಿಯಲ್ಲಿ ಕಾಂಗ್ರೆಸ್ ಪಕ್ಷ ಇಬ್ಭಾಗವಾದ ನಂತರ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದರು. ಅಧ್ಯಕ್ಷರಾದ ನಂತರ 1970ನೇ ಇಸವಿಯಲ್ಲಿ ನಾವೆಲ್ಲರೂ ಸಹ ಅಂದರೆ, ಶ್ರೀ ರಘುಪತಿ, ಶ್ರೀ ರಮೇಶ್ ಕುಮಾರ್, ಶ್ರೀ ಗಂಗರಾಜು ಇವರೆಲ್ಲರೂ ನಮ್ಮ ಪಕ್ಷದ ವಿದ್ಯಾರ್ಥಿ ಸಂಘಟನೆಯಲ್ಲಿ ನಾಯಕರಾಗಿದ್ದರು. "Expo-70" ಚಳುವಳಿಯಾಯಿತು. ಚಳುವಳಿಯಲ್ಲಿ ಆಗ ಪ್ರತಿ ವರ್ಷ "Come September" ಎಂದು movie ಇತ್ತು. ಅದರ ಹಾಡುಗಳನ್ನು ಕಾಲೇಜು ವಾರ್ಷಿಕೋತ್ಸವಕ್ಕೆ ಬಳಸಿಕೊಳ್ಳುತ್ತಿದ್ದರು. ಸೆಪ್ಟೆಂಬರ್ ಬಂದರೆ ವಿದ್ಯಾರ್ಥಿಗಳ ಒಂದು ಮುಷ್ಕರ, ಒಂದು ಚಳುವಳಿ ಆಗಲೇಬೇಕು. ಒಂದೆರಡು ಕಲ್ಲಂತೂ ಬಸ್ ಗೆ ಬಿದ್ದೇ ಬಿದ್ದಿರುತ್ತಿದ್ದವು. ಆಗ ನಮ್ಮೆಲ್ಲರನ್ನು ಸ್ಟೇಷನ್ ತಗೊಂಡು ಹೋದಂತ ಸಂದರ್ಭದಲ್ಲಿ ಶ್ರೀಮಾನ್ ಡಿ. ದೇವರಾಜ ಅರಸ್ ಅಧ್ಯಕ್ಷರಿದ್ದುದರಿಂದ ಅವರು ಸ್ವತಃ ಬಂದು ನಿಂತು ನಮಗೆಲ್ಲ bail ಕೊಟ್ಟು ಹೊರಗಡೆ ಕರೆದುಕೊಂಡು ಬರುತ್ತಿದ್ದರು.

ಶ್ರೀಮಾನ್ ಡಿ. ದೇವರಾಜ ಅರಸ್ ಅವರು ಅಧ್ಯಕ್ಷರಾಗಿದ್ದಾಗ ಶ್ರೀಮತಿ ಇಂದಿರಾಗಾಂಧಿ ಯವರು ಅವರಿಗೆ ಪಕ್ಷ ಕಟ್ಟೋಕೆ ಬಹಳ ಕಷ್ಟ ಆಗುತ್ತೆ ಅಂತ ಹೇಳಿ ಸೆಂಟ್ರಲ್ ಸಿಲ್ಕ್ ಬೋರ್ಡ್ನ ಚೇರ್ಮನ್ ಮಾಡಿದ್ದರು. ಮಲ್ಲೇಶ್ವರಂ 11ನೇ ಕ್ರಾಸ್ನ ಮಾರ್ಗೋಸಾ ರೋಡ್ ನಲ್ಲಿ ಅವರ ಮನೆ ಇತ್ತು. ಆಗ ಶ್ರೀಮಾನ್ ಡಿ. ದೇವರಾಜ ಅರಸ್ ರವರ ಪತ್ನಿ,ಯವರನ್ನು *'ಚಿಕ್ಕಮ್ಮಣ್ಣಿ' ಎಂದು* ನಾವು ಕರೆಯುತ್ತಾ ಇದ್ದೆವು. ಅವರು ಹಸು ಸಾಕಿದ್ದರು.

ಆ ಚಿಕ್ಕಮ್ಮಣ್ಣಿಯವರು. ಹಸು ಸಾಕಿದ್ದರಿಂದಲೇ, ಅವರ ಮನೆಯ ಜೀವನ ನಡೆಯುತ್ತಿತ್ತು. ಅವರ ಹಳ್ಳಿಯಲ್ಲಿ ಅವರಿಗೆ ವ್ಯವಸಾಯ ಇದ್ದುದರಿಂದ, ಅಲ್ಲಿಂದ ಭತ್ತ, ಬೇಳೆ ಇವೆಲ್ಲವು ಬರುತ್ತಿತ್ತು. ಹಸು ಸಾಕಿದ್ದರಿಂದಲೂ ಸಹ ಸ್ವಲ್ಪಮಟ್ಟಿಗೆ ಜೀವನ ನಡೆಯುತ್ತಿತ್ತು, ಹೀಗಾಗಿ, ಆಗಿನಿಂದ ನಾವು ನೋಡಿರುವುದನ್ನು ಹೇಳುತ್ತಿದ್ದು, ಶ್ರೀಮಾನ್ ಡಿ. ದೇವರಾಜ ಅರಸ್ ರವರು ಅಧ್ಯಕ್ಷರಾದಾಗ ಶ್ರೀ ಆರ್. ಗುಂಡೂರಾವ್ 'Youth Congress' ಅಧ್ಯಕ್ಷರಾದರು. ನಾವೆಲ್ಲರೂ Block Level ನಲ್ಲಿ ಇದ್ದವರು. ಶ್ರೀಮಾನ್ ಡಿ. ದೇವರಾಜ ಅರಸ್ ರವರು 72ನೇ ಅಸೆಂಬ್ಲಿ ಚುನಾವಣೆಯಲ್ಲಿ ಚುನಾವಣೆಯಲ್ಲಿ ಸ್ಪರ್ಧೆ ಮಾಡಲಿಲ್ಲ ಅವರು. ನಾನು ಚುನಾವಣೆ ಗೆಲ್ಲಿಸಬೇಕು ಎಂದು ಹೇಳಿ ಅವರು ಇಡೀ ಕರ್ನಾಟಕ ರಾಜ್ಯಾದ್ಯಂತ ಓಡಾಡಿ, ಮತ್ತು ಶ್ರೀಮತಿ ಇಂದಿರಾಗಾಂಧಿಯವರನ್ನು ಕರೆದುಕೊಂಡು ಓಡಾಡಿದ್ದರಿಂದ ಚುನಾವಣೆಯಲ್ಲಿ ಗೆಲ್ಲಲಾಯಿತು. ಗೆದ್ದ ಮೇಲೆ ಕೆಲವರು ಷಡ್ಯಂತ್ರ ಮಾಡಿದರು 'ಇದು ಅವರಿಂದ ಗೆದ್ದಿಲ್ಲ, ನಮ್ಮಿಂದ ಗೆದ್ದಿದೆ ಅಂತ ಹೇಳೋದು ನಡೆಯುವುದೇ ಆಗಿತ್ತು. ಆಗ ಎಲ್ಲಾ 'Youth

Congress' ನವರೆಲ್ಲ ಸೇರಿ ಶ್ರೀಮಾನ್ ಡಿ. ದೇವರಾಜ ಅರಸ್ ಅಂತ ಹೇಳಿ ದೊಡ್ಡ ಗಲಾಟೆ ಮಾಡಿ ಶ್ರೀಮಾನ್ ಡಿ. ದೇವರಾಜ ಅರಸ್ ರವರು ಮುಖ್ಯಮಂತ್ರಿಗಳಾದರು. ಅವರು ನಾವು ಮಾಡೋ ಚೇಷ್ಟೆ, ಗಲಾಟೆಗೆ ನಮ್ಮನ್ನು 'Youth Congress' ಎಂದು ಕರೀತಾನೇ ಇರಲಿಲ್ಲ. ನಾವು ಹೋದರೆ "ಬನ್ರಪ್ಪ ಕಪಿಗಳು ಬಂದ್ರಲ್ಲ ನೀವೆಲ್ಲಾ, ನೀವೆಲ್ಲಾ ಕಪಿಸೇನೆಯವರು, ಬಹಳ ಚೇಷ್ಟೆ ಮಾಡ್ತೀರಿ, ಜಾಸ್ತಿ ಮಾಡೋಕೆ ಹೋಗ್ಬೇಡಿ ಮಾಡಿದ್ರೆ ನಾನು ಸ್ಟೇಷನ್‌ಗೆಲ್ಲಾ ಈಗ ಬರುವುದಕ್ಕೆ ಆಗುವುದಿಲ್ಲ"ವೆಂದು ಹೇಳುತ್ತಿದ್ದರು. ಶ್ರೀಮಾನ್ ಡಿ. ದೇವರಾಜ ಅರಸ್ ರವರು ಕೆಲವು ವಿಚಾರಗಳ ಬಗ್ಗೆ ಮತ್ತು ಸಾಮಾಜಿಕ ನ್ಯಾಯ ಮತ್ತು ಬಡವರ ಪರ ಅವರು ತೀರ್ಮಾನ ತಗೆದುಕೊಂಡ ಮೇಲೆ 1977ನೇ ಇಸವಿಯಲ್ಲಿ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಹೀನಾಯವಾಗಿ ಸೋತಿತ್ತು, ಕೇಂದ್ರದಲ್ಲಿ ಜನತಾದಳ ಇತ್ತು. ಆಗ ಚುನಾವಣೆಯಲ್ಲಿ ಬಸವನಗುಡಿನಲ್ಲಿ ಭಾಷಣ ಮಾಡುವುದಕ್ಕೆ ಶ್ರೀ ಜೈಲ್ ಸಿಂಗ್ ರವರನ್ನು ಕರೆದುಕೊಂಡು ಹೋಗಿದ್ದರು. ಆಗ ಸರ್ಕಾರ ಹೋಗಿತ್ತು. ಅಂದರೆ ಪೋಲೀಸರು ಯಾರು ಹಿಂದೆ ಮುಂದೆ ಇಲ್ಲ. ನಾವೇ ಅವರ ಹಿಂದೆ ಮುಂದೆ ಇದ್ದೆವು. ನಾವೆಲ್ಲರೂ ಆರು ಆರು ಅಡಿ ಉದ್ದವಾಗಿ ಬೆಳೆದಿದ್ದೆವು. ಆದರೆ, ಆಗ ಇಷ್ಟು ದಪ್ಪ ಇರಲಿಲ್ಲ. ಅಲ್ಲಿ ಏನು ಮಾಡ್ತಾರೋ ನೋಡೋಣ ಅಂತ ಹೇಳಿ ನಾವೆಲ್ಲರೂ ಹಿಂದೆ ಮುಂದೆ ಇದ್ದೆವು. ಅಲ್ಲಿ ಭಾಷಣ ಮಾಡುವಾಗ ಆ ಬಸವನಗುಡಿ ಗೊತ್ತಲ್ಲ ನಮ್ಮ ವಿರುದ್ಧವಾದ ಕ್ಷೇತ್ರ ವಾದ್ದರಿಂದ ಅವರ ಕಡೆಯಿಂದ ನಮಗೆ ಕಲ್ಲು ಬಿತ್ತು ಮತ್ತು ಜೈಲ್ ಸಿಂಗ್ ರವರಿಗೂ ಕಲ್ಲು ಬಿತ್ತು. ಜೈಲ್ ಸಿಂಗ್ ಗೆ ಎದೆ ಮೇಲೆ ಬಿತ್ತು, ಅವರನ್ನು ಸೀದಾ ಅಲ್ಲಿಂದ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ಶ್ರೀಮಾನ್ ದೇವರಾಜ ಅರಸ್ ರವರು ಅಲ್ಲಿಂದ ಕದಲಿಲ್ಲಲ್ಲ. ಆ ಸಚ್ಚಿದಾನಂದ ಸ್ವಾಮಿ ಅಂತ ಹೇಳಿ ಎಲ್ಲರೂ ಇದ್ದಂತಹ ಸಂದರ್ಭದಲ್ಲಿ ಅವರ ಜೊತೆಗೆ 'ನೀವು ಆಸ್ಪತ್ರೆಗೆ ಕರೆದುಕೊಂಡು ಹೋಗಿ' ಎಂದು ಹೇಳಿ, ಒಂದು ಭಾಷಣ ಮಾಡಿದರು ಅವರು. "ನಾನು ಇಲ್ಲಿ ಬರುತ್ತಾ ಇರಲಿಲ್ಲ, ನೀವು ಯಾರು ನನಗೆ ಓಟು ಕೊಡೋದಿಲ್ಲ ಎಂದು ಗೊತ್ತು. ನಾನು ಇಲ್ಲಿ ಏತಕ್ಕೆ ಬಂದೆ ಅಂದ್ರೆ ನಮ್ಮ ಅತಿಥಿ ಜೈಲ್ ಸಿಂಗ್ ಅವರು ಪಂಜಾಬ್ ನಿಂದ ಬಂದಿದ್ದಾರೆ ಪ್ರಚಾರ ಮಾಡಬೇಕು ಮಾಡೋಣ ಅಂತ ಹೇಳಿ ಕರೆದುಕೊಂಡು ಬಂದಿದ್ದೇವೆ. ನಮ್ಮ ಅತಿಥಿಗಳಿಗೂ ನೀವು ಕಲ್ಲು ಹೊಡಿತೀರಾ ಅಂತ ಗೊತ್ತಾಗಲಿಲ್ಲ. ನಾನು ಇಲ್ಲಿ ನಿಂತುಕೊಂಡು ಹೇಳ್ತೀನಿ ನಿಮ್ಮ ಓಟು ಯಾರದ್ದು ನಮಗೆ ಬೇಕಾಗಿಲ್ಲ. ನಿಮ್ಮ ಓಟು ನಮಗೆ ಬೇಕಾಗಿಲ್ಲ, ಇಡ್ಲಿ ದೋಸೆ ಮಸಾಲ್ ದೋಸೆ ತಿನ್ನುವವರಾದ ನಮಗೆ ಓಟು ಬೇಕಾಗಿಲ್ಲಯ್ಯಾ. ನನಗೆ ಓಟು ಕೊಡುವವರು ಅಲ್ಲೆಲ್ಲೋ ಹಾಲು ಮಾರುತ್ತಾ ಇದ್ದಾನೆ, ಅಲ್ಲೆಲ್ಲೋ ಬಟ್ಟೆ ಒಗೆಯುತ್ತಾ ಇದ್ದಾನೆ, ಅಲ್ಲೆಲ್ಲೋ ತರಕಾರಿ ಬೆಳೆಯುತ್ತಾ ಇದ್ದಾನೆ, ಅವನು ನನಗೆ ವೋಟ್ ಕೊಡೋದು ನಿಮ್ಮ ಓಟು ಬೇಕಾಗಿಲ್ಲ, ನಿಮ್ಮ ಓಟು ಬರೋದೂ ಇಲ್ಲ. ನಾನು ಬಂದಿರೋದು ನಿಮಗೆ ಪ್ರಜಾಪ್ರಭುತ್ವದಲ್ಲಿ ಅವಕಾಶ ಇದೆ ನಾನು ಭಾಷಣ ಮಾಡೋಕೆ ಬಂದಿದ್ದೀನಿ ಅದಕ್ಕೋಸ್ಕರ ಬಂದಿದ್ದೇನೇ ವಿನಹ ವೋಟ್ ಕೇಳೋಕೆ ಬಂದಿಲ್ಲ' ಎಂದು ಹೇಳಿ, he was an authority by 1977. ಭೂಸುಧಾರಣೆಗೆ ಅವರೆಲ್ಲರೂ ಭಾಷಣ ಮಾಡಿದಾಗ ಭೂಸುಧಾರಣೆ ಕಾನೂನು, ಜೀತಪದ್ಧತಿ ರದ್ದತಿ, ಮತ್ತೆ pensions, ದೊಡ್ಡ ಕ್ರಾಂತಿಕಾರಿ ಹೆಜ್ಜೆ ಅಂದರೆ, ತಲೆ ಮೇಲೆ ಮಲ ಹೊರುವಂತಹದ್ದನ್ನು ಇಡೀ ದೇಶದಲ್ಲಿ

ಮೊಟ್ಟಮೊದಲನೇ ಬಾರಿಗೆ ಶ್ರೀ ಡಿ. ದೇವರಾಜ ಅರಸ್ ರವರು ಬಸವಲಿಂಗಪ್ಪನವರ ಮೂಲಕ ಅದನ್ನು ಬ್ಯಾನ್ ಮಾಡಿ, ಒಂದು ಅದು ಎಷ್ಟು ಹೀನವಾದ ಕೆಲಸ ಎಂದು ಹೇಳಿದರೆ most uncivilized, barbaric ಎಂದು ಹೇಳಿದ್ರೂ ತಪ್ಪಾಗುವುದಿಲ್ಲ. ಅಂತಹದನ್ನ ನಿಲ್ಲಿಸೋಕೆ ಶ್ರೀ ಡಿ. ದೇವರಾಜ ಅರಸ್ರವರು ದಿಟ್ಟ ಹೆಜ್ಜೆ ತೆಗೆದುಕೊಂಡು ಅದನ್ನು ನಿಲ್ಲಿಸಿದರು. ಇವೆಲ್ಲಾ ಮಾಡಿಕೊಂಡು ಬಂದಮೇಲೆ he was an authority over his programmes. ಆಗ ಅವರು ಹೇಳಿದಾಗ ಜನ "ನೋಡಿ ಬುದ್ಧಿಯವರು ಹೇಳಿದ್ದರಿಂದ ಯಾರು ಉಸಿರಾಡುತ್ತಿಲ್ಲ" ಎಂದು ಹೇಳಿದರು. ಅದೇ ನಾನು ಇನ್ನೊಂದು ಮುಖ್ಯಮಂತ್ರಿ ಬಗ್ಗೆ ಹೆಸರು ಹೇಳೋಕೆ ಹೋಗೋದಿಲ್ಲ, ಅವರು ಸಹ ನಮ್ಮವರೇ ಆಗಿದ್ದಾರೆ. ಅವರು ಅಪ್ಪಿ ತಪ್ಪಿ ಒಂದು ಜೋಶ್‌ನಲ್ಲಿ "ನಿಮ್ಮ ಓಟು ಬೇಡ" ಎಂದು ಹೇಳಿದರು. ಅಗ ಜನ ಏನೆಂದು ಹೇಳಿದರು ಎಂದು ಗೊತ್ತಾ? "ನೋಡಯ್ಯ ಅವನಿಗೆ ಎಷ್ಟು ಅಹಂಕಾರ" ಎಂದು ಹೇಳಿದರು. ಆದರೆ, ಶ್ರೀ ಡಿ. ದೇವರಾಜ ಅರಸ್ ರವರಿಗೂ ಮತ್ತು ಅವರಿಗೂ ವ್ಯತ್ಯಾಸ ಇತ್ತು. ಶ್ರೀಮಾನ್ ಬಸವರಾಜ ಹೊರಟ್ಟಿ ಸಾಹೇಬರು ಮತ್ತು ನಾನು ಅಸೆಂಬ್ಲಿನಲ್ಲಿ ಇರಲಿಲ್ಲ ಅವರು ವಿರೋಧ ಪಕ್ಷದಲ್ಲಿ ಬಂದಾಗ ಯಾರೋ ಒಬ್ಬರು ಮಂತ್ರಿ ಒಂದು ಸಣ್ಣ ವಿಚಾರವನ್ನು ಹೇಳಿಬಿಟ್ಟರು. ಪಕ್ಷಾತೀತವಾಗಿ ಕಾಂಗ್ರೆಸ್ ನವರು, ಜನತಾದಳದವರು ಎಲ್ಲರೂ ಸೇರಿ ಆ ಮಂತ್ರಿಯನ್ನು ಹೀನಾ ಮಾನವಾಗಿ ಬೈದು ಅವನಿಗೆ ಕ್ಷಮಾಪಣೆ ಕೇಳುವವರೆಗೂ ಬಿಡಲಿಲ್ಲ.

ಇದನ್ನು ಶ್ರೀ ಭಾಸ್ಕರ್ ನಾಯ್ಡು ರವರು ಮಾಡಿದರು. ಈ ರೀತಿಯಲ್ಲಿ ಅವರ ಆ ದೊಡ್ಡ ಗುಣಗಳು ಏನು ಇದೆ ನೋಡಿ. ನಮ್ಮ ರಾಜಕೀಯದಲ್ಲಿ ಇರುವುದೇ ಕಷ್ಟ. ಅವರ ಹೆಸರು ಇದೆ ನೋಡಿ ಶಾಶ್ವತವಾಗಿ ಉಳಿಯಬೇಕಾದ್ದು ಇದುವರೆವಿಗೂ ಎಷ್ಟು ಜನ ಮುಖ್ಯಮಂತ್ರಿಗಳು ಇಲ್ಲಿ ಬಂದಿದ್ದಾರೆ. ಇಲ್ಲಿ? ಎಷ್ಟು ಜನ ಮುಖ್ಯಮಂತ್ರಿಗಳನ್ನು ನೆನಪು ಮಾಡಿಕೊಳ್ಳುತ್ತಾರೆ? ಮಾನ್ಯ ಕೆಂಗಲ್ ಹನುಮಂತಯ್ಯರವರನ್ನು ವಿಧಾನಸೌಧ ಕಟ್ಟಿದ್ದಾರೆಂದು ಜನರು ನೆನಪು ಮಾಡಿಕೊಳ್ಳುತ್ತಾರೆ? ಆಮೇಲೆ ಏಕೀಕರಣ ಕರ್ನಾಟಕ ಆಯ್ತು ಎಂದು ಹೇಳಿ ಶ್ರೀಯುತ ನಿಜಲಿಂಗಪ್ಪ ನವರು ಜನರು ನೆನಪು ಮಾಡಿಕೊಳ್ಳುತ್ತಾರೆ. ತದನಂತರ ಜನಕ್ಕೆ ಜ್ಞಾಪಕ ಇರುವುದು ಮಾನ್ಯ ಡಿ. ದೇವರಾಜ ಅರಸ್ ಅವರೇ ಆಗಿರುತ್ತಾರೆ. ಏಕೆಂದರೆ, ಜನರ ಜೀವನವನ್ನು ಬದಲಾವಣೆ ಮಾಡಲಿಕ್ಕೆ ಕಾರ್ಯಕ್ರಮಗಳನ್ನು ತೆಗೆದುಕೊಂಡು ಬಂದರು. ಏಕೆಂದರೆ, ಮಾನ್ಯ ಮಹಾತ್ಮ ಗಾಂಧಿಯವರು ಹೇಳುತ್ತಾ ಇದ್ದರು. ಅದು ಏನೆಂದರೆ, ನೀವೇನೋ ಸರ್ಕಾರದಲ್ಲಿ ಇದ್ದವರು, ಅಧಿಕಾರದಲ್ಲಿ ಇದ್ದವರು, ಏನಾದರೂ ತೀರ್ಮಾನಗಳು ತೆಗೆದುಕೊಳ್ಳುವಾಗ ನೀವು ಒಂದು ಬಡವನ ಸ್ಥಾನದಲ್ಲಿ ನಿಂತುಕೊಂಡು ನೋಡಿ, ಆ ಬಡವನಿಗೆ ನಿಮ್ಮ ತೀರ್ಮಾನದಿಂದ ಏನು ಅನುಕೂಲ ಆಗುತ್ತೆ, ಅವನ ಕಣ್ಣು ಒರೆಸೋಕೆ ಆಗುತ್ತಾ ಅನ್ನೋದು ಇದ್ದರೆ ಮಾತ್ರ ಆ ತೀರ್ಮಾನ ತಗೆದುಕೊಂಡು ಒಳ್ಳೆಯದನ್ನು ಮಾಡಿ' ಅಂತ ಹೇಳಿದ್ದು, ಮಾನ್ಯ ಡಿ. ದೇವರಾಜ ಅರಸ್ ರವರು ಅಂತ ಕೆಲಸ ಮಾಡಿದರು. ನಾನು ಈ ವಿಚಾರವಾಗಿ ಶ್ರೀಯುತ ರಘು ಅವರನ್ನು ಹೊಗಳಿದ್ದೇನೆ, ಅವರ ಕಥೆ

ಏನಾಗುತ್ತದೆ ಎಂದು ಹೇಳಿ ನನಗೆ ಗೊತ್ತಿಲ್ಲ ಆಮೇಲೆ, ಅವರ ಕಡೆಯಿಂದ ನನಗೆ ಬೈಯ್ಯಿಸಬಹುದು. ಅದು ಬೇರೆ ಪ್ರಶ್ನೆ. ಅವರು ಮೈಸೂರಿನಲ್ಲಿ ನಿರಂತರವಾಗಿ ಹೋರಾಟ ಮಾಡಿದರು. ಶ್ರೀಮಾನ್‌ಡಿ, ದೇವರಾಜ ಅರಸ್ ರವರು ಇಷ್ಟು ಮಾಡಿದ್ದಾರೆ, ನೀವು ಕಾಂಗ್ರೆಸ್ ನವರು ಏನು ಒಂದು ಪ್ರತಿಮೆ ಮಾಡೋದಿಲ್ಲ ಅಂತ ಹೇಳಬಹುದು. ನೀವು ನನಗೆ ಎಲ್ಲಾ ವಿವರಗಳನ್ನು ಕೊಡಿ ನಾನು ಬರೆಯುತ್ತೇನೆಂದು ಎಂದು ಹೇಳಿ ಬರೆದು, ಅದು ಏನೋ ಡಿಸಿ ಆಫೀಸ್ ಹತ್ತಿರವೋ ಒತ್ತಡ ಮಾಡಿದಾಗ ಅಲ್ಲಿಯೂ ಮಾಡುವುದಿಲ್ಲ ಎಂದಾಗ "ನಾನು ಹೇಳಿದೆ. ಸರಿಯಾದ ಜಾಗದ ಬಗ್ಗೆ ವಿವರವನ್ನು ಕಳುಹಿಸಿ ನಾನು ಮಾಡುತ್ತೇನೆಂದು ಹೇಳಿ ಇದೇ ಸದನದಲ್ಲಿ ಕೂಡ ಅದನ್ನು ಪ್ರಸ್ತಾಪ ಮಾಡಿ ಅದು ನಿಲ್ಲಿಸಿದ್ದು, ಅದಕ್ಕೋಸ್ಕರ ನಾನು ಶ್ರೀ ರಘು ಅವರಿಗೆ ಸಂಪೂರ್ಣವಾಗಿ ಅಭಿನಂದನೆ ಸಲ್ಲಿಸುತ್ತೇನೆ. ಏಕೆಂದರೆ, ನಾವೆಲ್ಲರೂ ಸಹ ದೇವರಾಜ ಅರಸ್ ರವರ ಫಲಾನುಭವಿಗಳು. ಅಂದರೆ, ನಾವೇನು ಮಂತ್ರಿ, ಎಂಎಲ್‌ಎಗಳು ಬೋರ್ಡ್, ಕಾರ್ಪೋರೇಷನ್ ಅಧ್ಯಕ್ಷರು ಆಗಿರಲಿಲ್ಲ ಕಾಂಗ್ರೆಸ್‌ನಲ್ಲಿ ಇದ್ದುಕೊಂಡು ಬಂದಿದ್ದು ಅಷ್ಟೇ ಫಲಾನುಭವಿಗಳು. ಅವರು ಅಂತಹ ದೊಡ್ಡ ಮನುಷ್ಯರು ಆಗಿದ್ದರು. ಅವರು ಹೇಳಿದಂತೆ ಚಿಕ್ಕಮಗಳೂರಿಗೆ ಶ್ರೀಮತಿ ಇಂದಿರಾಗಾಂಧಿಯವರನ್ನು ಕರೆದುಕೊಂಡು ಬಂದಾಗ. ದೆಹಲಿಯಿಂದ ಅವರಿಗೇನು S.P.G. (Special Protection Group) ಮತ್ತೊಂದು ಏನು ಇರಲಿಲ್ಲ. ಅವರ ಜೊತೆಯಲ್ಲಿ ಒಬ್ಬರು Constable ಇದ್ದರೆ ಅದೇ ಪ್ರಧಾನ ಮಂತ್ರಿಗಳಿಗೆ ಹೆಚ್ಚಿನದಾಗಿತ್ತು. ಆಗ ಶ್ರೀಮಾನ್ ಸಂಜಯಗಾಂಧಿಯವರು ಅವರಿಗೆ 10 ಜನ ಫೈಲ್‌ವಾನ್‌ಗಳನ್ನು ಕಳುಹಿಸಿಕೊಟ್ಟಿದ್ದರು. ಅವರೆಲ್ಲರೂ ಚಿಕ್ಕಮಗಳೂರಿಗೆ ಬಂದಾಗ ಶ್ರೀಮಾನ್ ಡಿ. ದೇವರಾಜ ಅರಸ್ ರವರು ನಮಗೆಲ್ಲಾ "ನೋಡಯ್ಯ ಆ ಫೈಲ್‌ವಾನ್‌ಗಳೆಲ್ಲರೂ ಒಂದು ಹೊತ್ತಿನ ಊಟಕ್ಕೆ ಎರಡು-ಎರಡು ಚಿಕನ್‌ಗಳನ್ನು ತಿನ್ನುತ್ತಾರೆ. ಆದ್ದರಿಂದ, ಅವರುಗಳನ್ನು ನಿನ್ನ ಜೊತೆ ಇಟ್ಟುಕೊಂಡು ಊಟ ಹಾಕು ಎಂದು ಹೇಳುತ್ತಿದ್ದರು. ಇದು ನಮ್ಮ ಕೈಯಲ್ಲಿ ಆಗುವುದಿಲ್ಲವೆಂದು ಹೇಳುತ್ತಿದ್ದರು. ಆಗ ಅಲ್ಲಿ ಆ ಫೈಲ್‌ವಾನ್‌ಗಳೆಲ್ಲರೂ ನಾವು ಚುನಾವಣೆ ಕೆಲಸ ಮಾಡುವಾಗ ನಮಗೆ ಸಹಾಯ ಮಾಡಿದರು. ಅದು ಬೇರೆ ವಿಚಾರ. ಅದರ ಜೊತೆಗೆ ಹಾವನೂರು ಆಯೋಗದ ಬಗ್ಗೆ ಶ್ರೀಯುತ ಕೆ. ಶಿವಕುಮಾರ್ ಮಾತನಾಡಿದ್ದಾರೆ, ಶ್ರೀಯುತ ರಘು.ಆರ್. ರವರು ಸಹ ಮಾತನಾಡಿದ್ದಾರೆ. ಹಾವನೂರ್ ಆಯೋಗ ಮತ್ತು ಮೀಸಲಾತಿ ಎನ್ನುವುದು ಏನಿದೆ, ಅದು ಕರ್ನಾಟಕದಲ್ಲಿ ಒಂದು continuous process ಆಗಿದೆ. ಶ್ರೀಮಾನ್ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು 1918ನೇ ಇಸವಿಯಲ್ಲಿ ಮಿಲ್ಲರ್ ಕಮಿಷನ್ ಮೂಲಕ ಅವಕಾಶ ವಂಚಿತರಿಗೆ ಸಮಾಜದಲ್ಲಿ ಸಮಾನತೆ ತರಬೇಕು, ಆಡಳಿತದಲ್ಲಿ ಎಲ್ಲರಿಗೂ ಸಹ ಅವಕಾಶ ಇರಬೇಕು ಎಂದು ಹೇಳಿ ಮಿಲ್ಲರ್ ಕಮಿಷನ್ ನೇಮಕ ಮಾಡಿ ಆಗ ದುರ್ಬಲ ವರ್ಗದವರಿಗೆ, ಹಿಂದುಳಿದವರಿಗೆ, ಅಲ್ಪಸಂಖ್ಯಾತರಿಗೆ ಮತ್ತು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರಿಗೆ 75% ಮೀಸಲಾತಿ ಇಟ್ಟರು. ಆಗ ಸರ್.ಎಂ.ವಿಶ್ವೇಶ್ವರಯ್ಯ ಅವರು ದಿವಾನರಾಗಿ ಕೆಲಸ ಮಾಡುತ್ತಿರುತ್ತಾರೆ. ಅವರು ಅಲ್ಲಿ ಹೋಗಿ ಏನು ಹೇಳುತ್ತಾರೆಂದರೆ "ಮಹಾಸ್ವಾಮಿಗಳೇ, ನೀವು ಈ ತರ ಎಲ್ಲಾ ಮೀಸಲಾತಿ ಕೊಟ್ಟು ಬಿಟ್ಟರೆ merit ಅಂದರೆ ಪ್ರತಿಭೆಗೆಲ್ಲಾ ಬೆಲೆ ಇರೋದಿಲ್ಲ, ಆಡಳಿತ ಬಹಳ ಕುಸಿದು ಹೋಗುತ್ತದೆ ಎನ್ನುತ್ತಾರೆ. ಆಗ

ಮಹಾರಾಜರು 'ನೋಡಿ ದಿವಾನರೇ, ನನ್ನ ಜನರಿಗೆ ಒಳ್ಳೆಯ ಕೆಲಸ ಏನು ಮಾಡಬೇಕು ಅದನ್ನು ನಾನು ಮಾಡಲೇಬೇಕು. ನೀವು ರಾಜೀನಾಮೆ ಕೊಡುತ್ತೇನೆಂದರೆ ಕೊಟ್ಟು ಹೋಗಿ ಎಂದು ಹೇಳಿ ಆರಾಮವಾಗಿ ಕಳುಹಿಸಿದರು. ಈಗ ಆ ರೀತಿ ಆಗಿದ್ದರೆ, ಗಾಬರಿಯಾಗಿ ಹೋಗಿ ಮಾತನಾಡು ಎಂದು ಹೇಳುತ್ತಿದ್ದರು. ಅಂತಹ ಇತಿಹಾಸ ಕರ್ನಾಟಕದಲ್ಲಿ ಇತ್ತು. ತದನಂತರ *ನಾಗನಗೌಡ* ಕಮಿಷನ್ ಆಯಿತು. 1959-60ರಲ್ಲಿ. ಆ *ನಾಗನಗೌಡ* ನಾಗಣ್ಣ ಕಮಿಷನ್ ನಲ್ಲಿ ಅವರು 69% ಮೀಸಲಾತಿಯನ್ನು ಕೊಟ್ಟರು.

(ಮುಂದು)

**(795) 20.08.2026 04.50 ಎಸ್‌ವಿ-ಎಕೆ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಿ.ಕೆ.ಹರಿಪ್ರಸಾದ್ (ಮುಂದು):-**

ಡಾ: ನಾಗನಗೌಡ ಸಮಿತಿಯಲ್ಲಿ 69% ಕೊಟ್ಟಾಗ ಬಾಲಾಜಿ ಎನ್ನುವವರು 1963ನೇ ಇಸವಿಯಲ್ಲಿ ಸುಪ್ರೀಂ ಕೋರ್ಟ್‌ಗೆ ಹೋಗುತ್ತಾರೆ. ಸುಪ್ರೀಂ ಕೋರ್ಟ್ ಆಗ ಒಂದು ನಿರ್ಣಯವನ್ನು ತೆಗೆದುಕೊಳ್ಳುತ್ತದೆ. ನಮ್ಮಲ್ಲಿ empirical data ಇಲ್ಲ, ಜನಸಂಖ್ಯೆ ಆಧಾರ ಇಲ್ಲ. ಆದ್ದರಿಂದ ಶೇ.50ರ ಮೇಲೆ ಮೀಸಲಾತಿಯನ್ನು ಕೊಡಬಾರದು. ಶೇ.50ರ ಒಳಗೆ ಇಡಿ. ಡೇಟಾ ಬಂದ ಮೇಲೆ ಯೋಚನೆ ಮಾಡಿ ಎಂದು ಒಂದು reference ಮಾಡುತ್ತಾರೆ. Judgment ಎಂದೇ ತೆಗೆದುಕೊಂಡಿದ್ದಾರೆ. ತದನಂತರ 9-10 ವರ್ಷದ ನಂತರ ದೇವರಾಜ ಅರಸು ಅವರು ಬಂದು ಹಾವನೂರು ಆಯೋಗವನ್ನು ರಚಿಸಿ ಈ ರಾಜ್ಯದಲ್ಲಿರುವಂಥ ಎಲ್ಲಾ ದುರ್ಬಲ ವರ್ಗದವರಿಗೂ ಅವಕಾಶವನ್ನು ಮಾಡಿಕೊಡಬೇಕೆನ್ನುವ ಉದ್ದೇಶದಿಂದ ಮಾಡಿದರು. ಅವರು ಮಾಡಿರುವುದು ಬಲಹೀನರಿಗೆ. ಯಾವ ರೀತಿ ಶಕ್ತಿ ತುಂಬಬೇಕೆಂದು ಮಾಡಿದಾಗ ಮೊದಲು 52% ಮೀಸಲಾತಿ, ನಂತರ ಅದು 48%ಗೆ ಇಳಿಯಿತು. ಈಗ 38%ಗೆ ಬಂದಿದೆ. ಜಿಲ್ಲಾ ಪರಿಷತ್, ತಾಲ್ಲೂಕು ಪಂಚಾಯತ್‌ಗಳ ಅವಸ್ಥೆ ಏನು?

ನನಗೆ ಮತ್ತೊಂದು ದೊಡ್ಡ ವಿಚಾರವೇನೆಂದರೆ ಇವತ್ತು ದಿವಂಗತ ರಾಜೀವ್ ಗಾಂಧಿಯವರ ಜನ್ಮದಿನ. ಅವರೂ ಸಹ ಈ ಪಂಚಾಯತ್‌ರಾಜ್‌ನಲ್ಲಿ ಅವಕಾಶ ಮಾಡಿಕೊಡಬೇಕೆಂದು ಹೇಳಿ ಸಂವಿಧಾನದ 73 ಮತ್ತು 74ನೇ ತಿದ್ದುಪಡಿ ತಂದು ಈ ದೇಶದಲ್ಲಿರುವಂಥ ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರು ಮತ್ತು ಮಹಿಳೆಯರಿಗೆ ಮೀಸಲಾತಿಯನ್ನು ಕೊಡಬೇಕೆಂದು ಹೇಳಿ, ಅವರು ಸಂಪೂರ್ಣವಾಗಿ ಅವಕಾಶ ಮಾಡಿಕೊಟ್ಟು ಅವರಿಗೆ ಮೀಸಲಾತಿ ಕೊಟ್ಟ ನಂತರ ಆಗ ಅದು ಪಾಸ್ ಆಗಲಿಲ್ಲ. ಆಮೇಲೆ 1992-93ರಲ್ಲಿ ದಿವಂಗತ ಪಿ.ವಿ.ನರಸಿಂಹ ರಾವ್ ಅವರು ಅಧಿಕಾರಕ್ಕೆ ಬಂದಾಗ ಸಂವಿಧಾನದ 73ನೇ ಮತ್ತು 74ನೇ ತಿದ್ದುಪಡಿಯಾಗಿ ಇವತ್ತು 15 ಲಕ್ಷ ಜನ ಮಹಿಳೆಯರು ಇಡೀ ಕರ್ನಾಟಕ ರಾಜ್ಯದಲ್ಲಿ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಸದಸ್ಯರು, ಕಾರ್ಪೊರೇಟರ್‌ಗಳಾಗಿದ್ದಾರೆ. ಅದಕ್ಕಾಗಿಯೇ ನಾನು ಹೇಳುವುದು ಇದೆಲ್ಲಾ ರಕ್ತರಹಿತ ಕ್ರಾಂತಿ ಎಂದು.

ಭೂಸುಧಾರಣೆ ಕಾನೂನಿನ ಬಗ್ಗೆ ಹೇಳುವುದಾದರೆ ನನ್ನ ವಿಚಾರವನ್ನೇ ತೆಗೆದುಕೊಳ್ಳುತ್ತೇನೆ. ನಮ್ಮ ಕುಟುಂಬದವರು ದಕ್ಷಿಣ ಕನ್ನಡದಲ್ಲಿ ಬಹಳಷ್ಟು ಜನ ಉಳುವವರಿದ್ದರು. "ಉಳುವವನೇ ಭೂಮಿಯ ಒಡೆಯ" ಎಂದು ಮಾಡಿದಾಗ ಬಹಳಷ್ಟು ಜನರಿಗೆ ಅವಕಾಶಗಳು ಸಿಕ್ಕಿತು. ನನಗೂ ಒಂದೆರಡು ಎಕರೆ ಸಿಕ್ಕಿತು ಎಂದ ಹೇಳುವುದರಲ್ಲಿ ತಪ್ಪೇನು ಇಲ್ಲ. ಅದನ್ನು ನಮ್ಮ ಪೂರ್ವಜರಿಗೇ ಬಿಟ್ಟು ಬಂದಿದ್ದೇವೆ. ನೋಡಿ... ಅಲ್ಲಿ ಜಾಗ ತೆಗೆದುಕೊಂಡಿದ್ದೀರಿ ಎಂದು ಮಾನ್ಯ ಕಿಶೋರ್ ಕುಮಾರ್ ಅವರು ನಗುತ್ತಿದ್ದಾರೆ. ಆ ರೀತಿಯಾಗಿ ದಿವಂಗತ ದೇವರಾಜ ಅರಸು ಅವರ ಬಗ್ಗೆ ಯೋಚನೆ ಮಾಡಿದಾಗ ಅಂತಹ ನಾಯಕರು ಸಿಗುವುದಿಲ್ಲ.

ಮಾನ್ಯ ಶಿವಕುಮಾರ್ ಅವರು ಮಾತನಾಡುವಾಗ ಬುದ್ಧನನ್ನು ಮರೆತುಬಿಟ್ಟರು. ಬುದ್ಧ ಸಮಾಜ ಸುಧಾರಕರಲ್ಲಿ ಮೊದಲಿಗರು. ಬುದ್ಧ ಆದ ಮೇಲೆ ಬಸವಣ್ಣನವರು ಸಮಾಜ ಸುಧಾರಣೆ ಮಾಡುವ ಪ್ರಯತ್ನ ಮಾಡಿದರು. ಆನಂತರ ಜ್ಯೋತಿಬಾ ಫುಲೆ ಒಬ್ಬ ಸಮಾಜ ಸುಧಾರಕರು, ಸಾವಿತ್ರಿಬಾ ಫುಲೆ ಮಹಿಳೆಯರಿಗೆ ಶಿಕ್ಷಣ ನೀಡಿದವರು, ಫಾತಿಮಾ ಬೀ, ಸಾಹು ಮಹಾರಾಜರಿದ್ದರು. ಸಾಹು ಮಹಾರಾಜರ ಜೊತೆಗೆ ನಾರಾಯಣಗುರು ಎಂದು ನಾನು ಹೇಳಲಿಲ್ಲ ಎಂದರೆ ನೀವು ನನ್ನ ಮೇಲೆ ಗದಾಪ್ರಹಾರ ಮಾಡುತ್ತೀರಿ. ಆಂಧ್ರದಲ್ಲಿ ವೇಮನ, ತಮಿಳುನಾಡಿನಲ್ಲಿ ಪೆರಿಯಾರ್ ರಾಮಸ್ವಾಮಿ ನಾಯ್ಕರ್ ಹೆಸರಾಂತ ಸಮಾಜ ಸುಧಾರಕರು. ಸಮಾಜ ಸುಧಾರಣೆ ಮಾಡಬೇಕು ಎಂದು ದಕ್ಷಿಣ ಭಾರತದಲ್ಲಿ ಆಗಿರುವಂತಹ ಸಮಾಜ ಸುಧಾರಣೆಗೆ ಭದ್ರ ಬುನಾದಿಯನ್ನು ಹಾಕಿದವರು ನಮ್ಮ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮತ್ತು ಸಾಹು ಮಹಾರಾಜರು. ಮಹಾರಾಷ್ಟ್ರದಲ್ಲಿ ಬಾಬಾಸಾಹೇಬ್ ಡಾ: ಭೀಮರಾವ್ ಅಂಬೇಡ್ಕರ್ ಅವರಿದ್ದಾರೆ. ಅವರು ನಮಗೆ ಒಂದು ಲಿಖಿತವಾದ ಸಂವಿಧಾನವನ್ನು ಕೊಟ್ಟಿದ್ದಾರೆ. ಈ ಸಂವಿಧಾನವನ್ನು ಮಾಡಿದ ಮೇಲೆ ಅದರ ಆಶಯಗಳನ್ನು ಸಂಪೂರ್ಣವಾಗಿ ಅನುಷ್ಠಾನಕ್ಕೆ ತರಲು ಯಾರಾದರೂ ಪ್ರಯತ್ನ ಮಾಡಿದ್ದರೆ ಕರ್ನಾಟಕ ರಾಜ್ಯದ ಮೊಟ್ಟ ಮೊದಲ ಮುಖ್ಯಮಂತ್ರಿ ಯಾರಾದರೂ ಇದ್ದರೆ ಅದು ದಿವಂಗತ ದೇವರಾಜ ಅರಸು ಅವರು ಎಂದು ಹೇಳಬಯಸುತ್ತೇನೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಮಾನ್ಯ ಸದಸ್ಯರು ಮೇಜು ತಟ್ಟುವ ಮೂಲಕ ಹರ್ಷ ವ್ಯಕ್ತಪಡಿಸಿದರು)**

ಏಕೆಂದರೆ ಹೆಜ್ಜೆ ಹೆಜ್ಜೆಗೂ ಸಂವಿಧಾನದ ಆಶಯಗಳು, ಸಂವಿಧಾನವನ್ನು ಏಕೆ ಮಾಡಿದರು, ಅದರ ಅನುಕೂಲಗಳನ್ನು ಬಡಜನರಿಗೆ ತಲುಪಿಸಬೇಕೆಂದು ಮಾಡಿದ್ದನ್ನು ಯಾವ ಮುಖ್ಯಮಂತ್ರಿಯೂ ಮಾಡಲಿಲ್ಲ. ಅಬ್ರಹಾಂ ಲಿಂಕನ್ ಸತ್ತು ಎಷ್ಟು ವರ್ಷಗಳಾದರೂ ಪ್ರಪಂಚದಲ್ಲಿ ಇನ್ನೂ ಏಕೆ ನೆನಪಿಸಿಕೊಳ್ಳುತ್ತಾರೆಂದರೆ ಸಮಾಜದಲ್ಲಿ ಸುಧಾರಣೆ ತಂದಂತಹವರನ್ನು ಇಂದಿಗೂ ಜನರು ನೆನಪಿಸಿಕೊಳ್ಳುತ್ತಾರೆ. ಮುಖ್ಯಮಂತ್ರಿಗಳು ಬರುತ್ತಾರೆ, ಹೋಗುತ್ತಾರೆ. ಆದರೆ ನೀವು ಸಮಾಜಕ್ಕೇನಾದರೂ ಮಾಡಿದಾಗ ಮಾತ್ರ ನಿಮ್ಮ ಹೆಸರು ಅಜರಾಮರವಾಗಿ ಉಳಿದುಕೊಳ್ಳುತ್ತದೆ ಎನ್ನುವುದಕ್ಕೆ ಈ ಎಲ್ಲವೂ ಉದಾಹರಣೆಗಳಾಗಿವೆ. ನಮ್ಮ ಸದನದಲ್ಲಿ ಎಲ್ಲಾ ಸಮಾಜ

ಸುಧಾರಕರ ಫೋಟೋಗಳನ್ನು ಹಾಕಿದ್ದೇವೆ. ಪ್ರಾಚೀನ ದೇಶದಿಂದ ಆಧುನಿಕ ದೇಶ ಮಾಡಿದಂತಹ ನೆಹರು ಅವರ ರೀತಿ ಆಗಬೇಕಾದರೆ ರಾಜಕೀಯ ಜೀವನದಲ್ಲಿ ಯಾವ ರೀತಿ ಇರಬೇಕೆಂದರೆ ಶ್ರೀ ಡಿ. ದೇವರಾಜ ಅರಸು ಅವರ ಮಾದರಿಯಲ್ಲಿರಬೇಕು.

ಮಾನ್ಯ ರಘು ಅವರು ಹೇಳಿದ್ದು ಸರಿಯಿದೆ. ದಿವಂಗತ ಚೌಧರಿ ಚರಣ್ ಸಿಂಗ್ ಅವರನ್ನು ಭೇಟಿ ಮಾಡಲು ಅವರ ಬಳಿ ಟಿಕೆಟ್‌ಗೆ ಹಣವಿರಲಿಲ್ಲ. ಅವರ ಮೇಲೆ ಆಪಾದನೆ ಬಂದಿತು. 20 ಎಕರೆ ಜಮೀನನ್ನು ಅವರ ಅಳಿಯ ದಿವಂಗತ ನಟರಾಜ್ ಅವರಿಗೆ ಕೊಟ್ಟುಬಿಟ್ಟರು ಎನ್ನುವುದು ದೊಡ್ಡದು. ಬಾಕಿಯದ್ದೆಲ್ಲಾ ಸಣ್ಣಪುಟ್ಟದು. ನಂತರ ಗ್ರೋವರ್ ಕಮಿಷನ್ ಆಯಿತು. ಅದರಲ್ಲಿ ಏನೂ ಇಲ್ಲ. 20 ಎಕರೆ ಏನಾದರೂ ಇವತ್ತು ಅಪರಾಧನಾ? ಅದೇನಾಗುತ್ತದೆಯೆಂದರೆ ಬೆತ್ತಲೆ ನಗರದಲ್ಲಿ ಬಟ್ಟೆ ಹಾಕಿಕೊಂಡಿರುವವನೇ ಅಪರಾಧಿ ಎಂದ ಹಾಗೆ ದೇವರಾಜ ಅರಸ್ ಕಥೆ ಆಯಿತು. ಈಗ ದೇವರಾಜ ಅರಸ್ ಇದ್ದಿದ್ದರೆ ಅದೇ ಕಥೆಯಾಗುತ್ತಿತ್ತು. ಬೆತ್ತಲೆ ನಗರ, ಅದರಲ್ಲಿ ಬಟ್ಟೆ ಹಾಕಿಕೊಂಡಿರುವವನೇ ಅಪರಾಧಿ. "Corruption is part of democracy" ಎಂದು ಜಾನ್ ಎಫ್. ಕೆನಡಿ ಹೇಳುತ್ತಾರೆ. Corruption ಎಲ್ಲಿಗೆ ಬೇಕೆಂದರೆ ಚುನಾವಣೆ ಮಾಡಲಿಕ್ಕೆ, ಪಕ್ಷ ನಡೆಸುವುದಕ್ಕೆ ಅಷ್ಟಕ್ಕೆ ಮಾತ್ರ ಬೇಕು, ಐಷಾರಾಮಿ ಜೀವನ ಮಾಡಿಸುವುದಕ್ಕಲ್ಲ ಎಂದು ಹೇಳುತ್ತಾರೆ. ಅದನ್ನು ನಾವು ಯಾರೂ ಸಹ ನೋಡಿಲ್ಲ.

ಮಾನ್ಯ ಸಭಾಪತಿಯವರೆ, ಸಮಯ ಇದೆಯೇ ಅಥವಾ ನಿಲ್ಲಿಸಲೇ?

**ಸಭಾಪತಿಯವರು:-** ಇಲ್ಲ, ನೀವು ಮಾತನಾಡಿ.

**ಶ್ರೀ ಬಿ. ಕೆ. ಹರಿಪ್ರಸಾದ್:-** ತೊಂದರೆಯಿಲ್ಲ, ನಿಲ್ಲಿಸು ಎಂದರೆ ನಿಲ್ಲಿಸಿಬಿಡುತ್ತೇನೆ.

**ಸಭಾಪತಿಯವರು:-** ತುಂಬಾ ಚೆನ್ನಾಗಿ ಮಾತನಾಡುತ್ತಿದ್ದೀರಿ.

**ಶ್ರೀ ಬಿ. ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೆ, ನನಗೆ concession ಏನೂ ಬೇಡ. ನಿಯಮದಲ್ಲಿ ಯಾವ ರೀತಿ ಇದೆಯೋ ಹಾಗೆಯೇ ಹೋಗೋಣ.

ಆದ್ದರಿಂದ ಈ ಒಂದು ನಿಟ್ಟಿನಲ್ಲಿ ಶ್ರೀ ಡಿ. ದೇವರಾಜ ಅರಸು ಅವರು ಮಾಡುತ್ತಿದ್ದುದನ್ನು ನಾವು ನೋಡಿದ್ದೇವೆ. ನಾವು ಕಾಲೇಜು ದಿನಗಳಲ್ಲಿ ಇಂಗ್ಲಿಷ್ ಮಾತನಾಡುವುದಕ್ಕೆ ಭಯ ಪಡುತ್ತಿದ್ದೆವು. ಎಲ್ಲಿ ವ್ಯಾಕರಣ ದೋಷವಾಗುತ್ತದೆಯೋ ಯಾರು ತಪ್ಪು ತಿಳಿದುಕೊಳ್ಳುತ್ತಾರೆಯೋ ಎಂದು ಹೆದರುತ್ತಿದ್ದೆವು. ದೇವರಾಜ ಅರಸು ಅವರು "ಏನಯ್ಯಾ ಬಿ.ಕಾಂ. ಮಾಡುತ್ತೇನೆಂದು ಹೇಳ್ತೀಯ ಇಂಗ್ಲಿಷ್ ಮಾತನಾಡುವುದಿಲ್ಲ" ಎಂದು ಹೇಳುತ್ತಿದ್ದರು. ಪುಸ್ತಕಗಳನ್ನು ಓದುವುದನ್ನು ನಮ್ಮ ತಲೆಗೆ ತುಂಬಿದವರೇ ದೇವರಾಜ ಅರಸು ಅವರು. ಮಾನ್ಯ ರಘು ಅವರು ಮಾತನಾಡುವಾಗ ಬಲಾಢ್ಯರ ಜೊತೆಯಲ್ಲಿ advisors ಯಾರಿರುತ್ತಾರೆಂದು ಹೇಳಿದರು. ಶ್ರೀ ಡಿ. ದೇವರಾಜ ಅರಸು ಅವರ ಜೊತೆಯಲ್ಲಿ ಲಕ್ಷ್ಮಣ ರಾವ್, ವಡ್ಡರ್ಸೆ ರಘುರಾಮ್ ಶೆಟ್ಟರು, ಐ.ಕೆ. ಜಾಗೀರ್‌ದಾರ್ ಇಂಥವರು ಪ್ರಜಾವಾಣಿಯಲ್ಲಿ ಛೂ ಬಾಣವನ್ನು ಬರೆಯುತ್ತಿದ್ದರು. ಅಂತಹ top editors, top journalists ಅವರ ಜೊತೆಯಲ್ಲಿ ಪ್ಯಾಲೇಸ್‌ನಲ್ಲಿ ವಾಕ್ ಮಾಡುತ್ತಿದ್ದರು. ಅದನ್ನು ನೋಡುವುದಕ್ಕೆ ಒಂದು ಸಂತೋಷ, ಆನಂದ.

ಅವರು ಏನು ಚರ್ಚೆ ಮಾಡುತ್ತಿದ್ದುದು ಏನಿರಬಹುದು ಹೇಳಿ. ದಿನಾ ಏನು ಊಟ ಮಾಡುತ್ತೇವೆ, ಏನು ತಿನ್ನುತ್ತೇವೆ ಎನ್ನುವುದಲ್ಲ. ದೇಶಕ್ಕೆ, ರಾಜ್ಯಕ್ಕೆ ಏನಾಗಬೇಕು ಎಂದು ಚರ್ಚೆಯಾಗುತ್ತಿತ್ತು. ಅದನ್ನು ಕೇಳುವುದಕ್ಕೇ ಒಂದು ಆನಂದ. ಇದು ಆಗಿನ ಕಾಲದ ರಾಜಕಾರಣ. ಈಗಿನ ಕಾಲದ ರಾಜಕಾರಣದಲ್ಲಿ ಎಷ್ಟು ಬದಲಾವಣೆಯಾಗಿದೆ ನೋಡಿ.

ಮಾನ್ಯ ರಘು ಅವರು ಹೇಳಿರುವಂತೆ ನಾನು ಸರ್ಕಾರಕ್ಕೆ ಒತ್ತಡ ಮಾಡುತ್ತೇನೆ. ಡಾ.ಯತೀಂದ್ರ ಅವರು ಇಲ್ಲಿಯೇ ಇದ್ದಾರೆ. ಶ್ರೀ ಡಿ. ದೇವರಾಜ ಅರಸು ಅವರ Photo Exhibition ಮಾಡಿ ಅವರ ಜೀವನದ ವಿವಿಧ ದೃಶ್ಯಾವಳಿಗಳನ್ನು ಪ್ರದರ್ಶನ ಮಾಡಿದರೆ ಬಹಳ ಒಳ್ಳೆಯದು.

ಇನ್ನೊಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಮೀಸಲಾತಿಯನ್ನು ತಂದಿದ್ದು ಬಡತನ ನಿರ್ಮೂಲನೆಗಲ್ಲ. ಈಗ ನಾವು ಶೂದ್ರರು, ದಲಿತರು ನಮ್ಮ ಕುಲಕಸುಬು ಮಾಡಿಕೊಂಡರೆ ನಮ್ಮ ಹೊಟ್ಟೆ ತುಂಬುತ್ತದೆ. ಹಿಂದುಳಿದ ಸಮುದಾಯ, ಹಿಂದುಳಿದ ಪಂಗಡ, ಹಿಂದುಳಿದ ಬುಡಕಟ್ಟು ಎಂದು ಹೇಳಿದರೆ ಕೇವಲ ಹಿಂದುಳಿದವರಲ್ಲ. ಹಿಂದುಳಿದ ಸಮುದಾಯ ಒಂದು, ಹಿಂದುಳಿದ ಪಂಗಡ ಒಂದು, ಹಿಂದುಳಿದ ಬುಡಕಟ್ಟುಗಳು ಎಂದು ನಾವು ಮಾಡಿಕೊಂಡು ಹೋಗಬಹುದು. ಆದರೆ ದೇವರಾಜ ಅರಸು ಅವರು ಮಾಡಿದ್ದೇನೆಂದರೆ ಎಲ್ಲಾದರೂ ಟೂರ್ ಹೋಗುತ್ತಾರೆಂದರೆ ಬೆಟ್ಟದ ಮೇಲಿರುವ ಯಾವನೋ ಒಬ್ಬನನ್ನು ಕರೆಸಿ Board, Corporation ಛೇರ್‌ಮನ್ ಮಾಡುತ್ತಿದ್ದರು. ಏಕೆಂದರೆ ನಮ್ಮ ಜೊತೆ ಓಡಾಡಿದರೆ ಅವನಿಗೆ ಧೈರ್ಯ ಬರುತ್ತದೆ. ಅವನೂ ವಿಧಾನ ಸೌಧಕ್ಕೆ ಬರಬೇಕು, ನೋಡಬೇಕು. ಆಗಲೇ ಅವನಿಗೆ ಧೈರ್ಯ ಬರುತ್ತದೆ. ಅವರ ಜನರಲ್ಲಿ ಜಾಗೃತಿ ಮೂಡಿಸುತ್ತಾನೆಂದು ಹೇಳಿ ಸಣ್ಣ ಸಣ್ಣ ಜಾತಿಯವರಿಗೆಲ್ಲಾ ಛೇರ್‌ಮನ್ ಮಾಡಿ ಒಂದು ರೀತಿ ಜಾಗೃತಿ ಮೂಡಿಸುತ್ತಿದ್ದರು.

**ಶ್ರೀ ಆರ್. ರಘು:-** ಮಾನ್ಯ ಸಭಾಪತಿಯವರೆ, ಪತ್ತಾರ್ ಎಂಬುವವರನ್ನು ಮಂತ್ರಿಯಾಗಿ ಮಾಡಿದ್ದರು.

**ಶ್ರೀ ಬಿ.ಕೆ.ಹರಿಪ್ರಸಾದ್:-** ಹೌದು. ಹಿಂದುಳಿದ ವರ್ಗದವರು ಜಾತಿ ಹೆಸರಿನಲ್ಲಿ ಸಂಘಟಿತರಾಗುವುದಕ್ಕೆ ಯಾವತ್ತೂ ಸಾಧ್ಯವೇ ಇಲ್ಲ. ಜಾತಿ ಪ್ರಜ್ಞೆಯೂ ಹಿಂದುಳಿದ ವರ್ಗದವರಿಗೆ ಇರುವುದಿಲ್ಲ. ಏಕೆಂದರೆ ಶೂದ್ರರನ್ನು ಗುಲಾಮರಾಗಿಯೇ ಇಟ್ಟಿರಬೇಕೆಂದು ಈ ವ್ಯವಸ್ಥೆ ಇರುವುದು. ಅದರಲ್ಲಿ ಜಾತಿ ಪ್ರಜ್ಞೆಯಿಲ್ಲದ ಕೆಳಜಾತಿಗಳ ದೊಡ್ಡ ದೌರ್ಬಲ್ಯವನ್ನು ಮೇಲ್ಜಾತಿಗಳು ಉಪಯೋಗಿಸಿಕೊಂಡು ಅವರಿಗೆ ಅದು ದೊಡ್ಡ ವರವಾಗಿದೆ. ಮೇಲ್ಜಾತಿಯಲ್ಲಿ ಜಾತಿ ಜಾಸ್ತಿ. ಹಿಂದುಳಿದ ವರ್ಗದವರಿಗೆ ಜಾತಿಯಿರುವುದಿಲ್ಲ. ಮಾನ್ಯ ಕೆ. ಶಿವಕುಮಾರ್ ಅವರು, ಮಾನ್ಯ ಜಕ್ಕಪ್ಪನವರ್, ಮಾನ್ಯ ವಸಂತ್ ಕುಮಾರ್ ಹಾಗೂ ನಾನು ಬಂದೆವೆಂದು ಹೇಳಿದರು, ಮಾನ್ಯ ಸುಧಾಮ್ ದಾಸ್ ಅವರೂ ಇದ್ದಾರೆ. ಸಂವಿಧಾನದ ಚೌಕಟ್ಟಿನಲ್ಲಿ ಅವರು ಬರಲೇಬೇಕು. ಈ ದೇಶದಲ್ಲಿ ತ್ರಿಶಂಕುಗಳಾಗಿರುವವರು ಯಾರಾದರೂ ಇದ್ದರೆ, ಅದು ಹಿಂದುಳಿದ ವರ್ಗದವರು. ಅಲ್ಲಿಯೂ ಇಲ್ಲ, ಇಲ್ಲಿಯೂ ಇಲ್ಲ.

**ಶ್ರೀ ಕೆ. ಶಿವಕುಮಾರ್:-** ನಾನು ಅದನ್ನು ಏಕೆ ಉಲ್ಲೇಖ ಮಾಡಿದೆನೆಂದರೆ ಬಹಳಷ್ಟು ಜನ ಪರಿಶಿಷ್ಟ ಜಾತಿಯವರನ್ನು General Constituency ಯಲ್ಲಿ ಮೊದಲ ಬಾರಿಗೆ ನಿಲ್ಲಿಸಿ ಗೆಲ್ಲಿಸುವಂಥ ಶಕ್ತಿ ಇದ್ದದ್ದು ದೇವರಾಜ ಅರಸ್ ಅವರಿಗೊಬ್ಬರಿಗೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಅಷ್ಟರಲ್ಲಿ ಚಿತ್ರದುರ್ಗ ಲೋಕಸಭಾ ಕ್ಷೇತ್ರದಿಂದ ಶ್ರೀ ಕೆ.ಹೆಚ್.ರಂಗನಾಥ್ ಅವರು ಪಾರ್ಲಿಮೆಂಟ್‌ಗೆ ಆಯ್ಕೆಯಾಗಿದ್ದರು.

**ಶ್ರೀ ಕೆ. ಶಿವಕುಮಾರ್:-** ಶ್ರೀ ಕೆ.ಹೆಚ್.ರಂಗನಾಥ್ ಅವರು ಗೆದ್ದದ್ದು ಬೇರೆ ಕಾಲ. ಆದರೆ ಇವತ್ತಿನ ಪರಿಸ್ಥಿತಿ ಹೇಳಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಸಂವಿಧಾನ ಅವರಿಗೆ ಸಂಪೂರ್ಣವಾದ ರಕ್ಷಣೆ ಕೊಟ್ಟಿದೆ. ಹಿಂದುಳಿದ ವರ್ಗದವರಿಗ 52% ಅಥವಾ 48% ನನಗೆ ಗೊತ್ತಿಲ್ಲ. ನಮಗೆ ಉರ್ದು ಮತ್ತು ಹಿಂದಿ ಚೆನ್ನಾಗಿ ಬರುತ್ತದೆ. ನ ಘರ್ ಕಾ ನ ಘಾಟ್ ಕಾ ಎನ್ನುವಂತಾಗಿದೆ. ಅಲ್ಲಿಯೂ ಇಲ್ಲ, ಇಲ್ಲಿಯೂ ಇಲ್ಲ, ತ್ರಿಶಂಕುಗಳಾಗಿದ್ದೇವೆ. ಇವರಿಗೇನಾದರೂ ಸ್ವಾಭಿಮಾನದಿಂದ ಬದುಕಲಿಕ್ಕೆ, ಗೌರವದಿಂದ ಬದುಕಲಿಕ್ಕೆ ಅವಕಾಶವನ್ನು ಕೊಟ್ಟಿದ್ದರೆ ಅದು ದೇವರಾಜ ಅರಸು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನಮಸ್ಕಾರ, ಜೈ ಹಿಂದ್.

**(ಮುಂದು)**

(796) ದಿ:20-08-2026, (5.00) ಕೆಜಿ-ಎಕೆ, (ಸಭಾಪತಿಯವರ ಉಪಸ್ಥಿತಿ)

**ಡಾ॥ ಕೆ.ಗೋವಿಂದರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಮಾನ್ಯ ಸದಸ್ಯರಾದ ಬಿ.ಕೆ.ಹರಿಪ್ರಸಾದ್‌ರವರು ಹೇಳಿರುವಂತಹದ್ದನ್ನು ಈ ಮೈಸೂರು ದಸಾರ ಹಬ್ಬದಿಂದಲೇ ಮಾಡಿಸಬೇಕು.

**ಡಾ॥ ಯತೀಂದ್ರ.ಎಸ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಖಂಡಿತವಾಗಿ ಮಾಡಿಸೋಣ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಇವತ್ತು ಮಹಾನ್ ಚೇತನ ಮಾನ್ಯ ಡಿ.ದೇವರಾಜ ಅರಸುರವರ ಜನ್ಮ ದಿನಾಚರಣೆಯ ದಿವಸವಾಗಿದೆ. ಈ ಸಂದರ್ಭದಲ್ಲಿ ಅವರ ವಿಚಾರಧಾರೆಗಳನ್ನು ಇವತ್ತಿನ ಸದನದಲ್ಲಿ ಚರ್ಚೆ ಮಾಡುತ್ತಿರುವಂತಹದ್ದು ಬಹಳ ಪ್ರಸುತ್ತವಾಗಿದೆ. ಇಂತಹ ಚರ್ಚೆಗಳು ಅಂತಹ ಮಹಾನ್ ಚೇತನರ ವಿಷಯದಲ್ಲಿ ಚರ್ಚೆಯಾಗಿ ಚರ್ಚೆಯಲ್ಲಿ ಬರುವಂತಹ ಎಲ್ಲಾ ವಿಚಾರಗಳು ಸಹ ಮುಂದಿನ ಪೀಳಿಗೆಗೆ ಒಂದು ಉತ್ತಮವಾದಂತಹ library ಆಗಬೇಕೆಂದು ಹೇಳಿ ನಾನು ಸಂದರ್ಭದಲ್ಲಿ ಭಾವಿಸುತ್ತೇನೆ. ಇವತ್ತು ಮಾನ್ಯ

ಡಿ.ದೇವರಾಜ ಅರಸುರವರ ಆದರ್ಶ, ತತ್ವ ಮತ್ತು ಸಿದ್ಧಾಂತಗಳ ಬಗ್ಗೆ ನಾವೆಲ್ಲರೂ ಮಾತನಾಡುತ್ತೇವೆ. ನಾನು ಅವರ ಬಗ್ಗೆ ಅಷ್ಟೊಂದು ಮಾತನಾಡುವಂತಹ ದೊಡ್ಡವನಲ್ಲ. ಬಹಳಷ್ಟು ಜನ ಹಿರಿಯರು ಅವರ ಜೊತೆಯಲ್ಲಿ ಶಾಸಕರಾದವರು ಸಹ ಇಲ್ಲಿ ಇದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಈ ಸದನದಲ್ಲಿ ಅವರನ್ನು ನೋಡಿದ್ದಾರೆ. ಇವತ್ತು ಅವರ ಆದರ್ಶ, ತತ್ವ, ಸಿದ್ಧಾಂತಗಳು ಇವತ್ತಿನ ರಾಜಕಾರಣದಲ್ಲಿ ಎಷ್ಟರ ಮಟ್ಟಿಗೆ ಉಳಿದಿವೆ ಎನ್ನುವ ವಿಚಾರವನ್ನು ನಾವೆಲ್ಲರೂ ಸಹ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ನಾವು ಹೇಳುವಂತಹ ವಿಚಾರ ಬಾಯಿ ಮಾತಿನಲ್ಲಿ ಮಾತನಾಡುವುದಕ್ಕೆ ಮಾತ್ರ ಸೀಮಿತವಾಗಿದೆ.

ಮಾನ್ಯ ಸಭಾಪತಿಯವರೇ, ಮಾನ್ಯ ಡಿ.ದೇವರಾಜ ಅರಸುರವರ ಕಾಲದಲ್ಲಿ ಜಾತಿ ಪದ್ಧತಿ ಇರಲ್ಲಿಲ್ಲ ಎಂದಲ್ಲ. ಇತ್ತು. ಆದರೆ, ಅದನ್ನು ಮೆಟ್ಟಿನಿಂತ 'ಮೇರು ಪರ್ವತ' ಯಾರಾದರೂ ಇದ್ದರೆ, ಅದು ಮಾನ್ಯ ಡಿ.ದೇವರಾಜ ಅರಸುರವರು ಎಂದು ಎಲ್ಲರೂ ಸಹ ಎದೆ ಮುಟ್ಟಿ ಹೇಳಬಹುದು. ಆ ಮೆಟ್ಟಿ ನಿಂತಿದ್ದರ ಫಲವಾಗಿ ಅವರೊಬ್ಬರು ಅಲ್ಪಸಂಖ್ಯಾತರಾಗಿದ್ದರೂ ಸಹ, ಅವರ ಆದರ್ಶ, ತತ್ವ, ಸಿದ್ಧಾಂತಗಳು ಇವತ್ತು ಪ್ರಸ್ತುತವಾಗಿ ನಮ್ಮ ಹತ್ತಿರ ಉಳಿದಿವೆ. ಮಾನ್ಯ ಡಿ.ದೇವರಾಜ ಅರಸುರವರು ಎಂತಹ ಎಂತಹವರನ್ನೋ ಲೀಡರ್ ಮಾಡಿ ಈ ನಾಡಿನಲ್ಲಿ ಬೆಳೆಸಿದರು ಎನ್ನುವ ವಿಚಾರವನ್ನು ಮಾನ್ಯ ಸದಸ್ಯರಾದ ಬಿ.ಕೆ.ಹರಿಪ್ರಸಾದ್‌ರವರು ಮಾತನಾಡುವಂತಹ ಸಂದರ್ಭದಲ್ಲಿ ಹೇಳಿದ್ದಾರೆ. ಮಾನ್ಯ ಡಿ.ದೇವರಾಜ ಅರಸುರವರು ಬಹಳಷ್ಟು ಜನರನ್ನು ಬೆಳೆಸಿದ್ದಾರೆ. ಅದರಲ್ಲೂ ಅವರು ವಿಶೇಷವಾಗಿ ಶಕ್ತಿ ಇಲ್ಲದಿರುವಂತಹವರನ್ನು ಈ ನಾಡಿನಲ್ಲಿ ಬೆಳೆಸಿದ್ದಾರೆ. ಇಷ್ಟು ಹೊತ್ತು ಮಾನ್ಯ ಸಚಿವರಾದ ಯು.ಟಿ.ಖಾದರ್‌ರವರು ಸದನದಲ್ಲಿ ಇದ್ದರು. ಈಗ ಅವರು ಆಚೆಗೆ ಹೋದರು ಎಂದು ಕಾಣುತ್ತದೆ.

ಮಾನ್ಯ ಸಭಾಪತಿಯವರೇ, 'ಉಳುವವನೇ ಭೂಮಿಯ ಒಡೆಯ' ವಿಚಾರದಲ್ಲಿ ಬಂದಾಗ, ಅವಿಭಾಜ್ಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಉತ್ತರ ಕರ್ನಾಟಕ ಜಿಲ್ಲೆಯಲ್ಲಿ, ಶಿವಮೊಗ್ಗ ಜಿಲ್ಲೆಯಲ್ಲಿ ಮತ್ತು ನಮ್ಮ ಚಿಕ್ಕಮಗಳೂರು ಜಿಲ್ಲೆಯಲ್ಲಿ ಅತಿ ಹೆಚ್ಚು ಗೇಣಿದಾರರಿಗೆ ಅನುಕೂಲವಾಗಿದೆ. 'ಉಳುವವನೇ ಭೂಮಿಯ ಒಡೆಯ' ಕಾಯಿದೆಯಿಂದ ಇವತ್ತು ಬಹಳಷ್ಟು ಜಮೀನುದಾರರು ನಿರ್ಗತಿಕರು ಆಗಿರುವುದು ಒಂದು ಕಡೆ, ಈ ನಾಡಿನಲ್ಲಿ ಕಟ್ಟ ಕಡೆಯ ಮನುಷ್ಯ ಯಾರಿದ್ದರು, ಅವರಿಗೆಲ್ಲಾ ಭೂಮಿಯ ಒಡೆತನವನ್ನು ಕೊಡುವಂತಹ ಬಹು ದೊಡ್ಡ ಒಂದು ಕಾರ್ಯವನ್ನು ಮಾಡಿದರು. ಇದನ್ನು ಇಡೀ ದೇಶದಲ್ಲಿ ತಂದಂತಹದ್ದಾಗಿತ್ತು. '20 ಅಂಶಗಳ ಕಾರ್ಯಕ್ರಮ' ವು ಶ್ರೀಮತಿ ಇಂದಿರಾ ಗಾಂಧಿಯವರ ಕಾಂಗ್ರೆಸ್ ಕಾರ್ಯಕ್ರಮ ಆಗಿತ್ತು. ಇದನ್ನು ಇಡೀ ದೇಶದಲ್ಲಿ ತಂದಂತಹ ಕಾರ್ಯಕ್ರಮವಾಗಿತ್ತು. ಈ 20 ಅಂಶಗಳ ಕಾರ್ಯಕ್ರಮವನ್ನು ಇಡೀ ದೇಶದಲ್ಲಿ ತಂದಂತಹ ಸಂದರ್ಭದಲ್ಲಿ, ನಾನು

ಅಷ್ಟೊಂದು ಪರಿಣಿತನಲ್ಲದಿದ್ದರೂ ಸಹ, ಆ ‘20 ಅಂಶಗಳ ಕಾರ್ಯಕ್ರಮ’ವನ್ನು ಸಂಪೂರ್ಣವಾಗಿ, 100% ಅದನ್ನು ಕಾರ್ಯಗತ ಮಾಡಿದ್ದಂತಹ ಯಾರಾದರೊಬ್ಬರು ಅಂದಿನ ಮುಖ್ಯಮಂತ್ರಿಯವರು ಇದ್ದರೆ ಅದು ಮಾನ್ಯ ಡಿ.ದೇವರಾಜ ಅರಸುರವರೊಬ್ಬರೇ ಈ ದೇಶದಲ್ಲಿ ಎಂದು ಹೇಳುವುದಕ್ಕೆ ಇವತ್ತು ಹೆಮ್ಮೆ ಪಡುತ್ತೇನೆ. ಅದನ್ನು implement ಮಾಡಿದ ಫಲವಾಗಿ ಕಾಂಗ್ರೆಸ್‌ಗೆ ಬಹು ದೊಡ್ಡ ಕೀರ್ತಿ ಬಂತು. ಕಾಂಗ್ರೆಸ್‌ನ ಕೀರ್ತಿ ಮೇರು ಪರ್ವತದಂತೆ ಶೃಂಗ ಗಿರಿಯವರೆಗೆ ಮುಟ್ಟಿತ್ತು.

ಮಾನ್ಯ ಸಭಾಪತಿಯವರೇ, ಆಗಿನ ಸಂದರ್ಭದಲ್ಲಿ ಇಡೀ ದೇಶದಲ್ಲಿ ಕಾಂಗ್ರೆಸ್, ಅದರಲ್ಲೂ ಉತ್ತರ ಭಾರತದಲ್ಲಿ ಸಂಪೂರ್ಣವಾಗಿ ನೆಲಕಚ್ಚಿದಂತಹ ಸಂದರ್ಭದಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರು ‘ರಾಯ್ ಬರೇಲಿ’ ಕ್ಷೇತ್ರದಲ್ಲಿ ಸೋತ ನಂತರ ಅವರನ್ನು ಕರ್ನಾಟಕಕ್ಕೆ ಕರೆದುಕೊಂಡು ಬಂದು ಚಿಕ್ಕಮಗಳೂರಿನಲ್ಲಿ ಚುನಾವಣೆಗೆ ನಿಲ್ಲಿಸುವಂತಹ ಧೈರ್ಯವನ್ನು ಮಾನ್ಯ ಡಿ.ದೇವರಾಜ ಅರಸುರವರು ಮಾಡಿದ್ದರು. ಅಂದು ಡಿ.ದೇವರಾಜ ಅರಸುರವರು ಧೈರ್ಯ ಮಾಡಿ ಕರ್ನಾಟಕ ರಾಜ್ಯದಲ್ಲಿ ಚಿಕ್ಕಮಗಳೂರಿನಿಂದ parliament election ಗೆ ನಿಲ್ಲಿಸುವ ಸಂದರ್ಭದಲ್ಲಿ ಶ್ರೀ ಡಿ.ಬಿ.ಚಂದ್ರೇಗೌಡರವರನ್ನು ರಾಜೀನಾಮೆ ಕೊಡಿಸುವುದರ ಮುಖಾಂತರ ಚುನಾವಣೆಗೆ ನಿಲ್ಲಿಸಲಾಯಿತು, ಅವತ್ತು ಆ ಚುನಾವಣೆಯನ್ನು ಇಡೀ ದೇಶ ನೋಡಿತ್ತು. ನಮ್ಮ ದೇಶದ ಮೂಲೆ ಮೂಲೆಗಳಿಂದ ಎಲ್ಲಾ ನಾಯಕರುಗಳು ಚಿಕ್ಕಮಗಳೂರಿಗೆ ಬಂದಿದ್ದರು. ನಾನು ಆಗ student ಆಗಿದ್ದೆ. ಆಗ ನಾನು II P.U.C. ನಲ್ಲಿ ವ್ಯಾಸಂಗ ಮಾಡುತ್ತಿದ್ದೆ. ಆಗ ಚಿಕ್ಕಮಗಳೂರಿನಲ್ಲಿ ಇಡೀ ದೇಶದ ಜನರು ಇದ್ದರು. ಆ ಸಂದರ್ಭದಲ್ಲಿ, ನಾವು ಇನ್ನು ಚಿಕ್ಕ ಹುಡುಗರಿದ್ದು, ಅದು ಏನೆಂದು ನೋಡುವುದಕ್ಕೆ ಹೋಗುತ್ತಿದ್ದೇವು. ಚಿಕ್ಕಮಗಳೂರಿನಲ್ಲಿ ಹನುಮಂತಪ್ಪ ಸರ್ಕಲ್ ಬಹಳ famous circle ಆಗಿದೆ. ಆ ಸರ್ಕಲ್‌ನಲ್ಲಿ ಅವರು ಪಾಸ್ ಆಗುವಾಗ ಸಾವಿರಾರು ಜನರು ಇದ್ದರು. ಮಾನ್ಯ ಸದಸ್ಯರಾದ ಬಿ.ಕೆ.ಹರಿಪ್ರಸಾದ್‌ರವರು ಆ convoy ನಲ್ಲಿದ್ದರು ಎಂದು ಕಾಣುತ್ತದೆ. ಶ್ರೀಮತಿ ಇಂದಿರಾ ಗಾಂಧಿಯವರನ್ನು ಮಾನ್ಯ ಡಿ.ದೇವರಾಜ ಅರಸುರವರು District Field ನಲ್ಲಿ ಇಳಿದು ಕಾರಿನಲ್ಲಿ ಕರೆದುಕೊಂಡು ಬರಬೇಕಾದರೆ, ಆ convoy ನಲ್ಲಿ ಆಗ ಮಾನ್ಯ ಸದಸ್ಯರಾದ ಬಿ.ಕೆ.ಹರಿಪ್ರಸಾದ್‌ರವರು ಹಾಗೂ ಇತರೆ ಯುವ ಮುಖಂಡರಿದ್ದರು. ಅವರನ್ನು follow ಮಾಡಿ ಬರುತ್ತಿರುವಂತಹ ಸಂದರ್ಭದಲ್ಲಿ ತಾವೆಲ್ಲರೂ ಇದ್ದೀರಿ. ಆ ಸಂದರ್ಭದಲ್ಲಿ almost ಇಡೀ ದೇಶ ಅಲ್ಲಿತ್ತು. ಆ ಸಂದರ್ಭದಲ್ಲಿ ಆ ಸರ್ಕಲ್‌ನಲ್ಲಿ ಸುಮಾರು 8 ರಿಂದ 10,000 ಜನರು ಅಲ್ಲಿ ಸೇರಿದ್ದರು. ಯಾವ ಪೋಲೀಸರಿಗೂ ಸಹ ಆ ಜನರನ್ನು ಭೇದಿಸುವುದಕ್ಕೆ ಆಗುತ್ತಿರಲಿಲ್ಲ. ಆ ರೀತಿ ಜನರು ಸೇರಿದ್ದರು. ಅವರೆಲ್ಲಾ ವಿರೋಧದವರು. ಅವರು ಯಾರು ಸಹ

ಕಾಂಗ್ರೆಸ್‌ಗೆ ಪರವಾಗಿ ಇದ್ದಂತಹವರು ಅಲ್ಲ. ಆ ಸಂದರ್ಭದಲ್ಲಿ, ಅವರ ಕಡೆಗೆ ಕಲ್ಲು ಬೀಸುತ್ತಿದ್ದರು, ಚಪ್ಪಲಿ ಬೀಸುತ್ತಿದ್ದರು, ಏನ್ನೆಲ್ಲಾ ಬೀಸುತ್ತಿದ್ದರು. ಆ ನಡುವೆ ಮಾನ್ಯ ಡಿ.ದೇವರಾಜು ಅರಸುರವರ ಕಾರು ಪಾಸ್ ಆಗಿ ಬರುತ್ತದೆ. ಅದು ಶ್ರೀ ಜಾರ್ಜ್ ಫರ್ನಾಂಡಿಸ್ರವರ leadership ನಲ್ಲಿ. ಶ್ರೀ ವೀರೇಂದ್ರ ಪಾಟೀಲ್‌ರವರು contest ಮಾಡಿದ್ದಂತಹದ್ದು. ಅಲ್ಲಿಂದ ಕಾರು District Field ಗೆ ಹೋಗುವರೆಗೆ ಸುಮಾರು 1-2 ಕಿ.ಮೀಟರ್‌ರವರೆಗೆ ಜನರು ಸಾಗರದಂತೆ ಇದ್ದರು. ಆ emergency ವಿಚಾರದಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರ ಬಗ್ಗೆ ಹುಚ್ಚೆಂದು ಹುಡುಗರಿಗೆ ಅಷ್ಟೊಂದು ಆಕ್ರೋಶ. ಕ್ರಾಂಗೆಸ್ ಬಗ್ಗೆ ಅಷ್ಟೊಂದು ಆಕ್ರೋಶ ಇದ್ದಂತಹ ಸಂದರ್ಭದಲ್ಲಿ ಚಿಕ್ಕಮಗಳೂರು ಪಟ್ಟಣವನ್ನು ಪ್ರವೇಶ ಮಾಡಿದಂತಹ "ಗಂಡೆದೆಯನ್ನು ತೋರಿಸಿದಂತಹವರು ಮಾನ್ಯ ಡಿ.ದೇವರಾಜ ಅರಸುರವರು. ಅದರಲ್ಲಿ ಎರಡು ಮಾತಿಲ್ಲ. ಅವರು ಬಂದು District Field ನಲ್ಲಿ ಭಾಷಣ ಮಾಡುತ್ತಾರೆ. ಈಗಲೂ ಸಹ ಆ ಭಾಷಣದ ಪ್ರತಿಗಳು ಇವೆ. ನಾವು ಆಗ ವಿದ್ಯಾರ್ಥಿಗಳು ಆಗಿದ್ದರಿಂದ ಅದನ್ನು ಕೇಳಿದ್ದೇವೆ. ಆ ಸಂದರ್ಭದಲ್ಲಿ ಯಾರು ಗಲಾಟೆಯನ್ನು ಜೋರಾಗಿ ಮಾಡುತ್ತಿರುತ್ತಾರೆ, ಅವರಿಗೆಲ್ಲಾ open ಭಾಷಣದಲ್ಲಿ ಮಾನ್ಯ ಡಿ.ದೇವರಾಜ ಅರಸುರವರು 'ಇಲ್ಲಿ ನೀವು ಯಾರು ಬಂದಿದ್ದೀರಿ, ಯಾರು ಗಲಾಟೆ ಮಾಡುತ್ತಿದ್ದೀರಿ, ನೀವು ಯಾರು ಸಹ ನನ್ನ ಪಕ್ಷಕ್ಕೆ ಮತ ಹಾಕುವವರಲ್ಲ'. 'ನೀವೂ ಯಾರು ಸಹ ಶ್ರೀಮತಿ ಇಂದಿರಾ ಗಾಂಧಿಗೆ ಮತ ಹಾಕುವವರಲ್ಲ', 'ನೀವು ಮರ್ಯಾದೆಯಾಗಿ', 'ಈ ಕ್ಷಣದಲ್ಲಿ ಈ ಜಾಗವನ್ನು ಖಾಲಿ' ಮಾಡದಿದ್ದರೆ, 'ನಿಮಗೆ ಏನೇನು ಆಗಬೇಕು ಅದನ್ನೆಲ್ಲಾ ನಾನು ಮಾಡಿ ತೋರಿಸುತ್ತೇನೆಂದು' ಹೇಳಿದರು. ಅವರು ಒಬ್ಬ ಮುಖ್ಯಮಂತ್ರಿಯಾಗಿ candidate ಅನ್ನು ಪಕ್ಕದಲ್ಲಿಟ್ಟುಕೊಂಡು ಭಾಷಣ ಮಾಡಿದಂತಹ ಮಾತುಗಳು ಇವೆಯೆಲ್ಲಾ. ಆ ಮಾತುಗಳನ್ನು, ಅಂತಹ ಗಂಡೆದೆ ಮಾತುಗಳನ್ನು ಯಾರು ಆಡುವುದಕ್ಕೆ ಆಗುವುದಿಲ್ಲ. ಆ ಪರಿಸ್ಥಿತಿಯಲ್ಲಿ ಅವರು ಎಲ್ಲಿಗೂ ಹೋದರೂ ಸಹ, ವಿರೋಧ ಕಾಣುತ್ತಿರುತ್ತದೆ. ಶ್ರೀಮತಿ ಇಂದಿರಾ ಗಾಂಧಿಯವರನ್ನು ಒಂದು ಹಳ್ಳಿಗೆ ಕರೆದುಕೊಂಡು ಹೋದರೂ ಸಹ, ಅಲ್ಲಿಯೂ ಸಹ ಅಷ್ಟು ವಿರೋಧ ವ್ಯಕ್ತಪಡಿಸುತ್ತಿದ್ದರು. ಆದರೆ, ಚುನಾವಣೆ ನಡೆದಂತಹ ಸಂದರ್ಭದಲ್ಲಿ ಸುಮಾರು 77,000 ಮತಗಳ ಅಂತರದಿಂದ ಶ್ರೀಮತಿ ಇಂದಿರಾ ಗಾಂಧಿಯವರಿಗೆ ರಾಜಕೀಯ ಪುನರ್‌ಜನ್ಮ ಸಿಗುತ್ತದೆ. ಆ ಪುನರ್‌ಜನ್ಮ ಸಿಕ್ಕಿದ ಫಲವಾಗಿ ಮತ್ತೆ ಕ್ರಾಂಗೆಸ್ ಮೇಲೆ ಬರುತ್ತದೆ. ನಾನು ಮಾತನಾಡುವ ಸಂದರ್ಭದಲ್ಲಿ 'ರಾಜಕಾರಣ ನಿಂತ ನೀರಲ್ಲ' ಎಂದು ಹೇಳಿದ್ದೇನೆ. ರಾಜಕಾರಣ ಯಾವತ್ತು ಸಹ 'ನಿಂತ ನೀರಲ್ಲ' ಎನ್ನತಕ್ಕ ಸಂದರ್ಭದಲ್ಲಿ, ನಾವು ಇವತ್ತು ಮಾನ್ಯ ಡಿ.ದೇವರಾಜ ಅರಸುರವರ ಬಗ್ಗೆ ಮಾತನಾಡುವಾಗ, ಮಾನ್ಯ ಸದಸ್ಯರಾದ ಬಿ.ಕೆ.ಹರಿಪ್ರಸಾದ್‌ರವರು ಮಾತನಾಡುವ

ಸಂದರ್ಭದಲ್ಲಿ ಕೆಲವೇ ರಾಜಕಾರಣಿಗಳು, ಕೆಲವೇ ದಾರ್ಶನಿಕರ ಮಾತುಗಳನ್ನು ನಾವು ಇವತ್ತು ಏಕೆ ಹೇಳುತ್ತೇವೆಂದು ಹೇಳಿದರು.

(ಮುಂದು)

(797) 20.08.2026/5.10/ಎಂವಿ-ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಎಲ್. ಭೋಜೇಗೌಡ (ಮುಂದು):-**

ಬಹಳ ಸುಧಾರಣೆ ಮಾಡಿದಂತಹ ಬಹಳಷ್ಟು ಹರಿಕಾರರು, ಸಮಾಜ ಸುಧಾರಕರು ಈ ನಾಡಿನಲ್ಲಿ ಬಂದು ಹೋಗಿದ್ದಾರೆ. ಇವತ್ತು ಅವರು ಈ ನಾಡಿನಲ್ಲಿ ಬಂದು ಹೋದಂತಹ ಸಂದರ್ಭದಲ್ಲಿ ಬಹಳಷ್ಟು ಸುಧಾರಣೆಗಳನ್ನು ಮಾಡಿದ್ದಾರೆ. ಸುಧಾರಣೆ ಮಾಡುವಾಗ ಹಂತ-ಹಂತವಾಗಿ ಬಂದಂತಹ ಸಂದರ್ಭದಲ್ಲಿ ಶ್ರೀ ಡಿ.ದೇವರಾಜ ಅರಸು ಬಂದಂತಹ ಸಂದರ್ಭದಲ್ಲಿ ಮತ್ತೊಮ್ಮೆ ಆ ಸುಧಾರಣೆ ಪರಿಪಕ್ವವಾಗಿ ಆಗಬೇಕೆಂದು ಪ್ರಯತ್ನ ಮಾಡಿದ್ದಾರೆ. ಈಗಲೂ ಕೂಡ ಸುಧಾರಣೆ ಆಗುತ್ತಲೇ ಇದೆ. ಆ ಸುಧಾರಣೆ ಆಗುತ್ತಿರುವಂತಹ ಸಂದರ್ಭದಲ್ಲಿ ಶ್ರೀ ಡಿ.ದೇವರಾಜ ಅರಸುರವರೇನೂ ಸಾಧಾರಣವಲ್ಲ. ಮತ್ತೆ ಎಲ್ಲರೂ ಶ್ರೀ ಡಿ. ದೇವರಾಜ ಅರಸು ಆಗುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ ನಾವು ಹೇಳುವುದು "ಸಪ್ತ ಸಾಗರದಾಳದಲ್ಲಿದೆ, ಅದನ್ನು ಈಜಿ ದಡ ತಲುಪುವವರು ಎಷ್ಟು ಮಂದಿ? ಆ ರೀತಿ ಎಷ್ಟು ಜನರು ಇದ್ದಾರೆ? ಎಷ್ಟು ಜನರು ಸಪ್ತ ಸಾಗರದಾಳದಲ್ಲಿ ಈಜತಕ್ಕಂತಹವರು? ಅಂತಹ ಮೇರು ಪರ್ವತ ಶ್ರೀ ಡಿ. ದೇವರಾಜ ಅರಸುರವರು ಎಂದು ಹೇಳಬಹುದು.

ಇನ್ನು ಮುಂದುವರೆದು ಏನು ಹೇಳುತ್ತಾರೆಂದರೆ, 'ಶೃಂಗ ಗಿರಿಗಳ ತುತ್ತತುದಿಯಲ್ಲಿ ಎಲ್ಲೋ ಒಂದೆಡೆ ಲಯವಿದೆ' ಲಯ ಎನ್ನತಕ್ಕಂಥದ್ದು ಅಲ್ಲಿ ಇಲ್ಲಿ ಇಲ್ಲ. ಶೃಂಗ ಗಿರಿಗಳ ತುತ್ತತುದಿಯಲ್ಲಿ ಎಲ್ಲೋ ಒಂದು ಕಡೆ ಇದೆ. ಆದರೆ, ಎಲ್ಲಿಗೋ ಒಮ್ಮೆ ತಲುಪಬಹುದು. ಎಲ್ಲರೂ ತಲುಪಬಹುದು. ಅದನ್ನು ತಲುಪುವುದಕ್ಕೆ ನಿತ್ಯ ನಿರಂತರ ಸಾಧನೆ ಇದ್ದಾಗ ಮಾತ್ರ ಮತ್ತು ನಿತ್ಯ ನಿರಂತರ ಛಲ ಇದ್ದಾಗ ಮಾತ್ರ ಎಂಬ ನಾಣ್ಣುಡಿ ಏನು ಇದೆ ಅದಕ್ಕೆ ಶ್ರೀ ಡಿ.ದೇವರಾಜ ಅರಸು ಸರಿಸಾಟಿ ಎಂದು ಹೇಳುವುದಕ್ಕೆ ಬಯಸುತ್ತೇನೆ. ಇನ್ನು ಮುಂದುವರೆದು 'ಬಿಸಿಲ ಧಗೆಯ ಬಸಿರಿನಿಂದಲೇ ಸುಳಿವುದು ಮೆಲು ತಂಗಾಳಿ ಬಳಿಗೆ' ಎಂದಿದೆ. ಈಗ ಸುಮ್ಮನೆ ತಂಗಾಳಿ ಬರುವುದಿಲ್ಲ. ತಂಗಾಳಿ ಬರಬೇಕಾದರೆ, ಬಿಸಿಲ ಧಗೆಯ ಬಸಿರಿನಿಂದ ಬರಬೇಕು. ಆ ಬಿಸಿಲ ಧಗೆಯ ಬಸಿರಿನಲ್ಲಿ ಉಳಿದುಕೊಳ್ಳುವವರು ಎಷ್ಟೋ, ಹೋಗುವವರು ಎಷ್ಟೋ? ಇಷ್ಟೆಲ್ಲದರ ನಡುವೆ ಉಳಿದು ರಾಜಕೀಯ ಮಾಡಿ 'ಬಿಸಿಲ ಧಗೆಯ ಬಸಿರಿನಿಂದಲೇ ಸುಳಿವುದು ಮೆಲು ತಂಗಾಳಿ' ಎಂಬಂತೆ ಈ ನಾಡಿಗೆ ಕೊಟ್ಟಂತಹ ಕೀರ್ತಿಗೆ ಪಾತ್ರರಾಗುವಂತಹವರು ಯಾರು ಎಂದರೆ, ಅದು ಶ್ರೀ ಡಿ. ದೇವರಾಜ ಅರಸುರವರು. ಹಾಗಾಗಿ, ಅವರು ಶ್ರೀಸಾಮಾನ್ಯರ ಬಗ್ಗೆ, ನೊಂದವರ ಬಗ್ಗೆ, ಅತ್ಯಂತ ಕಟ್ಟಕಡೆಯ ಮನುಷ್ಯರ ಬಗ್ಗೆ ಇದ್ದಂತಹ ಕಾಳಜಿಯೇ ಇವತ್ತಿನ ಅದೇ 20 ಅಂಶದ

ಕಾರ್ಯಕ್ರಮಗಳು. ಇವತ್ತು ಆ 20 ಅಂಶದ ಕಾರ್ಯಕ್ರಮಗಳನ್ನು ಬೇರೆ ಬೇರೆ ರೂಪದಲ್ಲಿ ಮತ್ತು ಬೇರೆ ಬೇರೆ ಹೆಸರಿನಲ್ಲಿ ಪ್ರತಿರೂಪವಾಗಿ ಶ್ರೀ ಡಿ. ದೇವರಾಜ ಅರಸು ವಸತಿ ಶಾಲೆ, ಶ್ರೀ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಡಾ: ಬಿ.ಆರ್.ಅಂಬೇಡ್ಕರ್ ವಸತಿ ಶಾಲೆ, ಶ್ರೀ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳಿವೆ. ಈ ರೀತಿ ಒಬ್ಬೊಬ್ಬರ ಹೆಸರುಗಳನ್ನು ಇಟ್ಟುಕೊಂಡು ಬಂದಿದ್ದಾರೆ. ಅವೆಲ್ಲವನ್ನೂ ಒಟ್ಟುಗೂಡಿಸಿ ಎಲ್ಲಾದರೂ ಒಂದು ಕಡೆ ಒಳಗಡೆ ನೋಡಿದಾಗ ಅವೆಲ್ಲವೂ ಸಹ 20 ಅಂಶಗಳ ಕಾರ್ಯಕ್ರಮದ ಒಳಗೆಯೇ ಬರುತ್ತದೆ ಎಂಬ ವಿಚಾರವನ್ನು ಅರಿಯಬೇಕಾಗುತ್ತದೆ. ಹಾಗಾಗಿ, ರಾಜಕೀಯವಾಗಿ ಕೆಲವು ವಿಚಾರಗಳನ್ನು ಹೇಳಬೇಕಾಗುತ್ತದೆ. ಶ್ರೀ ಡಿ. ದೇವರಾಜ ಅರಸುರವರು ಇಷ್ಟೆಲ್ಲಾ ಮಾಡಿ ಮತ್ತೆ ಶ್ರೀಮತಿ ಇಂದಿರಾ ಗಾಂಧಿಯವರಿಗೆ ಪುನರ್ಜನ್ಮ ಮತ್ತು ಕಾಂಗ್ರೆಸ್ ಪಕ್ಷವನ್ನು ಮತ್ತೆ ಮೇಲಕ್ಕೆತ್ತಿ ಈ ನಾಡು ಮತ್ತು ದೇಶದಲ್ಲಿ ಮತ್ತೊಮ್ಮೆ ಕಾಂಗ್ರೆಸ್ ಅಧಿಕಾರಕ್ಕೆ ಬರುವುದಕ್ಕೆ ಕಾರಣವಾಗುವಂತಹ ಸಂದರ್ಭವನ್ನು ತಂದು ಕೊಟ್ಟಂತಹ ಕೀರ್ತಿಗೆ ಶ್ರೀ ಡಿ. ದೇವರಾಜ ಅರಸುರವರು ಪಾತ್ರರಾಗುತ್ತಾರೆ. ಆದರೆ, ಶ್ರೀ ಡಿ. ದೇವರಾಜ ಅರಸುರವರ ಪರಿಸ್ಥಿತಿ ಏನಾಗಿತ್ತು ಎಂದರೆ, ಬಾಲಬ್ರೂಯಿ ಎಂದರೆ ಶ್ರೀ ಡಿ. ದೇವರಾಜ ಅರಸುರವರು ಎಂದಾಗಿತ್ತು. ಈ ಬಾಲಬ್ರೂಯಿ ಅವರ ಕ್ವಾರ್ಟರ್ಸ್ ಆಗಿತ್ತು. ಅವರು ಆ ಕ್ವಾರ್ಟರ್ಸ್ ಅನ್ನು ಬಿಡುತ್ತಾರೆ. ಅವರು ಏಕೆ ಬಿಡುತ್ತಾರೆ? ಈಗ ಬಾಲಬ್ರೂಯಿಗೆ ಯಾರೂ ಹೋಗುವುದಿಲ್ಲ. ಈಗ ಆ ಬಾಲಬ್ರೂಯಿಯನ್ನು ಬದಲಾವಣೆಯೆ ಮಾಡಿಬಿಟ್ಟರು. ಆ ಬಾಲಬ್ರೂಯಿ ಮಾನ್ಯ ಮುಖ್ಯಮಂತ್ರಿಗಳ ನಿವಾಸ. ಅವರು ಅಧಿಕಾರ ಕಳೆದುಕೊಂಡರು ಎಂಬುದು ಒಂದು. ಪಾಪ ಅವತ್ತು ಶ್ರೀ ಡಿ. ದೇವರಾಜ ಅರಸುರವರಿಗೆ ಸರ್ಪಸುತ್ತಾಗಿರುತ್ತದೆ. ನಾವು ಅದೆಲ್ಲವನ್ನು ಸಹ ನೋಡಿದ್ದೇವೆ. ಆ ಸರ್ಪಸುತ್ತು ಆದಂತಹ ಸಂದರ್ಭದಲ್ಲಿ 10 ರಿಂದ 15 ದಿನಗಳು ಬೆಡ್‌ನಿಂದ ಏಳದೇ ಇರುವಂತಹ ಪರಿಸ್ಥಿತಿ ಇರುತ್ತದೆ. ಆ ದಿನಗಳಲ್ಲಿ ಶ್ರೀ ಡಿ. ದೇವರಾಜ ಅರಸುರವರಿಗೆ ಕಾಂಗ್ರೆಸ್ ಪಕ್ಷ ನಡೆದುಕೊಂಡಂತಹ ರೀತಿಯನ್ನು ಯಾರೂ ಮರೆಯುವಂತಿಲ್ಲ. ಅದನ್ನು ನಾವು ಹೇಳುವಂಥದ್ದು ಅಲ್ಲ. ಅದು ಇತಿಹಾಸದಲ್ಲಿ ಉಳಿದಿದೆ ಮತ್ತು ಇತಿಹಾಸದ ಪುಟಗಳನ್ನು ಸಹ ಸೇರಿದೆ. ಶ್ರೀ ಡಿ. ದೇವರಾಜ ಅರಸುರವರು ಅಲ್ಲಿಂದ ಅಧಿಕಾರವನ್ನು ಕಳೆದುಕೊಂಡರು. ಅದೇ ರೀತಿ ಶ್ರೀ ರಾಜೀವ್ ಗಾಂಧಿಯವರು ಏರ್‌ಪೋರ್ಟ್‌ಗೆ ಬಂದು ಶ್ರೀ ವೀರೇಂದ್ರ ಪಾಟೀಲರನ್ನು ಅಧಿಕಾರದಿಂದ ಇಳಿಸಿದ್ದನ್ನು ಯಾರೂ ಮರೆಯುವಂತಿಲ್ಲ. ಇವುಗಳೆಲ್ಲಾ ಇತಿಹಾಸ. ಶ್ರೀ ವೀರೇಂದ್ರ ಪಾಟೀಲರು ಶ್ರೀಮತಿ ಇಂದಿರಾ ಗಾಂಧಿಯವರ ವಿರುದ್ಧ ಚುನಾವಣೆಗೆ ನಿಂತಿದ್ದರು. ಅವರು 77,000 ಮತಗಳಿಂದ ಸೋತರು. ಇನ್ನು ಸರಿಯಾಗಿ ಚುನಾವಣೆಯ ಎಣಿಕೆಯ ಫಲಿತಾಂಶ ಘೋಷಣೆಯಾಗಿಲ್ಲ. ಆದರೆ, ಶ್ರೀ ವೀರೇಂದ್ರ ಪಾಟೀಲರು ಕಾಂಗ್ರೆಸ್ ಪಕ್ಷಕ್ಕೆ ಸೇರಿದರು. ಮತ್ತೆ ಅವರು ಕೇಂದ್ರದ ಮಂತ್ರಿಯಾದರು. ಅವರು ಮಂತ್ರಿಯಾದ ಮೇಲೆ ನಮ್ಮ ಮೇಲೆ ಪೋಲೀಸ್ ಕೇಸ್ ಆಗಿತ್ತು. ನಾವು ಪೋಲೀಸ್ ಕೇಸ್ ಅನ್ನು ಅನುಭವಿಸಿದ್ದೇವೆ. ಹಾಗಾಗಿ, ಈ ರೀತಿಯ ಇತಿಹಾಸಗಳಿವೆ. ಶ್ರೀ ಡಿ. ದೇವರಾಜ ಅರಸುರವರು ಇತಿಹಾಸವನ್ನು ಬಿಟ್ಟು ಹೋಗಿದ್ದಾರೆ.

**ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಮೇಲೆ ಕೇಸ್ ಹಾಕಿದ್ದರು ಎಂದು ಅನಿಸುವುದೇ ಇಲ್ಲ.

**ಶ್ರೀ ಎಸ್.ಎಲ್ ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನ್ನ ಮೇಲೆ ಕೇಸ್ ಹಾಕಿದ್ದರು.

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಹಾಗಾದರೆ ಮಾನ್ಯ ಸದಸ್ಯರಿಗೆ ಆಗ ಎಷ್ಟು ವರ್ಷ ವಯಸ್ಸಾಗಿತ್ತು?

**ಶ್ರೀ ಎಸ್.ಎಲ್ ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಆ ಸಮಯದದಲ್ಲಿ ನನಗೆ 15 ರಿಂದ 16 ವರ್ಷವಾಗಿತ್ತು.

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಆಗಲೇ ಅವರಿಗೆ ಕೇಸ್ ಹಾಕಲಾಗಿತ್ತೆ? ಹಾಗಾದರೆ, enquiry ಮಾಡೋಣ.

**ಶ್ರೀ ಎಸ್.ಎಲ್ ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ನೂರಕ್ಕೆ ನೂರು ಸತ್ಯವಿದೆ. ನಾನು ಬೇಕಾದರೆ ಅದನ್ನು ತೆಗೆಯಿಸಿ ತೋರಿಸುತ್ತೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಆಗ ಅವರು ಬಾಲಾಪರಾಧಿ, ಅದಕ್ಕೆ ಜೈಲಿಗೆ ಹೋಗಿಲ್ಲ.

**ಶ್ರೀ ಎಸ್.ಎಲ್ ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಅಲ್ಲಿ ಜಕ್ಕನಹಳ್ಳಿ ಎಂಬ ಊರು ಇದೆ. ಅಲ್ಲಿ ಆ ಊರಿನವರು ನಮ್ಮನ್ನು ಓಡಿಸಿಕೊಂಡು ಬಂದಿದ್ದರು. ಆಗ ನಾವು ಗದ್ದೆಯಲ್ಲಿ ಬಿದ್ದು ಓಡಿದ್ದೇವೆ. ಏಕೆಂದರೆ, ಆ ಊರು ಪಕ್ಕಾ ಕಾಂಗ್ರೆಸ್. ಅಂದರೆ, ಅಲ್ಲಿ ನೂರಕ್ಕೆ ನೂರು ಕಾಂಗ್ರೆಸ್. ಇದು ಚಿಕ್ಕಮಗಳೂರು ತಾಲ್ಲೂಕು, ಅದು ಡಾ: ಆರತಿ ಕೃಷ್ಣರವರಿಗೆ ಗೊತ್ತಿಲ್ಲ. ಆಗ ಅಲ್ಲಿ ನಮ್ಮನ್ನು ಓಡಿಸಿಕೊಂಡು ಬಂದರು. ಏಕೆಂದರೆ, ಅಲ್ಲಿ ಕಾಂಗ್ರೆಸ್‌ಗೆ ಕಟ್ಟಾ ಓಟು ಹಾಕುವಂತಹ ಜನರು ಇದ್ದರು. ಅದರಲ್ಲಿ SC/ST ಯವರು two hundred percent ಮತ್ತು ಒಂದು ಓಟ್ ಅನ್ನು ಕೂಡ ಬೇರೆ ಪಕ್ಷದವರಿಗೆ ಹಾಕುತ್ತಿರಲಿಲ್ಲ. ಅವರು ಅವತ್ತಿನ ಕಾಲಕ್ಕೆ ಹಿಂದುಳಿದ ಜನರು. ಹಾಗಾಗಿ, ಅಂತಹ ಒಂದು ಸಂದರ್ಭದಲ್ಲಿ ಶ್ರೀ ಡಿ. ದೇವರಾಜ ಅರಸುರವರು ಈ ನಾಡು ನುಡಿಯ ರಕ್ಷಣೆಗೆ ಮತ್ತು ಆಡಳಿತ ಕನ್ನಡ ಭಾಷೆ ಎಂದು ಹೇಳಿದ್ದಾರಲ್ಲ, ಇವತ್ತು ಅದು ಉಳಿದಿದೆಯೇ? ಅದಕ್ಕೆ ಏನು ಹೇಳಿದ್ದಾರೆಂದರೆ;

ಎಲ್ಲಾದರು ಇರು ಎಂತಾದರು ಇರು
ಎಂದೆಂದಿಗೂ ನೀ ಕನ್ನಡವಾಗಿರು
ಕನ್ನಡವೇ ಸತ್ಯ, ಕನ್ನಡವೇ ನಿತ್ಯ.
ನೀ ಮೆಟ್ಟುವ ನೆಲ, ಅದೆ ಕರ್ನಾಟಕ
ನೀನೇರುವ ಮಲೆ ಸಹ್ಯಾದ್ರಿ

ನೀ ಮೆಟ್ಟುವ ನೆಲ, ಅದೆ ಕರ್ನಾಟಕ
ನೀನೇರುವ ಮಲೆ ಸಹ್ಯಾದ್ರಿ.

ನೀ ಮುಟ್ಟುವ ಮರ ಶ್ರೀಗಂಧದ ಮರ
ನೀ ಕುಡಿಯುವ ನೀರ್ ಕಾವೇರಿ

ಎಂದು ಹೇಳಿದ್ದೇವೆ ಅಷ್ಟೆ. ಆದರೆ, ಅದು implement ಆಗಲಿಲ್ಲ. ಆದರೆ, ಅವತ್ತು ಶ್ರೀ ಡಿ. ದೇವರಾಜ ಅರಸುರವರು ಪ್ರಯತ್ನ ಪಟ್ಟಿದ್ದಾರೆ. ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಸಹ ಆಡಳಿತ ಭಾಷೆಯನ್ನು ಕನ್ನಡ ಭಾಷೆಯನ್ನಾಗಿ ಮಾಡುತ್ತೇವೆಂದು ಹೇಳಿದ್ದರು. ಆದರೆ, ಅದು ಅಷ್ಟು ಸುಲಭದ ಮಾತಲ್ಲ. ಅವತ್ತಿನ ಕಾಲದಲ್ಲಿ ಕನ್ನಡ ಭಾಷೆ ಆಡಳಿತ ಭಾಷೆಯಾಗಬೇಕೆಂದು ಹೋರಾಟ ಮಾಡಿದಂತಹ ಸಂದರ್ಭದಲ್ಲಿ ಅಂತಹ ಒಂದು ಆದರ್ಶ, ತತ್ವ, ಸಿದ್ಧಾಂತಗಳು ಇವತ್ತಿಗೂ ಕೂಡ ಉಳಿಯಬೇಕಾಗಿದೆ. ಅದಕ್ಕೆ ಅವರ ಜಯಂತಿಯನ್ನು ಆಚರಿಸುವ ಈ ಶುಭ ಸಂದರ್ಭದಲ್ಲಿ ಅವರ ನೆನೆಪು ಮತ್ತೆ ಮತ್ತೆ ಮರುಕಳಿಸುತ್ತಿರಬೇಕು. ಮತ್ತೆ ಮತ್ತೆ ಮುಂದಿನ ಪೀಳಿಗೆಗೆ ಆ ನೆನಪು ಅಚ್ಚಳಿಯದೇ ಉಳಿಬೇಕು ಎಂದರೆ, ಇನ್ನೂ ಕೆಲವಾರು ಕಾರ್ಯಕ್ರಮಗಳನ್ನು ಅವರ ಹೆಸರಿನಲ್ಲಿ ಮಾಡಬೇಕೆಂದು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಅವಕಾಶಕ್ಕಾಗಿ ತಮಗೆ ಧನ್ಯವಾದಗಳು.

**ಶ್ರೀ ಎನ್.ಎಸ್. ಬೋಸರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ತಮಗೆ ಧನ್ಯವಾದಗಳು. ಇವತ್ತು ರಾಜ್ಯ ಮತ್ತು ರಾಷ್ಟ್ರದ ಅತ್ಯಂತ ಗಣ್ಯರಾದ ಶ್ರೀ ಡಿ. ದೇವರಾಜ ಅರಸುರವರು ಮತ್ತು ಮಾಜಿ ಪ್ರಧಾನ ಮಂತ್ರಿಗಳಾದ ದಿವಂಗತ ರಾಜೀವ್ ಗಾಂಧಿಯವರ ಜನ್ಮ ದಿನಾಚರಣೆಯನ್ನು ಆಚರಿಸುತ್ತಿದ್ದೇವೆ. ಈ ಸಂದರ್ಭದಲ್ಲಿ ಈಗಾಗಲೇ ಮಾನ್ಯ ಸದಸ್ಯರೆಲ್ಲಾ ಶ್ರೀ ಡಿ. ದೇವರಾಜು ಅರಸುರವರ ಆಚಾರ-ವಿಚಾರಗಳ ಬಗ್ಗೆ ಮತ್ತು ಅವರು ನಡೆದು ಬಂದಿರುವಂತಹ ದಾರಿಯ ಬಗ್ಗೆ ಸಾಕಷ್ಟು ವಿಚಾರಗಳನ್ನು ತಿಳಿಸಿದ್ದಾರೆ. ಅವರ ರಾಜಕೀಯ ಇತಿಹಾಸದಲ್ಲಿ ಇಡೀ ರಾಷ್ಟ್ರಕ್ಕೆ ಮಾದರಿಯಾಗುವಂತಹ ರೀತಿಯಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರು ಘೋಷಣೆ ಮಾಡಿದಂತಹ 20 ಅಂಶಗಳ ಕಾರ್ಯಕ್ರಮವನ್ನು ಇಡೀ ರಾಷ್ಟ್ರದಲ್ಲಿ ಮತ್ತು ಶ್ರೀ ಡಿ. ದೇವರಾಜ ಅರಸುರವರು ನೂರಕ್ಕೆ ನೂರರಷ್ಟು ಕರ್ನಾಟಕದಲ್ಲಿ ಅನುಷ್ಟಾನ ಮಾಡಿದ್ದಾರೆ. ನಾನೂ ಸಹಿತ ಆ 20 ಅಂಶಗಳ ಕಾರ್ಯಕ್ರಮದಲ್ಲಿ ಸದಸ್ಯನಾಗಿದ್ದೆ. ಆಗ ಶ್ರೀ ಸಿ.ಎನ್. ಪಾಟೀಲ್‌ರವರು ಮಂತ್ರಿಯಾಗಿದ್ದರು. ಅಂತಹ ಸಂದರ್ಭದಲ್ಲಿ ಶ್ರೀ ಡಿ. ದೇವರಾಜ ಅರಸುರವರಿಗೆ ಸಾಮಾಜಿಕ ನ್ಯಾಯದ ಬಗ್ಗೆ ಇರಬಹುದು, Land Reforms ಬಗ್ಗೆ ಇರಬಹುದು ಮತ್ತು ಅನೇಕ ಬದಲಾವಣೆಗಳನ್ನು ತರತಕ್ಕಂತಹ ಪ್ರಯತ್ನವನ್ನು ಪ್ರಥಮಬಾರಿಗೆ ಕರ್ನಾಟಕದಲ್ಲಿ ನಡೆಯಿತು. ಅಲ್ಲಿಯವರೆವಿಗೂ ಕರ್ನಾಟಕದಲ್ಲಿ ಇರತಕ್ಕಂತಹ ರಾಜಕೀಯಕ್ಕೆ ಸಾಕಷ್ಟು ಬದಲಾವಣೆ ತಂದು ಇಡೀ ರಾಷ್ಟ್ರಕ್ಕೆ ಮಾದರಿಯಾಗುವಂತಹ ರೀತಿಯಲ್ಲಿ ಶ್ರೀ ಡಿ. ದೇವರಾಜ ಅರಸುರವರು ಮಾಡಿರುವಂತಹ ರಾಜಕೀಯ ವಿಷಯದಲ್ಲಿ ನನಗೆ ಆಗಿರುವಂತಹ ಒಂದೆರಡು ವಿಚಾರಗಳನ್ನು ಹೇಳುತ್ತೇನೆ. 1971ರಲ್ಲಿ ಲೋಕಸಭಾ ಚುನಾವಣೆ ನಡೆಯುವಂತಹ ಸಂದರ್ಭ ಬಂದಾಗ,

ಅವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದರು. ಆಗ ನಮ್ಮ ಜಿಲ್ಲೆಯಲ್ಲಿ ಎರಡು ಮತಕ್ಷೇತ್ರಗಳು ಇದ್ದವು. ಅಂದರೆ, ಒಂದು ರಾಯಚೂರು ಮತ್ತೊಂದು ಕೊಪ್ಪಳ. ಆಗ ನಮ್ಮ ಮುಖಂಡರನ್ನೆಲ್ಲಾ ಕರೆದಿದ್ದರು. ಅವತ್ತಿನ ಕಾಲಕ್ಕೆ ಪ್ರಾರಂಭಿಕವಾಗಿ District Convenor ಮಾಡಿದ್ದರು. ಆಗ ಯಾರನ್ನೂ ಸಹ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರನ್ನಾಗಿ ಮಾಡಿರಲಿಲ್ಲ. ಶ್ರೀ ಬಸವಂತರಾಯ ಗೌಡರು ಎಂದು ಬಹಳ ಅತ್ಯಂತ ಹಿರಿಯರಾಗಿರುವಂತಹರನ್ನು ಮಾಡಿದರು. ಶ್ರೀಮತಿ ಬಸವರಾಜೇಶ್ವರಿ ಮತ್ತು ಶ್ರೀ ಸಿ.ಎನ್. ಪಾಟೀಲರು ಅದರಲ್ಲಿ ಸದಸ್ಯರಾಗಿದ್ದರು. ನಾನು ಅವರ ಜೊತೆಗೆ ಬೆಂಗಳೂರಿಗೆ ಬಂದಿದ್ದೆ. ಅವರು ಕರೆದು ಇಬ್ಬರು ಸದಸ್ಯರನ್ನು immediately ಅಭ್ಯರ್ಥಿಗಳನ್ನು ಮಾಡಿ ಎಂದರೆ, ಅಲ್ಲಿ ಅಭ್ಯರ್ಥಿಯಾಗುವುದಕ್ಕೆ ಯಾವ ಹಿರಿಯರು ತಯಾರಿರಲಿಲ್ಲ. ಅಂದರೆ, ಯಾರೂ ಆರಿಸಿ ಬರುವುದಿಲ್ಲ ಎಂಬ ಅಪನಂಬಿಕೆಯಿಂದ ನನಗೆ ಬೇಡ, ನನಗೆ ಬೇಡವೆಂದು ಹೇಳಿದರು. ಅವತ್ತು ಎಲ್ಲರನ್ನೂ ಕೂರಿಸಿ ಏನು ಹೇಳಿದರು ಎಂದರೆ, ನೀವು ಯಾರನ್ನು ಬೇಕಾದರೂ ಮಾಡಿ, ಅಂದರೆ ರಾಜಕೀಯದಲ್ಲಿ ಇರಲಾರದಂತಹವರನ್ನು ಮಾಡಿದರೆ ಅವರು ಆರಿಸಿ ಬರುತ್ತಾರೆ. ನಾನು ಉಳಿದುದ್ದನ್ನು ನೋಡಿಕೊಳ್ಳುತ್ತೇನೆಂದು ಹೇಳಿದಾಗ ಶ್ರೀ ಕೊಲ್ಲೂರು ಮಲ್ಲಪ್ಪ ಎಂದು ಹಿರಿಯ ನಾಯಕರು ನಮ್ಮ ಭಾಗದಲ್ಲಿ ಇದ್ದರು. ಅವರ ಸಮ್ಮುಖದಲ್ಲಿ ಹೇಳಿರುವಂತಹ ಈ ಮಾತನ್ನು ನಾನು ಹೇಳುತ್ತಿದ್ದೇನೆ. ಅಂದ ಹಾಗೆ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರಿಗೆ ಗೊತ್ತಿರುವಂತೆ, ಕೊಪ್ಪಳದಲ್ಲಿ ಶ್ರೀ ಅಲವಾಣಿ ಸ್ವಾಮಿಯವರು ಬಹಳ ಹಿರಿಯರಾಗಿದ್ದರು. ಅವರ ವಿರುದ್ಧ ಶ್ರೀ ಅಂಗಡಿ ಸಂಗಣ್ಣನವರು contest ಮಾಡಿದ್ದರು. ಒಂದು ಬಾರಿ ಅವರು ಗೆದ್ದಿದ್ದರು ಮತ್ತೊಂದು ಬಾರಿ ಇವರು ಗೆದ್ದಿದ್ದರು. ಅಂತಹ ಸಂದರ್ಭದಲ್ಲಿ ರಾತ್ರಿ 12.00 ಗಂಟೆಗೆ ಬಳಗಾನೂರಿನಲ್ಲಿ ಒಬ್ಬರು ಸ್ವಾಮಿಗಳು ಇದ್ದರು. ಅವರು ರಾಜಕೀಯದಲ್ಲೂ ಇಲ್ಲ ಮತ್ತು ರಾಜಕೀಯಕ್ಕೆ ಎಂದೂ ಮತವನ್ನು ಸಹ ಹಾಕಿಲ್ಲ. ಅವರನ್ನು ರಾತ್ರಿ 12.00 ಗಂಟೆಗೆ ಎಬ್ಬಿಸಿ, ಮುಂಜಾನೆ nomination ಆಗಬೇಕಾದರೆ, ಆ ಸ್ವಾಮಿಗಳೆಲ್ಲರೂ ಬಹಳ ಆಶ್ಚರ್ಯ ಬಿದ್ದಿದ್ದರು. ಅವರು ಶ್ರೀ ಬಸವಂತರಾಯ ಗೌಡರ ಮಾತನ್ನು ಮೀರಲಾರದೆ, ತಾವು ಏನು ಹೇಳುತ್ತೀರಿ ನಾನು ಅದನ್ನು ಮಾಡುತ್ತೇನೆಂದರು. ಆಗ ಅವರಿಗೆ ಎರಡು-ಮೂರು ದಿವಸಗಳ ಕಾಲ ಸಮಯವಿತ್ತು. ಅವರ ಕಡೆಯಿಂದ nomination ಹಾಕಿಸಿದ್ದೆವು. ಆಗ ಅವರು 1,16,000 ಮತಗಳಿಂದ ಗೆದ್ದರು. ಮತ್ತೊಂದು ಕಡೆ ರಾಯಚೂರಿನಲ್ಲಿ ಯಾರೂ ಸಿಕ್ಕಿರಲಿಲ್ಲ. ಮತ್ತೆ ಯಾರನ್ನಾದರೂ ಕೇಳಿದರೆ, ನಾನು ನಿಂತುಕೊಳ್ಳುವುದಿಲ್ಲವೆಂದು ಹೇಳುತ್ತಿದ್ದರು.

(ಮುಂದು)

(798) 20.08.2026 05.20 LL-RN (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎನ್.ಎಸ್. ಬೋಸರಾಜು (ಮುಂದು):-**

ಶ್ರೀ ಅತ್ತನೂರು ಪಂಪನಗೌಡ ಅವರನ್ನು ನಿಲ್ಲಿಸಿದೆವು. ಆಗ ಅವರು 1,26,000 ಮತಗಳ ಅಂತರದಿಂದ ಅವರು ಗೆದ್ದಿದ್ದರು. ಈ ರೀತಿಯಾಗಿ ಆತ್ಮಸ್ಥೈರ್ಯದ ಶಕ್ತಿಯಿಲ್ಲದಿದ್ದರೂ ಸಹ, ನಾವು ಗೆದ್ದೇ ಗೆಲ್ಲುತ್ತೇವೆ, ನೀವು ಯಾರು ಅನುಮಾನ ಪಡಬೇಡಿ ಎಂದು ಆ ಚುನಾವಣೆಯಲ್ಲಿ ನಮ್ಮ ಭಾಗಕ್ಕೆ ಬಂದರು. ಆ ಸಂದರ್ಭದಲ್ಲಿ ಎಲ್ಲಿಯೂ ಅವರಿಗೆ

ಜಾಗ ಸಿಕ್ಕಿರುವುದಿಲ್ಲ. ಯಾವುದೋ ಒಂದು ಐ.ಬಿ.ಯಲ್ಲಿ dais ಹಾಕಿದ್ದರು ಶ್ರೀ ಸಿ.ಎನ್. ಪಾಟೀಲರವರು ಹಾಗೂ ಇತರರು ಮುಂದೆ ಕುಳಿತುಕೊಂಡು, ಈ ಚುನಾವಣೆಯಲ್ಲಿ ನಾವು ಗೆಲ್ಲುವುದಿಲ್ಲವೆಂದು ಅವರೆಲ್ಲರೂ ಅನುಮಾನ ಪಟ್ಟುಕೊಂಡಿದ್ದರು. ಆ ಸಂದರ್ಭದಲ್ಲಿ ನಮಗೆ ವೋಟು ಹಾಕುವಂತಹವರು ಹಿಂದೆ ನಿಂತಿದ್ದಾರೆ, ಈಗಾಗಲೇ ಸಮಯ ಮುಂಜಾನೆ 2.00 ಗಂಟೆಯಾಗಿದೆ. ಹಾಗಾಗಿ, ಅವರೆಲ್ಲರಿಗೂ ಊಟದ ವ್ಯವಸ್ಥೆ ಮಾಡಿ ಎಂದು ಹೇಳಿದರು. ಆ ರೀತಿಯಾಗಿ ಜನರ ಮನೋಭಾವವನ್ನು ಅರ್ಥ ಮಾಡಿಕೊಂಡು, ಯಾವ ರೀತಿಯಾಗಿ ರಾಜಕೀಯ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು, ಅವರು ಮಾಡಿರತಕ್ಕಂತಹ ರಾಜಕೀಯದ ಲೆಕ್ಕಾಚಾರವನ್ನು ಯಾವ ರೀತಿಯಾಗಿ ಜಾರಿಗೊಳಿಸಬೇಕು ಎನ್ನುವುದರಲ್ಲಿ ಅವರದ್ದೇ ಆದಂತಹ ಒಂದು ಯೋಜನೆಯಿಂದ ರಾಜ್ಯದಲ್ಲಿ ಅನೇಕ ಬದಲಾವಣೆಗಳನ್ನು ತರುವುದರ ಮೂಲಕ ಅನೇಕ ಸಣ್ಣ ಜಾತಿಗಳನ್ನು ಹಾಗೂ ಜಾತಿ-ಉಪ ಜಾತಿಗಳು ಅಂದರೆ, minute community ಗಳಲ್ಲಿಯೂ ಸಹ ಅನೇಕರನ್ನು ಶಾಸಕರನ್ನಾಗಿ ಮಾಡಿರುವಂಥದ್ದು ಅಥವಾ ಸಂಸದರನ್ನಾಗಿ ಮಾಡಿರುವಂಥದ್ದು ಇದೆ. ತಮಗೆಲ್ಲಾ ಗೊತ್ತಿರುವಂತೆ, ನಮ್ಮ ಶ್ರೀ ಬಿ. ಶಿವಣ್ಣನಂತಹವರು ಎಂ.ಎ., ಪದವಿ ಪಾಸಾಗಿ ಸುಮ್ಮನೆ ಕುಳಿತಿದ್ದರು. ಅವರನ್ನು ಆ ಭಾಗದಿಂದ ಕರೆತಂದು, ಸ್ಟೇಟ್ ಫೈನಾನ್ಸ್ ಮಿನಿಸ್ಟರ್ ಮಾಡಿದರು. ಶ್ರೀಮಾನ್ ಮಲ್ಲಿಕಾರ್ಜುನ್ ಖರ್ಗೆಯವರು ಇರಬಹುದು ಅಥವಾ ಶ್ರೀ ಎನ್. ಧರಂಸಿಂಗ್‌ರವರು ಇರಬಹುದು ಆ ಭಾಗದಲ್ಲಿ ಕೊಲ್ಲೂರು ಮಲ್ಲಪ್ಪನವರ ಒಂದು ಮಾರ್ಗದರ್ಶನದಲ್ಲಿ ಆ ಭಾಗದಲ್ಲಿ ಅಂದರೆ, ನಮ್ಮ ನಾರ್ಥನ್ ಕರ್ನಾಟಕದಲ್ಲಿ ಹಾಗೂ ಕಲ್ಯಾಣ ಕರ್ನಾಟಕದಲ್ಲಿ ಅನೇಕ ಪ್ರಮುಖರನ್ನು ಇವೊತ್ತಿನ ದಿವಸ ರಾಜಕೀಯಕ್ಕೆ ತಂದು, ಅತ್ಯಂತ ಯಶಸ್ವಿಯಾಗಿ ರಾಜಕಾರಣ ಮಾಡಲಿಕ್ಕೆ ಅವಕಾಶ ಕಲ್ಪಿಸಿರುವಂತಹ ಶ್ರೀ ಡಿ. ದೇವರಾಜು ಅರಸುರವರನ್ನು ಸದಾಕಾಲ ನೆನಪಿಸಿಕೊಳ್ಳುವಂತಹ ರೀತಿಯಲ್ಲಿ ಅವರು ನಮ್ಮ ಜನರ ಮನಸ್ಸಿನಲ್ಲಿ ಇದ್ದಾರೆ. ನಾವು ಕೂಡ ಇತ್ತೀಚೆಗೆ ನಮ್ಮ ರಾಯಚೂರು ಜಿಲ್ಲೆಯ ಮುಖಂಡರುಗಳ ಜೊತೆ ಮಾತನಾಡಿ, 21 ಅಡಿ ಉದ್ದದ ಶ್ರೀ ಡಿ. ದೇವರಾಜು ಅರಸುರವರ ಪ್ರತಿಮೆಗೆ ಈಗಾಗಲೇ ಸುಮಾರು ಒಂದು ಕೋಟಿ ರೂಪಾಯಿಗಳ ವೆಚ್ಚ ಮಾಡಿದ್ದು, ಅದನ್ನು ಉದ್ಘಾಟನೆ ಮಾಡಿರುವುದಿಲ್ಲ. ಅದನ್ನು regional ಹೈವೇನಲ್ಲಿ ಮಾಡುತ್ತಿದ್ದೇವೆ. ಎಲ್ಲಾ ಕಡೆಗಳಲ್ಲಿಯೂ ಜನರ ಮನಸ್ಸಿನಲ್ಲಿ ಶ್ರೀ ಡಿ. ದೇವರಾಜು ಅರಸುರವರು ಇವೊತ್ತಿಗೂ ಇದ್ದಾರೆ. ಹಾಗಾಗಿ, ಇವೊತ್ತಿನ ದಿವಸ ಯಾರು ಯಾರು ಒಳ್ಳೆಯ ಕೆಲಸಗಳನ್ನು ಮಾಡುತ್ತಾರೆ, ಅವರು ಜನರ ಮನಸ್ಸಿನಲ್ಲಿ ಇರುವುದಕ್ಕೆ ಸಾಧ್ಯವಾಗುತ್ತದೆ. ಇನ್ನು ಅನೇಕ ಸಂದರ್ಭಗಳಲ್ಲಿ ರಾಜಕೀಯವಾಗಿ ಅನೇಕ ಬದಲಾವಣೆಗಳು ಬರುತ್ತವೆ. ಶ್ರೀ ಎಸ್.ಎಲ್. ಭೋಜೇಗೌಡರವರು ಆಗಲೇ ಮಾತನಾಡುವಾಗ ಶ್ರೀಮತಿ ಇಂದಿರಾ ಗಾಂಧಿಯವರ ಬಗ್ಗೆ ಮಾತನಾಡಿದರು. ಶ್ರೀಮತಿ ಇಂದಿರಾ ಗಾಂಧಿಯವರು ಈ ಹಿಂದೆ ಚಿಕ್ಕಮಗಳೂರು ಕ್ಷೇತ್ರಕ್ಕೆ ಬಂದಿದ್ದರು. ಆ ಚುನಾವಣೆಯ ಸಂದರ್ಭದಲ್ಲಿ ನಾವು ಕೂಡ ಅಲ್ಲಿಗೆ ಬಂದಿದ್ದೆವು. ಆಗ ಚಿಕ್ಕಮಗಳೂರು ಜಿಲ್ಲೆಯ ಓರ್ವ ಎಕ್ಸಿಕ್ಯೂಟಿವ್ ಇಂಜಿನೀಯರ್ ಶ್ರೀ ತಮ್ಮಯ್ಯ ಎಂಬುವವರು ನಮ್ಮ ಭಾಗದಲ್ಲಿ ಅಧಿಕಾರದಲ್ಲಿದ್ದರು. ಅವರ ತೋಟದಲ್ಲಿ ನಾವೆಲ್ಲರೂ ವಾಸ್ತವ್ಯ ಇದ್ದೆವು. ಆಗ ಚುನಾವಣೆಯಲ್ಲಿ ಬದಲಾವಣೆಯಾಯಿತು. ಆ ಚುನಾವಣೆಯಲ್ಲಿ ಸೋತಿದ್ದಂತಹ ಶ್ರೀ

ವಿರೇಂದ್ರ ಪಾಟೀಲರು ಕೇಂದ್ರದಲ್ಲಿ ಇಂಡಸ್ಟ್ರಿ ಮಿನಿಸ್ಟರ್ ಆದರು. ನಂತರ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿ ಪ್ರೆಸಿಡೆಂಟ್ ಆದರು, ನಂತರ ಮುಖ್ಯಮಂತ್ರಿಗಳು ಸಹ ಆದರು. ಅನೇಕ ಬದಲಾವಣೆಗಳು ಆದವು. ಶ್ರೀ ಡಿ. ದೇವರಾಜು ಅರಸುರವರು, ಶ್ರೀಮತಿ ಇಂದಿರಾ ಗಾಂಧಿಯವರು 1980ರಲ್ಲಿ ಕರ್ನಾಟಕ್ಕೆ ಚುನಾವಣಾ ಪ್ರಚಾರಕ್ಕೆ ಬಂದರೆ, ಅವರಿಗೆ ಸರ್ಕಾರಿ ಐ.ಬಿ. ಗಳನ್ನು ಕೊಡಬಾರದು ಎಂದು ಹೇಳಿದ್ದರು. ಶ್ರೀ ಮರ್ರಿ ಚೆನ್ನಾ ರೆಡ್ಡಿಯವರು ಆಗ ಆಂಧ್ರಪ್ರದೇಶದ ಮುಖ್ಯಮಂತ್ರಿಯಾಗಿದ್ದರು. ಅವರು ಶ್ರೀಮತಿ ಇಂದಿರಾ ಗಾಂಧಿಯವರನ್ನು ತಮ್ಮ ಕಾರಿನಲ್ಲಿ ಕರೆದುಕೊಂಡು ಬಂದು ರಾತ್ರಿ 1-00 ಗಂಟೆಗೆ ರಾಯಚೂರಿನಲ್ಲಿ ಬಿಟ್ಟರು. ಅಲ್ಲಿಂದ ಅವರನ್ನು ಮುಂದುವರೆಸಬೇಕಾದರೆ, ಸಾಕಷ್ಟು ತೊಂದರೆಗಳಾದವು. ಆಗ ನಮ್ಮ ಭಾಗದಲ್ಲಿ ಎಸ್.ಎಲ್.ವಿ. ಎಂಬ ಒಂದೇ ಒಂದು ಹಳೆಯ ಹೋಟೆಲ್ ಇತ್ತು. ಆ ಹೋಟೆಲ್‌ನಲ್ಲಿ ಮಲಗುವುದಕ್ಕೆ ಸರಿಯಾದ ಮಂಚ ಸಹ ಇರಲಿಲ್ಲ ಹಾಗೂ ಇನ್ನಿತರ ಮೂಲಭೂತ ಸೌಲಭ್ಯಗಳು ಇರಲಿಲ್ಲ. ಆ ಸಂದರ್ಭದಲ್ಲಿ ನಾವು ಬೇರೆ ಬೇರೆ ಕಡೆಗಳಿಂದ ಮಂಚ, ಹೊದಿಕೆ, ದಿಂಬುಗಳನ್ನು ಹಾಕಿ ಮೂಲಭೂತ ಸೌಲಭ್ಯಗಳನ್ನು ಮಾಡಿಕೊಟ್ಟಂತಹ ಪರಿಸ್ಥಿತಿ ಕೂಡ ಬಂದಿರುತ್ತದೆ. ಏಕೆಂದರೆ, ಮಾನ್ಯ ಸದಸ್ಯರು ಶ್ರೀ ಡಿ. ದೇವರಾಜು ಅರಸುರವರಿಗೆ ಎಂತಹ ಪರಿಸ್ಥಿತಿ ಬಂದಿತ್ತು ಎಂಬ ವಿಷಯವನ್ನು ಪ್ರಸ್ತಾಪ ಮಾಡಿದ್ದರಿಂದ ನಾನು ಈ ವಿಷಯವನ್ನು ಹೇಳುತ್ತಿದ್ದೇನೆ. ಅದೇ ರೀತಿಯಾಗಿ, ಶ್ರೀಮತಿ ಇಂದಿರಾ ಗಾಂಧಿಯವರು ಕರ್ನಾಟಕ ರಾಜ್ಯಕ್ಕೆ ಪ್ರಚಾರಕ್ಕೆ ಬಂದಾಗ, ಅನೇಕ ತೊಂದರೆಗಳಿಗೆ ಒಳಪಟ್ಟಿದ್ದರು. ಇದು ರಾಜಕಾರಣದಲ್ಲಿ ಈ ರೀತಿಯಾದಂತಹ ವಿಚಾರಗಳು ನಡೆದಿರುವುದನ್ನು ನಾವೆಲ್ಲರೂ ನೋಡುತ್ತಿದ್ದೇವೆ. ಅದೇ ರೀತಿಯಾಗಿ, ಶ್ರೀ ಶಿವಕುಮಾರ್ ಕೆ. ರವರು ಪ್ರಸ್ತಾಪ ಮಾಡಿದಂತೆ, ದಿವಂಗತ ಶ್ರೀ ರಾಜೀವ್ ಗಾಂಧಿಯವರು ಸಹ ಅಚಾನಕ್ ಆಗಿ ರಾಜಕೀಯಕ್ಕೆ ಬಂದರು. ಅವರು ಬಂದಿರತಕ್ಕಂತಹ ಸಂದರ್ಭದಲ್ಲಿ ಕರ್ನಾಟಕದಲ್ಲಿ ಅವರನ್ನು ಪರಿಚಯ ಮಾಡಿಕೊಂಡಂತಹವರು ದಿವಗಂತ ಗುಂಡೂರಾವ್‌ರವರು, ಆಗ ಅವರು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು. ಶ್ರೀ ಕೆ.ಜೆ. ಜಾರ್ಜ್‌ರವರು ಯೂತ್ ಕಾಂಗ್ರೆಸ್ ಪ್ರೆಸಿಡೆಂಟ್ ಹಾಗೂ ಶ್ರೀ ಬಿ.ಕೆ. ಹರಿಪ್ರಸಾದ್‌ರವರು ಜನರಲ್ ಸೆಕ್ರೆಟರಿ ಆಗಿದ್ದರು. ನಾನು ಮತ್ತು ಶ್ರೀ ಕೆ.ಎಚ್. ಪಾಟೀಲ್‌ರವರು ಹಾಗೂ ಶ್ರೀ ಬಿ.ವಿ. ದೇಸಾಯಿಯವರು treasurer ಆಗಿದ್ದೆವು. ಆಗ ನಾವೆಲ್ಲರೂ ಏರ್‌ಪೋರ್ಟ್ ಹೋಗಿದ್ದೆವು. ಆ ಸಂದರ್ಭದಲ್ಲಿ ಶ್ರೀ ಅರುಣ್ ಕುಮಾರ್ ನೆಹರು ರವರು ಹಾಗೂ ಇತರರು ಶ್ರೀ ರಾಜೀವ್ ಗಾಂಧಿಯವರನ್ನು ಕರೆದುಕೊಂಡು ಬೆಂಗಳೂರು ಅರಮನೆ ಮೈದಾನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮಕ್ಕೆ ಆಗಮಿಸಿದ್ದರು. ಆಗ ಶ್ರೀ ಡಿ.ಆರ್. ಕಾರ್ತಿಕೇಯನ್ ಎಂಬುವವರು ಕರ್ನಾಟಕ ಗುಪ್ತಚರ ವಿಭಾಗದ ಪೋಲೀಸ್ ಮಹಾನಿರೀಕ್ಷಕರು ಆಗಿದ್ದರು. ಅವರು ಒಳ್ಳೆಯ ರೀತಿಯಾದಂತಹ ಏರ್ಪಾಡು ಮಾಡಿದ್ದರು. ಆಗ, ಶ್ರೀ ರಾಜೀವ್ ಗಾಂಧಿಯವರನ್ನು ಇಡೀ ಕರ್ನಾಟಕ ರಾಜ್ಯಕ್ಕೆ ಪರಿಚಯ ಮಾಡಿಕೊಡಲಾಯಿತು. ಇದರಿಂದಾಗಿ, ಅವರು ಅನೇಕ ಕಾನೂನುಗಳಿಗೆ ತಿದ್ದುಪಡಿ ತರುವುದರ ಮುಖಾಂತರ ಅಂದರೆ, ಇಡೀ ದೇಶದಲ್ಲಿ ಪ್ರಥಮ ಬಾರಿಗೆ ಮಹಿಳೆಯರಿಗೆ ಮತ್ತು ಮೀಸಲಾತಿ ತರುವುದರ ಮುಖಾಂತರ ಪಂಚಾಯತ್ ರಾಜ್ ವ್ಯವಸ್ಥೆಗೆ ಇವೊತ್ತಿನ ದಿವಸ ಅವಕಾಶ ಕಲ್ಪಿಸಿಕೊಟ್ಟಿರುತ್ತಾರೆ. ಅಂತಹ ಮಹಾನ್

ಪುರುಷರು ಇವೊತ್ತಿನ ದಿವಸ ರಾಜ್ಯದಲ್ಲಿ, ರಾಷ್ಟ್ರದಲ್ಲಿ ಇಲ್ಲದೇ ಇದ್ದರೂ ಸಹ, ಅವರ ನೆನಪಿಗಾಗಿ ಅನೇಕ ಕಾರ್ಯಕ್ರಮಗಳು, ಯೋಜನೆಗಳು ಮುಂದುವರೆಯುತ್ತಿವೆ. ಅವುಗಳು ಇನ್ನು ಹೆಚ್ಚಿನ ರೀತಿಯಲ್ಲಿ ಮುಂದುವರೆಯಲಿ ಎಂದು ಈ ಸಂದರ್ಭದಲ್ಲಿ ಹಾರೈಸಿ, ಅಂತಹ ಪ್ರಮುಖರಿಗೆ ಮತ್ತೊಂದು ಬಾರಿ ನನ್ನ ಕೃತಜ್ಞತೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ನಮ್ಮ ನಾಡು ಕಂಡಂತಹ ಬಹಳ ಅದ್ಭುತ ವ್ಯಕ್ತಿತ್ವ ಶ್ರೀ ಡಿ. ದೇವರಾಜು ಅರಸುರವರ ವ್ಯಕ್ತಿತ್ವ. 1915 ಆಗಸ್ಟ್ 20 ರಂದು ಜನಿಸಿರುವಂತಹ ಈ ಮೇರು ವ್ಯಕ್ತಿತ್ವ 1982ರಲ್ಲಿ ಸ್ವರ್ಗಸ್ಥರಾಗುತ್ತಾರೆ. ನಮ್ಮ ರಾಜ್ಯದಲ್ಲಿ ಬಹಳಷ್ಟು ನಾಯಕರು ಮುಖ್ಯಮಂತ್ರಿಗಳಾಗಿ ಹೋಗಿದ್ದಾರೆ. ಆದರೆ, ಶಾಶ್ವತವಾಗಿ ಅವರ ಹೆಸರುಗಳನ್ನು ಉಳಿಸಿಕೊಂಡವರಲ್ಲಿ ಅನೇಕರು ಇದ್ದಾರೆ. ಅದರೊಳಗೆ ಶ್ರೀ ಡಿ. ದೇವರಾಜು ಅರಸು ಕೂಡ ಒಬ್ಬರು. ಶ್ರೀ ನೇತಾಜಿ ಸುಭಾಷ್ ಬೋಸ್‌ರವರು ಒಂದು ಕಡೆ ಒಂದು ಮಾತನ್ನು ಹೇಳುತ್ತಾರೆ. ಅದೇನೆಂದರೆ, "Ideas and Ideals never perish" ಎಂದು. ಅಂದರೆ, ಆದರ್ಶಗಳು ಮತ್ತು ಕನಸುಗಳು ಯಾವತ್ತಿಗೂ ನಾಶವಾಗುವುದಿಲ್ಲ. ಅದೇ ರೀತಿಯಾಗಿ, ಶ್ರೀ ಡಿ. ದೇವರಾಜು ಅರಸುರವರ ಆದರ್ಶಗಳು ಯಾವತ್ತಿಗೂ ಕೂಡ ನಾಶ ಆಗದೇ ಇರುವಂತಹ ಆದರ್ಶಗಳನ್ನು ನಮ್ಮ ನಾಡಿಗೆ, ನಮ್ಮ ದೇಶಕ್ಕೆ ಬಿಟ್ಟು ಹೋಗಿದ್ದಾರೆ. ಅವೊತ್ತು ಒಂದು ಕಾಲ ಇತ್ತು. ಅದೇನೆಂದರೆ, ಬಡವರನ್ನು ನೋಡದೇ ಇರುವಂತಹ ಕಾಲ, ಬಡವರನ್ನು ಕಡೆಗಣಿಸತಕ್ಕಂತಹ ಕಾಲ, ಹಿಂದುಳಿದಿರುವಂತಹರನ್ನು ಕಡೆಗಣಿಸತಕ್ಕಂತಹ ಕಾಲ ಇತ್ತು. ಆದರೆ, ಶ್ರೀ ಡಿ. ದೇವರಾಜು ಅರಸುರವರು ಅಂತಹ ಹಿಂದುಳಿದಿರುವಂತಹವರಿಗೆ, ಅಂತಹ ಶೋಷಿತರಿಗೆ, ಅಂತಹ ಧ್ವನಿ ಇಲ್ಲದವರಿಗೆ, ಧ್ವನಿಯನ್ನು ಕೊಟ್ಟಂತಹ, ಬಡವರ ಧ್ವನಿ, ದೀನದಲಿತರ ಮೇರು ನಾಯಕ ಯಾರೆಂದು ಹೇಳಿದರೆ, ಅದು ಶ್ರೀ ಡಿ. ದೇವರಾಜು ಅರಸುರವರು. ಅವರ ಸಾಧನೆಗಳ ಬಗ್ಗೆ ಹೇಳುವುದಾದರೆ, ಅದರ ಬಗ್ಗೆ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಅದನ್ನು ನಾನು ಪುನರಾವರ್ತನೆ ಮಾಡುವುದಿಲ್ಲ. ಮಾನ್ಯ ಸದಸ್ಯರೊಬ್ಬರು ಆಗಲೇ ಮಾತನಾಡುತ್ತಾ, ‘ಉಳುವವನೆ ಭೂಮಿಯ ಒಡೆಯ’ ಎಂದು ಹೇಳಿದರು. ಆ ಯೋಜನೆ ಇಡೀ ದೇಶದ ಬಹಳಷ್ಟು ರಾಜ್ಯಗಳಲ್ಲಿ ಅನುಷ್ಠಾನವೇ ಆಗಲಿಲ್ಲ. ಆದರೆ, ಕರ್ನಾಟಕ ರಾಜ್ಯದಲ್ಲಿ ಮಾತ್ರ ‘ಉಳುವವನೆ ಭೂಮಿಯ ಒಡೆಯ’ ಎಂಬ ಯೋಜನೆಯನ್ನು ಜಾರಿಗೆ ತಂದಂತಹ ಗಟ್ಟಿ ವ್ಯಕ್ತಿತ್ವ ಯಾರಪ್ಪಾ ಎಂದು ಹೇಳಿದರೆ, ಅದು ಕರ್ನಾಟಕದ ಶ್ರೀ ಡಿ. ದೇವರಾಜು ಅರಸುರವರು. ಡಾ॥ ಜಿ. ಪರಮೇಶ್ವರ್‌ರವರು ಕೂಡ ಅದೇ ಮಾತನ್ನೇ ಹೇಳುತ್ತಿದ್ದಾರೆ. ಆ ರೀತಿಯಾದಂತಹ ಗಟ್ಟಿತನದಿಂದ ಕೂಡಿರತಕ್ಕಂತಹ ಬಡವರನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿರುವಂತಹ, ಹಿಂದುಳಿದಂತಹವರಿಗೆ ನ್ಯಾಯ ಕೊಟ್ಟವರು ಯಾರಪ್ಪಾ ಎಂದರೆ, ಅವರೇ ಶ್ರೀ ಡಿ. ದೇವರಾಜ ಅರಸುರವರು. ಯಾರಿಗೆ ಜಮೀನು ಇರಲಿಲ್ಲ ಎಂದರೆ, ದಲಿತರಿಗೆ ಇರಲಿಲ್ಲ, ಹಿಂದುಳಿದಿರುವಂಥವರಿಗೆ ಜಮೀನು ಇರಲಿಲ್ಲ. ಅವೊತ್ತಿನ ಕಾಲದಲ್ಲಿ ಏನು ಮಾಡುತ್ತಿದ್ದರೆಂದರೆ,... ಉದಾಹರಣೆಗೆ, ಶ್ರೀ ಎಸ್.ಎಲ್. ಭೋಜೇಗೌಡರಂತಹ ಶ್ರೀಮಂತರ ಜಮೀನುಗಳನ್ನು ಬೇರೆ ಬೇರೆಯವರು ಗೇಣಿಗೆ (ಪಾಲಿಗೆ) ತೆಗೆದುಕೊಂಡು ಉಳುಮೆ ಮಾಡುತ್ತಿದ್ದರು.

ಅಂತಹವರಿಗೆ ಜಮೀನೇ ಇರಲಿಲ್ಲ. ಆ ರೀತಿಯಾಗಿ ಎಷ್ಟು ಜನರು ಎಷ್ಟು ವರ್ಷಗಳಿಂದ ಉಳುಮೆ ಮಾಡುತ್ತಿದ್ದಾರೆ ಎಂಬುದರ ಆಧಾರದ ಮೇರೆಗೆ ಅವರಿಗೆ ಜಮೀನು ನೀಡುವಂತಹ ಯೋಜನೆಯನ್ನು ಜಾರಿಗೆ ತಂದರು. ಅದಕ್ಕೆ ವಿರೋಧಗಳು ಸಹ ಅಷ್ಟೇ ಬಂದವು. ಅದ್ಯಾವುದಕ್ಕೂ ಕೂಡ, ತಲೆಕೆಡಿಸಿಕೊಳ್ಳದೇ, ಒಂದು ಕಾಯಿದೆಯನ್ನು ಜಾರಿಗೆ ತಂದವರು ಯಾರು ಎಂದರೆ, ಅದು ಶ್ರೀ ಡಿ. ದೇವರಾಜು ಅರಸುರವರು. ಇಂತಹ ಒಂದು ಕಾಯಿದೆಯನ್ನು ಮಾಡುವುದು ಅಷ್ಟು ಸುಲಭವಾದ ಕೆಲಸ ಆಗಿರಲಿಲ್ಲ. ಆದರೆ, ಅವರು ಆ ರೀತಿಯ ಕಾನೂನನ್ನು ಜಾರಿಗೆ ತರುತ್ತಾರೆ. ಇದರಿಂದಾಗಿಯೇ, ಅವರ ಹೆಸರು ಶಾಶ್ವತವಾಗಿ ಜನರ ಮನಸ್ಸಿನಲ್ಲಿ ಉಳಿದುಕೊಂಡಿದೆ. ಆದರೆ, ಈಗ ಆ ರೀತಿಯ ಯಾವುದೇ ಒಂದು ಸಣ್ಣ ಕಾಯಿದೆಯನ್ನು ಜಾರಿಗೆ ತರಬೇಕೆಂದರೆ, ಎಷ್ಟು ವಿರೋಧವನ್ನು ನಾವು ಎದುರಿಸುತ್ತೇವೆಂಬುದು ನಮಗೆ ಗೊತ್ತಿದೆ. ಆದರೆ, ಅಂತಹ ಕಾಲದಲ್ಲಿಯೂ ಸಹ ಇಂತಹ ಒಂದು ದೊಡ್ಡ ಕಾಯಿದೆಯನ್ನು ಜಾರಿಗೆ ತಂದಿರುತ್ತಾರೆ. ಅದೇ ರೀತಿಯಾದಂತಹ ಮತ್ತೊಬ್ಬ ವ್ಯಕ್ತಿ ಯಾರೆಂದರೆ, ಶ್ರೀ ಎಲ್.ಜಿ. ಹಾವನೂರು (ಶ್ರೀ ಲಕ್ಷ್ಮಣ ಗುಂಡಪ್ಪ ಹಾವನೂರು) ರವರು. ಶ್ರೀ ಡಿ. ದೇವರಾಜು ಅರಸುರವರ ಜೊತೆಗೆ ಶ್ರೀ ಎಲ್.ಜಿ. ಹಾವನೂರು ಅವರನ್ನು ಸಹ ನಾವು ಸ್ಮರಿಸಬೇಕಾಗುತ್ತದೆ. ಶ್ರೀ ಎಲ್.ಜಿ. ಹಾವನೂರುರವರು ಮೀಸಲಾತಿಯನ್ನು ಕೊಡಬೇಕೆಂದು ಹೇಳಿದಾಗ, ಹಾವನೂರು ವರದಿಯನ್ನು ಅನೇಕರು ಅನುಷ್ಠಾನ ಮಾಡುವುದಿಲ್ಲ. ಆದರೆ, ಹಾವನೂರು ವರದಿಯನ್ನು ಜಾರಿಗೆ ತಂದವರು ಯಾರೆಂದರೆ, ಶ್ರೀ ಡಿ. ದೇವರಾಜು ಅರಸುರವರು. ಅಲ್ಲದೇ, ಶ್ರೀ ಡಿ. ದೇವರಾಜು ಅರಸುರವರೇ, ಅವರನ್ನು ಹಿಂದುಳಿದ ವರ್ಗಗಳ ಬಗ್ಗೆ ವರದಿ ನೀಡುವುದಕ್ಕೆ ನೇಮಿಸಿರುತ್ತಾರೆ. ಶ್ರೀ ಹಾವನೂರು ವರದಿ ಏನು ಹೇಳುತ್ತದೆ ಎಂದರೆ, "ಹಿಂದುಳಿದಿರುವಂತಹವರಿಗೆ ಶೈಕ್ಷಣಿಕವಾಗಿ ಮತ್ತು ಔದ್ಯೋಗಿಕವಾಗಿ ಮೀಸಲಾತಿಯನ್ನು ಕೊಡಬೇಕು" ಎಂದು ಹೇಳುತ್ತದೆ. ಅದನ್ನು ಜಾರಿಗೆ ತಂದಂತಹ ಮೊದಲನೆಯ ಮುಖ್ಯಮಂತ್ರಿ ಶ್ರೀ ಡಿ. ದೇವರಾಜು ಅರಸುರವರು. ಎಸ್.ಸಿ./ಎಸ್.ಟಿ. ಸಮುದಾಯಗಳಿಗೆ ಆ ಮೀಸಲಾತಿ ಇದೆ. ಆದರೆ, ಶ್ರೀ ಡಿ. ದೇವರಾಜು ಅರಸುರವರು ಹಾವನೂರು ವರದಿಯನ್ನು ಜಾರಿಗೊಳಿಸುವ ಮೂಲಕ ಹಿಂದುಳಿದಂತಹವರಿಗೆ ಶೈಕ್ಷಣಿಕವಾಗಿ ಮತ್ತು ಔದ್ಯೋಗಿಕವಾಗಿ ಮೀಸಲಾತಿಯನ್ನು ಕೊಟ್ಟಂತಹವರಾಗಿರುತ್ತಾರೆ. ಆದರೆ, ಇವೊತ್ತಿನ ದಿವಸ ಎಷ್ಟು ವರದಿಗಳು ಧೂಳು ತಿನ್ನುತ್ತಿವೆ ಎಂಬುದು ನಮಗೆಲ್ಲರಿಗೂ ಗೊತ್ತಿದೆ. ಉದಾಹರಣೆಗೆ, ಶ್ರೀ ಎಚ್. ಕಾಂತರಾಜು ವರದಿ ಧೂಳು ತಿನ್ನುತ್ತಿದೆ. ಈಗ ಜಾತಿ ಗಣತಿಯಾಗಿದೆ. ಅದನ್ನು ಈ ಸರ್ಕಾರ ಏನು ಮಾಡುತ್ತದೆ ಎಂಬುದನ್ನು ನೋಡೋಣ. ಶ್ರೀ ಮಧುಸೂಧನ್ ಆರ್. ನಾಯಕ್‌ರವರ ವರದಿಯನ್ನು ಈ ಸರ್ಕಾರ ಜಾರಿಗೆ ತರಬೇಕು.

**ಶ್ರೀ ಯು.ಟಿ ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಸಚಿವರು):-** ಮಾನ್ಯ ರವಿಕುಮಾರ್‌ರವರೇ, ತಾವು ವಿರೋಧ ಮಾಡಬೇಡಿ, ನಾವು ಆ ವರದಿಯನ್ನು ಜಾರಿಗೆ ತರುತ್ತೇವೆ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನಾವು ವಿರೋಧ ಮಾಡುವ ಪ್ರಶ್ನೆಯೇ ಇರುವುದಿಲ್ಲ. ಶ್ರೀ ಮಧುಸೂಧನ್ ಆರ್. ನಾಯಕ್‌ರವರ ವರದಿ ಜಾರಿಗೆ ಬರಬೇಕೆಂದು ನಾವು ಬೇಕಾದರೆ ಧರಣಿ ಕುಳಿತುಕೊಳ್ಳುತ್ತೇವೆ. ಏಕೆಂದರೆ, ಈ ರೀತಿಯ ವರದಿಯನ್ನು ಜಾರಿಗೆ ತರಬೇಕೆಂದು ಆ ವರದಿಗಾಗಿ ಸರ್ಕಾರ ನೂರಾರು ಕೋಟಿ ರೂಪಾಯಿ ಖರ್ಚು ಮಾಡಿರುತ್ತದೆ. ಆದರೆ, ಅದನ್ನು ಜಾರಿಗೆ ತರುವುದೇ ಇಲ್ಲ. ಹಾಗಾಗಿ, ಶ್ರೀ ಡಿ. ದೇವರಾಜು ಅರಸುರವರ ಆದರ್ಶಗಳಲ್ಲಿ ಇದನ್ನು ಸಹ ನಾನು ಆಗ್ರಹಪಡಿಸುತ್ತೇನೆ. ಅದರಂತೆ, ಶ್ರೀ ಡಿ.ಕೆ. ಶಿವಕುಮಾರ್‌ರವರ ನೇತೃತ್ವದ ಸರ್ಕಾರ ಶ್ರೀ ಮಧುಸೂಧನ್ ಆರ್. ನಾಯಕ್‌ರವರ ವರದಿಯನ್ನು ಜಾರಿಗೆ ತರಬೇಕು.

**(ಮುಂದು...)**

(799) 20.08.2026 ವೈಎಲ್-ವಿಕೆ 5.30 (ಸಭಾಪತಿಯವರ ಉಪಸ್ಥಿತಿ)

ಶ್ರೀ ಎನ್.ರವಿಕುಮಾರ್ (ಮುಂದು):-

ಅದೇ ರೀತಿ ಕ್ರಾಂತಿಕಾರಕವಾಗಿರುವಂಥ ಮತ್ತೊಂದು ನಿರ್ಧಾರ ಯಾವುದೆಂದರೆ, ಹಾಸ್ಟೆಲ್‌ಗಳ ಸುಧಾರಣೆ. ಉನ್ನತ ಶಿಕ್ಷಣ ಎಂಬುವುದು ಬಡವರಿಗೆ ಕನಸ್ಸಾಗಿದ್ದು, ಮನೆಯಲ್ಲಿ ಓದಲು ಸುಸಜ್ಜಿತ ವಾತಾವರಣ ಇರುವುದಿಲ್ಲ. ಅದರಲ್ಲಿಯೂ ಗ್ರಾಮೀಣ ಪ್ರದೇಶಗಳಲ್ಲಿ ಅಷ್ಟಾಗಿ ಕಾಲೇಜುಗಳು ಇರುವುದಿಲ್ಲ. ಆ ಸಂದರ್ಭದಲ್ಲಿ ಬಡವರಿಗೆ, ಹಿಂದುಳಿದ ವರ್ಗದವರಿಗೆ ಹಾಸ್ಟೆಲ್ ವ್ಯವಸ್ಥೆ ಕಲ್ಪಿಸಿಕೊಟ್ಟು, ಆಹಾರದ ಭದ್ರತೆ, ಸಾಮಾಜಿಕ ಭದ್ರತೆ, ವಸತಿ ವ್ಯವಸ್ಥೆಯನ್ನು ಜಾರಿಗೆ ತರುವುದರ ಮೂಲಕ ದೊಡ್ಡ ಮಟ್ಟದಲ್ಲಿ ಸೌಲಭ್ಯವನ್ನು ಕಲ್ಪಿಸಿಕೊಟ್ಟವರು ಯಾರೆಂದರೆ, ಶ್ರೀ ಡಿ. ದೇವರಾಜ ಅರಸು. ಈ ರೀತಿಯಾಗಿ ಸಾಕಷ್ಟು ಸುಧಾರಣೆಗಳನ್ನು ಮಾಡಿದ್ದಾರೆ. ಹಾಗೆಯೇ ಮಲ ಹೊರುವ ಪದ್ಧತಿ ಬಗ್ಗೆ ಮಾನ್ಯ ಸದಸ್ಯರೊಬ್ಬರು ಉಲ್ಲೇಖ ಮಾಡಿದರು. ಇವತ್ತಿನ ದಿವಸ ಯಂತ್ರಗಳ ಮೂಲಕ ಮಲ ಹೊರುವಂಥ ವ್ಯವಸ್ಥೆ ಕಲ್ಪಿಸಲಾಗಿದೆ. ಆದಾಗ್ಯೂ ಕೂಡ ಮಲವನ್ನು ತಲೆಯ ಮೇಲೆ ಹೊತ್ತುಕೊಂಡು ಹೋಗುವಂಥದು, ಕೈಯಿಂದ ಸ್ವಚ್ಛಗೊಳಿಸುವಂಥ ಘಟನೆ ಆಗಾಗ ನಡೆಯುತ್ತದೆ. ಆ ರೀತಿ ನಡೆಸಿಕೊಳ್ಳುವಂಥ ಶಬ್ಧವನ್ನು ಕೇಳಿದರೆ, ನಮ್ಮ ಮನಸ್ಸು ವಿಲವಿಲ ಎಂದು ಒದ್ದಾಡುತ್ತದೆ. ಇಂತಹ ಪದ್ಧತಿಯನ್ನು ವಿರೋಧ ಮಾಡುವ ಮೂಲಕ ಕಾನೂನು ಜಾರಿಗೆ ತಂದವರು ಯಾರೆಂದರೆ, ಶ್ರೀ ಡಿ. ದೇವರಾಜ ಅರಸು.

ಹಾಗೆಯೇ ಋಣಮುಕ್ತ ಕಾಯಿದೆಯನ್ನು ಜಾರಿಗೆ ತಂದರು. 'ಋಣಮುಕ್ತ ಕಾಯಿದೆ' ಎಂದರೆ, ಬಡವರು, ಕೂಲಿಕಾರ್ಮಿಕರಿಗೆ ಖಾಸಗಿ ಲೇವಾದೇವಿದಾರರು ಬಡ್ಡಿ, ಚಕ್ರಬಡ್ಡಿ ವಿಧಿಸುತ್ತಿದ್ದು, ಅವರಿಂದ

ಶೋಷಣೆಗೊಳಗಾಗುತ್ತಿದ್ದರು. ಆ ಶೋಷಣೆಗೆ ಮುಕ್ತಿಕೊಟ್ಟವರು ಯಾರೆಂದರೆ, ಶ್ರೀ ಡಿ. ದೇವರಾಜ ಅರಸು. ಅದೇ ರೀತಿ ಇನ್ನೊಂದು ಕಾಯಿದೆಯನ್ನು ಜಾರಿಗೆ ತರುತ್ತಾರೆ. ಈ ಹಿಂದೆ ಎತ್ತಿನಬಂಡಿಯೊಳಗೆ ಎರಡು-ಮೂರು ಮಂದಿಯನ್ನು ಕೂರಿಸಿಕೊಂಡು, ಆ ಎತ್ತಿನಬಂಡಿಯನ್ನು ಕೈಯಿಂದ ಎಳೆದುಕೊಂಡು ಹೋಗುತ್ತಿದ್ದರು. ಆ ವಿಚಾರಗಳನ್ನು ಕೇಳಿದಾಗ ನನಗೂ ಸಹ ಆಶ್ಚರ್ಯವಾಗುತ್ತದೆ. ಆನಂತರ ಬಡವರು ಎತ್ತಿನಬಂಡಿಯಲ್ಲಿ ಕೂರಿಸಿಕೊಂಡು ಹೋಗುವುದನ್ನು ಸ್ಥಗಿತಗೊಳಿಸಿ, ಸೈಕಲ್ ರಿಕ್ಷಾ, ಆಟೋರಿಕ್ಷಾ ಒದಗಿಸಲು ಸರ್ಕಾರದ ಮೂಲಕ ಸಹಾಯ ಮಾಡಿದವರು ಯಾರೆಂದರೆ, ಶ್ರೀ ಡಿ. ದೇವರಾಜ ಅರಸು.

ಈ ಹಿಂದೆ ನಾವು ಕರ್ನಾಟಕವನ್ನು ಮೈಸೂರು ರಾಜ್ಯ / ಮೈಸೂರು ಪ್ರಾಂತ್ಯ ಎಂದು ಕರೆಯುತ್ತಿದ್ದು, ಅದರ ಹೆಸರನ್ನು ಬದಲಾಯಿಸಿ 'ಕರ್ನಾಟಕ ರಾಜ್ಯ' ಎಂದು ನಾಮಕರಣ ಮಾಡಿದವರು ಯಾರೆಂದರೆ, ಶ್ರೀ ಡಿ.ದೇವರಾಜ ಅರಸು. ಗ್ರಾಮೀಣ ಬಡವರಿಗೆ ಆಹಾರಕ್ಕಾಗಿ ಕೆಲಸ. ಅಂದರೆ, 'ಕೂಲಿಗಾಗಿ ಕಾಳು ಯೋಜನೆ' ಎಂದು ಏನು ಕರೆಯುತ್ತೇವೆ, ಅಂತಹ ಆಹಾರಕ್ಕಾಗಿ ಯೋಜನೆಯನ್ನು ಜಾರಿಗೆ ತಂದವರು ಯಾರೆಂದರೆ, ಶ್ರೀ ಡಿ.ದೇವರಾಜ ಅರಸು. ಈ ರೀತಿಯಾಗಿ ಅನೇಕ ಕಾರ್ಯಗಳನ್ನು ಮಾಡಿದ್ದಾರೆ. ಬಡವರಿಗೋಸ್ಕರ, ದಿನದಲಿತರಿಗೋಸ್ಕರ, ಧ್ವನಿ ಇಲ್ಲದೇ ಇರುವವರಿಗೋಸ್ಕರ ಸಾಕಷ್ಟು ಕೆಲಸ ಮಾಡಿದವರಲ್ಲಿ ಗುರುತಿಸುವಂಥ ವ್ಯಕ್ತಿ ಯಾರೆಂದರೆ, ಶ್ರೀ ಡಿ.ದೇವರಾಜ ಅರಸು.

ಆದರೆ, ಇವತ್ತಿನ ದಿವಸ ಅವರ ಕುಟುಂಬವು ರಾಜಕೀಯದಿಂದಲೇ ನೈಪತ್ಯಕ್ಕೆ ಸರಿದಿದೆ. ಇಷ್ಟು ದೊಡ್ಡ ಮಟ್ಟದಲ್ಲಿ ಕೆಲಸ ಮಾಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಬೇರು ಮಟ್ಟದಲ್ಲಿ ಕಟ್ಟಿದಂಥ ಮಹಾನ್ ನಾಯಕ ಯಾರೆಂದರೆ, ಶ್ರೀ ಡಿ.ದೇವರಾಜ ಅರಸು. ಎಂತಹ ಪರಿಸ್ಥಿತಿ ಬಂತು ಎಂದರೆ, ಅಂತಹ ಒಬ್ಬ ವ್ಯಕ್ತಿಯಿಂದ ಕಾಂಗ್ರೆಸ್ ಪಕ್ಷವು ರಾಜೀನಾಮೆ ಪಡೆದುಕೊಳ್ಳುತ್ತದೆ. ಏತಕ್ಕೆ ರಾಜೀನಾಮೆ ಪಡೆದುಕೊಂಡಿತ್ತು ಎಂಬುದು ಗೊತ್ತಿಲ್ಲ, ಅದರ ಬಗ್ಗೆ ವಿವರವಾಗಿ ಎಳೆಯುವುದಕ್ಕೆ ಹೋಗುವುದಿಲ್ಲ. ಆದರೆ, ಶ್ರೀ ಡಿ. ದೇವರಾಜ ಅರಸುರವರಿಂದ ರಾಜೀನಾಮೆ ಪಡೆದುಕೊಳ್ಳುತ್ತಾರೆ. ಅದರಲ್ಲಿ ಮಾಜಿ ಪ್ರಧಾನ ಮಂತ್ರಿಗಳಾದ ದಿವಂಗತ ಸಂಜಯ್ ಗಾಂಧಿಯವರ ಪಾತ್ರ ಬಹಳ ಅಪಾರವಾಗಿರುತ್ತದೆ. ಅಷ್ಟರ ಮಟ್ಟಿಗೆ ಹಸ್ತಕ್ಷೇಪ ಮಾಡಿ, ರಾಜೀನಾಮೆ ಕೊಡುವಂತೆ ಮಾಡುತ್ತಾರೆ. ಕೊನೆಗೆ ಎಲ್ಲಿಗೆ ಮುಟ್ಟುತ್ತದೆ ಎಂದರೆ, ಶ್ರೀ ಡಿ.ದೇವರಾಜ ಅರಸುರವರು ಕಾಂಗ್ರೆಸ್ ಪಕ್ಷವನ್ನು ಬಿಟ್ಟು, `ಕರ್ನಾಟಕ ಕ್ರಾಂತಿರಂಗ (The Indian National Congress (U)) ಎನ್ನುವಂಥ ಹೊಸ ಪಕ್ಷವನ್ನೇ ಕಟ್ಟುತ್ತಾರೆ. ನಂತರ ಆ ಪಕ್ಷವನ್ನು ಜನತಾ ಪಾರ್ಟಿಗೆ ಸೇರ್ಪಡಿಸುತ್ತಾರೆ. ಈ ರೀತಿಯಾಗಿ ಶ್ರೀ ಡಿ.ದೇವರಾಜ ಅರಸುರವರ ಸಾಧನೆ ಅಪಾರವಾಗಿದೆ.

ಸದರಿಯವರನ್ನು ನೆನಪಿಸಿಕೊಳ್ಳುವಾಗ ಶ್ರೀ ನಾಲ್ವಡಿ ಕೃಷ್ಣರಾಜ್ ಒಡೆಯರ್‌ರವರನ್ನು ಸಹ ನೆನಪಿಸಿಕೊಳ್ಳಬೇಕಾಗುತ್ತದೆ. ಶ್ರೀ ನಾಲ್ವಡಿ ಕೃಷ್ಣರಾಜ್ ಒಡೆಯರ್‌ರವರು ಬಂಗಾರವನ್ನು ಒತ್ತೆಯಾಗಿಟ್ಟು, ಯಾವ ರೀತಿ ಕೃಷ್ಣರಾಜ ಸಾಗರ ಅಣೆಕಟ್ಟನ್ನು ಕಟ್ಟುತ್ತಾರೆ, ಅದೇ ರೀತಿ ಶ್ರೀ ಡಿ.ದೇವರಾಜ ಅರಸುರವರು ತಮ್ಮ ಮನೆಯಲ್ಲಿ ಕೆಲಸ ಮಾಡುತ್ತಿದ್ದ ದಲಿತ ವ್ಯಕ್ತಿ ಚೆಲುವಯ್ಯ ಎಂಬುವವರಿಗೆ ಮೊದಲ ಬಾರಿಗೆ 4 ಎಕರೆ ಭೂಮಿಯನ್ನು ನೀಡುತ್ತಾರೆ. ಅವರ ಜೀವನದ ಚರಿತ್ರೆಯನ್ನು ಓದುವಾಗ ಭಾವನಾತ್ಮಕವಾಗುತ್ತೇವೆ. ಭೂಮಿಯನ್ನು ಹಂಚುವ ಮೂಲಕ ಇಡೀ ರಾಜ್ಯದಲ್ಲಿ ಜಾರಿಗೆ ತರುತ್ತಾರೆ. ಹಾಗಾಗಿ, "Main Nahi Tu Hi" ಆದರ್ಶ ಇದೆ. ಶ್ರೀ ವಿವೇಕಾನಂದರು ಕೂಡ "First Man Approach" ಎಂದು ಹೇಳುತ್ತಾರೆ. ಯಾವುದೇ ಒಂದು ಕಾನೂನು ಜಾರಿಗೊಳಸಬೇಕೆಂದರೆ, ಮೊದಲು ನಾವು ಅದನ್ನು ಅಳವಡಿಸಿಕೊಳ್ಳಬೇಕು. ಆ ರೀತಿಯಲ್ಲಿ ಶ್ರೀ ಡಿ.ದೇವರಾಜ ಅರಸುರವರು ತಮ್ಮ ಮನೆಯ ಭೂಮಿಯನ್ನು ಹಂಚಿ, ಆನಂತರ ರಾಜ್ಯದಲ್ಲಿ ಕಾರ್ಯರೂಪಕ್ಕೆ ತಂದ ಮಹಾನ್ ನಾಯಕ ಶ್ರೀ ಡಿ.ದೇವರಾಜ ಅರಸು. ಇಂದು ಅವರ ಹುಟ್ಟು ಹಬ್ಬವಾಗಿದ್ದು, ಅವರ ವ್ಯಕ್ತಿತ್ವಕ್ಕೆ ಸಾವಿಲ್ಲ, ಆದರ್ಶಗಳಿಗೆ ಸಾವಿಲ್ಲ. ಮನುಷ್ಯನಿಗೆ ವಯಸ್ಸಾದಂತೆ ಮುಪ್ಪು ಬಂದೆ ಬರುತ್ತದೆ, ಸಾವು ಕೂಡ ಬರುತ್ತದೆ. ಆದರೆ, ಅವರ ವಿಚಾರಗಳಿಗೆ, ಆದರ್ಶಗಳಿಗೆ ಸಾವಿಲ್ಲ. ಶಾಶ್ವತವಾಗಿರುವ ವಿಚಾರಗಳನ್ನು, ಆದರ್ಶಗಳನ್ನು ಬಿಟ್ಟು ಹೋಗಿದ್ದಾರೆ. ಈ ಸಂಬಂಧ ತಾವು ನಮ್ಮನ್ನು ಕರೆದು, ‘ಇಂದು ಅರ್ಥಗರ್ಭಿತವಾಗಿ ಅವರ ಹುಟ್ಟು ಹಬ್ಬವನ್ನು ಆಚರಿಸಬೇಕು’ ಎಂದಾಗ ನಾವು ಭಾಗವಹಿಸಲಿಲ್ಲವೆಂದರೆ, ತಪ್ಪಾಗುತ್ತದೆ ಎಂದು ಮಾತನಾಡಿಕೊಂಡು ಭಾಗವಹಿಸಿದ್ದೇವು. ಅವರ ಹುಟ್ಟು ಹಬ್ಬದ ಸಂದರ್ಭದಲ್ಲಿ ರಾಜ್ಯಕ್ಕೆ ಅವರು ನೀಡಿರುವಂಥ ಸಾಧನೆಗಳನ್ನು ನೆನಪಿಸಿಕೊಳ್ಳಬೇಕು, ಸ್ಮರಿಸಿಕೊಳ್ಳಬೇಕು, ಅವರ ಆದರ್ಶಗಳನ್ನು ನಾವು ಕೂಡ ಕಾರ್ಯಗತಗೊಳಸಬೇಕು ಎಂದು ಹೇಳುತ್ತಾ, ಇಷ್ಟು ಮಾತನಾಡಲು ಅವಕಾಶ ಕಲ್ಪಿಸಿದಕ್ಕಾಗಿ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

**ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವತ್ತಿನ ದಿನ ಇಬ್ಬರೂ ಮಹಾನ್ ಚೇತನರ ಬಗ್ಗೆ ಮಾತನಾಡುತ್ತಿರುವ ವಿಚಾರಗಳನ್ನು ನಾವು ಮರೆಯಬಾರದು. ಒಂದು ಕಡೆ ಶ್ರೀ ಡಿ.ದೇವರಾಜ ಅರಸುರವರು ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನಿಟ್ಟುಕೊಂಡು, ಶೋಷಿತ ವರ್ಗಗಳಿಗೆ, ಅದರಲ್ಲಿಯೂ ವಿಶೇಷವಾಗಿ ಹಿಂದೂಳಿದ ವರ್ಗಗಳಿಗೆ ನ್ಯಾಯ ದೊರಕಿಸಿಕೊಟ್ಟ ಮಹಾನ್ ಚೇತನರ ಬಗ್ಗೆ ಮಾತನಾಡುತ್ತಿದ್ದೇವೆ. ಹಾಗೆಯೇ ಇನ್ನೊಂದು ಕಡೆ ಆಧುನಿಕ ಭಾರತವನ್ನು ಯುವ ಭಾರತ ಮತ್ತು ನವ ಭಾರತವನ್ನಾಗಿ ನಿರ್ಮಿಸಬೇಕೆಂದು ಭದ್ರ ಬುನಾದಿ ಹಾಕಿದಂಥ ಶ್ರೀ ರಾಜೀವ್ ಗಾಂಧಿಯವರ ಬಗ್ಗೆ ಸಹ ಮಾತನಾಡುತ್ತಿದ್ದೇವೆ.

ಇವತ್ತಿನ ದಿವಸ ಈ ಇಬ್ಬರೂ ಮಹಾನ್ ಚೇತನರ ಜಯಂತಿಯನ್ನು ಆಚರಣೆ ಮಾಡುವಂಥ ಸಂದರ್ಭದಲ್ಲಿ ಅವರಿಬ್ಬರ ವಿಚಾರಧಾರೆಗಳನ್ನು ಗುಣಗಾನ ಮಾಡುವಂಥ ಸಂದರ್ಭದಲ್ಲಿ ನಮ್ಮ ಯುವಕರಿಗೆ ಬಹಳ ದೊಡ್ಡ ಸಂದೇಶ ತಲುಪುವಂಥದು ಒಂದು ಕಡೆಯಾದರೆ, ಆಡಳಿತ ವ್ಯವಸ್ಥೆಯಲ್ಲಿ ದೊಡ್ಡ ಸಂದೇಶ ಇರುವಂಥದು ಶ್ರೀ ಡಿ. ದೇವರಾಜ ಅರಸುರವರ ಆಡಳಿತ ವ್ಯವಸ್ಥೆ ಎನ್ನುವಂಥ ಮಾತನ್ನು ಹೇಳಬಯಸುತ್ತೇನೆ.

ಈಗಾಗಲೇ ಮಾನ್ಯ ಎನ್.ರವಿಕುಮಾರ್‌ರವರು ಶ್ರೀ ಡಿ.ದೇವರಾಜ ಅರಸುರವರು ತನ್ನದೇ ಆಸ್ತಿಯಲ್ಲಿ ಬೇರೆಯವರಿಗೆ ಪಾಲು ಕೊಟ್ಟು, ಆದರ್ಶವಾಗಿ ದೇವತಾ ಮನುಷ್ಯನ ರೀತಿಯಲ್ಲಿ ಬದುಕುವ ಮೂಲಕ ಸಾಮಾಜಿಕ ನ್ಯಾಯದ ಹರಿಕಾರಕರಾಗಿದರು ಎನ್ನುವಂಥ ಮಾತನ್ನು ಹೇಳುತ್ತೇನೆ. ಮೇಲ್ವರ್ಗದವರು ಅಂದರೆ, ಭೂಮಿ ಉಳವರಿಗೂ ತೊಂದರೆ ಮಾಡಬೇಕೆಂಬ ದೃಷ್ಟಿಯನ್ನಿಟ್ಟುಕೊಂಡು, ಉಳುವವನೇ ಭೂಮಿಯ ಒಡೆಯ ಎಂಬ ಕಾನೂನು ಜಾರಿಗೆ ತರಲಿಲ್ಲ. ಎಲ್ಲರೂ ಸಮಾನರಾಗಿ ಬದುಕಲಿ ಎಂಬ ಉದ್ದೇಶದಿಂದ ನೀಡಿರುವುದೇ ವಿನಃ 4 ಎಕರೆ ಭೂಮಿ ಕೊಟ್ಟ ತಕ್ಷಣ ಅವರು ಶ್ರೀಮಂತರಾಗುತ್ತಾರೆ ಎಂಬ ಆದೇಶವಾಗಿರಲಿಲ್ಲ. ಬಡವರು ಸ್ವಾಭಿಮಾನದ ಬದುಕನ್ನು ಕಟ್ಟಿಕೊಳ್ಳುವುದಕ್ಕಾಗಿ, ಸಮಾನತೆಯಿಂದ ಬದುಕಲಿ ಎಂಬ ಉದ್ದೇಶದೊಂದಿಗೆ, ಸಮಾಜದಲ್ಲಿ ಆ ವ್ಯಕ್ತಿಯನ್ನು ಜನರು ಗೌರವಿಸುವುದನ್ನು ನೋಡಬೇಕೆಂಬ ಕಾರಣಕ್ಕಾಗಿ ತಮ್ಮ ಭೂಮಿಯಲ್ಲಿ ಪಾಲನ್ನು ಕೊಡುತ್ತಾರೆ. ಆ ರೀತಿ ಭೂಮಿಯಲ್ಲಿ ಪಾಲನ್ನು ಕೊಟ್ಟಾಗ ಬಹಳಷ್ಟು ಒತ್ತಡ, ತೊಂದರೆಗಳು, ವಿರೋಧ ಉದ್ಭವಿಸಿದಾಗ ಎಲ್ಲರನ್ನೂ ಕೂಡ ವಿಶ್ವಾಸಕ್ಕೆ ತೆಗೆದುಕೊಂಡು, ಕೆಲಸ ಮಾಡಿದಂಥ ನಾಯಕತ್ವ ಗುಣವನ್ನು ಈ ದೇಶದಲ್ಲಿ ಬಿಟ್ಟು ಹೋದವರು ಯಾರೆಂದರೆ, ಶ್ರೀ ಡಿ.ದೇವರಾಜ ಅರಸುರವರು ಎಂದು ಹೇಳಬಯಸುತ್ತೇನೆ. ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನಿಟ್ಟುಕೊಂಡು, ಸಂವಿಧಾನದಲ್ಲಿ ನಂಬಿಕೆಯನ್ನಿಟ್ಟುಕೊಂಡು, ಸರ್ವರಿಗೂ ಸಮಾನ ರೀತಿಯಲ್ಲಿ ನ್ಯಾಯ ಕೊಡಬೇಕೆಂಬ ಕೆಲಸ ಮಾಡುವುದನ್ನು ಅನುಷ್ಠಾನಗೊಳಿಸಿದ ಏಕೈಕ ದೊಡ್ಡ ಮುಖ್ಯಮಂತ್ರಿಗಳು ಯಾರೆಂದರೆ, ಗೌರವಾನ್ವಿತ ಕನ್ನಡಿಗ ಶ್ರೀ ಡಿ.ದೇವರಾಜ ಅರಸು. ಅವರು ದೇಶಕ್ಕೆ ಮಾದರಿಯಾಗುವಂಥ ಮುಖ್ಯಮಂತ್ರಿಯಾಗಿದ್ದರು. ‘ಉಳುವವನೆ ಭೂಮಿ ಒಡೆಯ’ ಎಂಬ ಭೂ ಸುಧಾರಣೆ ಕಾಯ್ದೆಯನ್ನು ಜಾರಿಗೆ ತಂದಿದ್ದು, ಇನ್ನೊಬ್ಬರ ಮೇಲಿನ ಕೋಪದಿಂದಾಗಲೀ ಅಥವಾ ಶ್ರೀಮಂತರ ನಡುವಿನ ಅಸೂಯೆಯಿಂದಾಲೀ ಮಾಡಲಿಲ್ಲ. ಸಮಾಜದಲ್ಲಿರುವ ಶ್ರೀಮಂತರು ಮತ್ತು ಬಡವರ ಮಧ್ಯೆ ಇರುವ ಅಂತರವನ್ನು ಕಡಿಮೆ ಮಾಡುವ ಸಲುವಾಗಿ ಮತ್ತು ಸ್ವಾಭಿಮಾನದ ಬದುಕನ್ನು ಕಟ್ಟಿಕೊಳ್ಳಲಿ ಎಂಬುವುದಕ್ಕಾಗಿ ಉಳುವವನೇ ಆ ಭೂಮಿಯ ಮಾಲೀಕನಾಗಬೇಕೆಂದು ಇಡೀ ಸಮಾಜಕ್ಕೆ ಪರಿವರ್ತನೆ ತಂದುಕೊಟ್ಟರು. ಇನ್ನೊಂದು ಕಡೆ ಶ್ರೀ ರಾಜೀವ್ ಗಾಂಧಿಯವರು ಸಾಮಾಜಿಕ ನ್ಯಾಯದ

ಪರಿಕಲ್ಪನೆಯನ್ನಿಟ್ಟುಕೊಂಡು, ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಹೇಳಿದ ಹಾಗೆ ಮಹಿಳೆಯರಿಗೆ ಅಧಿಕಾರ ಕೊಡಬೇಕೆಂದು ಸಂವಿಧಾನದ 73ನೇ ಮತ್ತು 74ನೇ ತಿದ್ದುಪಡಿ ಮಾಡಿ, ಮೀಸಲಾತಿ ಕೊಡುವಂಥ ಕೆಲಸ ಮಾಡುತ್ತಾರೆ. ಮಹಿಳೆಯರು ಕೂಡ ಸ್ವಾಭಿಮಾನದಿಂದ ಬದುಕಬೇಕು, ದೇಶದಲ್ಲಿರುವ ಎಲ್ಲರಿಗೂ ಕೂಡ ಅಧಿಕಾರ ವಿಕೇಂದ್ರಿಕರಣವಾಗಬೇಕೆಂಬ ನಂಬಿಕೆಯನ್ನಿಟ್ಟುಕೊಂಡಿದರು. ಅದರ ಜೊತೆಗೆ 21ನೇ ವಯಸ್ಸಿನ ಮತದಾನದ ಹಕ್ಕನ್ನು 18ನೇ ವಯಸ್ಸಿಗೆ ಜಾರಿಗೆ ತರುವ ಮೂಲಕ ಈ ದೇಶವನ್ನು ಕಟ್ಟುವಂಥ ಕೆಲಸದಲ್ಲಿ ಎಲ್ಲರೂ ಭಾಗಿಯಾಗಬೇಕೆಂದು ಮತದಾನದ ಹಕ್ಕು ಕೊಡುವಂಥ ಕೆಲಸವನ್ನು ಮಾಡುತ್ತಾರೆ.

(ಮುಂದು)

**(೮೦೦) 20.08.2026/5.40/ಎಸ್‌ಕೆ-ವಿಕೆ (ಸಭಾಪತಿಯವರ ಉಪಸ್ಥಿತಿ)**

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರು ಸ್ವಸ್ಥಾನಗಳಲ್ಲಿ ಒಟ್ಟಿಗೆ ಎದ್ದು ನಿಂತು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

**ಶ್ರೀ ಎಂ. ನಾಗರಾಜು (ಮುಂದು):-**

ಯಾರು ಈ ದೇಶವನ್ನು ನಡೆಸಬೇಕೆಂಬ ಬಗ್ಗೆ ತೀರ್ಮಾನ ಮಾಡುವಂತಹದ್ದು ಮತ್ತು ಅದು ಯುವಕರ ಕೈಯಲ್ಲಿ ಆಗಬೇಕು ಎನ್ನುವ ಕಾರಣಕ್ಕೋಸ್ಕರ ಅವರಿಗೆ ಮತದಾನದ ಹಕ್ಕನ್ನು ಕೊಡುವಂತಹ ಕೆಲಸವನ್ನು ಮಾಡುತ್ತಾರೆ. ಹಾಗಾಗಿ ಎರಡು ಮಹನ್ ಚೇತನಗಳನ್ನು ನೋಡಿದಾಗ, ಒಂದು ಸಾಮಾಜಿಕ ನ್ಯಾಯದ ಪರಿಕಲ್ಪನೆಯಂತೆ ಮಾಡಿ, ಎಲ್ಲಾ ಸಮಾಜವನ್ನು ಒಗ್ಗಟ್ಟಾಗಿ ಕಟ್ಟುವಂತಹ ಕೆಲಸ ಮಾಡುವಂತಹದ್ದು. ಯಾರು ಸ್ವಾಭಿಮಾನದಿಂದ ಬದುಕಬೇಕು? ಯಾರು ಗೌರವದಿಂದ ಬದುಕಬೇಕು? ಈ ಸಮಾಜದಲ್ಲಿರುವ ಕಟ್ಟಕಡೆಯ ನಾಗರಿಕನು ಒಂದು ಹೊತ್ತಿನ ಊಟಕ್ಕೂ ಇಲ್ಲದಿರುವ ಹಾಗೇ ಸಾಯಬಾರದು ಮತ್ತು ಕೂಲಿ ಗುಲಾಮನಾಗಿ ಬದುಕಬಾರದು. ಅವನು ಕೂಡ ಭೂಮಾಲೀಕನಾಗಬೇಕು ಎನ್ನುವ ವಿಚಾರ ಇರಬಹುದು. ಇನ್ನೊಂದು ಮೀಸಲಾತಿ ವಿಚಾರ ಬಂದಾಗ ಹಾವನೂರು ಆಯೋಗವನ್ನು ಜಾರಿಗೆ ತಂದು, ಆ ಆದೇಶವನ್ನು ಅನುಷ್ಠಾನಗೊಳಿಸಿದ ಕೀರ್ತಿ ಯಾರಿಗಾದರೂ ಸಲ್ಲಿಸುವುದಾದರೆ ಅದು ಶ್ರೀ ಡಿ. ದೇವರಾಜ ಅರಸುರವರಿಗೆ ಎಂದು ನಾನು ಹೇಳಬಯಸುತ್ತೇನೆ. ಅನೇಕ ಆಯೋಗಗಳಿಂದ ತುಂಬಾ ವರದಿಗಳು ಬಂದಿವೆ. ಇವತ್ತಿನ ದಿವಸ ತುಂಬಾ ಕಡತಗಳಿಗೆ ಧೂಳು ಬಿದ್ದಿರುವುದನ್ನು ನೋಡಿದ್ದೇವೆ. ಕೊಟ್ಟ ಮಾತಿನಂತೆ ನಡೆದುಕೊಂಡು ಏಕೈಕ ನಾಯಕ ಕರ್ನಾಟಕದಲ್ಲಿ ಯಾರಾದರೂ ಇದ್ದರೆ ಅದು ಶ್ರೀ ಡಿ. ದೇವರಾಜ ಅರಸುರವರು ಎನ್ನುವ ಮಾತನ್ನು ಹೇಳಬಯಸುತ್ತೇನೆ. ಸಮಾಜಕ್ಕೆ ಎಲ್ಲಾ ನ್ಯಾಯವನ್ನು ಕೊಡಿಸುವಂತಹದ್ದು ಇರಬಹುದು. ಯಾವ ಕಾರಣಕ್ಕೆ ಮೀಸಲಾತಿಯನ್ನು ಕೊಟ್ಟಿದ್ದಾರೆ ಎಂದರೆ ಕೇವಲ

ಉದ್ಯೋಗವನ್ನು ಪಡೆದುಕೊಳ್ಳುವುದಕ್ಕಲ್ಲ. ಅವರಿಗೆ ಉತ್ತಮವಾದ ಶಿಕ್ಷಣ ಕೊಡುವುದಕ್ಕೋಸ್ಕರ, ಕಡು ಬಡವರಲ್ಲಿರುವ ಪ್ರತಿಭಾವಂತ ಯುವಕನು ಕೂಡ ಉತ್ತಮ ಶಿಕ್ಷಣ ಪಡೆಯುವುದಕ್ಕೋಸ್ಕರ ಶಿಕ್ಷಣದಲ್ಲಿ ಮೀಸಲಾತಿಯನ್ನು ಕೊಡುವಂತಹ ಕೆಲಸವನ್ನು ಮಾಡಿದ್ದಾರೆ. ಔದ್ಯೋಗಿಕಕ್ಕೆ ಮೀಸಲಾತಿಯನ್ನು ಕೊಡುವಂತಹ ಪ್ರಯತ್ನವನ್ನು ಮಾಡುತ್ತಾರೆ. ಅವತ್ತು ಶೇಕಡಾ 52 ರಷ್ಟು ಮೀಸಲಾತಿಯಿದ್ದು, ಇವತ್ತು ಹಿಂದುಳಿದ ವರ್ಗದವರಿಗೆ ಮೀಸಲಾತಿ ಕಡಿಮೆಯಾಗಿರುವಂತಹದ್ದು. ಅತಿ ದೊಡ್ಡ ಸಮುದಾಯವಾಗಿರುವಂತಹ ಹಿಂದುಳಿದ ವರ್ಗದವರ ಸಮಾಜದಲ್ಲಿ ಇವತ್ತು ಶೇಕಡಾ 30 ರಷ್ಟು ಮೀಸಲಾತಿಯನ್ನು ಇರುವಂತಹದ್ದನ್ನು ನಾವು ಕೂಡ ಪ್ರಶ್ನೆ ಮಾಡುತ್ತೇವೆ.

ಮಾನ್ಯ ಸಭಾಪತಿಯವರೇ, ಡಾ॥ ಬಿ.ಆರ್. ಅಂಬೇಡ್ಕರ್‌ರವರು ನಮ್ಮೆಲ್ಲರ ಪಾಲಿಗೆ ದೇವರು ಆಗಿರುವಂತಹವರು. ಸಂವಿಧಾನದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಮೀಸಲಾತಿಯನ್ನು ಕೊಟ್ಟು, ಬಹಳ ದೊಡ್ಡ ಕೆಲಸ ಮಾಡಿದಂತಹವರು. ಅದೇ ರೀತಿ ಶ್ರೀ ಡಿ. ದೇವರಾಜ ಅರಸುರವರು ಹಿಂದುಳಿದವರಿಗೂ ಕೂಡ ನ್ಯಾಯ ಕೊಡುವುದಕ್ಕೆ ಪ್ರಯತ್ನ ಮಾಡಿದರು ಎನ್ನುವ ಮಾತನ್ನು ಹೇಳಬಯಸುತ್ತೇನೆ. ಮಾನ್ಯ ಸಭಾಪತಿಯವರೇ, ಅದು ಆಗಬೇಕು. ಇನ್ನೂ ಬಹಳ ದೊಡ್ಡ ವಿಚಾರಗಳಿವೆ. ಈ ವಿಚಾರಗಳು ಕಡತದಲ್ಲಿ ದಾಖಲಿಸಿದಾಗ ಮುಂದಿನ ಪೀಳಿಗೆಯ ಜನರು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಈ ದೇಶಕ್ಕೆ ಕೊಡುಗೆ ಕೊಟ್ಟಿರುವಂತಹ ಮಹಾನುಭವರುಗಳಾದ ಡಾ॥ ಬಿ.ಆರ್. ಅಂಬೇಡ್ಕರ್‌ರವರು ಮತ್ತು ಶ್ರೀ ಡಿ. ದೇವರಾಜ ಅರಸು, ಸರ್ವಜ್ಞ ಅಥವಾ ಬಸವಣ್ಣನವರ ಬಗ್ಗೆ ತಿಳಿದುಕೊಳ್ಳಬೇಕಾಗುವಂತಹ ಕೆಲಸ ಮಾಡಬೇಕಾಗುತ್ತದೆ. ಅವರ ಬಗ್ಗೆ ನಮನಗಳನ್ನು ಮಾಡಬೇಕಾಗುತ್ತದೆ ಮತ್ತು ಅವರ ಬಗ್ಗೆ ವಿಚಾರಗಳನ್ನು ತಿಳಿದುಕೊಳ್ಳಬೇಕಾಗುವುದು ಇದೆ. ಕೇವಲ ಅವರುಗಳ ಫೋಟೋಗಳನ್ನು ಇಟ್ಟು ಪೂಜೆ ಮಾಡಿದರೆ ಸಾಲುವುದಿಲ್ಲ. ಅವರ ಬಗ್ಗೆ ಮಾತನಾಡಿದರೆ ಸಾಲುವುದಿಲ್ಲ. ಆಡಳಿತವನ್ನು ಅಧಿಕಾರಕ್ಕೆ ತರುವಂತಹ ನಮ್ಮಂಥವರು ವಿಚಾರಗಳನ್ನು ಮೈಗೂಡಿಸಿಕೊಳ್ಳುವಂತಹ ಕೆಲಸವನ್ನು ಆಗಬೇಕಾಗುತ್ತದೆ. ಬಡವರನ್ನು ಕಂಡಾಗ ಪ್ರೀತಿಯಿಂದ ಮಾತನಾಡುವಂತಹವರು, ಅಧಿಕಾರದ ವಿಕೇಂದ್ರಿಕರಣದ ನಂಬಿಕೆಯನ್ನು ಇಟ್ಟುಕೊಂಡಿರುವಂತಹ ಶ್ರೀ ರಾಜೀವ್ ಗಾಂಧಿಯವರು ತಂತ್ರಜ್ಞಾನದ ಭದ್ರ ಬುನಾದಿಯನ್ನು ಹಾಕಿದರು. ಇವತ್ತು ಎಲ್ಲರೂ Digital India ಮತ್ತು Smart City ಬಗ್ಗೆ ಮಾತನಾಡುತ್ತಾರೆ. ಆದರೆ ಶ್ರೀ ರಾಜೀವ್ ಗಾಂಧಿಯವರು ಅಂದಿನ ದಿನದಂದೇ ಆಲೋಚನೆ ಮಾಡಿದರು. ಇಂತಹ ಒಂದು Digital India, ತಂತ್ರಜ್ಞಾನ ಕೂಡಿರುವಂತಹ ಭವ್ಯ ಭಾರತವನ್ನು ಕಟ್ಟುವುದಕ್ಕೆ ಒಂದು ದೊಡ್ಡ ಭದ್ರ ತಂತ್ರಜ್ಞಾನದ ಬುನಾದಿಯನ್ನು ಹಾಕಿದವವರು ಯಾರೆಂದರೆ ಶ್ರೀ ರಾಜೀವ್ ಗಾಂಧಿಯವರು ಎಂದು ನಾನು ಹೇಳಬಯಸುತ್ತೇನೆ. ಇವತ್ತಿನದ ದಿವಸ ನಾವು ಆಲೋಚನೆ ಮಾಡಬೇಕಾಗುತ್ತದೆ. ಕೇವಲ ತಂತ್ರಜ್ಞಾನವನ್ನು ಉಪಯೋಗಿಸಿಕೊಳ್ಳುವಂತಹದ್ದಾಗಬಾರದು. ತಂತ್ರಜ್ಞಾನವನ್ನು ತಯಾರು ಮಾಡಬೇಕಾದವರಾಗಬೇಕಾಗುತ್ತದೆ. We should not be using only AI today, we should be the creator of AI ಎನ್ನುವ ರೀತಿಯಲ್ಲಿ ಅವತ್ತು ಭದ್ರ ಬುನಾದಿಯನ್ನು

ಹಾಕಿದರು. ಅವತ್ತು ಶ್ರೀ ರಾಜೀವ್ ಗಾಂಧಿಯವರು ಕಂಪ್ಯೂಟರ್‌ನ್ನು introduce ಮಾಡುವುದಕ್ಕೆ ಪ್ರಯತ್ನ ಪಟ್ಟರು. ಕಂಪ್ಯೂಟರ್ ಯುಗವಾದರೆ, ಕಂಪ್ಯೂಟರ್ ತಂದಿದ್ದಾದರೆ, ನಿರುದ್ಯೋಗಗಳಾಗಿ ಬಿಡುತ್ತಾರೆ ಎಂದು ಅವರಿಗೆ ದೊಡ್ಡ ದೊಡ್ಡ ಜನರೆಲ್ಲರೂ ಬಹಳಷ್ಟು ವಿರೋಧ ಮಾಡಿದರು. ಎಲ್ಲಿಯಾದರೂ ಇವತ್ತು Silicon Valley of India ಆಗಿದ್ದರೆ, ಇವತ್ತು ಬೆಂಗಳೂರಿನಲ್ಲಿ ಆಗಿರುವಂಥದ್ದನ್ನು ನಾವು ನೋಡಿದ್ದೇವೆ. That has created so many jobs today. ತಂತ್ರಜ್ಞಾನ ನಂಬಿಕೆಯನ್ನಿಟ್ಟುಕೊಂಡಿರುವಂತಹ ಮಹಾನ್‌ಚೇತನರಾದ ಶ್ರೀ ರಾಜೀವ್ ಗಾಂಧಿಯವರು ಅದಕ್ಕೆ ಕಾರಣಕರ್ತರಾಗಿದ್ದಾರೆ. ನಾನು ಹೇಳುವುದೇನೆಂದರೆ, ಸಾಮಾಜಿಕ ನ್ಯಾಯ ಒಂದು ಕಡೆಯಾದರೆ, ಇನ್ನೊಂದು ಕಡೆ ನವ ಭಾರತ ತಂತ್ರಜ್ಞಾನದ ಭಾರತವಾಗಿದೆ. ಇವೆರಡನ್ನು ಮಾಡಿದಂತಹ ಕಾಂಗ್ರೆಸ್ ಚೇತನರು ಯಾರಾದರೂ ಇದ್ದರೆ ಶ್ರೀ ಡಿ. ದೇವರಾಜ ಅರಸು ಮತ್ತು ಶ್ರೀ ರಾಜೀವ್ ಗಾಂಧಿಯವರು. ಅವರ ಬಗ್ಗೆ ಮಾತನಾಡುವುದಾದರೆ, ಒಬ್ಬೊಬ್ಬರು ಗಂಟೆಗಟ್ಟಲೆ ಮಾತನಾಡುವುದಕ್ಕೆ ಅವಕಾಶವಿದೆ.

ಮಾನ್ಯ ಸಭಾಪತಿಯವರೇ, ನಾನು ತಮಗೆ ಹೇಳಬಯಸುವುದೇನೆಂದರೆ, at least in this Upper House, ಈ ಒಂದು ಚಿಂತಕರ ಛಾವಡಿಯಲ್ಲಿ ಇಂತಹ ವಿಚಾರಗಳನ್ನು ಆಗಿಂದಾಗ್ಗೆ ಚರ್ಚೆ ಮಾಡಬೇಕು. ಕೇವಲ ಜನ್ಮ ದಿನದ ವಿಚಾರವಲ್ಲ. ತಾವು ವಿಶೇಷವಾದ ಚರ್ಚೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಶ್ರೀ ಡಿ. ದೇವರಾಜ ಅರಸು ಮತ್ತು ಶ್ರೀ ರಾಜೀವ್ ಗಾಂಧಿಯರವರ ವಿಚಾರಗಳನ್ನು ಎಲ್ಲರೂ ಕೂಡ ಮೈಗೂಡಿಸಿಕೊಳ್ಳುವಂತಹ ಕೆಲಸವಾಗಬೇಕಾಗುತ್ತದೆ. ಅವರ ವಿಚಾರಗಳನ್ನು ಆಡಳಿತದಲ್ಲಿ ಉಪಯೋಗಿಸಿಕೊಂಡು ಪಾರದರ್ಶಕತೆ ತರುವಂತಹ ಕೆಲಸವಾಗಬೇಕಾಗುತ್ತದೆ. ಶ್ರೀ ರಾಜೀವ್ ಗಾಂಧಿಯವರು ಆಡಳಿತ ವಿಕೇಂದ್ರಿಕರಣವನ್ನು ಯಾವ ಕಾರಣಕ್ಕೋಸ್ಕರ ಮಾಡಿದರು ಎಂದು ಹೇಳುವುದಾದರೆ, ಕೇವಲ ಅಧಿಕಾರ ಕೊಡುವ ಕಾರಣಕ್ಕೋಸ್ಕರವಲ್ಲ. ಸಬಲೀಕರಣ ಮಾಡುವುದಕ್ಕೋಸ್ಕರವಲ್ಲ. ಆಡಳಿತ ಗ್ರಾಮ ಪಂಚಾಯಿತಿ ಮಟ್ಟಕ್ಕೆ ಹೋದರೆ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಕಾರಣಕ್ಕೋಸ್ಕರ ಆಡಳಿತ ವಿಕೇಂದ್ರಿಕರಣ ಮಾಡಿದಂತಹ ವಿಚಾರಗಳ ಬಗ್ಗೆ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ನಾವು ಈ ಭಾರತ ದೇಶವನ್ನು ಭವ್ಯವಾಗಿ ಕಟ್ಟಬೇಕಾದರೆ, ಎಲ್ಲಾ ಚೇತನರಿಗೆ ಗೌರವ ಬರುವ ರೀತಿಯಲ್ಲಿ ಮೇಲ್ಮನೆಯ ಸದಸ್ಯರೆಲ್ಲರೂ ನಡೆದುಕೊಳ್ಳಬೇಕು ಎನ್ನುವಂತಹ ರೀತಿಯಲ್ಲಿ ನಡೆಸಿಕೊಳ್ಳೋಣ. ಶ್ರೀ ರಾಜೀವ್ ಗಾಂಧಿಯವರ ಜನ್ಮ ದಿನವನ್ನು ಯಾವಾಗಲೂ "ಸದ್ಭಾವನ ದಿನಾಚರಣೆ" ಯನ್ನಾಗಿ ಮಾಡುತ್ತೇವೆ. ದ್ವೇಷದಿಂದ ನಾವು ಯಾವತ್ತಿಗೂ ಭಾರತವನ್ನು ಕಟ್ಟುವುದಕ್ಕೆ ಸಾಧ್ಯವಿಲ್ಲ. ನಾವೆಲ್ಲರೂ ಸದ್ಭಾವನೆಯಿಂದ ಮಾತ್ರ ವಿವಿಧತೆಯಲ್ಲಿ ಏಕತೆಯನ್ನು ಮನಗೊಂಡು ನಾವೆಲ್ಲರೂ ಭಾರತೀಯರಾಗಿ ಬದುಕಬೇಕು. ಯಾವ ಜಾತಿ, ಧರ್ಮದಲ್ಲಿ ಹುಟ್ಟಿದರೂ ಕೂಡ ಮನುಷ್ಯರಾಗಿ ಬದುಕುವ ರೀತಿಯಲ್ಲಿ ದಿವಂಗತ ಶ್ರೀ ರಾಜೀವ್ ಗಾಂಧಿಯವರನ್ನು ನಮಗೆ ಆದರ್ಶವಾಗಿದ್ದರು. ಶ್ರೀ ಡಿ. ದೇವರಾಜ ಅರಸುರವರು ಸಾಮಾಜಿಕ ಪರಿಕಲ್ಪನೆಯನ್ನು ಬಿಟ್ಟು ಹೋಗಿರುವಂತಹ ಈ ಒಂದು ಭದ್ರ ಪುಣ್ಯ ಭೂಮಿಯಲ್ಲಿ ಇವತ್ತು ನಾವೆಲ್ಲ ಶಾಸಕರಾಗಿ ಅವರಿಗೆ ಗೌರವ

ಕೊಡುವಂತಹ ಕೆಲಸವಾಗಬೇಕು. ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

**ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಫ್ ಸಚಿವರು):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ದಿವಂಗತ ಶ್ರೀ ಡಿ.ದೇವರಾಜ ಅರಸುರವರ ಬಗ್ಗೆ ಮಾತನಾಡುವುದಕ್ಕೆ ನಾನು ಅಷ್ಟೊಂದು ದೊಡ್ಡ ಮಟ್ಟದ ಸ್ಥಾನದಲ್ಲಿ ಇಲ್ಲ ಮತ್ತು ಅಷ್ಟೊಂದು ಯೋಗ್ಯತೆ ಕೂಡ ಇಲ್ಲ. ಅವರು ಮಹಾನ್ ನಾಯಕರು. ನಾನು ಈ ಸದನದಲ್ಲಿ ಕುಳಿತುಕೊಂಡಾಗ, ಅವರ ಬಗ್ಗೆ ಸ್ಮರಣೆ ಮಾಡುವಂತಹ ಸಂದರ್ಭದಲ್ಲಿ ನಾನು ಕೂಡ ಮಾತನಾಡಬೇಕೆಂದು ನನಗೆ ಏತಕ್ಕೆ ಅನಿಸುತ್ತದೆ ಎಂದು ಹೇಳಿದರೆ, ಅವರು 1972ರಲ್ಲಿ ಪ್ರಪ್ರಥಮವಾಗಿ ಕಾಂಗ್ರೆಸ್ ಅಧ್ಯಕ್ಷರಾಗಿದ್ದಂತಹ ಸಂದರ್ಭದಲ್ಲಿ ಚುನಾವಣೆಗೆ ನಡೆಯುವಾಗ ನಮ್ಮ ತಂದೆಯವರಿಗೆ ಪ್ರಥಮ ಬಾರಿಗೆ ಟಿಕೆಟ್ ಕೊಟ್ಟರು. ಬಹುಶಃ ನಮ್ಮ ತಂದೆಯವರನ್ನು ಗೆಲ್ಲಿಸಿಕೊಂಡು ಬರಲು ಪ್ರಮುಖ ಕಾರಣೀಭೂತರಾಗಿದ್ದರು. ಆಗ ನಮ್ಮ ತಂದೆಯವರು ವಕೀಲರಾಗಿದ್ದರು. ಅವರ ಪರಿಚಯ ಯಾರಿಗೂ ಕೂಡ ಇರಲಿಲ್ಲ ಮತ್ತು ಗೊತ್ತಿರಲಿಲ್ಲ. ನನ್ನ ತಂದೆ ತಾಯಿ ಅವತ್ತಿನ ಕಾಲದಲ್ಲಿ ಮಂಗಳೂರು ಮತ್ತು ಹಾಸನದ ಕಡೆಗೆ railway contractor ಆಗಿದ್ದರು. ನನ್ನ ತಂದೆ ತಾಯಿಗೆ ಪರಿಚಯವಿದ್ದ ಕಾರಣ ನನ್ನ ತಂದೆಗೆ ಒಂದು ಅವಕಾಶ ಸಿಕ್ಕಿತ್ತು. ಆಗ ಶ್ರೀ ಯು.ಟಿ. ಫರೀದ್ ಎಂದು ದಿನಪತ್ರಿಕೆಯನ್ನು ನೋಡುವಾಗ, ಜನರಿಗೆ ಇವರು ಯಾರೆಂಬುದು ಗೊತ್ತಿರಲಿಲ್ಲ. ಶ್ರೀ ಡಿ. ದೇವರಾಜ ಅರಸು ಮತ್ತು ಶ್ರೀಮತಿ ಇಂದಿರಾ ಗಾಂಧಿಯವರ ವರ್ಚಸ್ಸಿನ ಮುಖಾಂತರ ನಮ್ಮ ತಂದೆಯವರು ಚುನಾವಣೆಯಲ್ಲಿ ಬಹುಮತವನ್ನು ಪಡೆದು, ಪ್ರಥಮ ಬಾರಿಗೆ ಶಾಸಕರಾಗಿ ಆಯ್ಕೆಯಾದರು. ಅವತ್ತು ಯಾರಿಗೂ ಗೊತ್ತಿಲ್ಲದ ಕಾಲ ಎಂಬುದು ಒಂದು ಇತ್ತು. ಶ್ರೀ ಡಿ. ದೇವರಾಜ ಅರಸುರವರ ಕಾಲದಲ್ಲಿ ಒಂದು ಲೈಟ್ ಕಂಬವನ್ನು ಚುನಾವಣೆಗೆ ನಿಲ್ಲಿಸಿದರೆ, ಕಾಂಗ್ರೆಸ್ ಗೆಲ್ಲುತ್ತದೆ ಎಂಬ ಒಂದು ಸಂದೇಶವಿತ್ತು. ಕಾಂಗ್ರೆಸ್ ಪಕ್ಷಕ್ಕೆ ಶ್ರೀಮತಿ ಇಂದಿರಾ ಗಾಂಧಿ ಮತ್ತು ಇವರ ಒಂದು face value ಅಷ್ಟೊಂದು ಪರಿಚಯ ನಮ್ಮ ದೇಶ ಮತ್ತು ರಾಜ್ಯದಲ್ಲಿ ಇತ್ತು. ಒಬ್ಬ ಉತ್ತಮ ವಕೀಲನಾಗಬೇಕಾದರೆ ಒಳ್ಳೆಯ ಕಾನೂನು ಕಾಲೇಜು ಸಿಗುತ್ತದೆ. ಉತ್ತಮ ವೈದ್ಯರಾಗಬೇಕಾದರೆ ಒಳ್ಳೆಯ ಮೆಡಿಕಲ್ ಕಾಲೇಜು ಸಿಗುತ್ತದೆ. ಉತ್ತಮವಾದ ಪೊಲೀಸ್ ಅಫೀಸರ್ ಆಗಬೇಕೆಂದರೆ ಪೊಲೀಸ್ ಅಕಾಡೆಮಿ ಇದೆ. ಐ.ಎ.ಎಸ್. ಅಧಿಕಾರಿಯಾಗಬೇಕೆಂದರೆ ಐ.ಎ.ಎಸ್. ಅಕಾಡೆಮಿ ಇದೆ. ಆದರೆ ಉತ್ತಮ ಜನ ಪ್ರತಿನಿಧಿ ಮತ್ತು ಸಾಮಾಜಿಕ ಚಿಂತನೆಯುಳ್ಳ ನಾಯಕತ್ವ ಬರಬೇಕೆಂದರೆ, ಯಾವ ಶಾಲಾ-ಕಾಲೇಜು ಇಲ್ಲ. ಅಂತಹ ನಾಯಕರಾಗಿ ಬೆಳೆದು ಬರಬೇಕೆಂದರೆ ಶ್ರೀ ಡಿ. ದೇವರಾಜ ಅರಸು ನಾಯಕರ ವ್ಯಕ್ತಿತ್ವವನ್ನು ಕಲಿತು, ಓದಿ ಅರ್ಥ ಮಾಡಿಕೊಳ್ಳುವುದು ಪ್ರತಿಯೊಂದು ಯುವಕರಿಗೆ ಅತ್ಯಗತ್ಯ ನಾನು ಹೇಳಬಯಸುತ್ತೇನೆ.

1952 ರಿಂದ 1972ರ ತನಕ ಬಹುಶಃ ಅವರು ಶಾಸಕರಾಗಿದ್ದರು. ಅವರಿಗೆ ಅಲ್ಲಿಯವರೆವಿಗೂ ಮಂತ್ರಿಯಾಗುವ ಅವಕಾಶ ಸಿಕ್ಕಿರಲಿಲ್ಲ. ಈಗಿನ ಕಾಲದಲ್ಲಿ ಚುನಾವಣೆಯಲ್ಲಿ ಒಂದು ಅಥವಾ ಎರಡು ಬಾರಿ ಗೆದ್ದು

ಬಂದರೆ ಮಂತ್ರಿ ಆಗಬೇಕು, ಮತ್ತೊಂದು ಆಗಬೇಕು ಎನ್ನುವಂತಹದ್ದು ಪ್ರಾರಂಭ ಮಾಡುತ್ತಿದ್ದರೂ, ಅವತ್ತು ಆ ಕಾಲದಲ್ಲಿ ಅಷ್ಟೊಂದು ಪ್ರಬಲವಾಗಿದ್ದರೂ ಕೂಡ ಅವರು ಯಾವುದೇ ಒಂದು ವಿಚಾರವನ್ನು ಕೇಳಲಿಲ್ಲ. ಅದೆಲ್ಲವೂ ಕೂಡ ದೊಡ್ಡ ಮಟ್ಟದ ಸಂದೇಶವಾಗಿದೆ. ಅಷ್ಟೇ ಅಲ್ಲದೇ ನಾಗಭೂಷಣ್‌ರವರ ಇತಿಹಾಸದ ಪುಸ್ತಕವನ್ನು ಕೆಲವು ಬಾರಿ ಓದಿದಂತಹ ಸಂದರ್ಭದಲ್ಲಿ ನನಗೂ ನೆನಪಾಗುತ್ತದೆ. ಶ್ರೀ ಎಸ್. ನಿಜಲಿಂಗಪ್ಪನವರು ಆ ಕಾಲದಲ್ಲಿ ಪ್ರಬಲ ನಾಯಕರಾಗಿದ್ದರು. ಅವರು 1962ರ ಚುನಾವಣೆಯಲ್ಲಿ ಸೋತು ಹೋದಂತಹ ಸಂದರ್ಭದಲ್ಲಿ ಸಿ.ಎಲ್.ಪಿ. ಮೀಟಿಂಗ್ ಕರೆದಾಗ ವಿಷಯ ಚರ್ಚೆಯಾಯಿತು. ಶ್ರೀ ಎಸ್. ನಿಜಲಿಂಗಪ್ಪನವರು ಮುಖ್ಯಮಂತ್ರಿಯನ್ನಾಗಿ ಮಾಡುವುದಕ್ಕೆ ಮತ್ತೆ election ಹೋಗಿ, ಮತ್ತೆ ಇವರು continue ಆಗಬಹುದು ಎಂದಾಗ ಆಗ ಯಾರೂ ಕೂಡ ಮಾತನಾಡಲಿಲ್ಲ ಏತಕ್ಕೆಂದರೆ, ಶ್ರೀ ಎಸ್. ನಿಜಲಿಂಗಪ್ಪನವರು ಬಹಳ ದೊಡ್ಡ ನಾಯಕರಾಗಿದ್ದರು. ಅವರ ಬಗ್ಗೆ ಯಾರೂ ಮಾತನಾಡುವ ಧೈರ್ಯ ಕೂಡ ಇರಲಿಲ್ಲ. ಆಗ ಧೈರ್ಯವಾಗಿ ಎದ್ದು ನಿಂತು ಮಾತನಾಡಿದವರು ಶ್ರೀ ಡಿ. ದೇವರಾಜ ಅರಸುರವರು. ಶ್ರೀ ಎಸ್. ನಿಜಲಿಂಗಪ್ಪನವರ ಮೇಲೆ ಅಪಾರವಾದ ಗೌರವ ಇದೆ ಎಂದು ಅವರು ಹೇಳಿದರು. ಸಂವಿಧಾನದಲ್ಲಿ ಪ್ರಜಾಪ್ರಭುತ್ವ ಗೌರವವನ್ನು ಉಳಿಸಬೇಕಾದರೆ ಯಾರು ಚುನಾವಣೆಯಲ್ಲಿ ಸೋತಿದ್ದಾರೆ. ಸೋತ ಸ್ಥಾನಕ್ಕೆ ನಾವು ಮುಖ್ಯಮಂತ್ರಿ ಮಾಡುವುದು ಸರಿಯಲ್ಲ. ಅದಕ್ಕಾಗಿ ಅಲ್ಲಿಯ ತನಕ ಬೇರೆಯವರನ್ನು ಮಾಡಿ. ಅವರು ಪುನಃ ಚುನಾವಣೆಯನ್ನು ಎದುರಿಸಿ ಬಂದು ಗೆದ್ದು ಬಂದು ಮತ್ತೆ ಆಗಲಿ ಎಂದು ಪ್ರಬಲವಾಗಿ ಮಾತನಾಡಿದಂತಹವರು. ಸಿ.ಎಲ್.ಪಿ. ಮೀಟಿಂಗ್‌ನಲ್ಲಿ ಶ್ರೀ ಎಸ್. ಆರ್. ಕಂಠಿಯವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿ, ಶ್ರೀ ಎಸ್. ನಿಜಲಿಂಗಪ್ಪನವರು ಮತ್ತೆ ಚುನಾವಣೆಗೆ ನಿಂತು ಮತ್ತೆ ಮುಖ್ಯಮಂತ್ರಿಯಾಗುವಂತಹ ಅವಕಾಶವಿತ್ತು. ಏಕೆಂದರೆ ಆ ಕಾಲದಲ್ಲಿ ಧೈರ್ಯವನ್ನು ತೋರಿಸಿಕೊಂಡು ಬಂದಂತಹವರು. ಶ್ರೀ ವೀರೇಂದ್ರ ಪಾಟೀಲ್‌ರವರು 1969ರಲ್ಲಿ ಮುಖ್ಯಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ಶ್ರೀ ಎಸ್. ನಿಜಲಿಂಗಪ್ಪನವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದ ಕಾಲಘಟ್ಟದಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರು ಎ.ಐ.ಸಿ.ಸಿ.,ಯ ಸಭೆಯು ಬೆಂಗಳೂರಿನ Glass House ನಲ್ಲಿ ಆಗಿತ್ತು. ಆಗ ಬೆಂಗಳೂರು Glass House ಬಹಳಷ್ಟು famous ಆಗಿತ್ತು. ಅಲ್ಲಿ ಭೂ ಮಸೂದೆ, ಬಸ್ ರಾಷ್ಟ್ರೀಕರಣ, ಬ್ಯಾಂಕ್ ರಾಷ್ಟ್ರೀಕರಣ, ಜನ ಪರವಾಗಿರುವ ಕಾರ್ಯಕ್ರಮ "ಗರೀಬಿ ಹಟಾವೋ" ಎನ್ನುವ ಇಪ್ಪತ್ತು ಅಂಶಗಳ ಕಾರ್ಯಕ್ರಮಗಳನ್ನು ಚರ್ಚೆ ಮಾಡುವ ಸಂದರ್ಭದಲ್ಲಿ ಪ್ರಮುಖ ನಾಯಕರು ಯಾರೂ ಕೂಡ ಇದಕ್ಕೆ ಬೆಂಬಲ ಮತ್ತು ಒಪ್ಪಿಗೆಯನ್ನು ಕೊಡಲಿಲ್ಲ. ಶ್ರೀಮತಿ ಇಂದಿರಾ ಗಾಂಧಿಯವರು ಎಲ್ಲಾ ಎ.ಐ.ಸಿ.ಸಿ.,ನ ಸದಸ್ಯರವನ್ನೊಳಗೊಂಡಂತೆ ಚುನಾವಣೆ ನಡೆಸಿ, ಎಲ್ಲಾ ಎ.ಐ.ಸಿ.ಸಿ.,ನ ಸದಸ್ಯರು ಶ್ರೀಮತಿ ಇಂದಿರಾ ಗಾಂಧಿಯವರ ಈ ಇಪ್ಪತ್ತು ಅಂಶಗಳ ಕಾರ್ಯಕ್ರಮಕ್ಕೆ ಮುಖಂಡರ ವಿರುದ್ಧವೇ ಕೈಎತ್ತಿ ಒಪ್ಪಿಗೆ ಕೊಟ್ಟಂತಹ ಕಾಲಘಟ್ಟದ ಆ ಒಂದು ಐತಿಹಾಸಿಕ ದಿನವಾಗಿತ್ತು.

**(ಮುಂದು)**

**ಶ್ರೀ ಯು.ಟಿ. ಖಾದರ್ (ಮುಂದು):-**

ಆಗ ಅಲ್ಲಿ 'Indicate' ಹಾಗೂ 'Syndicate' ಎಂದು ಎರಡು ಪಕ್ಷ ಆಯಿತು. ಬಹುಶಃ ಮಾನ್ಯ ವೀರೇಂದ್ರ ಪಾಟೀಲ್‌ರವರ ಪಕ್ಷ ಬೇರೆ ಆಗಿತ್ತು ಮತ್ತು ಶ್ರೀಮತಿ ಇಂದಿರಾ ಗಾಂಧಿಯವರ ಪಕ್ಷ ಬೇರೆಯಾಗಿತ್ತು. 1979ರಲ್ಲಿ ಅವೊತ್ತು ಚುನಾವಣೆಯಾಗುವಂಥ ಕಾಲಘಟ್ಟವಾಗಿತ್ತು. ಬಹುಶಃ ನಾನೇಕೆ ಮಾಜಿ ಪ್ರಧಾನ ಮಂತ್ರಿಯವರಾದ ಶ್ರೀಮತಿ ಇಂದಿರಾ ಗಾಂಧಿಯವರನ್ನು ನೆನಪಿಸಿಕೊಳ್ಳುತ್ತೇನೆಂದರೆ, ಅವೊತ್ತಿನ ಕಾಲದಲ್ಲಿ ನಾಯಕತ್ವವನ್ನು ಗುರುತಿಸಿಕೊಂಡು ದೆಹಲಿಯಲ್ಲಿದ್ದರೂ ಕೂಡ ಕರ್ನಾಟಕದಂತಹ ರಾಜ್ಯದಲ್ಲಿ ಯಾರ್ಯಾರು ಯಾವ್ಯಾವ ಶಕ್ತಿಯಿಂದ ಹೇಗೆ ಮಾಡಬಹುದು ಎಂಬ ಚಿಂತನೆಯನ್ನು ಅರ್ಥ ಮಾಡಿಕೊಳ್ಳುವಂಥ ದೊಡ್ಡ ಮಟ್ಟದ ಒಂದು ನಾಯಕತ್ವದ ಗುಣ ಮಾಜಿ ಪ್ರಧಾನ ಮಂತ್ರಿಯವರಾದ ಶ್ರೀಮತಿ ಇಂದಿರಾ ಗಾಂಧಿಯವರಲ್ಲಿ ಹೇಗಿತ್ತು ಎಂದರೆ, ಬಹುಶಃ 1952 ರಿಂದ 1972 ರವರೆಗೆ ಒಂದು ಸಚಿವ ಸ್ಥಾನ ಸಿಗದೇ ಹುಣಸೂರಿನಲ್ಲಿದ್ದಂತಹ ಅತ್ಯಂತ ಸಣ್ಣ ಸಮುದಾಯದ ಶ್ರೀ ಡಿ. ದೇವರಾಜ ಅರಸುರವರನ್ನು ಕರೆದುಕೊಂಡು ಬಂದು ಬೆಂಗಳೂರಿನಲ್ಲಿ ಕೆ.ಪಿ.ಸಿ.ಸಿ. ಅಧ್ಯಕ್ಷರನ್ನಾಗಿ ಮಾಡಿ, ಮತ್ತೆ ಚುನಾವಣೆಗೆ ಹೋಗಿ, ಅವೊತ್ತಿನ ದಿವಸ ಈ ರಾಜ್ಯದ ಮುಖ್ಯಮಂತ್ರಿಯಾಗಿ ಶ್ರೀ ಡಿ. ದೇವರಾಜ ಅರಸುರವರಿಗೆ ಏನಾದರೂ ಅವಕಾಶ ಮಾಡಿಕೊಟ್ಟಿದ್ದರೆ ಅದು ನಮ್ಮ ಕಾಂಗ್ರೆಸ್ ಪಕ್ಷದ ಮಾಜಿ ಪ್ರಧಾನ ಮಂತ್ರಿಯವರಾದ ಶ್ರೀಮತಿ ಇಂದಿರಾ ಗಾಂಧಿಯವರು ಎಂದು ಬಹಳ ಹೆಮ್ಮೆಯಿಂದ ಹೇಳುವುದಕ್ಕೆ ನಾನು ಬಯಸುತ್ತೇನೆ. ಅವೊತ್ತು ಅವರನ್ನು ಗುರುತಿಸುವಂಥ ಅವಕಾಶ ಆಗಿತ್ತು. ತದನಂತರ ಬಹುಶಃ ಅವತ್ತಿನ ದಿವಸ ಅನುಷ್ಟಾನ ಮಾಡಿದಂತಹ ಕಾರ್ಯಕ್ರಮದಲ್ಲಿ ಶ್ರೀ ಡಿ. ದೇವರಾಜ ಅರಸುರವರು ಮೊದಲನೆಯ ಸ್ಥಾನದಲ್ಲಿ ಇದ್ದಾರೆ ಎಂದು ಹೇಳುವುದಕ್ಕೆ ಇಚ್ಛಿಸುತ್ತೇನೆ. ಏಕೆಂದರೆ ಅದಕ್ಕೆ ಒಂದು ಮಾತಿದೆ, " ಶ್ರೀ ಡಿ. ದೇವರಾಜ ಅರಸುರವರು ಅಧಿಕಾರವನ್ನು ಅನುಭವಿಸಿದಂತಹ ನಾಯಕನಲ್ಲ, ಅಧಿಕಾರವನ್ನು ಸಮಾಜದ ಕಟ್ಟಕಡೆಯ ಜನರಿಗೆ ಮನುಷ್ಯನ ಬದುಕಿಗೆ ಮತ್ತು ಮನುಷ್ಯನ ಬದುಕನ್ನು ಬದಲಾಯಿಸುವುದಕ್ಕೆ, ಆ ಅಧಿಕಾರವನ್ನು ಬಳಸಿದಂತಹ ನಾಯಕ" ಎಂದು ಈಗಲೂ ಕೂಡ ಹೇಳುವಂತಹ ಅವಕಾಶ ಇದೆ. ಅದಕ್ಕಾಗಿ ಆ ಕಾಲಘಟ್ಟದಲ್ಲಿ ಎಲ್ಲರಿಗೂ ಕೂಡ ಕಾಲಲ್ಲಿ ಚಪ್ಪಲಿಯನ್ನು ಹಾಕುವಂಥ ಧೈರ್ಯ ಇರಲಿಲ್ಲ. ಕಾಲಿಗೆ ಚಪ್ಪಲಿ ಹಾಕುವಂತಹ ಧೈರ್ಯ ಇರದ ಸಮಾಜಕ್ಕೆ ಕಾಲಿಗೆ ಚಪ್ಪಲಿ ಹಾಕುವಂತಹ ಧೈರ್ಯ ಕೊಟ್ಟಿದ್ದರೆ, ಅದು ಶ್ರೀ ಡಿ. ದೇವರಾಜ ಅರಸುರವರು ಕೊಟ್ಟಿದ್ದಾರೆ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಬಹುಶಃ ಅವೊತ್ತಿನ ಕಾಲಘಟ್ಟದಲ್ಲಿ ಕಾಲೇಜುಗಳಲ್ಲಿ ಮತ್ತು ಸ್ಕೂಲ್‌ಗಳಲ್ಲಿ ದೂರ ನಿಂತು ಇದು ನಮ್ಮ ದಣಿಯವರು ಹೋಗುವಂಥ ಶಾಲೆ ಎಂದು ತೋರಿಸುವಂತಹ ವಾತಾವರಣವಿತ್ತು. ಆದರೆ, ಅವೊತ್ತು ಒಬ್ಬ ಕೂಲಿ ಕಾರ್ಮಿಕನ ಮಗ ಆ ಶಾಲೆಗೆ ಹೋಗುವಂಥ ಅವಕಾಶ ಇರಲಿಲ್ಲ. ಆದರೆ ಇವತ್ತಿನ ದಿವಸ ಕೂಲಿ ಕಾರ್ಮಿಕನ ಮನೆ ಬಳಿಯೇ ಶಾಲೆಯನ್ನು ನಿರ್ಮಾಣ ಮಾಡುವ ಮೂಲಕ ಅವೊತ್ತು ಕ್ರಾಂತಿಕಾರಿ ಹೆಜ್ಜೆಯನ್ನು ಇಟ್ಟಿದ್ದರೆ ಅದು ಶ್ರೀ ಡಿ. ದೇವರಾಜ ಅರಸುರವರ ಆಡಳಿತದಲ್ಲಿ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಬಹುಶಃ ಭೂ ಮಸೂದೆ ಇರಬಹುದು, ಐತಿಹಾಸಿಕ ಕಾರ್ಯಕ್ರಮಗಳು ಇರಬಹುದು ಅಥವಾ ಬೇರೆ

ಬೇರೆ ವಿಚಾರಗಳು ಇರಬಹದು. ಶ್ರೀ ಡಿ. ದೇವರಾಜ ಅರಸುರವರು ಮುಖ್ಯಮಂತ್ರಿಗಳಾಗಿದ್ದ ಮಾಜಿ ಪ್ರಧಾನ ಮಂತ್ರಿಯವರಾದ ಶ್ರೀಮತಿ ಇಂದಿರಾ ಗಾಂಧಿಯವರ 20 ಅಂಶಗಳ ಕಾರ್ಯಕ್ರಮವನ್ನು ಸಮರ್ಪಕವಾಗಿ ಅನುಷ್ಠಾನ ಮಾಡಿ, ಇಡೀ ದೇಶಕ್ಕೆ ದೊಡ್ಡ ಮಟ್ಟದ ಆ ಒಂದು ಸಂದೇಶ ಕೊಟ್ಟಂತಹ ರಾಜ್ಯ ಕರ್ನಾಟಕ. ಅಷ್ಟು ಮಾತ್ರವಲ್ಲ, ಇಡೀ ವಿಶ್ವಕ್ಕೆ ಭಾರತದಲ್ಲಿ ಪ್ರಜಾಪ್ರಭುತ್ವದ ಸಂವಿಧಾನದ ಅಡಿಯಲ್ಲಿ ಕಟ್ಟಕಡೆಯ ಅತ್ಯಂತ ಸಣ್ಣ ಸಮುದಾಯದವರು ಕೂಡ ನಮ್ಮ ರಾಜ್ಯದಲ್ಲಿ ಮುಖ್ಯಮಂತ್ರಿ ಆಗಬಹುದು, ದೊಡ್ಡ ನಾಯಕ ಆಗಬಹುದೆಂದು ವಿಶ್ವಕ್ಕೆ ತೋರಿಸಿಕೊಟ್ಟಂತಹ ಅವಕಾಶವಿದ್ದರೆ ಅದು ಶ್ರೀ ಡಿ. ದೇವರಾಜ ಅರಸು ರವರ ನಾಯಕತ್ವ ಎಂದು ಹೇಳುವುದಕ್ಕೆ ನಾನು ಬಯಸುತ್ತೇನೆ. ಹಾವನೂರು ವರದಿ ಮತ್ತು ಇನ್ನಿತರೆ ಬೇರೆ ಬೇರೆಯದನ್ನೆಲ್ಲಾ ನನ್ನ ಸ್ನೇಹಿತ ಮಿತ್ರರೆಲ್ಲರೂ ಹೇಳಿದ್ದಾರೆ. ಎಲ್ಲಾ ಯುವಕರಿಗೆ ಮತ್ತು ಎಲ್ಲಾ ಜನ ಪ್ರತಿನಿಧಿಗಳಿಗೆ ನಾನು ಹೇಳುವುದಿಷ್ಟೆ, ನಾವೆಲ್ಲರೂ ಕೂಡ ಶ್ರೀ ಡಿ. ದೇವರಾಜ ಅರಸುರವರ ಕಾಲಘಟ್ಟದ ಆಡಳಿತದಲ್ಲಿನ ವಿಚಾರಗಳು ಮತ್ತು ಅವರ ಇತಿಹಾಸವನ್ನು ಓದಿ ಅರ್ಥ ಮಾಡಿಕೊಳ್ಳಬೇಕು. ಎಲ್ಲಾ ಯುವ ಜನತೆಗೆ ತಿಳಿಸಿಕೊಡುವಂಥ ಅವಕಾಶ ಪ್ರತಿಯೊಬ್ಬರಿಂದಲೂ ಆಗಬೇಕು. ಅದಕ್ಕಾಗಿ ಮ್ಯೂಸಿಯಂ ಮಾತ್ರವಲ್ಲದೇ, ಲೈಬ್ರರಿ ಮೂಲಕ ಅವರ ಪುಸ್ತಕಗಳನ್ನು ಪ್ರದರ್ಶಿಸುವಂಥ ವಿಚಾರ ಆಗಬೇಕು ಎಂದು ಹೇಳುವುದಕ್ಕೆ ನಾನು ಇಚ್ಛಿಸುತ್ತೇನೆ. ಅದಕ್ಕಾಗಿ ಆ ಎಲ್ಲಾ ವಿಚಾರಗಳ ಜೊತೆಯಲ್ಲಿ ಬಹುಶಃ 1979ರಲ್ಲಿ ಇಬ್ಭಾಗ ಆದಾಗ ಅವರು ಕಾಂಗ್ರೆಸ್ ಪಕ್ಷ ಬಿಟ್ಟು ಹೋದಂತಹ ಸಂದರ್ಭದಲ್ಲಿ ಅವರ downfall start ಆಯಿತು. ಅದು ಕೂಡ ಎಲ್ಲಾ ನಾಯಕರಿಗೂ ಒಂದು ಪಾಠ. ನಾವು ಎಷ್ಟೇ ದೊಡ್ಡ ನಾಯಕರಾಗಿದ್ದರೂ ಕೂಡ ಒಂದು ಪಕ್ಷ ಬಿಟ್ಟು ಹೋದರೆ ನಮ್ಮ ಯಾರಿಗೂ ಕೂಡ ಗೌರವ ಇರುವುದಿಲ್ಲವೆಂದು ಬಹುಶಃ ಶ್ರೀ ಡಿ. ದೇವರಾಜ ಅರಸುರವರನ್ನು ನೋಡಿ ಕಲಿಯಬೇಕು ಎಂದು ಹೇಳುವುದಕ್ಕೆ ನಾನು ಬಯಸುತ್ತೇನೆ. ನನ್ನ ತಂದೆಯವರು ಕೂಡ ಅವರ ಜೊತೆಯಲ್ಲೇ ಹೋದರು. ಸುಮಾರು 16 ವರ್ಷ ವನವಾಸ ಆಗುವಂಥ ವಿಚಾರ ಆಯಿತು. ಶ್ರೀ ಡಿ. ದೇವರಾಜ ಅರಸುರವರ ಜೊತೆ ಹೋಗಿದ್ದಕ್ಕೆ ಮತ್ತೆ 1983ರಲ್ಲಿ ನಮ್ಮ ತಂದೆಯವರಿಗೆ ಕಾಂಗ್ರೆಸ್‌ನಿಂದ ಟಿಕೆಟ್ ಸಿಗಲಿಲ್ಲ. 1999ರಲ್ಲಿ ಕರೆದು ಟಿಕೆಟ್ ಕೊಟ್ಟಾಗ ಮತ್ತೆ ಅವರು ಶಾಸಕರಾದರು. ಅವರು ಅವೊತ್ತು ತಾಳ್ಮೆ ವಹಿಸಿದ ಕಾರಣ, ಮತ್ತೆ 1999ರಲ್ಲಿ ಅವರಿಗೆ ಪಕ್ಷ ಟಿಕೆಟ್ ಕೊಟ್ಟಿದೆ. ಇವತ್ತಿನ ದಿವಸ ನನಗೂ ಕೂಡ ಸಚಿವನಾಗುವ ಅವಕಾಶ ಸಿಕ್ಕಿದೆ ಎಂದು ನಾನು ಯುವಕರಿಗೆ ಹೇಳುವಂಥ ಸಂದೇಶ. ಇದರ ಜೊತೆಗೆ ಶ್ರೀ ರಾಜೀವ್ ಗಾಂಧಿಯವರ ಜನ್ಮ ದಿನಾಚರಣೆ ಕೂಡ ಇದೆ. ಅವೊತ್ತು 18 ವರ್ಷದ ಯುವಕರಿಗೂ ಕೂಡ ಮತದಾನದ ಹಕ್ಕನ್ನು ಕೊಟ್ಟು ಈ ರಾಷ್ಟ್ರದ ರಾಜಕೀಯ ಮತ್ತು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ತನ್ನ ವ್ಯಕ್ತಿತ್ವದ ಧ್ವನಿ ಮತ್ತು ತನ್ನ ಆ ಅಭಿಪ್ರಾಯ ಮತ್ತು ಭಾಗವಹಿಸುವಂತಹ ಅವಕಾಶ ಮಾಡಿಕೊಟ್ಟಿದ್ದರೆ ಅದು ಸನ್ಮಾನ್ಯ ರಾಜೀವ್ ಗಾಂಧಿಯವರು ಎಂದು ನಾವೆಲ್ಲಾ ಹೆಮ್ಮೆಯಿಂದ ಮತ್ತು ಧೈರ್ಯದಿಂದ ಹೇಳಬೇಕಾಗುತ್ತದೆ. ಏಕೆಂದರೆ, ಅವೊತ್ತು ನಾನು ಅವರ book ತೆಗೆದುಕೊಂಡು ಓದಿದ್ದೇನೆ. ಅವರು ಪಾರ್ಲಿಮೆಂಟ್‌ನಲ್ಲಿ ಆ ಮಸೂದೆಯನ್ನು ತೆಗೆದುಕೊಂಡು ಬಂದಾಗ ಬಹಳಷ್ಟು ಜನ ವಿರೋಧ ಮಾಡಿದ್ದರಂತೆ. ಬಹುಶಃ 'ಸನ್ಮಾನ್ಯ ರಾಜೀವ್ ಗಾಂಧಿಯವರು ಈ ದೇಶವನ್ನು ಸಣ್ಣ ಮಕ್ಕಳ

ಕೈಯಲ್ಲಿ ಕೊಟ್ಟು, ಈ ದೇಶವನ್ನು ಹಾಳು ಮಾಡುತ್ತಿದ್ದಾರೆ' ಎಂದು ಹೇಳಿದಾಗ, ಸನ್ಮಾನ್ಯ ರಾಜೀವ್ ಗಾಂಧಿಯವರು ಒಂದು ಮಾತನ್ನು ಹೇಳಿದರಂತೆ. ಈ ದೇಶವನ್ನು ರಕ್ಷಣೆ ಮಾಡುವುದಕ್ಕೆ ನಮ್ಮ ಸೈನ್ಯವನ್ನು ನಿಲ್ಲಿಸಿ, ನಮ್ಮ 18 ವರ್ಷದ ಯುವಕರ ಕೈಯಲ್ಲಿ ಬಂದೂಕು ಕೊಟ್ಟು ಈ ದೇಶದ ಗಡಿಯನ್ನು ಕಾಯಿಸುವಂಥದ್ದಕ್ಕೆ ನಮಗೆ ಧೈರ್ಯ ಮತ್ತು ವಿಶ್ವಾಸ ಇದೆ; ಈ ದೇಶದ ಯುವ ಜನಾಂಗ ಮತ್ತು ವಿದ್ಯಾವಂತ ಸಮುದಾಯ ನಮ್ಮ ದೇಶಕ್ಕೆ ಮಾರಕವಾಗುವಂಥ ಯಾವುದೇ ಕೆಲಸ ಮಾಡುವುದಿಲ್ಲ. ಅದಕ್ಕಾಗಿ ಅವರಿಗೆ ಮತದಾನದ ಹಕ್ಕು ಕೊಡಬೇಕೆಂದು ಪ್ರತಿಪಾದಿಸಿ ಅವೊತ್ತು ಆ ಬಿಲ್ ಪಾಸ್ ಮಾಡುವುದಕ್ಕೆ ಅವಕಾಶವಾಗಿತ್ತು. ಅಂತಹ ಇಬ್ಬರು ಮಹಾನ್ ನಾಯಕರ ಬೇರೆ ಬೇರೆ ಕೊಡುಗೆಗಳನ್ನು ನಾನು ಇವತ್ತು ಪ್ರಸಾರ ಮಾಡುವುದಿಲ್ಲ. ಎಲ್ಲಾ ಯುವಕರಿಗೆ, ವಿದ್ಯಾರ್ಥಿಗಳಿಗೆ ದೊಡ್ಡ ಮಟ್ಟದಲ್ಲಿ ಅವರ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದಕ್ಕೆ ಅತ್ಯಂತ ಸತ್‌ಪ್ರಜೆ ಮತ್ತು ದೇಶಪ್ರೇಮ ಮತ್ತು ಸಂಸ್ಕೃತಿಗೆ ಒಳಪಟ್ಟಂತೆ, ಅವರ ಒಂದು ಜೀವನದ ಸಂದೇಶ ನಮಗೆಲ್ಲರಿಗೂ ಕೂಡ ಅತ್ಯಗತ್ಯ ಎಂದು ನಾನು ಹೇಳುತ್ತೇನೆ. ಇವತ್ತಿನ ದಿವಸ ಶ್ರೀ ಡಿ. ದೇವರಾಜ ಅರಸುರವರಿಗೆ ನಾವು ಅತ್ಯುತ್ತಮವಾದಂತಹ ಗೌರವ ಮತ್ತು ಶ್ರದ್ಧಾಂಜಲಿ ಸಲ್ಲಿಸಿ ಅವರನ್ನು ಅನುಸ್ಮರಣೆ ಮಾಡುವಂತಹ ದೊಡ್ಡ ಮಟ್ಟದ ವಿಚಾರದಂತೆ ಬರೀ ಒಂದು ಹೆಸರನ್ನು ಘೋಷಿಸುವುದು ಮಾತ್ರವಲ್ಲ, ನ್ಯಾಯದ ರಾಜಕಾರಣವನ್ನು ನಾವು ಬದುಕಿನಲ್ಲಿ ಅನುಸರಿಸುವುದು ಆಗಬೇಕೆಂದು ಹೇಳುವುದಕ್ಕೆ ನಾನು ಬಯಸುತ್ತಿದ್ದೇನೆ. ನ್ಯಾಯದ ರಾಜಕಾರಣವನ್ನು ನಮ್ಮ ಬದುಕಿನಲ್ಲಿ ಅನುಷ್ಟಾನಗೊಳಿಸುವುದೇ ನಮಗೆ ಗೌರವ ಕೊಡುವಂಥ ಅತ್ಯಂತ ದೊಡ್ಡ ಮಟ್ಟದ ಕೆಲಸ. ಬಹುಶಃ ಇವತ್ತು 'ಶ್ರೀ ಡಿ. ದೇವರಾಜ ಅರಸುರವರನ್ನು ನೆನೆಯುವ ಕರ್ನಾಟಕ, 'ಅನ್ಯಾಯದ ಎದುರು ಮೌನವಾಗಬಾರದು' ಎಂದು ನಾನು ಇವತ್ತು ಬಯಸುತ್ತೇನೆ. ಯಾರಿಗಾದರೂ ಅನ್ಯಾಯವಾದರೆ ಆಗ ನಾವು ಮೌನವಾಗಿ ನಿಂತಿರಬಾರದು. ಅದು ಯಾವುದೇ ಜಾತಿ ಇರಲಿ, ಯಾವುದೇ ಧರ್ಮ ಇರಲಿ, ಯಾವುದೇ ವರ್ಗ ಇರಲಿ, ಯಾರೇ ಬಡವ ಇರಲಿ ಮತ್ತು ಯಾರೇ ಶ್ರೀಮಂತ ಇರಲಿ. ಅನ್ಯಾಯವಾದಾಗ ನಾವು ಮೌನವಾಗಿರಬಾರದು. ಶ್ರೀ ಡಿ. ದೇವರಾಜ ಅರಸುರವರು ಆಳಿದಂತಹ ಕರ್ನಾಟಕವೆಂದು ಹೇಳಿಕೊಂಡು ಒಂದೇ ಮಾತನ್ನು ಹೇಳುವುದಕ್ಕೆ ಇಚ್ಚೆಪಡುತ್ತೇನೆ. ನಾನು ಹಲವಾರು ನಾಯಕರನ್ನು ನೋಡಿಕೊಂಡು ಬಂದಂತಹ ಸಂದರ್ಭದಲ್ಲಿ ಶ್ರೀ ಡಿ. ದೇವರಾಜ ಅರಸುರವರ ಕನಸಿನ ಭಾರತವನ್ನು. ಮಹಾತ್ಮ ಗಾಂಧೀಜಿಯವರ ಕನಸಿನ ಭಾರತವನ್ನು, ಬಾಬಾ ಸಾಹೇಬ್ ಡಾ: ಬಿ.ಆರ್.ಅಂಬೇಡ್ಕರ್ ರವರು ಸಂವಿಧಾನವನ್ನು ಅಳವಡಿಸಿದ್ದರೆ, ಅದನ್ನು ಅನುಷ್ಟಾನ ಮಾಡುವುದಕ್ಕೆ ಶ್ರೀಮತಿ ಇಂದಿರಾಗಾಂಧಿಯವರು ಮತ್ತು ಶ್ರೀ ಡಿ. ದೇವರಾಜ ಅರಸುರವರು ಪಟ್ಟಂತಹ ಶ್ರಮ. ಅದರ ಜೊತೆಗೆ ನನ್ನ ಅನುಭವದ ಒಂದು ಮಾತು ಹೇಳುತ್ತೇನೆ, ಏಕೆಂದರೆ ಆ ಕಾಲಘಟ್ಟದಲ್ಲಿ ನಾನು ಇರಲಿಲ್ಲ. ನಮಗೆ ಅಧಿಕಾರ ಸಿಕ್ಕಿದಾಗ ಅದನ್ನು ಮತ್ತಷ್ಟು ಜಾರಿಗೆ ತರುವುದಕ್ಕೆ ಕಾರಣಕರ್ತರಾದಂತಹ ಮಾಜಿ ಮುಖ್ಯಮಂತ್ರಿಯವರಾದ ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರು ಎಂದು ನಾನು ಇವತ್ತು ಹೇಳುವುದಕ್ಕೆ ಬಯಸುತ್ತೇನೆ. ಈ ರೀತಿ ಹಲವಾರು ಉದಾಹರಣೆಗಳಿವೆ. ನಾನು ಒಂದೇ ಒಂದು ಉದಾಹರಣೆಗೆ ಹೇಳುವುದಾರೆ, 2013-14ರಲ್ಲಿ ನಾನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವನಾಗಿದ್ದೆನು. ಆಗ

ಡಾ: ಶರಣ ಪ್ರಕಾಶ್ ಪಾಟೀಲ್ ರವರು Medical Education Minister ಆಗಿದ್ದರು. ಆಗ ಒಂದು ಯೂನಿವರ್ಸಿಟಿಗೆ ಒಬ್ಬರನ್ನು V.C. (Vice Chancellor)ರನ್ನಾಗಿ ಮಾಡಬೇಕಾಗಿತ್ತು. ನಮ್ಮನ್ನು ಕರೆಸಿದ್ದರು. ನಾವು ಅಲ್ಲಿಗೆ ಮಧ್ಯಾಹ್ನ 3 ಗಂಟೆಗೆ 3rd floor ಗೆ ಹೋಗಿ ಸಭೆಯನ್ನು ಮಾಡಿದ್ದೆವು. ಆಗ ಅವರು ಯಾವುದೆಲ್ಲಾ ಹೆಸರು ಇದೆಯೆಂದು ಕೇಳಿದರು. ಬೇರೆ ಬೇರೆ ವಿಚಾರ ಕೊಟ್ಟು 4 ಜನರ ಹೆಸರನ್ನು ಹೇಳಿದರು. 'ಸಣ್ಣ ಸಮುದಾಯದವರು ಒಬ್ಬರು ಡಾಕ್ಟರ್ ಇದ್ದಾರೆ, ಅವರ ಹೆಸರು ಇಲ್ಲವಲ್ಲ' ಎಂದು ಕೇಳಿದರು. ಅದಕ್ಕೆ ಡಾ: ಶರಣ ಪ್ರಕಾಶ್ ಪಾಟೀಲ್ ರವರು, ಸರ್, ಅವರು ಒಬ್ಬರು ಉತ್ತಮವಾದಂತಹ ಡಾಕ್ಟರ್ ಇದ್ದಾರೆ. ಆದರೆ ಅವರಿಗೆ ಆಡಳಿತಾತ್ಮಕ ವಿಚಾರಗಳು ಅಷ್ಟು ಗೊತ್ತಿಲ್ಲ. ಅವರಿಗೆ administrative experience ಕೂಡ ಇಲ್ಲ ಅಥವಾ ಯೂನಿವರ್ಸಿಟಿಯಲ್ಲಿ ಕೇಳಿದ ಯಾವುದೇ ಕೆಲಸ ಕೂಡ ಮಾಡಲಿಲ್ಲವೆಂದು ಹೇಳಿದರು. ನಾನು ಕೂಡ ಹೇಳಿದೆನು. ಆಗ ಅವರು ಒಂದು ಮಾತನ್ನು ಹೇಳಿದರು. ಈ ಅತ್ಯಂತ ಸಣ್ಣ ಸಮುದಾಯದವರಿಗೆ ನಾವು ಬಂದು ಅವರಿಗೆ ಅವಕಾಶ ಮತ್ತು ಅಧಿಕಾರ ಕೊಡದಿದ್ದರೆ ಮತ್ತೆ ಕೊಡುವವರು ಯಾರಿದ್ದಾರೆ? ಅವರು ಮಾಡಲಿ, ಮಾಡದೇ ಇರಲಿ, ಅವರಿಗೆ ಅದನ್ನು ಕೊಡಿ ಎಂದು ಹೇಳಿದರು. ನೀವು ನಂಬುವುದಿಲ್ಲ, ನಾವು ಯಾರನ್ನು ಅನುಭವ ಇಲ್ಲವೆಂದು ತೀರ್ಮಾನ ಮಾಡಿ ಬದಿಗಿಟ್ಟಿದ್ದೆವೋ, ಸನ್ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಸಿದ್ದರಾಮಯ್ಯನವರು ಅವರಿಗೆ ಕೊಡಿ ಎಂದು ಧೈರ್ಯವಾಗಿ ಹೇಳಿದ್ದಾರೆ. ಇವತ್ತು ಆತ history ಯಲ್ಲಿ one of the best Vice Chancellors ಆಗಿ ಪರಿವರ್ತನೆಯಾಗಿ ಅವರ ಹೆಸರಿದೆ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಮತ್ತೊಂದು ಉದಾಹರಣೆ ಹೇಳುವುದಾದರೆ, ಒಬ್ಬರು ಡಾಕ್ಟರ್ ಇದ್ದರು. ಅವರ ಮೇಲೆ ಕೆಲವೊಂದು complaints ಬರುತ್ತಿತ್ತು. ಆದರೆ ಅವರಿಗೆ promotion ಕೊಡಬೇಕಾಗಿತ್ತು. ನಾನು ಅವರ ಫೈಲ್‌ನ್ನು side ಗೆ ಇಟ್ಟಿದ್ದೆನು. ಆಗ ಅದರಲ್ಲಿ ನನಗೆ ಅನುಭವ ಕಡಿಮೆ ಇತ್ತು. ಒಂದು ದಿವಸ Cabinet ಮುಗಿದ ತಕ್ಷಣ ಸನ್ಮಾನ್ಯ ಮುಖ್ಯಮಂತ್ರಿಯವರು ನನ್ನನ್ನು ಕರೆದು ಆತನ promotion ಇದೆ ಅದು ಏನಾಯಿತು ಎಂದು ಕೇಳಿದರು. ನಾನು ಅವರಿಗೆ ಸರ್ ಆತ ಸರಿಯಿಲ್ಲ, ಆತನ ಮೇಲೆ complaint ಇದೆ ಎಂಬ ವಿಚಾರವನ್ನು ಹೇಳಿದೆನು. ಅದಕ್ಕೆ ಅವರು complaint prove ಆಗಿದೆಯೇ' ಎಂದು ಕೇಳಿದರು. ನಾನು 'ಇಲ್ಲ ಸರ್' ಎಂದು ಹೇಳಿದೆನು. Complaint prove ಆಗದಿದ್ದರೆ ಆಗ ಅವರು ದೋಷಿ ಅಲ್ಲ. ನಿಮಗೆ ಗೊತ್ತಿಲ್ಲ, ಈ ಒಂದು ಆಡಳಿತ ವ್ಯವಸ್ಥೆಯಲ್ಲಿ ಸಣ್ಣ ಸಣ್ಣ ಸಮುದಾಯದ ಅಧಿಕಾರಿಗಳು ಇದ್ದಾಗ, ಇವರಿಗೆ promotion ಸಿಗಬಾರದೆಂದು ಬಹಳಷ್ಟು ಪ್ರಯತ್ನಗಳು ಬೇರೆ ಬೇರೆ ರೀತಿಯಿಂದ ಆಗುತ್ತದೆ. ಆದಕಾರಣ ಆರೋಪ ಬಂದ ತಕ್ಷಣವೇ ಅದನ್ನು ನಿಲ್ಲಿಸುವುದಕ್ಕೆ ಹೋಗಬೇಡ. ಏಕೆಂದರೆ, ಆತ ಸಣ್ಣ ಸಮುದಾಯವಾದ ಮಡಿವಾಳ ಸಮುದಾಯದವನು. ಅವನಿಗೆ promotion ಕೊಟ್ಟುಬಿಡು ಎಂದು ಹೇಳಿದಾಗ, ಆತನಿಗೆ ನಾನು promotion ಕೊಡುವಂಥ ಕೆಲಸವಾಯಿತು. ಅಂತಹವರ ರಾಜಕೀಯ ಮತ್ತು ನಾಯಕತ್ವದಲ್ಲಿ ಕೆಲಸ ಮಾಡುವುದಕ್ಕೆ ನಮಗೆ ದೊಡ್ಡ ಮಟ್ಟದಲ್ಲಿ ಪಾಠವಾಗಿದೆ ಎಂದು ಹೇಳುವುದಕ್ಕೆ ನಾನು ಇವತ್ತು ಬಯಸುತ್ತೇನೆ. ಏಕೆಂದರೆ, ಸಾಮಾಜಿಕ ನ್ಯಾಯದ ಬಗ್ಗೆ ಚರ್ಚೆ ಮಾಡಿದಂತಹ ಸಂದರ್ಭದಲ್ಲಿ ಅದನ್ನು ನಾನು ನೆನಪಿಸಿಕೊಳ್ಳುವಂಥ

ಅವಕಾಶವಾಯಿತು. ಅಂತಹ ಮಹಾನಾಯಕರಾದ ಶ್ರೀ ಡಿ. ದೇವರಾಜ ಅರಸುರವರ ಕಾಲದಲ್ಲಿ ನಾನು ಇರಲಿಲ್ಲ, ನಮ್ಮ ತಂದೆಯವರು ಇದ್ದರು. At least ಅಂತಹ ಚಿಂತನೆಗಳನ್ನು, ಸನ್ಮಾನ್ಯ ಸಿದ್ದರಾಮಯ್ಯನವರ ಕಾಲದಲ್ಲೂ ಕೂಡ ಅಳವಡಿಸಿಕೊಂಡು ನಾನು ಸಚಿವರಾಗುವುದಕ್ಕೆ ಅವಕಾಶ ಸಿಕ್ಕಿದೆ. ನಮ್ಮ ವ್ಯಕ್ತಿತ್ವ ಬೆಳೆಸಿಕೊಳ್ಳುವುದಕ್ಕೆ ದೊಡ್ಡ ಮಟ್ಟದ ಅವಕಾಶ ಸಿಕ್ಕಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಬಹುಶಃ ಇವೆಲ್ಲಾ ತಮಗೂ ಗೊತ್ತಿದೆ. ತಾವು ಸಹ N.S.U.I. (National Students' Union of India) ನಲ್ಲಿದ್ದೀರಿ. ಅದಕ್ಕಾಗಿ ನಾನು ದೀರ್ಘವಾಗಿ ಇದರ ಬಗ್ಗೆ ಚರ್ಚೆ ಮಾಡುವುದಿಲ್ಲ. ಇವತ್ತಿನ ದಿವಸ ಯುವಕರಿಗೆ ಮತ್ತು ಯುವ ಜನಾಂಗಕ್ಕೆ ಅರ್ಥವಾಗಬೇಕು. ಯುವ ಜನಾಂಗ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದಕ್ಕೆ ಅತ್ಯಂತ ಸತ್‌ಪ್ರಜೆಯಾಗಿ, ಅತ್ಯುತ್ತಮವಾದ ಜನ ಪ್ರತಿನಿಧಿಯಾಗಿ ಸಮಾಜದ ಕಟ್ಟಕಡೆಯ ಜನರ ಪರವಾಗಿ ನಿಂತು ಸರ್ವರ ಪ್ರೀತಿಗೊಳಪಟ್ಟಂತಹ ವ್ಯಕ್ತಿತ್ವ ನಮಗೆಲ್ಲಾ ಬರಲಿ ಎಂದು ಹೇಳುತ್ತೇನೆ. ಮಾನ್ಯ ಸಭಾಪತಿಯವರೆ, ತಮಗೆ ಮತ್ತೊಮ್ಮೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ, ನಮಸ್ಕಾರ.

**(ಮುಂದು)**

(802)20.8.2026/6.00/ಎಂ.ಎಂ.-ಬಿ.ಎನ್.ಎಸ್. (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಎಲ್ಲಾ ಗೌರವಾನ್ವಿತ ಶಾಸಕರುಗಳು ಬಹಳಷ್ಟು ವಿಚಾರವನ್ನು ನಮ್ಮ ರಾಜ್ಯ ಕಂಡಿರುವಂತಹ ಒಂದು ಅಪ್ರತಿಮ ವ್ಯಕ್ತಿತ್ವದ ಹಾಗೂ ಬಹಳಷ್ಟು ವಿಚಾರಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ. ನಾನು ನನಗಿರುವಂತಹ ಅವಕಾಶದಲ್ಲಿ ಒಬ್ಬ ಕಿರಿಯನಾಗಿ, ಅವರು ಮುಖ್ಯಮಂತ್ರಿಗಳಾಗಿದ್ದಾಗ ನಾನು ಅವರನ್ನು ನೋಡಿದವನಲ್ಲ, ಅವರ ಬಗ್ಗೆ ಕೇಳಿರುವಂತಹ, ಓದಿರುವಂತಹ ವಿಚಾರದ ಹಿನ್ನೆಲೆಯಲ್ಲಿ ಮಾತನಾಡುವುದಕ್ಕೆ ಇಚ್ಛೆಪಡುತ್ತೇನೆ.

ನಿಜಕ್ಕೂ ಶ್ರೀ ಡಿ. ದೇವರಾಜ ಅರಸುರವರಂತಹ ವ್ಯಕ್ತಿತ್ವವನ್ನು ನಮ್ಮ ಕರ್ನಾಟಕ ರಾಜ್ಯ ಕಂಡಿರುವಂತಹದ್ದು ನಮ್ಮೆಲ್ಲರ ಅದೃಷ್ಟ ಎಂದು ಹೇಳುತ್ತೇನೆ. ಆಗಿರುವಂತಹ ಮುಖ್ಯಮಂತ್ರಿಗಳ ಪೈಕಿ ಅತ್ಯಂತ ಅಗ್ರಗಣ್ಯ ಸ್ಥಾನದಲ್ಲಿ ಯಾವುದಾದರೂ ಪ್ರಾತಃಸ್ಮರಣೀಯವಾಗಿ ಉಳಿದಿರುವಂತಹ ಹೆಸರು ಇದ್ದರೆ ಅದು ಶ್ರೀ ಡಿ. ದೇವರಾಜ ಅರಸುರವರ ಹೆಸರು. ಅವರಿಗೆ ಸರಿಸಮ ಅಥವಾ ಸರಿಸಾಟಿಯಾದ ಇನ್ನೊಂದು ಹೆಸರಿಲ್ಲ ಎಂಬುದನ್ನು ನಾನು ಖಚಿತವಾಗಿ ಹೇಳಬಹುದು. ಏಕೆಂದರೆ ಶ್ರೀ ಡಿ. ದೇವರಾಜ ಅರಸುರವರ ಜೀವನದ ಮಜಲುಗಳನ್ನು, ಆಯಾಮಗಳನ್ನು ನೋಡಿದಾಗ ಅವರಂತಹ ಒಂದು ವರ್ಣರಂಜಿತ ರಾಜಕಾರಣದ ವ್ಯಕ್ತಿತ್ವವನ್ನು ಹೊಂದಿದಂತಹವರು ಇಲ್ಲ. ಕೇವಲ ಧ್ವನಿಯಿಲ್ಲದವರಿಗೆ ಧ್ವನಿ ಕೊಟ್ಟಿದ್ದಂತಹದ್ದಷ್ಟೇ ಅಲ್ಲ ಅವರ ವಿಚಾರ. ಅದು ಧ್ವನಿಯಿಲ್ಲದಂಥವರಿಗೆ ಧ್ವನಿ ಕೊಡುವಂತಹದ್ದು ರಾಜ್ಯದಲ್ಲಿಯೇ ಒಂದು microscopic community ಅವರದ್ದು. ರಾಜ್ಯದಲ್ಲಿ ಇವತ್ತೆಲ್ಲಾ ಅರಸು community ಇದ್ದರೆ ಒಂದರಿಂದ ಒಂದೂವರೆ ಲಕ್ಷದಷ್ಟು ಇರಬಹುದು ಅದಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಆ ಜನಸಂಖ್ಯೆ ಇರಲಾರದು. ಮೊದಲು ಶ್ರೀ ಡಿ. ದೇವರಾಜ ಅರಸುರವರ ಬಗ್ಗೆ ತಿಳಿದುಕೊಳ್ಳುವುದಕ್ಕೆ ಮುಂಚೆ

ನಾನು ಅಂದುಕೊಂಡಿದ್ದೇನೆಂದರೆ ಬಹುಶಃ ಅವರು ಮೈಸೂರು ಮಹಾರಾಜರ ವಂಶಸ್ಥರಿರಬೇಕು, ಅವರ ಸಂಬಂಧಿಕರೋ ಅಥವಾ ತೀರಾ ಹತ್ತಿರದ ಸಂಬಂಧದ ನೆಂಟಸ್ತನ ಇರಬಹುದು ಅದರಿಂದ ಅವರು ಅಷ್ಟು ದೊಡ್ಡ ಹೆಸರು ಮಾಡುವುದಕ್ಕೆ ಸಾಧ್ಯವಾಯಿತು ಅಂತ. ಆದರೆ ಕೇಳ ನೋಡಿದಾಗ ಆ ರೀತಿಯಾದಂತಹ ಸಂಬಂಧಗಳಿಲ್ಲ ಎಂದು ತಿಳಿಯಿತು. ಕೆಲವರು ‘ಒಡೆಯರ್’ರವರಿಗೆ ಅವರು ದೂರದ ಸಂಬಂಧ ಎಂದು ಹೇಳುತ್ತಾರೆ. ಆದರೆ, ರಾಜಕಾರಣದ ಇತಿಹಾಸವನ್ನು, ಹಿನ್ನೆಲೆಯನ್ನು ನೋಡಿದಾಗ ಆ ಸಂಬಂಧದ ಎಳೆಗಳು ಎಲ್ಲಿಯೂ ಕಂಡುಬಂದಿಲ್ಲ. ಒಂದು ರೈತಾಪಿ ಕುಟುಂಬದಿಂದ ಬಂದಿರುವಂತಹ ಹಿನ್ನೆಲೆ ಅವರದ್ದು. ಈ ರಾಜ್ಯದಲ್ಲಿಯೇ ಅತ್ಯಂತ ವಿಶಿಷ್ಟವಾದಂತಹ ವ್ಯಕ್ತಿತ್ವವನ್ನು ಹೊಂದಿರುವಂತಹವರು ಶ್ರೀ ಡಿ. ದೇವರಾಜ ಅರಸುರವರು. ಅವರ ವೇಷಭೂಷಣಗಳಿಂದಲೂ ಕೂಡ ಅವರು ಹಾಕುತ್ತಿದ್ದಂತಹ ಕಚ್ಚೆ, ಕೋಟು, ಅವರ ದಿರಿಸು, ಫೋಟೋಗಳಲ್ಲಿ ನೋಡಿದಾಗ ಅವರು ಸೇದುತ್ತಿದ್ದಂತಹ ಪೈಪು; ನಾವು ತೀರಾ ಚಿಕ್ಕ ಹುಡುಗರಾಗಿದ್ದಾಗ ಪೈಪಿನ ಚಿತ್ರವುಳ್ಳ ಕಾರ್ಟೂನ್ ಒಂದು ಬರುತ್ತಿತ್ತು ಅದರಲ್ಲಿ ಆ ಪೈಪ್ ಎದ್ದು ಕಾಣುತ್ತಿತ್ತು. ಅಂದರೆ ಬಹಳ ವಿಶಿಷ್ಟವಾದಂತಹ ರಾಜಕಾರಣವನ್ನು ಕೇವಲ ಶೋಷಿತರಿಗೆ ಧ್ವನಿ ಕೊಡುವುದರ ಜೊತೆಗೆ ಒಂದೂವರೆ ಲಕ್ಷಕ್ಕಿಂತ ಕಡಿಮೆ ಇರುವಂತಹ ಒಂದು ಸಮುದಾಯದಿಂದ ಬಂದು ಯಾವುದೇ ಪ್ರಬಲವಾದಂತಹ ಸಮುದಾಯದ ಬೆಂಬಲವಿಲ್ಲದೇ ಧ್ವನಿ ಕೊಡುವಂತಹ ಕೆಲಸ, ದಿಟ್ಟತನ, ಧೈರ್ಯ ಅದು ಎಲ್ಲರಿಗೂ ಬರುವುದಕ್ಕೆ ಸಾಧ್ಯವಿಲ್ಲ. ನನ್ನ ಹಿಂದೆ ನನ್ನ ಸಮಾಜದ ಶಾಸಕರು ಒಂದೈವತ್ತು ಜನ ಇದ್ದಾರೆ ಅಥವಾ ತಮ್ಮ ಸಮುದಾಯದ ಸಂಖ್ಯೆ 50 ಲಕ್ಷದಷ್ಟಿದೆ, ತಾನು ಒಂದು ಕರೆ ಕೊಟ್ಟರೆ ಇಡೀ ರಾಜ್ಯದಲ್ಲಿ ಬೇರೆ ರಾಜಕಾರಣಿಗಳು ಹೆದರುತ್ತಾರೆ; ಶ್ರೀ ಡಿ. ದೇವರಾಜ ಅರಸುರವರನ್ನು ಎದುರು ಹಾಕಿಕೊಂಡರೆ ಆ ಸಮುದಾಯದ ಜನರು ತಮಗೆಲ್ಲಿ ಮತ ಹಾಕುವುದಿಲ್ಲವೋ ಎಂದು ಹೆದರುತ್ತಾರೆ. ಇವತ್ತು ನಡೆಯುತ್ತಿರುವ ರಾಜಕಾರಣ ಅದು. ಯಾರಾದರೂ ಒಬ್ಬ ರಾಜಕಾರಣಿಯಾಗಿ ಅಥವಾ ನಾಯಕನಾಗಿ ಹೊರಹೊಮ್ಮಬೇಕೆಂದರೆ ಅವತ್ತಿನ ಜಾತಿ ರಾಜಕಾರಣಕ್ಕೂ ಇವತ್ತಿಗೂ ಅತಿ ಹೆಚ್ಚು ಜಾತಿ ಬೇರುಮಟ್ಟಕ್ಕೆ, ನಾವು ಯಾವುದನ್ನು ತೊಡಗಿಸಬೇಕು, ಯಾವುದನ್ನು ಈ ರಾಜ್ಯದಿಂದ, ದೇಶದಿಂದ ನಿವಾರಣೆ ಮಾಡಬೇಕು ಎಂದು ಅಂದುಕೊಳ್ಳುತ್ತಿದ್ದೇವೆಯೋ ಅದೆಲ್ಲವೂ ಹುಸಿಯಾಗಿ ದಿನೇ ದಿನೇ ಜಾತಿ ರಾಜಕಾರಣ ಬಲವಾಗುತ್ತಿದೆ. ಯಾವುದಾದರೂ ಸಮುದಾಯವನ್ನು ಮಾತನಾಡಿಸಬೇಕಾದರೆ ಅಥವಾ ಯಾವುದಾದರೂ ಮಂತ್ರಿಯನ್ನು ಮಾತನಾಡಿಸಬೇಕೆಂದರೆ ಅಥವಾ ಒಬ್ಬ ಅಧಿಕಾರಿಯನ್ನು ಮುಟ್ಟುವುದಕ್ಕೆ ಹೋದರೆ ಅವನ ಸಮುದಾಯ, ಅವನು ಭ್ರಷ್ಟಾಚಾರ ಮಾಡಿರುತ್ತಾನೆ ಅದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದರೆ ಇವತ್ತು ಅವನ ಸಮುದಾಯ ಬಂದು ನಿಲ್ಲುವಂತಹ ಸಂದರ್ಭ ಬಂದಿದೆ. ನಾವೆಲ್ಲರೂ ತಲೆತಗ್ಗಿಸುವಂತಹ ವಾತಾವರಣದಲ್ಲಿ ಇರುವಂತಹ ಸಂದರ್ಭದಲ್ಲಿ ಕೇವಲ microscopic backward community ಯಿಂದ ಬಂದು ಎಲ್ಲಾ ಶೋಷಿತ ಸಮುದಾಯಗಳಿಗೆ ಒಂದು ಧ್ವನಿ ಕೊಡುವಂತಹ ಕೆಲಸ ಮಾಡಿದ್ದಾರೆ. ಆಗ ನಾನು ಬಹಳ ಚಿಕ್ಕ ಹುಡುಗ, ಬಹುಶಃ 8-10 ವರ್ಷದವನಿರಬಹುದು. ನಮ್ಮ ಊರಿನಲ್ಲಿ ಲೇವಾದೇವಿ ಪದ್ಧತಿಯಲ್ಲಿ ಅಡವಿಟ್ಟಿರುವುದನ್ನು ಎತ್ತಿಕೊಂಡು

ಹೋಗುತ್ತಿದ್ದುದನ್ನು ನನ್ನ ಕಣ್ಣಾರೆ ನೋಡಿದ್ದೇನೆ. ನಮ್ಮ ಊರಿನಲ್ಲಿ ಬಡವರಿಗೆ, ದುರ್ಬಲ ವರ್ಗದವರಿಗೆ ಸಂಕಷ್ಟ ಕಾಲದಲ್ಲಿ ಹಣಕಾಸು ಬೇಕಾದಾಗ ಒತ್ತೆ ಇಡುವುದಕ್ಕೆ ಅವರ ಹತ್ತಿರ ಚಿನ್ನಾಭರಣಗಳು ಇರುತ್ತಿರಲಿಲ್ಲ. ಅವರ ಮನೆಗಳಲ್ಲಿ ಹಂಡೆ, ತಪ್ಪಲೆ, ಚೊಂಬು, ಕಂಚುಮುಟ್ಟು ಸಾಮಾನುಗಳಿದ್ದವು. ಆ ಸಾಮಾನುಗಳನ್ನೇ ರೂ. 5 ರಿಂದ 50 ರೂಪಾಯಿಗಳಿಗೆ ಒತ್ತೆ ಇಡುತ್ತಿದ್ದರು. ಒತ್ತೆ ಇಡುವುದಕ್ಕೆ ಅವರ ಹತ್ತಿರ ಜಮೀನು ಸಹ ಇರಲಿಲ್ಲ. ಶ್ರೀ ಡಿ. ದೇವರಾಜ ಅರಸುರವರ ಕಾಲದಲ್ಲಿ ಅವರು ಮನೆ ಮುಂದೆ ಬರುತ್ತಿದ್ದ ಹಾಗೆಯೇ ಯಾರು ಯಾರು ಆ ದುರ್ಬಲ ವರ್ಗದವರ ಸಾಮಾನುಗಳನ್ನು ಒತ್ತೆ ಇಟ್ಟುಕೊಂಡಿದ್ದರು ಅವರಿಗೆ ಕೊಟ್ಟು ಕಳುಹಿಸುತ್ತಿದ್ದುದನ್ನು ನಾನು ಕಣ್ಣಾರೆ ನೋಡಿದ್ದೇನೆ. ಇವರು ಅವರ ಸಾಮಾನುಗಳನ್ನು ಎತ್ತಿಕೊಂಡು ಹೋದರೆ ಸಾಕು, ತಮ್ಮ ಮೇಲೆ ಕಂಪ್ಲೇಂಟ್ ಕೊಡದಿದ್ದರೆ ಸಾಕು ಎಂಬ ಭಯ ಒತ್ತೆ ಇಟ್ಟುಕೊಂಡಿರುವವರಿಗೆ ಇತ್ತು. ಆ ಪದಾರ್ಥವನ್ನು ಅವರ ಮನೆಯಿಂದ ಎತ್ತಿಕೊಂಡು ಹೋಗುತ್ತಿರುವಾಗ ಆ ಬಡವನ ಮುಖದಲ್ಲಿ, ದುರ್ಬಲರ ಮುಖದಲ್ಲಿ ಅವನಿಗೆ ಇದ್ದಂತಹ ಸಂತೋಷ ಆಗ ನಾನೊಬ್ಬ ಚಿಕ್ಕ ಹುಡುಗನಾಗಿದ್ದಾಗ ಇದ್ದಂತಹ ಗ್ರಹಿಕೆ ಇವತ್ತಿಗೂ ಅಚ್ಚಳಿಯದೆ ಉಳಿದಿದೆ. ದಿವಂಗತ ಡಿ. ದೇವರಾಜ ಅರಸುರವರು ಕೇವಲ ಶೋಷಿತರಿಗೆ ಧ್ವನಿ ಕೊಡುವಂತಹದ್ದಲ್ಲ ಕಲೆ, ಸಾಹಿತ್ಯ, ಸಂಸ್ಕೃತಿ ಈ ಎಲ್ಲಾ ಕ್ಷೇತ್ರಗಳಲ್ಲೂ ಅವರದ್ದೇ ಆದ ಛಾಪನ್ನು ಮೂಡಿಸಿರುವಂತಹವರು. ಮುಖ್ಯವಾಗಿ ನೀರಾವರಿ ಕ್ಷೇತ್ರದಲ್ಲಿ ಅವರು; ಮಾನ್ಯ ಸಭಾನಾಯಕರಾದ ಡಾ॥ ಯತೀಂದ್ರರವರ ಕ್ಷೇತ್ರ ವರುಣಾ. ಆ ವರುಣಾ canal ಅನ್ನು ನಿರ್ಮಾಣ ಮಾಡಬೇಕಾದರೆ ಬಂದಂತಹ ಪ್ರತಿರೋಧ, ಅವತ್ತು ನಡೆದಂತಹ ಚಡ್ಡಿ ಮೆರವಣಿಗೆಯನ್ನು ನಾನು ನೆನೆಸಿಕೊಳ್ಳುತ್ತೇನೆ. ಅದನ್ನು ನಾವು ಪತ್ರಿಕೆಗಳಲ್ಲಿ ಓದಿದ್ದೇವೆ. ಆಗ electronic media ಇರಲಿಲ್ಲ. ಅವರು ವರುಣಾ canal ಅನ್ನು ಪ್ರಾರಂಭ ಮಾಡುವುದಕ್ಕೆ ಹೊರಟಂತಹ ಸಂದರ್ಭದಲ್ಲಿ ಮಂಡ್ಯ ಭಾಗ ಮತ್ತು ಇನ್ನಿತರ ಭಾಗಗಳಿಂದ ಪ್ರಬಲವಾದ ವಿರೋಧ ಬಂದಿತು. ಅವತ್ತೆಲ್ಲಾ ಚಡ್ಡಿ ಹಾಕಿಕೊಂಡು ಮೆರವಣಿಗೆ ಮಾಡಿದರು. ಆದರೂ ದಿ: ಡಿ. ದೇವರಾಜ ಅರಸುರವರು ಒಂದು ದಿಟ್ಟ ನಿಲುವಿನಿಂದ ಆ ನೀರಾವರಿ ಯೋಜನೆಯನ್ನು ಜಾರಿಗೆ ತಂದರು. 'ಕಾಳಿ ವಿದ್ಯುತ್ ಯೋಜನೆ'ಯನ್ನು ಜಾರಿಗೆ ತರಲು ಅವರು ಒಂದು ಉತ್ತಮವಾದ ನಿಲುವನ್ನು ತೆಗೆದುಕೊಂಡಿರುವುದನ್ನು ನಾವು ನೋಡಿದ್ದೇವೆ.

ಆದರೆ ಅವರ ಅಂತಿಮ ದಿನಗಳನ್ನು ನೋಡಿದರೆ ರಾಜಕಾರಣದಲ್ಲಿ ಅವರು ಬಹಳ ದುರ್ಬಲರಾಗಿದ್ದಂತಹ ಸಮಯದಲ್ಲಿ ದುಸ್ತರವಾದಂತಹ ದಿನಗಳನ್ನು ಕಳೆದರು. ಅವರು ಇತಿಹಾಸವನ್ನು ಕೂಡ ನಿರ್ಮಾಣ ಮಾಡಿದ್ದಾರೆ. ರಾಜಕಾರಣದ ಇತಿಹಾಸದಲ್ಲಿ ಅತ್ಯಂತ ಏರುಮಟ್ಟಕ್ಕೆ ಹೋಗಿರುವಂತಹ ಒಬ್ಬ ರಾಜಕಾರಣಿ. ಅದೇ ರೀತಿಯಾಗಿ ರಾಜಕಾರಣದ ದಿನಗಳಲ್ಲಿ ಅತ್ಯಂತ ಕೆಳಮಟ್ಟದ ಫಲಿತಾಂಶವನ್ನು ಅವರು ಎದುರಿಸಿದ್ದರು. ಶ್ರೀಮತಿ ಇಂದಿರಾ ಗಾಂಧಿಯವರ ಜೊತೆ ಸೇರಿಕೊಂಡು ದಿ: ಡಿ. ದೇವರಾಜ ಅರಸುರವರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷವು ಲೋಕಸಭಾ ಚುನಾವಣೆಯಲ್ಲಿ 27 ಸೀಟುಗಳಿಗೆ 27 ಪಾರ್ಲಿಮೆಂಟ್ ಸೀಟುಗಳನ್ನು ಗೆದ್ದಿದ್ದರು. ಆ ಇತಿಹಾಸವನ್ನು ಇವತ್ತು ಯಾರೂ ಬ್ರೇಕ್ ಮಾಡಲಿಲ್ಲ. ನನಗಿಂತ ಹಿರಿಯರು, ರಾಜಕಾರಣ ನೋಡಿರುವವರು ಬಹಳಷ್ಟು ಜನ ಇಲ್ಲಿದ್ದಾರೆ.

ಕರ್ನಾಟಕ ರಾಜ್ಯದಲ್ಲಿ 27ಕ್ಕೆ ಪೂರ್ತಿ 27 ಪಾರ್ಲಿಮೆಂಟ್ ಸೀಟುಗಳನ್ನು ಗೆದ್ದಿರುವಂತಹ ಮುಖ್ಯಮಂತ್ರಿ ನಾಯಕತ್ವ ಯಾರಾದರೂ ಇದ್ದರೆ ಅದೇ ದಿ: ಡಿ. ದೇವರಾಜ ಅರಸುರವರು. ಅದೇ ದೇವರಾಜ ಅರಸುರವರು 1980ರಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರಿಂದ ಹೊರಬಂದು ರಾಜಕಾರಣದಲ್ಲಿ ವಿಫಲತೆಯನ್ನು ಕೂಡ ನೋಡಿದ್ದರು. 1980ರಲ್ಲಿ ಲೋಕಸಭಾ ಚುನಾವಣೆಯಲ್ಲಿ ಕೇವಲ ಒಂದು ಸೀಟ್ ಗೆಲ್ಲುವುದಕ್ಕೆ ಮಾತ್ರ ಸಾಧ್ಯವಾಯಿತು. ಆಗ 216 Assembly seats ಇತ್ತು. 224 ಇರಲಿಲ್ಲ. 216 Assembly seat ಗಳ ಪೈಕಿ 165 Assembly seat ಗಳನ್ನು ಗೆದ್ದಿರುವಂತಹ ಇತಿಹಾಸ ದಿ: ಡಿ. ದೇವರಾಜ ಅರಸುರವರದ್ದು. ಇಂತಹ ಇತಿಹಾಸವನ್ನು ರಾಜಕಾರಣದಲ್ಲಿ, ಕರ್ನಾಟಕದಲ್ಲಿ ಅತ್ಯಂತ ಉನ್ನತ ಮಟ್ಟಕ್ಕೇರಿರುವಂತಹದ್ದು ಅವರ ಸಾಧನೆ. ಅದೇ ರೀತಿ ರಾಜಕಾರಣದ ಪತನವನ್ನು ಕೂಡ ಅನುಭವಿಸಿ, ಮಾನಸಿಕವಾಗಿ ಕೂಡ ಬಹಳಷ್ಟು ನೋವನ್ನು ತಿಂದಿದ್ದರು. ಅವರ ರಾಜಕಾರಣದ ಜೀವನದಲ್ಲಿ ಜೀತ ಪದ್ಧತಿಯನ್ನು ನಿರ್ಮೂಲನೆ ಮಾಡಿದರು. ಅಂತಹ ಕ್ರಮಗಳನ್ನು ತೆಗೆದುಕೊಳ್ಳಬೇಕಾದರೆ ಅದು ಸಾಮಾನ್ಯವಾದಂತಹ ಕೆಲಸವಲ್ಲ. ಕರ್ನಾಟಕ ರಾಜ್ಯದ ಏಕೀಕರಣ; ಕರ್ನಾಟಕ ಏಕೀಕರಣ ಬಹಳ ಸುಲಭವಾಗಿ ಆಯಿತು ಎಂದು ಇವತ್ತಿಗೂ ಕೂಡ ನಾವು ಮಾತನಾಡಬಹುದು, ಆದರೆ, ಅದರ ಬಗ್ಗೆ ಅವರು ತೆಗೆದುಕೊಂಡಂತಹ ದಿಟ್ಟವಾದ ನಿರ್ಧಾರ ಏಕೀಕರಣದ ಫಲವಾಗಿ; ತಾರತಮ್ಯವುಳ್ಳಂತಹ ಸಮಾಜ, ಒಂದು ರಾಜ್ಯ ಅಥವಾ ದೇಶ ಎಲ್ಲಿರುತ್ತದೋ ಅಲ್ಲಿ ಪ್ರಗತಿಯನ್ನು ಕಾಣುವುದಕ್ಕೆ ಸಾಧ್ಯವಿಲ್ಲ. ನಮ್ಮ ನಮ್ಮಲ್ಲೇ ಭೇದ-ಭಾವಗಳನ್ನು ತೊಡೆದು ಹಾಕದೇ ಸಮಸಮಾಜ ಎಲ್ಲಿ ನಿರ್ಮಾಣವಾಗುವುದಿಲ್ಲವೋ ಅಲ್ಲಿ ಒಂದು ಸಂಪದ್ಭರಿತವಾದಂತಹ, ದೃಢವಾದಂತಹ ರಾಜ್ಯವನ್ನು ಕಾಣುವುದಕ್ಕೆ ಸಾಧ್ಯವಿಲ್ಲ. ಇವತ್ತು ಕರ್ನಾಟಕ ರಾಜ್ಯದಲ್ಲಿ ನಾವೆಲ್ಲರೂ ಹೆಮ್ಮೆಯಿಂದ ದೇಶದಲ್ಲಿಯೇ ಅತ್ಯಂತ ಉನ್ನತ ಮಟ್ಟದಲ್ಲಿ ಶೈಕ್ಷಣಿಕವಾಗಿ ಇನ್ನಿತರ ಎಲ್ಲಾ ವಿಚಾರಗಳಲ್ಲೂ ನಾವು ಉನ್ನತ ಮಟ್ಟದಲ್ಲಿದ್ದೇವೆ. ಕೇಂದ್ರ ಸರ್ಕಾರಕ್ಕೆ ಮಹಾರಾಷ್ಟ್ರ ಬಿಟ್ಟರೆ ದೇಶದಲ್ಲಿಯೇ ಎರಡನೇ highest tax collection ಆಗಿರುವುದು ಕರ್ನಾಟಕ ರಾಜ್ಯದಿಂದ. ಶಿಕ್ಷಣ ಕ್ಷೇತ್ರದಲ್ಲಿ ಇಡೀ ಪ್ರಪಂಚ ನೋಡುವುದು ಕರ್ನಾಟಕ ರಾಜ್ಯದ ಬೆಂಗಳೂರು ಎಂದು ಹೆಮ್ಮೆಯಿಂದ ಏನಾದರೂ ಹೇಳಿಕೊಳ್ಳುವುದಕ್ಕೆ ಸಾಧ್ಯವಾದರೆ ಅದಕ್ಕೆ ದಿ: ಡಿ. ದೇವರಾಜ ಅರಸುರವರು ಈ ಎಲ್ಲಾ ಕ್ಷೇತ್ರಗಳಲ್ಲಿ ಹಾಕಿದಂತಹ ಒಂದು ತಳಹದಿ ಮತ್ತು ಅವರು ಮಾಡಿದಂತಹ ಕೆಲಸಗಳ ಹಿನ್ನೆಲೆಯಲ್ಲಿ ನಾವಿದ್ದೇವೆ. ವಿದೇಶಗಳಲ್ಲಿ ಪ್ರತಿಮೆಗಳನ್ನು ನಿರ್ಮಾಣ ಮಾಡುತ್ತಾರೆ. ಬದುಕಿರುವಾಗಲೇ ಪ್ರತಿಮೆಗಳನ್ನು ನಿರ್ಮಾಣ ಮಾಡುತ್ತಿರುವುದನ್ನು ರಾಜಕಾರಣದಲ್ಲಿ ನೋಡುತ್ತಿದ್ದೇವೆ. ತಮಿಳುನಾಡಿನಲ್ಲಿ 'ಖುಷ್ಬೂ' ಎಂಬ ಚಿತ್ರನಟಿಗೆ ಬದುಕಿದ್ದಾಗಲೇ ದೇವಸ್ಥಾನವನ್ನು ನಿರ್ಮಾಣ ಮಾಡಿದ್ದರು. ಅಮೇರಿಕ, ಇಂಗ್ಲೆಂಡ್‌ನಲ್ಲಿ ಒಬ್ಬರು ಸತ್ತು 3 ರಿಂದ 4 ದಶಕಗಳ ನಂತರ ಯಾರದ್ದಾದರೂ ಪ್ರತಿಮೆಯನ್ನು ಸ್ಥಾಪನೆ ಮಾಡಬೇಕೆಂದರೆ, 4 ದಶಕಗಳ ನಂತರವೂ ಅವರ ಹೆಸರು ಇನ್ನೂ ಜನಮನದಲ್ಲಿ ಚಿರಸ್ಥಾಯಿಯಾಗಿ ಉಳಿದಿದ್ದರೆ, ಅವರ ಹೆಸರು ಇನ್ನೂ ಪ್ರಸ್ತುತವಾಗಿದ್ದರೆ ಅವರು ಮಾಡಿರುವಂತಹ ಸೇವೆ ಪ್ರಸ್ತುತವಾಗಿದ್ದರೆ ಮಾತ್ರ ಸಾಧ್ಯ. ಈ ಕರ್ನಾಟಕ ರಾಜ್ಯ ಎಷ್ಟು ದಿನ ಇರುತ್ತದೋ ಅಷ್ಟು ದಿನಗಳ ಕಾಲ ನಿರಂತರವಾಗಿ ದಿ: ದೇವರಾಜ ಅರಸರ ಸ್ಮರಣೆ ಇದ್ದೇ ಇರುತ್ತದೆ. ದಿ: ಡಿ. ದೇವರಾಜ

ಅರಸುರವರಂತಹ ವ್ಯಕ್ತಿತ್ವ ಇನ್ನೊಂದು ಬರುವುದಕ್ಕೆ ಸಾಧ್ಯವಿಲ್ಲ. ನಾನು ಕೆಲವು ರಾಜಕಾರಣಿಗಳನ್ನು ನೋಡಿದ್ದೇನೆ, ಇತ್ತೀಚಿನ ದಿನಗಳಲ್ಲಿ ಮುಖ್ಯಮಂತ್ರಿಯಾದವರನ್ನು ನೋಡಿದ್ದೇನೆ; ಮಾನ್ಯ ಸಭಾಪತಿಯವರೇ, ಒಂದೇ ನಿಮಿಷ ನನ್ನ ಮಾತನ್ನು ಮುಗಿಸಿಬಿಡುತ್ತೇನೆ.  ಈಗ ನನ್ನ ಮಾತನ್ನು ನಿಲ್ಲಿಸಿದರೆ ಇವರು ಪುನಃ `down, down' ಎಂದು ಗಲಾಟೆ ಪ್ರಾರಂಭ ಮಾಡುತ್ತಾರೆ. ಅದರ ಬದಲು ಇದಾದರೂ ಮಾತುಗಳು ನಡೆಯಲಿ.

**ಸಭಾಪತಿಯವರು:-** ಇಲ್ಲ ಅದು ಮುಗಿದಿದೆ.

(ಮುಂದು)

(803) 20-08-2026 6-10 KH/KS (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನ್ನ flow cut ಆಗಿ ಹೋಯಿತು. ಇತ್ತೀಚಿನ ಮುಖ್ಯಮಂತ್ರಿಗಳನ್ನು ನಾನು ನೋಡುತ್ತಿದ್ದೇನೆ. ಒಂದು ಬಾರಿ ಮುಖ್ಯಮಂತ್ರಿಯಾದರೆ ಅವರ ಆಸ್ತಿ 3 ತಲೆಮಾರು ಕುಳಿತುಕೊಂಡು ತಿನ್ನುವಷ್ಟು ಆಗಿಬಿಡುತ್ತದೆ. ಇದನ್ನು ನಾನು ಪಕ್ಷಾತೀತವಾಗಿ ಹೇಳುತ್ತಿದ್ದೇನೆ. ಇವತ್ತು ದಿವಂಗತ ಶ್ರೀ ಡಿ.ದೇವರಾಜ ಅರಸುರವರ ಕೊನೆಯ ದಿನಗಳನ್ನು ನೋಡಿದರೆ ಆ ಮುಖ್ಯಮಂತ್ರಿಯವರ ಘನತೆ, ಗೌರವ ಹೇಗಿತ್ತು? ಅವರು ಆಡಳಿತ ನಡೆಸಿದಂತಹ ರೀತಿ ಮತ್ತು ಎಷ್ಟು ಪಾರದರ್ಶಕವಾಗಿ ರಾಜಕಾರಣ ಮಾಡಿರಬಹುದು ಎನ್ನುವುದನ್ನು ನಾನು ನೆನಪಿಸಿಕೊಳ್ಳುತ್ತೇನೆ. ಅದೇ ರೀತಿಯಾಗಿ ದಿವಂಗತ ಶ್ರೀ ಡಿ.ದೇವರಾಜ ಅರಸುರವರ ಗುಣಾತ್ಮಕ ಗುಣಗಳಷ್ಟೇ ವಿಮರ್ಶೆ ಮಾಡಿ ನೋಡುವುದರ ಜೊತೆಗೆ ಹಿಂದೆ ಕೂಡ ಅವರಿಗೆ ಸಮುದಾಯದ ಬೆಂಬಲದ ಕೊರತೆ ಇತ್ತು. ಆ ಕೊರತೆಯನ್ನು ನಿವಾರಣೆ ಮಾಡಿಕೊಳ್ಳುವುದಕ್ಕೆ ಎಲ್ಲಿಯೋ ಒಂದು ಕಡೆ 'ಇಂದಿರಾ ಬ್ರಿಗೇಡ್'  ಅನ್ನು ನೆನಪಿಸಿಕೊಳ್ಳುತ್ತೇನೆ. 'ಇಂದಿರಾ ಬ್ರಿಗೇಡ್'ನ ಬಗ್ಗೆ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರಿಗೆ ಮತ್ತು ಮಾನ್ಯ ಬಿ.ಕೆ.ಹರಿಪ್ರಸಾದ್‌ರವರಿಗೆ ನೆನಪಿರುತ್ತದೆ. ನನಗಿಂತ ಹೆಚ್ಚಾಗಿ ಮಾನ್ಯ ಬಿ.ಕೆ.ಹರಿಪ್ರಸಾದ್‌ರವರಿಗೆ ಜ್ಞಾಪಕ ಇರುತ್ತದೆ. 'ಇಂದಿರಾ ಬ್ರಿಗೇಡ್' ಎನ್ನುವ ರಾಜಕೀಯ ಯುವ ಸಂಘಟನೆಯನ್ನು ದಿವಂಗತ ಶ್ರೀ ಡಿ.ದೇವರಾಜ ಅರಸುರವರ ಅಳಿಯ ಶ್ರೀ ಎಂ.ಡಿ.ನಟರಾಜ್‌ರವರು ಸ್ಥಾಪಿಸಿದರು ಎನ್ನುವುದು ಒಂದು ಮುಖವಾದರೆ, ಇನ್ನೊಂದು ಕಡೆ ಕೊತ್ವಾಲ್ ಮತ್ತು ಜಯರಾಜ್ ಎಂದು ಹೇಳುತ್ತಾರೆ. ಆ ಹಿಂದುಳಿದರವರನ್ನು ಸೇರಿ ಸೃಷ್ಟಿಯಾದಂತಹದ್ದು ಅದೊಂದು ಚಿತ್ರಣ. ಸಮುದಾಯದ ಕೊರತೆ ಎಲ್ಲಿಯೋ ಕಾಡುತ್ತಿತ್ತಲ್ಲವೇ, ಆವತ್ತು ಆ ರಕ್ಷಣೆ ಬೇಕಾಗಿತ್ತೇನೋ, ಆ ಸಂದರ್ಭದಲ್ಲಿ ಅವರ ಬೆಂಗಾವಲಾಗಿ ಅಥವಾ ಅವರ ಬೆನ್ನಿಗೆ ಪಡೆಯಾಗಿ, ಒಂದು ರೀತಿಯ ಸಮುದಾಯ ಬೇಕಾಗಿತ್ತೇನೋ, ಆ ಸಂದರ್ಭಕ್ಕೆ ಅದು ಸೃಷ್ಟಿಯಾಯಿತೇನೋ ಎಂದು ಅನಿಸುತ್ತದೆ. ದಿವಂಗತ ಶ್ರೀ ಡಿ.ದೇವರಾಜ ಅರಸುರವರ ಅಳಿಯ ಶ್ರೀ ಎಂ.ಡಿ.ನಟರಾಜ್‌ರವರು . . .

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ‘ಇಂದಿರಾ ಬ್ರಿಗೇಡ್’ ನ ಯೂತ್ ಕಾಂಗ್ರೆಸ್‌ರವರು ದಿವಂಗತ ಶ್ರೀ ಡಿ.ದೇವರಾಜ ಅರಸುರವರ ಹತ್ತಿರ ಇರಲಿಲ್ಲ. ಅದನ್ನು counter ಮಾಡುವುದಕ್ಕೆ ‘ಇಂದಿರಾ ಬ್ರಿಗೇಡ್’ ಅನ್ನು ಸ್ಥಾಪಿಸಿದರು. ಯಾವ ರೀತಿ ‘ಮೋದಿ ಬ್ರಿಗೇಡ್’ ಇದೆಯೋ, ಅದೇ ರೀತಿ ಇದನ್ನು ಮಾಡಿದ್ದಾರೆ.

**ಶ್ರೀ ಎಸ್.ರವಿ:–** ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಹೇಳಿದಂತೆ ಇರಬಹುದು. ನಾನು ಗುಣಾತ್ಮಕ ಅಂಶಗಳನ್ನಷ್ಟೇ ಹೇಳುತ್ತಿದ್ದೇನೆ. ಇದು ಆ ಸಂದರ್ಭಕ್ಕೆ ಸೃಷ್ಟಿಯಾಗಿರುತ್ತದೆ. ನನ್ನ ಸ್ನೇಹಿತರು ಮಾತನಾಡುತ್ತಾ ಕಾಂಗ್ರೆಸ್‌ನ ಹೆಸರು ಚಿರಸ್ಥಾಯಿಯಾಗಿ ಉಳಿಯಬೇಕಾದರೆ ಕಾಂಗ್ರೆಸ್‌ನ 20 ಅಂಶಗಳ ಕಾರ್ಯಕ್ರಮಗಳು ಈ ರಾಜ್ಯದಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸುವುದಕ್ಕೆ ದಿವಂಗತ ಶ್ರೀ ಡಿ.ದೇವರಾಜ ಅರಸುರವರು ಕಾರಣ ಎಂದು ಹೇಳಬಹುದು. ಆದರೆ, ಕಡೆ ದಿನಗಳಲ್ಲಿ ಏಕೆ ಹೀಗಾಯಿತು ಮತ್ತು ಅವರನ್ನು ಕಾಂಗ್ರೆಸ್ ಪಕ್ಷ ಏಕೆ ಕೈ ಬಿಟ್ಟಿತು ಎಂದು ಗೊತ್ತಾಗಲಿಲ್ಲ. ಕಾಂಗ್ರೆಸ್ ಪಕ್ಷ ನಡೆಸಿಕೊಂಡಿರುವಂತಹ ರೀತಿಯ ಬಗ್ಗೆ ಕೂಡ ಮಾತನಾಡಿದರು. ನಾನೊಬ್ಬ ಕಾಂಗ್ರೆಸಿಗ ಎಂದು ಹೇಳಿಕೊಳ್ಳುವುದಕ್ಕೆ ಹೆಮ್ಮೆಯೆನಿಸುತ್ತದೆ. ಈ ರಾಜ್ಯದಲ್ಲಿ ಇವತ್ತು ಯಾರಾದರೂ microscopic ಒಂದರಿಂದ ಒಂದೂವರೆ ಲಕ್ಷ ಜನ ಇರುವಂತಹದ್ದರಲ್ಲಿ ದಿವಂಗತ ಶ್ರೀ ಡಿ.ದೇವರಾಜ ಅರಸು ರವರು ಮುಖ್ಯಮಂತ್ರಿಯಾಗಬೇಕೆಂದರೆ ಕಾಂಗ್ರೆಸ್ ಪಕ್ಷದಿಂದ ಮಾತ್ರ ಸಾಧ್ಯ. ಶ್ರೀ ವೀರಪ್ಪ ಮೊಯ್ಲಿರವರು ಕೆಳಸ್ತರದಿಂದ ಅತ್ಯಂತ microscopic ಸಮುದಾಯದಿಂದ ಬಂದು ಮುಖ್ಯಮಂತ್ರಿಯಾಗಿದ್ದರೆ ಅದು ಕಾಂಗ್ರೆಸ್ ಪಕ್ಷದಿಂದ ಮಾತ್ರ ಸಾಧ್ಯ. ಶ್ರೀ ಎನ್. ಧರ್ಮಸಿಂಗ್‌ರವರು ಅತ್ಯಂತ microscopic ಸಮುದಾಯದಿಂದ ಬಂದು ಮುಖ್ಯಮಂತ್ರಿಯಾಗಬೇಕೆಂದರೆ ಕಾಂಗ್ರೆಸ್ ಪಕ್ಷದಿಂದ ಮಾತ್ರ ಸಾಧ್ಯ. ಕಾಂಗ್ರೆಸ್ ಪಕ್ಷದ ತತ್ವ ಸಿದ್ಧಾಂತಗಳಾದ ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು, ನೊಂದವರ ಧ್ವನಿಯಾಗಬೇಕೆಂಬ ಕಾಂಗ್ರೆಸ್ ಪಕ್ಷದ ಧ್ಯೇಯಕ್ಕೆ ಅನುಗುಣವಾಗಿ ಕಾಂಗ್ರೆಸ್ ಪಕ್ಷ ಇದ್ದಿದ್ದಕ್ಕೆ ದಿವಂಗತ ಶ್ರೀ ಡಿ.ದೇವರಾಜ ಅರಸುರವರು ಬರುವುದಕ್ಕೆ ಸಾಧ್ಯವಾಯಿತು. ಕಾಂಗ್ರೆಸ್ ಪಕ್ಷ ಇದ್ದಿದ್ದಕ್ಕೆ ಶ್ರೀ ವೀರಪ್ಪ ಮೊಯ್ಲಿರವರು ಬರುವುದಕ್ಕೆ ಸಾಧ್ಯವಾಯಿತು. ಕಾಂಗ್ರೆಸ್ ಪಕ್ಷ ಇದ್ದಿದ್ದಕ್ಕೆ ಶ್ರೀ ಎನ್. ಧರ್ಮಸಿಂಗ್‌ರವರು ಬರುವುದಕ್ಕೆ ಸಾಧ್ಯವಾಯಿತು. ನಾನು ಈ ಸಂದರ್ಭದಲ್ಲಿ ಮಾನ್ಯ ಬಂಗಾರಪ್ಪನವರ ಬಗ್ಗೆ ಮತ್ತು ಮಾನ್ಯ ಸಿದ್ದರಾಮಯ್ಯನವರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ, ರಾಜ್ಯದಲ್ಲಿ ಅತ್ಯಂತ ದೀರ್ಘವಾಗಿ ಮಾನ್ಯ ಸಿದ್ದರಾಮಯ್ಯನವರು ಈ ದಾಖಲೆ ಮುರಿಯುವವರೆಗೂ, ಈ ರಾಜ್ಯದಲ್ಲಿ ಅತ್ಯಂತ ದೀರ್ಘಕಾಲ ಮುಖ್ಯಮಂತ್ರಿಗಳಾಗಿದ್ದರು ಎಂಬ ಹೆಗ್ಗಳಿಕೆ ಕೂಡ ಕಾಂಗ್ರೆಸ್ ಪಕ್ಷಕ್ಕೆ ಇದೆ. ಅಂತಹ ಪಕ್ಷದಲ್ಲಿ ದಿವಂಗತ ಶ್ರೀ ಡಿ.ದೇವರಾಜ ಅರಸುರವರು ಇದ್ದರಲ್ಲವೇ ಎನ್ನುವುದೇ ಒಂದು ಹೆಮ್ಮೆ. ರಾಜಕಾರಣದಲ್ಲಿ ಏರುಪೇರುಗಳು ಆಗುತ್ತವೆ. ದಿವಂಗತ ಶ್ರೀ ಡಿ.ದೇವರಾಜ ಅರಸುರವರಿಗೂ ಮಾನ್ಯ ಇಂದಿರಾ ಗಾಂಧಿಯವರಿಗೂ ಎಲ್ಲಿಯೋ

ವ್ಯತ್ಯಾಸಗಳು ಬಂದಿರಬಹುದು. ಶ್ರೀ ಎಲ್.ಕೆ.ಅಡ್ವಾಣಿರವರು ಇಡೀ ದೇಶದಲ್ಲಿ ರಾಮರಥ ಮಾಡಿ ಬಿ.ಜೆ.ಪಿ., ಪಕ್ಷವನ್ನು ಕಟ್ಟಿದಂತಹವರು. ಇವತ್ತು ರಾಷ್ಟ್ರದಲ್ಲಿ ಬಿ.ಜೆ.ಪಿ. ಪಕ್ಷ ಅಧಿಕಾರದಲ್ಲಿ ಇದೆ ಎಂದರೆ, ಅದಕ್ಕೆ ಕಾರಣಕರ್ತರೇ ಶ್ರೀ ಎಲ್.ಕೆ.ಅಡ್ವಾಣಿಯವರ ನೇತೃತ್ವ ಎನಿಸುತ್ತದೆ. ಶ್ರೀ ಎಲ್.ಕೆ.ಅಡ್ವಾಣಿಯವರನ್ನು ಕಡೆ ದಿನಗಳಲ್ಲಿ ಬಿ.ಜೆ.ಪಿ., ಪಕ್ಷ ನಡೆಸಿಕೊಂಡಂತಹ ರೀತಿಯನ್ನು ನೋಡಿದರೆ ಇದಕ್ಕೂ-ಅದಕ್ಕೂ ಹೋಲಿಕೆ ಮಾಡಿಕೊಳ್ಳಬಹುದೆನಿಸುತ್ತದೆ. ರಾಜಕಾರಣದಲ್ಲಿ ಹಲವಾರು ಏಳು-ಬೀಳುಗಳು ಆಗಬಹುದಲ್ಲವೇ, ಅಂತಹ ಸಂದರ್ಭ ಕೂಡ ಇಲ್ಲಿ ಮೂಡಿರಬಹುದೇನೋ ಎನ್ನುವಂತಹ ಮಾತು ಬರುತ್ತದೆ. ನಾನು ವಯಸ್ಸಿನಲ್ಲಿ ಚಿಕ್ಕವನಾಗಿದ್ದರಿಂದ, ಆವತ್ತಿನ ದಿನಮಾನಗಳನ್ನು ನಾನು ಸ್ಪಷ್ಟವಾಗಿ ನೋಡುವುದಕ್ಕೆ ಸಾಧ್ಯವಾಗಲಿಲ್ಲ. ನಾನು ತಿಳಿದುಕೊಂಡಿರುವಂತಹ ಮಟ್ಟದಲ್ಲಿ ವ್ಯಾಖ್ಯಾನ ಮಾಡುತ್ತಿದ್ದೇನೆ. ರಾಜಕಾರಣದಲ್ಲಿ ಇದೆಲ್ಲಾ ಸಾಮಾನ್ಯ. ಒಟ್ಟಾರೆಯಾಗಿ ದಿವಂಗತ ಶ್ರೀ ಡಿ.ದೇವರಾಜ ಅರಸು ರವರ ಹೆಸರು ನಿರಂತರವಾಗಿ ಇರುತ್ತದೆ. ಏಕೆಂದರೆ, ಗುಣಕ್ಕೆ ಮತ್ಸರ ಇಲ್ಲ. ನಾವು ಸ್ಮರಿಸಿಕೊಳ್ಳಬೇಕಾಗಿರುವಂತಹದ್ದೇನೆಂದರೆ, ಎಲ್ಲಾ ಜಾತಿ, ಜನಾಂಗಗಳನ್ನು ಮೀರಿ ದಿವಂಗತ ಶ್ರೀ ಡಿ.ದೇವರಾಜ ಅರಸುರವರ ಹೆಸರನ್ನು ನೆನಪಿಸಿಕೊಳ್ಳಬೇಕು. ಯಾವುದೋ ಹಿಂದುಳಿದ ವರ್ಗದವರನ್ನು ಅಥವಾ ಶೋಷಿತ ವರ್ಗದವರನ್ನು ನೆನಪಿಸಿಕೊಳ್ಳಬೇಕೆಂದು ಅಲ್ಲ. ಎಲ್ಲಾ ಜಾತಿ, ಜನಾಂಗಗಳನ್ನು ನೆನಪಿಸಿಕೊಳ್ಳಬೇಕು. ಕರ್ನಾಟಕ ರಾಜ್ಯದಲ್ಲಿ ಏಕೈಕ ಮುಖ್ಯಮಂತ್ರಿಯಾಗಿ ನಮ್ಮೆಲ್ಲರ ನಿರಂತರ ಚಿರಸ್ಥಾಯಿ ಪ್ರಾತಃಸ್ಮರಣೀಯ ನಾಯಕತ್ವವನ್ನು ಹೊಂದಿದಂತಹ ಮುಖ್ಯಮಂತ್ರಿ ದಿವಂಗತ ಶ್ರೀ ಡಿ.ದೇವರಾಜ ಅರಸುರವರು ಎಂದು ಸ್ಪಷ್ಟವಾಗಿ ಹೇಳುತ್ತಾ, ಅವಕಾಶಕ್ಕಾಗಿ ತಮಗೆ ಅಭಿನಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮ್ಮದು ಹೇಗಾಗುತ್ತಿದೆ ಎಂದರೆ, ಅಲ್ಲಿದ್ದಾಗಲೂ ಹಾಗೆಯೇ ಆಗುತ್ತಿತ್ತು. ಎಲ್ಲರಿಗಿಂತ ಮೊದಲು ಬರುವುದು, ಎಲ್ಲರಿಗಿಂತ ಕೊನೆಗೆ ಹೋಗುವುದು. Seniority ಎಂದರೆ, ಎಲ್ಲರೂ ಮಾತನಾಡಿದ ನಂತರ ಕೊನೆಗೆ ಏನೂ ಮಾತನಾಡಬೇಕೋ ಗೊತ್ತಾಗುವುದಿಲ್ಲ. ನಾವು ಏನು ಬರೆದುಕೊಂಡಿದ್ದೇನೋ, ಅದನ್ನೆಲ್ಲಾ ಅವರು ಮಾತನಾಡಿಬಿಟ್ಟರು. ಈಗ ನಾವು ತಿರುಪತಿ ಹೋದಂತೆ ಆಗುತ್ತಿದೆ. ಇವತ್ತು ನಾವು ನಮ್ಮ ಜೀವನದಲ್ಲಿ ಎರಡು ರೀತಿಯ ವ್ಯಕ್ತಿಗಳನ್ನು ನೋಡಬಹುದು. ಒಬ್ಬರು ಸತ್ತರೂ ಬದುಕಿದ್ದ ಹಾಗೆ ಇರುತ್ತಾರೆ. ಇನ್ನೊಬ್ಬರು ಬದುಕಿದ್ದರೂ ಸತ್ತ ಹಾಗೆ ಇರುತ್ತಾರೆ. ಸತ್ತು ಬದುಕಿದ್ದಂತಹವರು ದಿವಂಗತ ಶ್ರೀ ಡಿ.ದೇವರಾಜ ಅರಸುರವರು. ಅವರು ಮಾಡಿದಂತಹ ಕೆಲಸ. ಅವರು ನಡೆದುಕೊಂಡಂತಹ ರೀತಿ ಇಡೀ ಕರ್ನಾಟಕ ಜನತೆಗೆ ಸ್ಮರಣೀಯ ಮತ್ತು ಮಾದರಿಯಾಗಿದೆ. ಈಗೀಗ ಜಾತಿಯ ಬಗ್ಗೆ ಬಹಳ ಮಾತನಾಡುತ್ತೇವೆ. ಅವರು ಎಷ್ಟೇ ಕಡಿಮೆ ಜಾತಿಯ ಜನ ಇರಲಿ, ಆಗ ಜಾತಿ ವಿಚಾರ ದಿವಂಗತ ಶ್ರೀ ಡಿ.ದೇವರಾಜ ಅರಸುರವರ ಕಾಲದಲ್ಲಿ ಬಂದಿರಲೇ ಇಲ್ಲ. ಅವರ ವ್ಯಕ್ತಿತ್ವ, ಅವರ ದೂರದೃಷ್ಟಿ ಮಾತ್ರ ಇತ್ತು. ಅವರು

ಎಲ್ಲಾ ಜಾತಿಯನ್ನು ಬಿಟ್ಟು ಬಡ-ಬಗ್ಗರನ್ನು ಯಾವ ರೀತಿ ಮೇಲತ್ತಬೇಕು ಎನ್ನುವುದನ್ನು ನೋಡಿದ್ದರಿಂದ ಅವರ ಹೆಸರು ಚಿರಾಸ್ಥಾಯಿಯಾಗಿ ಇದೆ. ಸತ್ತರೂ ಕೂಡ ಬದುಕಿದವರು ಎಂದರೆ ದಿವಂಗತ ಶ್ರೀ ಡಿ.ದೇವರಾಜ ಅರಸುರವರು ಎನ್ನುವ ಮಾತನ್ನು ನಾನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೆಲವು ಮಾನ್ಯ ಸದಸ್ಯರುಗಳು ದಿವಂಗತ ಶ್ರೀ ಡಿ.ದೇವರಾಜ ಅರಸುರವರ ಕೊನೆಕಾಲದ ಬಗ್ಗೆ ಸೂಕ್ಷ್ಮವಾಗಿ ಹೇಳಿದರು. ನಾವು ಆಗ ಹತ್ತಿರದಲ್ಲಿಯೇ ಇದ್ದೆವು. ರಾಜಕಾರಣದಲ್ಲಿ ಏನಾಯಿತೆಂದರೆ, ಯಾರನ್ನೂ ಬಹಳವಾಗಿ ನಂಬಿರುತ್ತಾರೆಯಲ್ಲವೇ? ಅವರೇ ಬೆನ್ನಿಗೆ ಚಾಕು ಹಾಕುವುದು. ಹಿಂದೆ ಇದ್ದಂತಹ ಮಾನ್ಯ ಸಚಿವರಿಗೆ ಗೊತ್ತಿದೆ. ಅವರ ನಿಧನದ ನಂತರ ಮಣ್ಣು ಮಾಡುವುದಕ್ಕೆ ನಾವು ಕೂಡ ಕಲ್ಲಳ್ಳಿಗೆ ಹೋಗಿದ್ದೆವು. ಆಗ ಅವರನ್ನು ಅಧಿಕಾರದಿಂದ ಕೆಳಗಿಳಿಸಲು ಕಾರಣರಾದ ನಾಲ್ಕೈದು ಮಂತ್ರಿಗಳು ಬಂದಾಗ ಅಲ್ಲಿನ ಜನರೆಲ್ಲರೂ ಕೂಡಲೇ ‘ಹೊಯ್’ ಎಂದು ಕಲ್ಲು ಎತ್ತಿಕೊಂಡು ಹೊಡೆಯುವುದಕ್ಕೆ ಪ್ರಾರಂಭಿಸಿದರು. ಆಗ ನಾವು ಕೂಡ ಅಲ್ಲಿಯೇ ಇದ್ದೆವು. ಆ ಮಂತ್ರಿಗಳ ಹೆಸರು ಹೇಳುವುದು ಬೇಡ. ಅವರನ್ನು ಅಧಿಕಾರದಿಂದ ಇಳಿಸುವುದಕ್ಕೆ ಅವರೇ ಕಾರಣ ಕೂಡ ಆಗಿದ್ದರು. ದಿವಂಗತ ಶ್ರೀ ಡಿ.ದೇವರಾಜ ಅರಸುರವರ ಬಗ್ಗೆ ಬಹಳ ಮಂದಿ ಮಾನ್ಯ ಸದಸ್ಯರುಗಳು ಮಾತನಾಡಿದರು. ದಿವಂಗತ ಶ್ರೀ ಡಿ.ದೇವರಾಜ ಅರಸುರವರ ಒಂದು ವಿಷಯವೇನೆಂದರೆ, ಸದನದಲ್ಲಿ ಸಿಮೆಂಟ್ ಹಗರಣದ ಬಗ್ಗೆ ಚರ್ಚೆ ನಡೆದಿತ್ತು. ಗುಲ್ಬರ್ಗಾ ಜಿಲ್ಲೆಯ ಮಾನ್ಯ ಮಾಣಿಕರಾವ್ ಪಾಟೀಲ್ ಎನ್ನುವವರು ಆಹಾರ ಸಚಿವರಿದ್ದರು. ಆ ರಾತ್ರಿ ಏನಾಯಿತೆಂದರೆ, ವಿಧಾನಸಭೆ ಅಧಿವೇಶನ ಮುಗಿದ ಕೂಡಲೇ ಮಾನ್ಯ ಶಾಸಕರು ವಿಧಾನ ಪರಿಷತ್‌ಗೆ ಬಂದು ಕುಳಿತುಕೊಳ್ಳುತ್ತಿದ್ದರು. ಇಲ್ಲಿ ಮುಗಿದ ಕೂಡಲೇ ಅಲ್ಲಿಗೆ ಹೋಗುತ್ತಿದ್ದರು. ಹೀಗೆ ಮಾತುಗಳು ನಡೆದಿತ್ತು. ಮಾನ್ಯ ಮಾಣಿಕರಾವ್ ಪಾಟೀಲ್‌ರವರ ಸಿಮೆಂಟ್ ಹಗರಣದ ಚರ್ಚೆ ರಾತ್ರಿ 1 ಗಂಟೆಗೆ ನಡೆಯಿತು. ಆಗ ಮಾನ್ಯ ಆರ್.ಗುಂಡೂರಾವ್‌ರವರು ಮುಖ್ಯಮಂತ್ರಿಗಳಾಗಿದ್ದು, ದಿವಂಗತ ಶ್ರೀ ಡಿ. ದೇವರಾಜ ಅರಸುರವರು ವಿರೋಧ ಪಕ್ಷದ ನಾಯಕರಾಗಿದ್ದರು. ಆಗ ಮಾತಿಗೆ ಮಾತು ಬಂದಾಗ ದಿವಂಗತ ಶ್ರೀ ಡಿ. ದೇವರಾಜ ಅರಸುರವರು ಏನು ಹೇಳಿದರೆಂದರೆ, ” ನೀವು ಮಂತ್ರಿಗಳು, ಹಗರಣ ಆಗಿದೆ ಎಂದು ತಿಳಿದುಕೊಂಡು ತಾವು ಒಪ್ಪಿಕೊಳ್ಳಬೇಕು. ಇದನ್ನು ಒಪ್ಪಿಕೊಳ್ಳದೇ ಇದ್ದರೆ ಏನಾಗುತ್ತದೆ ಎಂದರೆ, ಇಡೀ ಮಂತ್ರಿಮಂಡಲದ ಮೇಲೆ ಸಮಸ್ಯೆ ಬರುತ್ತದೆ. ಇದನ್ನು ಒಪ್ಪಿಕೊಳ್ಳಬೇಕು, ನಾನು ಒಬ್ಬ ಸೀನಿಯರ್ ಮನುಷ್ಯ, ನಾನು ವಿರೋಧ ಪಕ್ಷದಲ್ಲಿ ಕುಳಿತುಕೊಂಡಿದ್ದೇನೆ. ಅಲ್ಲಿಯೂ ಕುಳಿತುಕೊಂಡು ಬಹಳಷ್ಟು ಕೆಲಸಗಳನ್ನು ಮಾಡಿದ್ದೇನೆ. ದಯಮಾಡಿ ಮಂತ್ರಿಯಾದಂತಹವರಿಗೆ ethics ಇರಬೇಕು” ಎನ್ನುವ ಮಾತನ್ನು ಹೇಳಿದರು. ಮುಂದುವರೆದು, “ಒಬ್ಬ ಮಂತ್ರಿಗಳು ಹೋಗುತ್ತಾರೆ, ಯಾರೋ ಒಬ್ಬರು ಹೋಗಿ ಪೋಲೀಸ್ ಆಫೀಸರ್ ಕಪಾಳಕ್ಕೆ ಹೊಡೆದರು. ಮಂತ್ರಿಗಳಿಗೆ ಎಲ್ಲಾ ಅಧಿಕಾರ ಇರುತ್ತದೆ. ಅವರನ್ನು ಕರೆಸಬೇಕು” ಎಂದು ಹೇಳಿದರು. ಆ ರೀತಿ ಎಂದ ಕೂಡಲೇ ಅಲ್ಲಿ ಒಬ್ಬ ಮಂತ್ರಿಗಳು ಎದ್ದು ನಿಂತು “ನೀನು ಕಲ್ಲಳ್ಳಿಗೆ ನಡಿ. ನಿನಗೆ ಬಿಡದಂತೆ ಹೇಗೆ ಮಾತನಾಡುತ್ತಾರೆ” ಎಂದು ಹೇಳಿದರು.

ನಾನು ಅಲ್ಲಿಯೇ ಜೀವಂತ ಸಾಕ್ಷಿ ಇದ್ದೆ. ಬಳ್ಳಾರಿಯ ಮಾನ್ಯ ಭಾಸ್ಕರ್ ನಾಯ್ಡು ಎನ್ನುವ ಎಂ.ಎಲ್.ಎ., ಒಬ್ಬರು ಇದ್ದರು. ಅವರೆಲ್ಲರೂ ಎದ್ದು ನಿಂತು ಪಕ್ಷಾತೀತವಾಗಿ ದಿವಂಗತ ಶ್ರೀ ಡಿ.ದೇವರಾಜ ಅರಸುರವರ ಕಡೆಗೆ ಕರೆದುಕೊಂಡು ಯಾರು ಆ ರೀತಿ ಮಾತನಾಡಿದರೋ, ಅವರ ಕಡೆಯಿಂದ ಕ್ಷಮೆ ಕೇಳಿಸಿದರು. ದಿವಂಗತ ಶ್ರೀ ಡಿ.ದೇವರಾಜ ಅರಸುರವರು ವಿರೋಧ ಪಕ್ಷದಲ್ಲಿ ಇದ್ದರು. ಮಾನ್ಯ ಆರ್.ಗುಂಡೂರಾವ್‌ರವರು ಮುಖ್ಯಮಂತ್ರಿಯಾಗಿದ್ದರು. ಅಂತಹದ್ದರಲ್ಲಿ ದಿವಂಗತ ಶ್ರೀ ಡಿ.ದೇವರಾಜ ಅರಸುರವರ ಬಗ್ಗೆ ಮಾತನಾಡಿದಂತಹ . . . ನಾವು ಕೂಡ ಅಲ್ಲಿಯೇ ಕುಳಿತುಕೊಂಡಿದ್ದೆವು. ಮಾನ್ಯ ಭಾಸ್ಕರ್ ನಾಯ್ಡುರವರು ಎದ್ದು ಬಂದವರೇ ಎಲ್ಲರನ್ನೂ ಹಿಡಿದುಕೊಂಡು ದಿವಂಗತ ಶ್ರೀ ಡಿ.ದೇವರಾಜ ಅರಸುರವರನ್ನು ಕೈ ಹಿಡಿದುಕೊಂಡು ಕರೆದುಕೊಂಡು ಹೋಗಿ ಮಕ್ಕಳನ್ನು ಯಾವ ರೀತಿ ಪ್ರೀತಿ ಮಾಡುತ್ತಾರೋ, ಆ ರೀತಿ ಪ್ರೀತಿ ಮಾಡಿ, ಕಡೆಗೆ ರಾಜೀನಾಮೆ ಕೊಡಬೇಕು. ಇಲ್ಲದಿದ್ದರೆ ಕ್ಷಮೆ ಕೇಳಬೇಕೆಂದು ಅವರನ್ನು ಕರೆಸಿ ಕ್ಷಮೆ ಕೇಳಿಸಿದರು. ದಿವಂಗತ ಶ್ರೀ ಡಿ.ದೇವರಾಜ ಅರಸುರವರು ಏನು ಹೇಳಿದರೆಂದರೆ, 'ಅವರು ಕ್ಷಮೆ ಕೇಳಿ ನಾನು ದೊಡ್ಡ ಮನುಷ್ಯ ಆಗುವುದಿಲ್ಲ. ನಾನು ತಿಳುವಳಿಕೆ ಹೇಳಬೇಕು ಅಷ್ಟೇ. ತಿಳುವಳಿಕೆ ಹೇಳಿದ್ದೇನೆ' ಎನ್ನುವ ಮಾತನ್ನು ದಿವಂಗತ ಶ್ರೀ ಡಿ.ದೇವರಾಜ ಅರಸುರವರು ಹೇಳಿದರು. ಹಾಗಾಗಿ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಮಾನ್ಯ ದೇವೇಂದ್ರಪ್ಪ ಗಾಳಪ್ಪ ಎನ್ನುವವರು ಇದ್ದರು. ಅವರನ್ನು ಇವರ್ಯಾರು ನೋಡಿರುವುದಿಲ್ಲ. ಇವರಿಬ್ಬರು ಬಂದರು. 1970ನೇ ಇಸವಿಯಲ್ಲಿಯೇ ದಿವಂಗತ ಶ್ರೀ ಡಿ.ದೇವರಾಜ ಅರಸುರವರು ಮುಖ್ಯಮಂತ್ರಿಯಾದ್ದಾಗ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಇನ್ನು ಸಣ್ಣವರು. ಇವರು ಮತ್ತು ಮಾನ್ಯ ದೇವೆಂದ್ರಪ್ಪ ಗಾಳಪ್ಪ ಇವರು ಇಬ್ಬರು ಸ್ನೇಹಿತರು. ಒಬ್ಬರದ್ದು ಮಂತ್ರಿ ಹೆಸರು ಬಂದಿತು. ಒಬ್ಬರದ್ದು ಬರಲಿಲ್ಲ. ಅವರ ಹೆಸರನ್ನು ತೆಗೆದುಕೊಂಡು ಇಬ್ಬರನ್ನು ಮಂತ್ರಿ ಮಾಡಿ, ಆವತ್ತಿನ ಕಾಲಕ್ಕೆ ಮಂತ್ರಿಗಳಾದರು. ಮಾನ್ಯ ದೇವೆಂದ್ರಪ್ಪ ಗಾಳಪ್ಪ ರವರು ಅತ್ಯಂತ ಸಾಮಾನ್ಯ ಕುಟುಂಬದಿಂದ ಬಂದಂತಹವರನ್ನು ಮಂತ್ರಿ ಮಾಡಿದರು.

(ಮುಂದು)

(804) 20.8.2026 6.20 ಪಿಕೆ:ಕೆಎಸ್ (ಸಭಾಪತಿಗಳ ಉಪಸ್ಥಿತಿ)

**ಶ್ರೀ ಬಸವರಾಜ್ ಶಿವಲಿಂಗಪ್ಪ ಹೊರಟ್ಟಿ (ಮುಂದು)**

ಅವರನ್ನು ಮಂತ್ರಿಯನ್ನಾಗಿ ಮಾಡಿದರು. ಅಂದರೆ, ಸಾಮಾನ್ಯ ಜನರ ಬಗ್ಗೆ ಕಾಳಜಿ ಹೊಂದಿರುವಂತಹ ವ್ಯಕ್ತಿ ಅವರಾಗಿದ್ದರು. ದೊಡ್ಡ ವ್ಯಕ್ತಿಗಳು ರಾಜಕೀಯಕ್ಕೆ ಬರುತ್ತಾರೆ, ಹೋಗುತ್ತಾರೆ. ಆದರೆ, ಸಾಮಾನ್ಯ ಕುಟುಂಬದಲ್ಲಿ ಹುಟ್ಟಿದಂತಹ, ಬಡವನಾಗಿದ್ದವನನ್ನು ಮೇಲೆತ್ತುವಂತಹ ಕೆಲಸವನ್ನು ಶ್ರೀ ಡಿ.ದೇವರಾಜ ಅರಸುರವರು ಬಹಳ ಸಲ ಮಾಡಿದ್ದಾರೆ. ಅವರ ಮಕ್ಕಳು ರಾಜಕೀಯಕ್ಕೆ ಬರಲಿಲ್ಲ. ಅವರ ದೊಡ್ಡ ಮಗಳಾಗಿದ್ದ ಶ್ರೀಮತಿ ಚಂದ್ರಪ್ರಭಾ

ಅರಸುರವರು ರೇಷ್ಮೆ ಸಚಿವರಾಗಿದ್ದರು. ನಂತರ ಅವರೂ ಸಹ ಮತ್ತೆ ರಾಜಕೀಯಕ್ಕೆ ಬರಲಿಲ್ಲ. ಅಂತಹ ಪ್ರಸಿದ್ಧರಾಗಿದ್ದ, ಇಡೀ ದೇಶಕ್ಕೆ ಮಾದರಿಯಾಗಿದ್ದ ಮಾನ್ಯ ಅರಸುರವರ ಕುಟುಂಬದವರು ರಾಜಕಾರಣಕ್ಕೆ ಬರಲಿಲ್ಲ ಎನ್ನುವ ನೋವು ಎಲ್ಲರಿಗೂ ಇದೆ. ನಾನು ಒಂದು ವಿಚಾರವನ್ನು ಹೇಳುತ್ತೇನೆ. ವಿಧಾನಸೌಧ ಕಟ್ಟಡದ ಸುತ್ತ ಮಾನ್ಯ ಡಿ.ದೇವರಾಜ ಅರಸುರವರು ಸೇರಿದಂತೆ ಬೇರೆ ಬೇರೆಯವರ ಪ್ರತಿಮೆಯನ್ನು ಸ್ಥಾಪನೆ ಮಾಡಿದ್ದಾರೆ. ಆದರೆ, ಉತ್ತಮ ಆಡಳಿತ ಕೊಟ್ಟಂಥ ಇನ್ನೂ ಅನೇಕ ಜನ ಮುಖ್ಯಮಂತ್ರಿಗಳಿದ್ದಾರೆ. ನಾನು ಸಭಾಪತಿಯಾದಾಗ ಮತ್ತು ಕಾನೂನು ಹಾಗೂ ಸಂಸದೀಯ ಮಂತ್ರಿಯಾಗಿದ್ದಾಗ, ಬ್ಯಾಂಕ್ವೆಟ್ ಹಾಲ್‌ನಲ್ಲಿ ಎಲ್ಲಾ ಮಾಜಿ ಮುಖ್ಯಮಂತ್ರಿಗಳ ಭಾವಚಿತ್ರ ಹಾಕಬೇಕು, ಅದರಲ್ಲಿ ಅವರು ಹುಟ್ಟಿದ ದಿನಾಂಕ, ತೀರಿಕೊಂಡ ದಿನಾಂಕ ಇರಬೇಕು ಎಂದು ಯೋಜನೆ ಮಾಡಲಾಗಿತ್ತು. ಆದರೆ, ಕಾರಣಾಂತರದಿಂದ ಡಿ.ಪಿ.ಎ.ಆರ್.ನವರು ಒಪ್ಪಲಿಲ್ಲ. ಈಗ ನಾವು, ಯಾರ ಪ್ರತಿಮೆಯನ್ನು ಸ್ಥಾಪನೆ ಮಾಡಿದ್ದೇವೆಯೋ ಅಂದರೆ, ಮಾನ್ಯ ಶ್ರೀ ಡಿ.ದೇವರಾಜ ಅರಸು, ಶ್ರೀ ನಿಜಲಿಂಗಪ್ಪ ಮತ್ತು ಇತರರನ್ನು ಮಾತ್ರ ನೆನೆಪಿಸಿಕೊಳ್ಳುತ್ತೇವೆ. ಇವರ ಹಾಗೆಯೇ ಶ್ರೀ ವೀರೇಂದ್ರ ಪಾಟೀಲರು, ಶ್ರೀ ಗುಂಡೂರಾವ್‌ರವರುಗಳನ್ನು ನೆನಪಿಸಿಕೊಳ್ಳಬೇಕಾಗುತ್ತದೆ. ಮಾನ್ಯ ಗುಂಡೂರಾವ್‌ರವರು ಒಂದು ಸಲ ಒಬ್ಬರನ್ನು ವರ್ಗಾವಣೆ ಮಾಡಿದರೆ, ಹರಿ-ಹರ-ಬ್ರಹ್ಮ ಬಂದು ಹೇಳಿದರೂ ಆ ವರ್ಗಾವಣೆಯನ್ನು ಕ್ಯಾನ್ಸಲ್ ಮಾಡುತ್ತಿರಲಿಲ್ಲ. ರಾಜ್ಯಪಾಲರು ಹೇಳಿದರೂ ಸಹ ಕ್ಯಾನ್ಸಲ್ ಮಾಡುತ್ತಿರಲಿಲ್ಲ. ಅಂದರೆ ಅಷ್ಟು ಕಟ್ಟುನಿಟ್ಟಿನ ಮನುಷ್ಯರಾಗಿದ್ದರು. ಮಾನ್ಯ ಮಧು ಜಿ.ಮಾದೇಗೌಡರ ತಂದೆ ಶ್ರೀ ಜಿ.ಮಾದೇಗೌಡರು ಅರಣ್ಯ ಸಚಿವರಾಗಿದ್ದರು. ಮಾನ್ಯ ಸಭಾಪತಿಗಳೆ, ಜಂಟಿ ಅಧಿವೇಶನ ಆದಮೇಲೆ ಒಂದು ವಾರಗಳ ಕಾಲ ಬಿಡುವು ಇರುತ್ತಿತ್ತು. ಉತ್ತರ ಕರ್ನಾಟಕದ ಶಾಸಕರು ಆ ಸಮಯದಲ್ಲಿ ಇಲ್ಲೇ ಇರುತ್ತಿದ್ದರು. ಅವರನ್ನು ಬಂಡೀಪುರ-ಮೈಸೂರು ತೋರಿಸುವುದಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಮಾನ್ಯ ಗುಂಡೂರಾವ್‌ರವರು ಕೊಠಡಿ ಸಂಖ್ಯೆ 330 ಯಿಂದ ಮೀಟಿಂಗ್ ಮುಗಿಸಿಕೊಂಡು ಬರುತ್ತಿದ್ದರು. ಆಗ ನಾವು ಒಂದು ವರ್ಗಾವಣೆಯ ಅರ್ಜಿಯನ್ನು ಹಿಡಿದುಕೊಂಡು ಅವರ ಬಳಿ ಹೋಗಿದ್ದೆವು. ಮಾನ್ಯ ಆರ್.ಗುಂಡೂರಾವ್‌ರವರು ಮೀಟಿಂಗ್ ಮುಗಿಸಿಕೊಂಡು ಅದೇ ಸಮಯಕ್ಕೆ ಬರುವಾಗ, ಹೊರಗೆ ಮಾನ್ಯ ಜಿ.ಮಾದೇಗೌಡರು ನಿಂತಿದ್ದರು. ಅವರು ಕಾಲರ್ ಕೋಟ್ ಹಾಕುತ್ತಿದ್ದರು. ಆಗ, 'ಏನ್ರೀ ಗೌಡ್ರೇ, ಇವತ್ತು ನಿಮ್ಮ ಮದುವೆ; ನೀವು ಮಧು ಮಗ ಇದ್ದ ಹಾಗೆ, ನಿನಗೋಸ್ಕರ ಬಸ್ಸುಗಳು ನಿಂತಿವೆ. ಹೀಗಿರುವಾಗ ಕಾಲರ್ ಹರಿದು ಹೋಗಿರುವ ಕೋಟ್ ಹಾಕಿದ್ದೀರಿ, ಆ ಕೋಟ್ ಅನ್ನು ತೆಗೆಯಿರಿ' ಎಂದು ಹೇಳಿದಾಗ, ಶ್ರೀ ಜಿ.ಮಾದೇಗೌಡರು, 'ನಮಗೇಕೆ ಸ್ವಾಮಿ, ನಾವು ರೈತರು' ಎಂದು ಹೇಳಿ ಹೋಗಿಬಿಟ್ಟರು. ಅವರು ಹೋಗಿ ಅರ್ಧ ತಾಸಿನ ನಂತರ ಅವರಿಗೆ ಎರಡು ಕಾಲರ್ ಸೂಟ್ ತರಿಸಿ, ರೂಮ್‌ಗೆ ಕರೆಸಿ, ಹೊಸ ಬಟ್ಟೆಯನ್ನು ಹಾಕಿಸಿ ಕಳುಹಿಸಿಕೊಟ್ಟರು. ನಾನು ಇವೆಲ್ಲವನ್ನೂ ಕಣ್ಣಾರೆ ನೋಡಿದ್ದೇನೆ. ಅಂದರೆ ಒಬ್ಬೊಬ್ಬ ಮುಖ್ಯಮಂತ್ರಿಗಳು ಒಂದೊಂದು ವಿಶೇಷತೆ ಹೊಂದಿದ್ದರು. ಬೇರೆ ಬೇರೆ ಮುಖ್ಯಮಂತ್ರಿಗಳನ್ನು ನೆನೆಸುವಂಥದ್ದು ಆಗಬೇಕು. ಶ್ರೀ ಜೆ.ಹೆಚ್.ಪಾಟೀಲರದ್ದೇ ಒಂದು ನಮೂನೆ, ಶ್ರೀ ವೀರೇಂದ್ರ ಪಾಟೀಲರದ್ದು ಒಂದು ನಮೂನೆ. ಇವರ ಪ್ರತಿಮೆಗಳು ಇಲ್ಲದೇ ಇರುವುದರಿಂದ ನಾವು ಅವರನ್ನು

ನೆನೆಸುವುದಿಲ್ಲ. ನನ್ನದೊಂದು ಮನವಿ ಇದೆ. ಎಲ್ಲರನ್ನೂ ನೆನೆಯುವ ಹಾಗೆ ಒಂದು ಕಾರ್ಯ ಆಗಬೇಕು ಎಂದು ನಾನು ಭಾವಿಸುತ್ತೇನೆ.

ಮಾನ್ಯ ಸಭಾಪತಿಗಳೆ, ಶ್ರೀ ರಾಜೀವ್ ಗಾಂಧಿ ಬಗ್ಗೆ ಹೇಳುವುದಾದರೆ, ನಾನು ನೋಡಿದಂತಹ ಅತ್ಯಂತ ಸುಂದರವಾದಂತಹ, ಅತ್ಯಂತ ಒಳ್ಳೆಯ ಪ್ರಧಾನ ಮಂತ್ರಿಗಳಾಗಿದ್ದರು. ಅವರ ನೀಟ್‌ನೆಸ್, ಅವರ ಡ್ರೆಸ್ ಸೆನ್ಸ್ ಬಹಳ ಚೆನ್ನಾಗಿ ಇತ್ತು. ಅವರನ್ನು ನೋಡಿದರೆ ಪ್ರೀತಿ ಬರುತ್ತಿತ್ತು. ಬೆಳಗಾವಿಯಲ್ಲಿ ಮಹಾತ್ಮ ಗಾಂಧಿಯವರ 100ನೇ ವರ್ಷದ ಕಾರ್ಯಕ್ರಮ ಆದಾಗ ಅವರ ಮಗಳು ನನ್ನ ಜೊತೆ ಬಹಳ ಕಾಲ ಮಾತನಾಡಿದರು. ಅಂದರೆ, ದೇಶದ ಪ್ರಧಾನ ಮಂತ್ರಿಗಳಾಗಿ ಹೋಗಿರುವ ಶ್ರೀಮತಿ ಇಂದಿರಾಗಾಂಧಿ, ಶ್ರೀ ಅಟಲ್ ಬಿಹಾರಿ ವಾಜಪೇಯಿ ಇವರೆಲ್ಲರ ಗುಣಗಳು ಬೇರೆ ಬೇರೆಯಾಗಿತ್ತು. ಈ ದೇಶ ಅತ್ಯಂತ ಶ್ರೇಷ್ಠವಾದಂಥ ಪ್ರಧಾನ ಮಂತ್ರಿಗಳನ್ನು, ಶ್ರೇಷ್ಠ ಮುಖ್ಯಮಂತ್ರಿಗಳನ್ನು ಕಂಡಂಥ ದೇಶವಾಗಿದೆ. ಮುಖ್ಯಮಂತ್ರಿಗಳಾಗಿ ಶ್ರೀ ಡಿ.ದೇವರಾಜ ಅರಸು ಅವರು ಮತ್ತು ಮಾನ್ಯ ಕರ್ಪೂರಿ ಠಾಕೂರ್‌ರವರು ಇಡೀ ದೇಶದಲ್ಲಿ ಪ್ರಸಿದ್ಧರಾದರು. ಶ್ರೀ ಡಿ.ದೇವರಾಜ ಅರಸುರವರು ಅತ್ಯಂತ ಶ್ರೇಷ್ಠ ಮುಖ್ಯಮಂತ್ರಿಯಾಗಿದ್ದರು. ಅವರ ಬಗ್ಗೆ ಎಷ್ಟು ಹೇಳಿದರೂ ಕಡಿಮೆ. ಅವರು ನಿಧನರಾಗಿದ್ದಾಗ ಅವರನ್ನು ನೋಡಲು ಹೋಗಿದ್ದೆವು. ಅಲ್ಲಿನ ಜನ ನಾನಾ ರೀತಿ ತಮ್ಮ ದುಃಖವನ್ನು ವ್ಯಕ್ತಪಡಿಸುತ್ತಿದ್ದರು. ಶ್ರೀ ಡಿ.ದೇವರಾಜ ಅರಸುರವರ ಬೆನ್ನಿಗೆ ಯಾರು ಚೂರಿ ಹಾಕಿದ್ದರೋ ಅವರೆಲ್ಲರನ್ನೂ ಜನ ಓಡಿಸಿಬಿಟ್ಟರು. ಇಂದು ಅಂತಹ ಶ್ರೀ ಡಿ.ದೇವರಾಜ ಅರಸು ಅವರ ಹುಟ್ಟಿದ ದಿನವಾಗಿದೆ. ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್ ಮತ್ತು ನವೆಂಬರ್ ತಿಂಗಳಿನಲ್ಲಿ ಯಾರು ಹುಟ್ಟಿರುತ್ತಾರೋ ಅಂಥವರು ಇಂತಹ ಕ್ಷೇತ್ರಗಳಲ್ಲಿ ಮುಂದೆ ಬರುತ್ತಾರೆ. ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿ, ಮಹಾತ್ಮ ಗಾಂಧಿಯವರು ಅಕ್ಟೋಬರ್ ತಿಂಗಳಿನಲ್ಲಿ 2ನೇ ದಿನಾಂಕದಂದು ಹುಟ್ಟಿದರು. ಆಗಸ್ಟ್ ತಿಂಗಳಿನಿಂದ ನವೆಂಬರ್ ತಿಂಗಳ ಅವಧಿಯಲ್ಲಿ ಹುಟ್ಟಿದವರು ಒಂದಲ್ಲ ಒಂದು ಕ್ಷೇತ್ರದಲ್ಲಿ ಪ್ರಸಿದ್ಧರಾಗಿರುತ್ತಾರೆ ಎಂದು ಹೇಳಿದರೆ ತಪ್ಪಾಗಲಾರದು. ಇದು ಮಾನ್ಯ ಡಿ.ದೇವರಾಜ ಅರಸು ಮತ್ತು ಶ್ರೀ ರಾಜೀವ್ ಗಾಂಧಿಯವರಿಗೆ ಅನ್ವಯಿಸುತ್ತದೆ. ಇಂತಹ ಪುಣ್ಯ ಪುರುಷರನ್ನು ನೆನೆಸಿಕೊಂಡು, ನನಗೆ ಎರಡು ಮಾತುಗಳನ್ನು ಮಾತನಾಡಲು ಅನುವು ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮಸ್ಕಾರ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಗಳೆ, ಮಾನ್ಯ ಡಿ.ದೇವರಾಜ ಅರಸುರವರ ವಂಶಸ್ಥರಾಗಿದ್ದ, ಅವರ ಮೊಮ್ಮೊಗ ಸೂರಜ್ ಹೆಗ್ಗಡೆಯವರು ಎ.ಐ.ಸಿ.ಸಿ.ಯ ಕಾರ್ಯದರ್ಶಿ ಆಗಿದ್ದರು. ನಮ್ಮೆಲರಿಗೂ ಆಪ್ತರಾಗಿದ್ದ ಅವರು, ಗ್ಯಾರಂಟಿ ಸಮಿತಿಯ ಉಪಾಧ್ಯಕ್ಷರಾಗಿದ್ದರು. ಅವರು ಅಚಾನಕ್ ಆಗಿ ಮೊನ್ನೆ ತೀರಿಕೊಂಡರು. ಅವರು ಪಕ್ಷಕ್ಕೆ ನಿಷ್ಠೆಯಿಂದ ದುಡಿಯುತ್ತಿದ್ದರು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಗಳೆ, ಶ್ರೀ ಡಿ.ದೇವರಾಜ ಅರಸುರವರು ಅಳಿಯರಾಗಿದ್ದ ಡಾ: ಎಂ.ಡಿ.ನಟರಾಜ್ ಎನ್ನುವವರು ಎಂ.ಎಲ್.ಸಿ.ಯಾಗಿದ್ದರು. ಅವರು ಮತ್ತು ಅವರ ಮಕ್ಕಳು ಶ್ರೀ ಡಿ.ದೇವರಾಜ ಅರಸುರವರ ಹೆಸರನ್ನು ಉಳಿಸುವಂತಹ ಕೆಲಸ ಮಾಡಬಹುದಾಗಿತ್ತು. ಆದರೆ, ಆ ಕೆಲಸ ಆಗಲಿಲ್ಲ.

**ಡಾ॥ ಉಮಾಶ್ರೀ (ಉಪ ಸಭಾಪತಿಯವರು):-** ಮಾನ್ಯ ಸಭಾಪತಿಗಳೆ, ಶ್ರೇಷ್ಠವಾದಂತಹ, ಉತ್ತಮ ಕೊಡುಗೆಗಳನ್ನು ನೀಡಿದಂತಹ ರಾಜ್ಯದ ಬಹುದೊಡ್ಡ ಚೇತನ ಮಾನ್ಯ ಡಿ.ದೇವರಾಜ ಅರಸುರವರು ಎಂದು ಹೇಳಿದರೆ ತಪ್ಪಾಗಲಾರದು. ಅವರಿಗೆ ನಮನಗಳನ್ನು ಸಲ್ಲಿಸುವಂತಹ ಒಂದು ಉತ್ತಮ ವಾತಾವರಣವನ್ನು ಕಲ್ಪಿಸಿ, ಅದಕ್ಕೆ ಅವಕಾಶ ಕೊಟ್ಟು ಸಹಕಾರ ನೀಡಿದಂತಹ ಎಲ್ಲಾ ಸದಸ್ಯರಿಗೆ ಕೃತಜ್ಞತೆಗಳನ್ನು, ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮಾನ್ಯ ಡಿ. ದೇವರಾಜ ಅರಸುರವರು ಹಿಂದುಳಿದ ವರ್ಗದ ಜನರ ಅಭಿವೃದ್ಧಿಗೋಸ್ಕರ, ಅವರ ಉನ್ನತಿಗೋಸ್ಕರ ತಮ್ಮ ಬದುಕನ್ನು ಮೀಸಲಿಟ್ಟಿದ್ದರು. 111ನೇ ವರ್ಷದ ಈ ಒಂದು ಜನ್ಮ ಶತಮಾನೋತ್ಸವ ಮತ್ತು ಈ ದೇಶದ ಪ್ರಧಾನಮಂತ್ರಿಗಳಾಗಿ ಕಾರ್ಯ ಮಾಡಿ, ಪ್ರಪಂಚಕ್ಕೆ ಶ್ರೇಷ್ಠರೆನಿಸಿಕೊಂಡ, ಉತ್ತಮ ಆಡಳಿತಗಾರರಾಗಿದ್ದ ಶ್ರೀ ರಾಜೀವ್‌ಗಾಂಧಿಯವರ ಜನ್ಮ ದಿನವಾಗಿದೆ. ಶ್ರೀ ಡಿ.ದೇವರಾಜ ಅರಸುರವರು, ಭಾರತದ ಇತಿಹಾಸದಲ್ಲಿ, ಕರ್ನಾಟಕದ ಮುಖ್ಯಮಂತ್ರಿಯಾಗಿ 2 ಅವಧಿಗೆ ಸೇವೆ ಸಲ್ಲಿಸಿದಂಥವರಲ್ಲಿ ಪ್ರಪಥಮರಾಗಿದ್ದಾರೆ. 1952ರಲ್ಲಿ ಅವರು ರಾಜಕೀಯ ಪ್ರವೇಶ ಮಾಡಿದರು. 1969ರಲ್ಲಿ ರಾಜಕೀಯ ಪಕ್ಷಗಳು ವಿಭಜನೆಯಾದಾಗ, ಶ್ರೀಮತಿ ಇಂದಿರಾಗಾಂಧಿಯವರ ಜೊತೆಯಲ್ಲಿ ನಿಂತು ಕೆಲಸ ಮಾಡುತ್ತಾರೆ. ನಂತರ, ತಾವು ಮುಖ್ಯಮಂತ್ರಿಗಳಾಗಿರುವವರೆಗೆ ಅವರು ಆಡಳಿತದ ಮೂಲಕ ಕೊಟ್ಟಂಥ ಕೊಡುಗೆ ಅವಿಸ್ಮರಣೀಯವಾದುದು. ಕರ್ನಾಟಕದ ಶೋಷಿತ ವರ್ಗಗಳ ಪರವಾಗಿ ಅವರು ದುಡಿದರು. ಅವರ ಗುರಿ ಶೋಷಿತರ ಏಳಿಗೆಯನ್ನು ಮಾತ್ರ ಬಯಸಿತ್ತು. ಅವರಿಗಾಗಿ ತಂದಂಥ ಸುಧಾರಣೆಗಳು ಇವತ್ತಿಗೂ ಅವಿಸ್ಮರಣೀಯವಾದುದು. ಬಡತನವನ್ನು ನಿರ್ಮೂಲನೆ ಮಾಡಿ, ಬಡವರನ್ನು ಮೇಲೆತ್ತುವುದು ಅವರ ಮೊದಲು ಆದ್ಯತೆಯಾಗಿತ್ತು. ಅದಕ್ಕೋಸ್ಕರ ಅವರು ಭೂಸುಧಾರಣಾ ಕಾಯಿದೆ ತಂದರು. "ಉಳುವವನೆ ಭೂಮಿಗೆ ಒಡೆಯ" ಎನ್ನುವ ಸಮಾನತೆಯನ್ನು ತಂದರು. ಮಾನ್ಯ ಸಭಾಪತಿಗಳೆ, ಈ ಸಂದರ್ಭದಲ್ಲಿ ಸರ್ವಜ್ಞನ ಮಾತುಗಳು ನೆನಪಾಗುತ್ತವೆ. *"ಕಲ್ಲರಳಿ ಹೂವಾಗಿ, ಎಲ್ಲರಿಗೂ ಬೇಕಾಗಿ, ಮಲ್ಲಿಕಾರ್ಜುನನ ಶಿಖರಕ್ಕೆ ಬೆಳಕಾಗಿ ಬಲ್ಲವರು ಯಾರು ಕಾಣ, ಸರ್ವಜ್ಞ"* ಈ ಒಂದು ಸಾಲಿಗೆ ಅನ್ವರ್ಥ ನಾಮವಾಗಿದ್ದವರು, ಅಂತಹ ವ್ಯಕ್ತಿತ್ವವನ್ನು ಹೊಂದಿದ್ದವರು ಎಂದರೆ ಅವರು ಶ್ರೀ ಡಿ.ದೇವರಾಜ ಅರಸುರವರು. ಅವರ ಬದುಕು, ಅವರು ಸಮಾಜಕ್ಕೆ ನೀಡಿದ ಕೊಡುಗೆ ಎಲ್ಲವೂ ಕೂಡ ಉಪಯುಕ್ತವಾದ ವ್ಯಕ್ತಿತ್ವವನ್ನು ಪ್ರತಿನಿಧಿಸುತ್ತಿತ್ತು. ಅದನ್ನು ಇವತ್ತು ನಾವು ನೆನಪಿಸಿಕೊಳ್ಳುತ್ತಿದ್ದೇವೆ. ಇವರು, ಕರ್ನಾಟಕದ ಇತಿಹಾಸದಲ್ಲಿ ಸಾಮಾಜಿಕ ಪರಿವರ್ತನೆಯ ಹರಿಕಾರ ಎನಿಸಿಕೊಂಡರು. ಮೈಸೂರು ಜಿಲ್ಲೆಯ ಕಲ್ಲಹಳ್ಳಿಯಲ್ಲಿ ಅವರು ಹುಟ್ಟಿದರು. ದಮನಿತ ವರ್ಗಗಳ ಪರವಾಗಿದ್ದವರು ಮತ್ತು ಅವರ ಬದುಕಿನ ಆಶಾಕಿರಣವಾಗಿದ್ದರು. ಇದನ್ನು ನಾವು ಕೇಳಿದ್ದೇವೆ, ಓದಿದ್ದೇವೆ. ಆದರೆ ಅವರನ್ನು ನೋಡುವ ಪುಣ್ಯ ಈ ಪೀಳಿಗೆಗೆ ಸಿಗಲಿಲ್ಲ.

(ಮುಂದು)

**ಡಾ॥ ಉಮಾಶ್ರೀ:- (ಮುಂದು)**

ಅವರು ರೈತರ ಪಾಲಿನ ಹಕ್ಕಿನ ಧ್ವನಿಯಾಗಿ, "ಉಳುವವನೇ ಭೂಮಿಯ ಒಡೆಯ" ಎನ್ನತಕ್ಕಂತಹ ಒಂದು ಕಾರ್ಯಕ್ರಮವನ್ನು ಈ ರಾಜ್ಯದಲ್ಲಿ ಜಾರಿ ಮಾಡಿದರು ಈ ಕಾರ್ಯಕ್ರಮವನ್ನು ಕಾರ್ಯರೂಪಕ್ಕೆ ತಂದಂತಹ ಹಿನ್ನೆಲೆಯಿದೆ. ಏತಕ್ಕೋಸ್ಕರ ಬಂತು? ಅದರ ಹಿನ್ನೆಲೆಯಲ್ಲಿ ಅವರಿಗೆ ಬೇಕಾಗಿದ್ದಂತಹದ್ದು ಏನೆಂದರೆ, ಆ ರೈತನ ಕೊಡತಕ್ಕಂತಹ ಭೂಮಿ, ಅದು ಕೇವಲ ಅವನ ಆಸ್ತಿಯಲ್ಲ. ಅವನ ಬದುಕಿಗೆ, ಅವನ ಜೀವನೋಪಾಯಕ್ಕೆ ಒಂದು ಆಧಾರವಾಗಿರತಕ್ಕಂತಹದ್ದು ಮತ್ತು ಆತನಿಗೆ ಒಂದು ಆತ್ಮಗೌರವವನ್ನು ನೀಡತಕ್ಕಂತಹ ಒಂದು ಸಂಕೇತದ ರೂಪದಲ್ಲಿ ಆ ಭೂಮಿಯನ್ನು ಅವರು ಕೊಡಮಾಡುವಂತಹ ಒಂದು ಚಿಂತನೆ ಇತ್ತಲ್ಲ ಅದು ಒಂದು ಪ್ರಮುಖ ಸಾಧನವನ್ನು ಅವತ್ತಿನ ಬಡವನ, ರೈತನ ಕೈಗೆ ಕೊಟ್ಟರಲ್ಲ, ಅದು ಅದರ ಹಿಂದಿದ್ದಂತಹ ಸ್ವಾವಲಂಬನೆಯ ಒಂದು ಹೊಸ ಭರವಸೆಯಾಗಿತ್ತು ಎಂದು ನಾನು ಅದನ್ನ ಭಾವಿಸುತ್ತೇನೆ. ಸಾಮಾಜಿಕ ನ್ಯಾಯದ ಪರಿಕಲ್ಪನೆಯಲ್ಲಿ ಅವರು ನಮ್ಮೆಲ್ಲರ ಹಿಂದುಳಿದ ವರ್ಗಗಳ ಸಬಲೀಕರಣಕ್ಕಾಗಿಯೇ ತಂದಂತಹ ಹಾವನೂರು ಆಯೋಗಕ್ಕೆ ಬುನಾದಿಯನ್ನು ಹಾಕಿಕೊಟ್ಟವರು. ಇವತ್ತಿಗೂ ನಾವು ಅನೇಕ ಅಧ್ಯಕ್ಷರುಗಳ ವರದಿಗಳನ್ನು ನೋಡುತ್ತಿದ್ದೇವೆ, ಎಲ್ಲರೂ ಹೇಳಿದ ಹಾಗೆ, ಇವತ್ತಿಗೂ ಕೂಡ ಅವರ ಆಶಯಗಳು, ಹಿಂದುಳಿದ ವರ್ಗಕ್ಕೆ ಸಂಬಂಧಪಟ್ಟಂತ, ಅವರ ಬದುಕಿಗೆ ಅಭಿವೃದ್ಧಿಯನ್ನು ಕಾಣತಕ್ಕಂತಹ ಅವಕಾಶಗಳು ಇವತ್ತು ಆ ವರದಿಗಳಲ್ಲಿದೆ. ಅದು ಸತ್ಯವಾಗಿಯೂ ನಿಷ್ಠೆಯಿಂದ ಜಾರಿಯಾಗಬೇಕಾಗಿದೆ. ಯಾವುದೇ ಸರ್ಕಾರ ಬಂದರೂ ಕೂಡ, ಅದು ಹಿಂದಕ್ಕೆ ಹೋಗುತ್ತಿರುವುದರ ಬಗ್ಗೆ ನಮಗೆ ಬಹಳ ನೋವಿದೆ. ಇನ್ನು ಈ ಜ್ಞಾನಾರ್ಜನೆಗೆ ಸಂಬಂಧಪಟ್ಟ ಹಾಗೆ ನಮ್ಮ ಸ್ನೇಹಿತರು ಹೇಳುವ ಹಾಗೆ ಮಕ್ಕಳ ಜ್ಞಾನಾರ್ಜನೆಗೆ ಸಂಬಂಧಪಟ್ಟ ಹಾಗೆ ಒಂದು ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸಲಿಕ್ಕೆ ಮತ್ತು ಈ ಶಿಕ್ಷಣ ಎನ್ನತಕ್ಕಂತಹದ್ದು ಅಸಮಾನತೆ ಏನಿದೆ, ಅದರ ಗೋಡೆಯನ್ನು ಹೊಡೆದು ಹಾಕೋದಕ್ಕೆ ಶಿಕ್ಷಣ ವ್ಯವಸ್ಥೆ ಪ್ರಬಲವಾದ ಶಕ್ತಿ ಅಂತ ನಂಬಿದಂತಹವರು ನಮ್ಮ ದೇವರಾಜ ಅರಸ್‌ರವರು. ಅದಕ್ಕೋಸ್ಕರವೇ ಮಕ್ಕಳಿಗೆ ಶಿಕ್ಷಣದ ವಂಚನೆ ಆಗಬಾರದು ಎನ್ನುವ ಕಾರಣಕ್ಕೆ ಬಡಮಕ್ಕಳಿಗೆ ವಿದ್ಯಾರ್ಥಿ ವೇತನ, ವಿದ್ಯಾರ್ಥಿನಿಲಯ ಇತ್ಯಾದಿ ಕಾರ್ಯಕ್ರಮಗಳು ಆ ಕಾಲದಲ್ಲಿ ಬಂದಿದ್ದು. ಅದನ್ನು ನಮ್ಮ ಮಕ್ಕಳು ಅನುಭವಿಸಿದ್ದಾರೆ, ನಿಮ್ಮ ಮಕ್ಕಳು ಅನುಭವಿಸಿದ್ದಾರೆ, ನಿಮ್ಮ ಮಕ್ಕಳು ಅದರ ಮೂಲಕ ವಿದ್ಯಾವಂತರು, ನಮ್ಮ ಮಕ್ಕಳು ಕೂಡ ಈಗಿನ ಪೀಳಿಗೆಗೆ ವಿದ್ಯಾವಂತರಾಗಿ ಅನೇಕ ಉದ್ಯೋಗಗಳನ್ನು ತೆಗೆದುಕೊಳ್ಳುತ್ತಿದ್ದಾರೆ ಎಂದರೆ ನಿಜವಾಗಲೂ ನಾವು ಅವರನ್ನು ನೆನಪಿಸಿಕೊಳ್ಳಬೇಕು. ಅಂದರೆ ಇಂತಹ ಒಂದು ಕಾರ್ಯಕ್ರಮಗಳಲ್ಲಿ ಅವರು ಪ್ರಾತಃಸ್ಮರಣೀಯರು. ಆದ್ದರಿಂದ, ದಲಿತರು, ಹಿಂದುಳಿದ ವರ್ಗದವರು,

ಆರ್ಥಿಕವಾಗಿ ದುರ್ಬಲರಾಗಿರತಕ್ಕಂತಹ ಸಮುದಾಯಗಳ ಶೋಷಣೆಯನ್ನು ಮುಕ್ತ ಮಾಡಲಿಕ್ಕೆ ಪ್ರಯತ್ನವನ್ನು ಮಾಡಿದಂತಹವರು, ಮಾನವೀಯ ನಿಲುವುಗಳನ್ನು ಹೊಂದಿದ್ದಂತವರು ಮಾನ್ಯ ಡಿ. ದೇವರಾಜ ಅರಸ್ರವರು. ಸುಧಾರಣೆ ಎನ್ನಕ್ಕಂಥಾದದ್ದನ್ನು ಅವರು ನಂಬಿದ್ದಂತಹದ್ದು, ಸುಧಾರಣೆ ಎನ್ನುತಕ್ಕಂತಹದ್ದು ಕೇವಲ ಕಾನೂನನ್ನು ಬದಲಾವಣೆ ಮಾಡುವುದರಲ್ಲಿ ಮಾತ್ರ ಬರುವುದಿಲ್ಲ. ವ್ಯಕ್ತಿಗಳಿಗೆ ಗೌರವವನ್ನು, ಸ್ವಾತಂತ್ರ್ಯವನ್ನು, ಅವಕಾಶಗಳನ್ನು ಕಲ್ಪಿಸಿ ಕೊಟ್ಟಾಗ ಮಾತ್ರ ಅವರ ಏಳಿಗೆ ಸಾಧ್ಯ ಎನ್ನತಕ್ಕಂಥಾದ್ದನ್ನು ಮಾನ್ಯ ನಮ್ಮ ಡಿ. ದೇವರಾಜ ಅರಸು ಅವರು ನಂಬಿದಂತಹ ಮಹಾ ತತ್ವಗಳು. ಹಾಗಾಗಿ ಯಾವ ಜಾತಿ, ವರ್ಗ, ಆರ್ಥಿಕ ಸ್ಥಿತಿ, ಹಿನ್ನಡೆ, ಮುನ್ನಡೆ ಯಾವುದನ್ನೂ ನೋಡದೆ ಅವಕಾಶಗಳನ್ನು ಕೊಡುತ್ತಾ ಹೋದಂತಹ ಮಾನ್ಯ ದೇವರಾಜ ಅರಸರನ್ನು ನಾವು ಸ್ಮರಣೆ ಮಾಡಬೇಕಾಗಿರೋದು ಕೇವಲ ಒಂದು ಸದನದಲ್ಲಲ್ಲ, ಕೇವಲ ಹಾರ-ತುರಾಯಿಗಳನ್ನು ಹಾಕಿ ಒಂದು ದಿನ ಸ್ಮರಣೆ ಮಾಡತಕ್ಕಂಥದ್ದಲ್ಲ. ಎಲ್ಲರ ಜೀವನದಲ್ಲೂ ಇದನ್ನು ನಾವು ಅಳವಡಿಸಿಕೊಳ್ಳಬೇಕಾದದ್ದು ಬಹಳ ಮುಖ್ಯವಾಗಿದೆ. ನಾನು ಸಚಿವೆಯಾದಂತಹ ಸಂದರ್ಭದಲ್ಲಿ 100 ನೇ ವರ್ಷದ ಶತಮಾನೋತ್ಸವವನ್ನು ಮಾಡಬೇಕಾದರೆ, ನಾನು ಹುಣಸೂರಿಗೆ ಹೋಗಿದ್ದೆ. ಹುಣಸೂರಿನಲ್ಲಿ ನೀವು Exhibition ಮಾಡಬೇಕೆಂದರು. ಇವತ್ತು ಮಾನ್ಯ ದೇವರಾಜ ಅರಸರ ಒಂದು Permanent Exhibition ಮಾಡಬೇಕು ಎನ್ನತಕ್ಕಂಥಾದ್ದು ಕೂಡ ಸರ್ಕಾರದಲ್ಲಿ ನನ್ನ ಒಂದು ಮನವಿ. ಅವರೆಲ್ಲರೂ ಸೇರಿ ಒಂದು Photo Exhibition ಮಾಡಿದ್ದರು. ಎಷ್ಟು ಚಂದದ ಫೋಟೋಗಳು ಇತ್ತು ಎಂದರೆ ಹೇಳದರೆ,..

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಮಾನ್ಯ ಉಪ ಸಭಾಪತಿಯವರು Exhibition ಬಗ್ಗೆ ಒಂದು ಮನವಿ ಮಾಡುತ್ತಿದ್ದಾರೆ.

**ಡಾ॥ ಉಮಾಶ್ರೀ:-** ಅವರದ್ದೊಂದು Permanent Exhibition ಮಾಡಬೇಕು. ಅವರದ್ದು ಎಷ್ಟು ಚಂದದ ಫೋಟೋಗ್ರಾಫ್ಸ್ ಇವೆ ಎಂದರೆ, ಒಂದು ಕಡೆಯಿಂದ ಆ ರಾಜಗಾಂಭೀರ್ಯದ, ಆ ಸ್ಪುರದ್ರೂಪಿ ವ್ಯಕ್ತಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಶ್ರೀ ಬೇಗಾನೆ ರಾಮಯ್ಯನವರ ಜೊತೆ ಮಾನ್ಯ ಡಿ. ದೇವರಾಜ ಅರಸುರವರ ಬಹಳ ಅಪರೂಪದ ಫೋಟೋ ಸದಸ್ಯರಾದ ಆರತಿ ಕೃಷ್ಣರ ಬಳಿ ಇದೆ.

**ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಉಮಾಶ್ರೀಯವರು ಹೇಳಿದ್ದಕ್ಕೆ ಒಂದು ವಾಕ್ಯವನ್ನು ಸೇರಿಸುತ್ತೇನೆ. ಎಂತಹ unfortunate thing ಎಂದರೆ, ಅವರು ದೈವಾಧೀನರಾದ ಮೇಲೆ, ಅವರ ಹೆಸರಿನಲ್ಲಿ ಒಂದು ದೊಡ್ಡ ವಸ್ತುಸಂಗ್ರಹಾಲಯ ಮಾಡಬೇಕೆಂದು ಒಂದು ಪ್ಲಾನ್ ಆಗುತ್ತದೆ. ಆದರೆ ಅದು ಆಗಲೇ ಇಲ್ಲ. ಕಾರಣ ಏನು? ಯಾಕೆ ಆಗಲಿಲ್ಲ? ಇದಕ್ಕೆ ಯಾರು ಉತ್ತರ ಕೊಡಬೇಕು? ನಾವು ಎಂಥೆಂಥವರದ್ದೋ ಮಾಡುತ್ತೇವೆ.

**ಸಭಾಪತಿಯವರು:–** ನಾನು ಈಗಷ್ಟೆ ಹೇಳಿದೆ. ಸಭಾನಾಯಕರು ಅದರ ಬಗ್ಗೆ ಗಮನ ಹರಿಸುತ್ತಾರೆ.

**ಡಾ॥ ಉಮಾಶ್ರೀ:–** ಮಾನ್ಯ ಸಭಾಪತಿಯವರೇ, ನಾನು ಒಂದು ಕಡೆಯಿಂದ ಆ ಫೋಟೋಗಳನ್ನು ನೋಡಿಕೊಂಡು ಬಂದರೆ ಎಷ್ಟು ಖುಷಿಯಾಗುತ್ತಿತ್ತು. ಮಾನ್ಯ ದೇವರಾಜ ಅರಸುರವರದ್ದು ಆಜಾನುಬಾಹು, ಎತ್ತರದ ವ್ಯಕ್ತಿತ್ವ, ತಿರುಗಿ ಅವರ ಒಂದು ಕೊನೆಯ ಫೋಟೋ ನೋಡಿದೆ. ನನಗೆ ಅರಿವಿಲ್ಲದ ಹಾಗೆ ಆ ಒಂದು ಅದ್ಭುತವಾದಂತಹ ಆ ರಾಜಗಾಂಭೀರ್ಯ, ಆ ಶ್ರೀಮಂತಿಕೆ, ಆ ನಿಲುವಿನಲ್ಲೇ ಇದ್ದಂತಹ ಆ ಒಂದು ಘನತೆವೆತ್ತ ಶ್ರೀಮಂತಿಕೆಯ ಒಂದು ಮುಖದಲ್ಲಿದ್ದ ಆ ಭಾವನೆಗಳು ನೋಡ್ಕೊಂಡು ಬರುತ್ತಿದ್ದ ಹಾಗೆ ಕೊನೆಯ ಫೋಟೋ ನೋಡುತ್ತಿದ್ದ ಹಾಗೆ ನನಗೆ ಅರಿವಿಲ್ಲದ ಹಾಗೆ ದುಃಖ ಉಮ್ಮಳಿಸ್ತಾ ಬಂತು. ಕಣ್ಣಲ್ಲಿ ನೀರು ಧಾರಾಕಾರವಾಗಿ ಹರಿದುಹೋಯ್ತು. ಇಷ್ಟರ ಮೇಲೆ ನಾವು ತಿಳಿದುಕೊಳ್ಳಬೇಕು. ಅವರ ಬದುಕು ಕೊನೆಯದಾಗಿ ಯಾವ ಹಂತದಲ್ಲಿತ್ತು, ಎಂತಹ ಅಂತ್ಯವನ್ನು ಕಂಡರು ಎಂದು ಆ ಒಂದು ಫೋಟೋ ಸಾಕ್ಷಿ ಸಾಕು. ಹಾಗಾಗಿ ನಾನು ಸರ್ಕಾರವನ್ನು ಮುಂದಿನ ಪೀಳಿಗೆಗೂ ಕೂಡ ಇದು ಗೊತ್ತಾಗಬೇಕು. ಅದಕ್ಕೋಸ್ಕರ ಒಂದು Permanent Exhibition ಅವರ ಹೆಸರಲ್ಲಿ ಮಾಡಿ ಎಂದು ಹೇಳುತ್ತೇನೆ.

ಮಾನ್ಯ ಸಭಾಪತಿಯವರೇ, ಇನ್ನು ಶ್ರೀ ರಾಜೀವ್ ಗಾಂಧಿಯವರ ಬಗ್ಗೆ ಒಂದೆರಡೇ ಮಾತುಗಳನ್ನು ಹೇಳಿ ಮುಗಿಸ್ತೀನಿ. ಯಾಕೆಂದರೆ, ಎಲ್ಲರದ್ದು ಆದ ಮೇಲೆ ಕೊನೆಗೆ ಮಾತನಾಡಲು ಅವಕಾಶ ಕೊಟ್ಟಿದ್ದೀರಿ, ಯಾವಾಗಲೂ ಹಾಗೆ ಆಗಬಾರದು, ದಯವಿಟ್ಟು ಕೈ ಮುಗಿಯುತ್ತೇನೆ, ಬೆಲ್ ಹೊಡಿಯಬೇಡಿ. ಶ್ರೀ ರಾಜೀವ್ ಗಾಂಧಿಯವರು ಸಾಮಾನ್ಯರಲ್ಲಿ ಸಾಮಾನ್ಯವಾಗಿ ಮಕ್ಕಳನ್ನು ಬೆಳೆಸಿದಂತಹ ತಾಯಿ ಇಂದಿರಾ ಗಾಂಧಿಯವರು. ಶ್ರೀ ರಾಜೀವ್ ಗಾಂಧಿಯವರು ಪೈಲಟ್ ಆಗಿ ದುಡಿದು ಅವರು ಜೀವನ ಮಾಡತಕ್ಕಂಥವರು. ಅವರು ಒಳ್ಳೆಯ ತಂತ್ರಜ್ಞರು, ಒಳ್ಳೆಯ ರಾಜನೀತಿಯನ್ನು ಮುಂದೆ ಕಲಿತುಕೊಂಡವರು. ಇವತ್ತು ಅವರ ಜನ್ಮದಿನ. ಭಾರತದ ಪ್ರಧಾನಿಯಾಗಿ ಸೇವೆ

ಸಲ್ಲಿಸಿದ್ದು ಹೇಗಿದೆ ಅಂದರೆ ಅತ್ಯಂತ ಕಿರಿಯ ವಯಸ್ಸಿನ ಪ್ರಧಾನಿ ಅವರು. ದೇಶದಲ್ಲಿ ಎಷ್ಟೆಲ್ಲಾ ಪ್ರಧಾನಿಗಳಾಗಿಬಿಟ್ಟರು, 40 ನೇ ವಯಸ್ಸಿಗೆ ಪ್ರಧಾನಿಯಾದಂತವರು. ಇಡೀ ಪ್ರಪಂಚವೇ ಅವರಕಡೆ ತಿರುಗಿ ನೋಡುವಂತಹ ಅದ್ಭುತವಾದಂತಹ ಕೆಲಸವನ್ನು ಮಾಡಿದಂತವರು. ಹಾಗಾಗಿ ಈ ದೇಶಕ್ಕೆ ಬಹಳ ದೊಡ್ಡ ಕೊಡುಗೆಗಳನ್ನು ಕೊಟ್ಟಿರತಕ್ಕಂತವರು. ಅವರ ಆ ಸುಂದರವಾದಂತಹ ಮುಖದ ಬಗ್ಗೆ ಎಲ್ಲರೂ "very beautiful Prime Minister" ಎಂದು ಹೇಳಿದರು. ಅವರ ಆ ನಗುಮುಖ ಮತ್ತು ಅವರ ಸಭ್ಯತೆ, ಇದೇ ಅವರ ಬಹಳ ದೊಡ್ಡ ರಾಜಕಾರಣದಲ್ಲಿ ಶಕ್ತಿಯಾಗಿದ್ದದ್ದು. ಅವರು ಕೊಟ್ಟಂತಹ ಅನೇಕ ಸುಧಾರಣೆಗಳು, ಕಾರ್ಯಕ್ರಮಗಳ ಬಗ್ಗೆ ಹೇಳಿದರು. ಅದು ತಂತ್ರಜ್ಞಾನದ ಬಗ್ಗೆ ಇರಬಹುದು ಅಥವಾ ಪಂಚಾಯತ್ ರಾಜ್ ಬಗ್ಗೆ ಇರಬಹುದು ಅಥವಾ ಮಹಿಳಾ ಸಬಲೀಕರಣ, ರಾಜಕೀಯ ಸಬಲೀಕರಣದ ಬಗ್ಗೆ ತಿದ್ದುಪಡಿಗಳನ್ನು ತಂದಂಥಾದ್ದು ಇರಬಹುದು. ಹೀಗೆ ಅನೇಕ ಕೊಡುಗೆಗಳನ್ನು ಕೊಟ್ಟಂತಹ ನಮ್ಮ ರಾಜೀವ್ ಗಾಂಧಿಯವರನ್ನು ಸೇರಿ ಇವತ್ತು ಆ ಎರಡು ಚೇತನಗಳಿಗೆ ನಾನು ಹೃತ್ಪೂರ್ವಕ ನಮನಗಳನ್ನು ಅರ್ಪಿಸುತ್ತೇನೆ. ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

**ಶ್ರೀ ಐವನ್ ಡಿ.ಸೋಜಾ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವತ್ತು ಮಾನ್ಯ ಡಿ. ದೇವರಾಜ ಅರಸು ಮತ್ತು ಮಾನ್ಯ ರಾಜೀವ್ ಗಾಂಧೀಯವರ ಜನ್ಮ ದಿನಾಚರಣೆಯನ್ನು ಆಚರಿಸುತ್ತಿದ್ದೇವೆ. ಇವತ್ತು ಬೆಳಗ್ಗಿನಿಂದ ಅನೇಕ ಕಾರ್ಯಕ್ರಮಗಳಲ್ಲಿ ನಾವು ಭಾಗವಹಿಸಿದ್ದೇವೆ. ಮಾನ್ಯ ಡಿ. ದೇವರಾಜ ಅರಸುರವರು ವೃತ್ತಿಯಲ್ಲಿ ಪ್ರಮುಖ ರಾಜಕಾರಣಿ ಮತ್ತು ಸಮಾಜ ಸುಧಾರಕರು. ಮಾನ್ಯ ಡಿ. ದೇವರಾಜ ಅರಸುರವರ ಬಗ್ಗೆ ಮಾತನಾಡಲಿಕ್ಕೆ ಬಹಳಷ್ಟು ಇದ್ದರೂ ಸಹ ಈ ಸದನದಲ್ಲಿ ವಿರೋಧ ಪಕ್ಷದವರು ಸಹ ಈ ವಿಚಾರದಲ್ಲಿ ಮಾತನಾಡಲಿಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಮಾನ್ಯ ಡಿ. ದೇವರಾಜು ಅರಸುರವರ ಚಿಂತನೆಗಳ ಬಗ್ಗೆ ಬೆಳಕು ಚೆಲ್ಲಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ನಾನು ವಿರೋಧ ಪಕ್ಷದವರಿಗೆ ಧನ್ಯವಾದಗಳನ್ನು ಹೇಳಲು ಬಯಸುತ್ತೇನೆ. ಮಾನ್ಯ ಡಿ. ದೇವರಾಜ ಅರಸುರವರು ಧ್ವನಿ ಇದ್ದವರ ಪರವಾಗಿ ಮಾತನಾಡುವುದು ರಾಜಕಾರಣ ಆಗಬಹುದು. ಆದರೆ ಧ್ವನಿ ಇಲ್ಲದವರ ಧ್ವನಿಯಾಗುವುದು ನಾಯಕತ್ವ. ದೇವರಾಜು ಅರಸುರವರ ನಾಯಕತ್ವ ಧ್ವನಿ ಇಲ್ಲದವರ ಪರವಾಗಿ ಮಾತನಾಡಿ ಸಮಾಜದಲ್ಲಿ ತನ್ನದೇ ಆದಂತಹ ಒಂದು ಸ್ಥಾನವನ್ನು ಗಿಟ್ಟಿಸಿಕೊಂಡರು.

(ಮುಂದು)

(೮೦೬) 20/08/2026 6:40 ಎಸ್‌ಪಿಆರ್/ಎಂಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಐವನ್ ಡಿ'ಸೋಜಾ (ಮುಂದು):-**

ನಾನು ಅನೇಕ ಬಾರಿ ದೇವರಾಜ ಅರಸುರವರನ್ನು ಏಕೆ ನೆನೆಸಿಕೊಳ್ಳುತ್ತೇನೆಂದರೆ, ನಾವು ಅಂದರೆ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಭಾಗದವರಾದ ಶ್ರೀ ಕಿಶೋರ್ ಕುಮಾರ್ ಪುತ್ತೂರು, ಶ್ರೀ ಪಿ.ವಿ.ಮೋಹನ್, ಶ್ರೀ ಮಂಜುನಾಥ ಭಂಡಾರಿರವರುಗಳದ್ದಾರೆ. ನಮ್ಮ ಜಿಲ್ಲೆಯಲ್ಲಿ Karnataka Land Reforms Act ಅನ್ನು ಜಾರಿಗೆ ತಂದು, ಯಾರಿಗೆ ಧ್ವನಿ ಇರಲಿಲ್ಲ; ಯಾರಿಗೆ ತಮ್ಮ ಜೀವನದಲ್ಲಿ ನೆಮ್ಮದಿ ಇರಲಿಲ್ಲ; ಸಮಾಜದಲ್ಲಿ ಗೌರವವಿರಲಿಲ್ಲ, ಅಂತಹವರಿಗೆ ಗೌರವವನ್ನು ಕೊಡುವ ಕೆಲಸವನ್ನು ಶ್ರೀ ಡಿ.ದೇವರಾಜ ಅರಸುರವರು Karnataka Land Reforms Act ಅನ್ನು ಜಾರಿಗೊಳಿಸುವುದರ ಮೂಲಕ ಮಾಡಿದರು. ಮಾಜಿ ಮುಖ್ಯಮಂತ್ರಿಗಳಾದ ವೀರಪ್ಪ ಮೊಯ್ಲಿರವರು ಒಮ್ಮೆ ಸಭೆಯಲ್ಲಿ ಮಾತನಾಡುತ್ತಿರುವಾಗ "Karnataka Land Reforms Act ಅನ್ನು ಇಲ್ಲಿ ಜಾರಿಗೆ ತರದೇ ಇದ್ದಿದ್ದರೆ, ನಾನು ರಾಜಕೀಯಕ್ಕೆ ಪ್ರವೇಶ ಮಾಡುತ್ತಿರಲಿಲ್ಲ; ಈ ರಾಜ್ಯದ ಮುಖ್ಯಮಂತ್ರಿಯೂ ಸಹ ಆಗುತ್ತಿರಲಿಲ್ಲ. ಏಕೆಂದರೆ, ನಾನು ಅತ್ಯಂತ ಚಿಕ್ಕ ಸಮುದಾಯದಿಂದ ಬಂದವನಾಗಿದ್ದೇನೆ. ದೇವರಾಜ ಅರಸು ರವರ ಮಾರ್ಗದರ್ಶನವೇ ನಮಗೆ ದಾರಿಯಾಗಿರುವುದು ಮತ್ತು ಅವರು ಜಾರಿಗೆ ತಂದ Karnataka Land Reforms Act ಇವುಗಳೇ ಕಾರಣಗಳು" ಎಂಬುದಾಗಿ ಹೇಳಿದ್ದರು. ವೀರಪ್ಪ ಮೊಯ್ಲಿರವರು ಮಾತನಾಡುವಾಗ ಹೇಳುತ್ತಿದ್ದದ್ದು ಏನೆಂದರೆ, "ನಾನು ಸೈಕಲ್‌ನಲ್ಲಿ ಹೋಗಿ Karnataka Land Reforms Act ನಂತೆ ಬಲಾಢ್ಯರಿಂದ ದುರ್ಬಲವರ್ಗದವರಿಗೆ ಭೂಮಿಯನ್ನು ಬಿಟ್ಟುಕೊಡಿಸಲಿಕ್ಕೆ ಅವಕಾಶವಿರಲಿಲ್ಲ. ಆದರೆ, ಅವರ ಪರವಾಗಿ ವಾದ ಮಾಡಿ, ನಾನು ಅವರಿಗೆ ಭೂಮಿಯನ್ನು ಕೊಡಿಸುವ ಕೆಲಸವನ್ನು ಮಾಡಿದೆ. ಆ ಮೂಲಕ ನಾನು ರಾಜಕೀಯಕ್ಕೆ ಪ್ರವೇಶಿಸಿ, ಈ ರಾಜ್ಯದ ಮುಖ್ಯಮಂತ್ರಿಯಾಗುವುದಕ್ಕೆ ಸಾಧ್ಯವಾಯಿತು" ಎಂಬ ಮಾತನ್ನು ಅವರು ಹೇಳುತ್ತಿದ್ದರು. ಇದರರ್ಥ, ಅವರು ಧ್ವನಿ ಇಲ್ಲದವರಿಗೆ ಧ್ವನಿಯನ್ನು, ನಾಯಕತ್ವವನ್ನು ನೀಡಿದರು. ಆ ಮೂಲಕ ಸಮಾಜದಲ್ಲಿ ತಮ್ಮನ್ನೇ ತಾವು ತೊಡಗಿಸಿಕೊಂಡರು. ಇವತ್ತಿನ ದಿವಸ ದೇವರಾಜ ಅರಸುರವರ ಬಗ್ಗೆ ಮಾತನಾಡಬೇಕಾದರೆ, ರಾಜಕೀಯವಾಗಿ ಪ್ರಾಬಲ್ಯವನ್ನು ಹೊಂದಿದ ಸಮುದಾಯದ ಹಿಡಿತವನ್ನು ತಪ್ಪಿಸಿ, ಹಿಂದುಳಿದ ವರ್ಗದವರು, ದಲಿತರು, ಅಲ್ಪಸಂಖ್ಯಾತರ ನಾಯಕರುಗಳನ್ನು ಮುಂಚೂಣಿಗೆ ತಂದರು. 'ಉಳುವವನೆ ಹೊಲದೊಡೆಯ' ಎಂಬ ಕ್ರಾಂತಿಕಾರಿಯಾದ ಕರ್ನಾಟಕ ಭೂ ಸುಧಾರಣಾ ಕಾಯ್ದೆಯನ್ನು ಜಾರಿಗೆ ತಂದರು. ಆ ಮೂಲಕ ಭೂರಹಿತರಿಗೆ, ಕಾರ್ಮಿಕರಿಗೆ ಭೂಮಿಯ ಹಕ್ಕನ್ನು ಕೊಟ್ಟರು. ಬೆವರು ರೈತನದು, ದುಡಿಮೆ ರೈತನದು, ಬೆಳೆ ಬೆಳೆಸುವವರೂ ಸಹ ರೈತರೇ ಆಗಿದ್ದಾರೆ; ಆದರೆ, ಭೂಮಿಯ ಹಕ್ಕು ಮಾತ್ರವೇ ಮತ್ತೊಬ್ಬರದ್ದು ಎಂದು ಹೇಳುವ ಈ ಸಂಕಟದ ಪರಿಸ್ಥಿತಿಯಲ್ಲಿ ಇವರು ಭೂಮಿಯ ಹಕ್ಕನ್ನು ನೀಡಿದರು. ಇವರು ನಮ್ಮ ಭಾಗದ ಜಿಲ್ಲೆಗಳಿಗೆ ಅಂದರೆ, ಕರಾವಳಿ ಜಿಲ್ಲೆಗಳಿಗೆ ಪ್ರತ್ಯೇಕವಾದ..., ಸದಸ್ಯರಾದ ಶ್ರೀ ಕಿಶೋರ್ ಕುಮಾರ್ ಪುತ್ತೂರ್ ರವರು ಈಗ ಸದನಕ್ಕೆ ಬಂದರು.

ಕರಾವಳಿ ಜಿಲ್ಲೆಗಳಲ್ಲಿ ಇವತ್ತಿಗೂ ಸ್ವಾವಲಂಬಿಗಳಾಗಿ, ಉಳುವವನೇ ಭೂಮಿಯ ಒಡೆಯ ಎಂಬ ಕಾಯ್ದೆಯಡಿ ಭೂಮಿಯನ್ನು ಪಡೆದು, ಅದರಲ್ಲಿ ಉಳಿಮೆ ಮಾಡಿದರು. ಈ ಪೈಕಿ ಕೆಲವರು ಭೂಮಿಯನ್ನು ಮಾರಾಟ ಮಾಡಿದರು. ಸಾವಿರಾರು ವಿದ್ಯಾರ್ಥಿಗಳಿಗೆ, ಡಾಕ್ಟರ್‌ಗಳಿಗೆ, ಇಂಜಿನಿಯರ್‌ಗಳಿಗೆ ಸಮಾಜದಲ್ಲಿ ಗೌರವ, ಮರ್ಯಾದೆಗಳನ್ನು ಪಡೆಯಲಿಕ್ಕೆ ಸಾಧ್ಯವಾಗಿದ್ದರೆ, ಅದು ಈ ಒಂದು ಕಾನೂನನ್ನು ಜಾರಿಗೆ ತಂದಿರುವುದರಿಂದ ಸಾಧ್ಯವಾಯಿತು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ತಾವು ನನ್ನ ಕಡೆ ನೋಡಿದರೆ, ನಾವು ಕುಳಿತುಕೊಳ್ಳಬೇಕು ಎಂದು ಹೇಳುವ ಸಂದೇಶವನ್ನು ತಾವು ನೀಡುತ್ತಿದ್ದೀರಿ ಎಂದು ಅನಿಸುತ್ತದೆ. ನಾನು ಹೇಳುವುದೇನೆಂದರೆ, ಈ ಅಸಮಾನತೆಯ ವ್ಯವಸ್ಥೆಯನ್ನು ಬದಲಾಯಿಸುವ ಪ್ರಯತ್ನಕ್ಕೆ ದೇವರಾಜ ಅರಸು ರವರು ದೊಡ್ಡ ಬುನಾದಿ. 'ಅಂದು ಅರಸರು, ಇಂದು ಸಿದ್ದರಾಮಯ್ಯ' ಎಂದು ನಾವು ಈಗ ಸಭೆಗಳಿಗೆ ಹೋದಾಗ ಕೆಲವು ಕಡೆಗಳಲ್ಲಿ ಹೇಳಲಿಕ್ಕೆ ಉಂಟು. ಅಂದರೆ, ಯಾರಿಗೆ ಸಮಾಜದ ಕಟ್ಟಕಡೆಯ ವ್ಯಕ್ತಿಯ ಬಗ್ಗೆ ಕಾಳಜಿ ಇದೆಯೋ, ಅಂತಹ ವ್ಯಕ್ತಿಗಳನ್ನು ಯಾರು ಸಮಾಜದಲ್ಲಿ ಎತ್ತಿ ಹಿಡಿದಿದ್ದಾಯೋ, ಅವರ ಹೆಜ್ಜೆ ಗುರುತು ಇವತ್ತಿನ ದಿವಸ ಶಾಶ್ವತವಾಗಿ ಉಳಿದಿದೆ. ಬಹುಶಃ 56 ವರ್ಷಗಳ ನಂತರ, ಅಂದರೆ, ಅವರು ತೀರಿಹೋಗಿ 52 ವರ್ಷಗಳಾದರೂ ಕೂಡ ಇವತ್ತಿಗೂ ಸಹ ಅವರ ಚಿಂತನೆಗಳು ಪ್ರಸ್ತುತವಾಗಿವೆ. ಅಂದೂ ಪ್ರಸ್ತುತ, ಇಂದೂ ಪ್ರಸ್ತುತವಾಗಿವೆ; ಇನ್ನು ಮುಂದಕ್ಕೂ ಪ್ರಸ್ತುತ. ಏಕೆಂದರೆ, ಅವರ ಚಿಂತನೆಗಳು ಸಮಾಜದ ಎಲ್ಲಾ ವರ್ಗಗಳ ಜನರ ಪರವಾಗಿ ಇತ್ತು. ಸಮಾಜದ ಸುಧಾರಣೆ ಹಾಗೂ ಸಮಾಜವನ್ನು ಮೇಲ್ದರ್ಜೆಗೆ ಏರಿಸುವುದು, ಧ್ವನಿ ಇಲ್ಲದವರಿಗೆ ಧ್ವನಿಯನ್ನು ಕೊಡಿಸುವುದು ಮತ್ತು ಸಮಾಜದಲ್ಲಿ ಅವರಿಗೆ ನೆಮ್ಮದಿಯ ಜೀವನವನ್ನು ಕೊಡಿಸುವುದು ಅವರ ಉದ್ದೇಶವಾಗಿತ್ತು. ಹೀಗಾಗಿ ನಾನು ಇಷ್ಟನ್ನು ಹೇಳುತ್ತೇನೆ. ಶ್ರೀ ಡಿ.ದೇವರಾಜ ಅರಸು ರವರ ಚಿಂತನೆಗಳನ್ನು ಮೈಗೂಡಿಸುವಲ್ಲಿ ನಾವುಗಳೆಲ್ಲರೂ ಕೆಲಸ ಮಾಡಬೇಕು.

ಅದೇ ರೀತಿಯಾಗಿ ಪೈಲೆಟ್ ಆಗಿ ಕೆಲಸ ಮಾಡುತ್ತಿದ್ದ ದೇಶದ ಪ್ರಧಾನ ಮಂತ್ರಿಗಳಾಗಿದ್ದ ಶ್ರೀ ರಾಜೀವ್ ಗಾಂಧಿರವರ ಹುಟ್ಟಿದ ದಿನವೂ ಸಹ ಆಗಿದೆ. ಇವರಿಗೆ ರಾಜಕೀಯದಲ್ಲಿ ಬೇರೆಲ್ಲಾ ವ್ಯವಸ್ಥೆಗಳಿದ್ದರೂ ಸಹ ತನ್ನ ಪಾಡಿಗೆ ತಾನು ಇರುತ್ತೇನೆ ಎಂದು ಹೇಳುವ ವ್ಯಕ್ತಿ ಕೊನೆಗೂ ರಾಜಕೀಯಕ್ಕೆ ಪ್ರವೇಶ ಮಾಡಿ, ದೇಶದ ಪ್ರಧಾನ ಮಂತ್ರಿಗಳಾಗಿದ್ದರು. ಇವರು ಐ.ಟಿ.ಬಿ.ಟಿ. ಕ್ಷೇತ್ರದಲ್ಲಿ ಕಾಂತ್ರಿಯನ್ನು ಮಾಡಿ, ಕಂಪ್ಯೂಟರ್ ಯುಗವನ್ನು ಪ್ರಾರಂಭಿಸಿ, 21 ನೇ ಶತಮಾನಕ್ಕೆ ಕೊಂಡು ಹೋಗಿ, ಈ ದೇಶದ ಮುನ್ನಡೆಗೆ ಕಾರಣರಾಗಿದ್ದವರಾಗಿದ್ದಾರೆ. ದೇಶದ ಯುವಕರಿಗೆ ಮತದಾನದ ಹಕ್ಕನ್ನು ಕೊಟ್ಟರು. ಪಂಚಾಯತ್ ರಾಜ್ ಕಾಯ್ದೆಯನ್ನು ಬಲಪಡಿಸಿದ ಕೀರ್ತಿಯು ರಾಜೀವ್ ಗಾಂಧಿಯವರಿಗೆ ಸಲ್ಲುತ್ತದೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಈ ಇಬ್ಬರೂ ವ್ಯಕ್ತಿಗಳಿಗೆ ಹುಟ್ಟುಹಬ್ಬದ ಶುಭಾಶಯಗಳನ್ನು ತಿಳಿಸುತ್ತೇನೆ. ಅವರ ಚಿಂತನೆಗಳನ್ನು ನಾವು ಅಳವಡಿಸಿಕೊಳ್ಳಲಿಕ್ಕೆ ಪ್ರಯತ್ನವನ್ನು ಮಾಡಬೇಕು ಎಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ. ಧನ್ಯವಾದಗಳು.

**ಶ್ರೀ ಬಿ.ಎಸ್.ಶಿವಣ್ಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ತಮಗೆ ಧನ್ಯವಾದಗಳು. ಹಾಗೆಯೇ ವಿರೋಧ ಪಕ್ಷದ ನಾಯಕರಿಗೂ ಸಹ ಧನ್ಯವಾದಗಳನ್ನು

ಅರ್ಪಿಸುತ್ತೇನೆ. ಆಂಗ್ಲ ಭಾಷೆಯಲ್ಲಿ ಒಂದು ನಾಣ್ಣುಡಿ ಇದೆ; ಅದೇನೆಂದರೆ, "A leader creates followers, but a legend creates leaders" ಶ್ರೀ ಡಿ.ದೇವರಾಜ ಅರಸು ರವರು legendary ಆಗಿದ್ದರು. He created so many leaders. ಅವರ ಕಾಲದಲ್ಲಿ ಅವರ ಗರಡಿಯಲ್ಲಿ ಪಳಗಿದವರು ಐದು ಜನರು ರಾಜ್ಯದ ಮುಖ್ಯಮಂತ್ರಿಗಳಾದರು. ಅವರುಗಳು ಯಾರೆಂದರೆ, ಶ್ರೀ ಎಸ್.ಬಂಗಾರಪ್ಪ, ಶ್ರೀ ವೀರಪ್ಪ ಮೊಯ್ಲಿ, ಶ್ರೀ ಎಸ್.ಎಂ.ಕೃಷ್ಣ, ಶ್ರೀ ಜೆ.ಹೆಚ್.ಪಟೇಲ್ ಮತ್ತು ಶ್ರೀ ಧರ್ಮಸಿಂಗ್. ಇವರುಗಳು ಶ್ರೀ ಡಿ.ದೇವರಾಜ ಅರಸುರವರ ಗರಡಿಯಲ್ಲಿ ಪಳಗಿದ್ದವರಾಗಿದ್ದಾರೆ. ಅವರ ಗರಡಿಯಲ್ಲಿ ಪಳಗಿದ ಈ ಐವರನ್ನು ಮುಖ್ಯಮಂತ್ರಿಗಳನ್ನಾಗಿ ಮಾಡಿದ ಕೀರ್ತಿ ಮತ್ತು ಹೆಗ್ಗಳಿಕೆ that legendary leader is my dear Devaraja Urs. 1982 ರಲ್ಲಿ ಅವರು ನಿಧನರಾಗಿದ್ದಾಗ, ಮಂಡ್ಯ ಜಿಲ್ಲೆಯ ಇಂಜನಿಯರಿಂಗ್ ಕಾಲೇಜಿನಲ್ಲಿ ನಾನು Student Leader ಆಗಿದ್ದೆನು. ಶ್ರೀ ಡಿ.ದೇವರಾಜ ಅರಸುರವರಿಗೆ ಮರಣೋತ್ತರ ಭಾರತ ರತ್ನ ಪ್ರಶಸ್ತಿಯನ್ನು ನೀಡುವಂತೆ ಆಗ ನಾನು ಮನವಿ ಮಾಡಿದೆ. ಅದೇ ರೀತಿಯಾಗಿ 2020 ರಲ್ಲಿಯೂ ಕೂಡ ನಾನು, ಶ್ರೀ ಬರಗೂರು ರಾಮಚಂದ್ರಪ್ಪ, ಜಸ್ಟೀಸ್ ಗೋಪಾಲಗೌಡ, ಶ್ರೀ ನಂಜಗೆರೆ ಜಯಪ್ರಕಾಶ್ ಹಾಗೂ ಇನ್ನೂ ಅನೇಕ ವಿಚಾರವಾದಿಗಳೆಲ್ಲಾ ಸೇರಿಕೊಂಡು ಶ್ರೀ ನರೇಂದ್ರ ಮೋದಿಯವರಿಗೆ ಪತ್ರವನ್ನು ಬರೆದೆವು. ದಯಮಾಡಿ, ದಿವಂಗತ ಡಿ.ದೇವರಾಜ ಅರಸು ರವರಿಗೆ ಭಾರತ ರತ್ನ ಪ್ರಶಸ್ತಿಯನ್ನು ನೀಡುವಂತೆ ಒತ್ತಾಯಿಸಿದೆವು. ನಾನು ಈಗಲೂ ಪ್ರಾರ್ಥಿಸುವುದೇನೆಂದರೆ, ರಾಜ್ಯ ಸರ್ಕಾರ ದಯಮಾಡಿ ಸಚಿವ ಸಂಪುಟದ ಸಭೆಯಲ್ಲಿ ಇದನ್ನು ಮಂಡಿಸಿ, ದಿವಂಗತ ಡಿ.ದೇವರಾಜ ಅರಸುರವರಿಗೆ ಮರಣೋತ್ತರ ಭಾರತ ರತ್ನ ಪ್ರಶಸ್ತಿಯನ್ನು ಕೊಡುವುದಕ್ಕೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವಂತೆ ನಾನು ಕಳಕಳಿಯಿಂದ ಮನವಿ ಮಾಡುತ್ತೇನೆ.

ಇವತ್ತಿನ ದಿವಸ ಎಲೆಕ್ಟ್ರಾನಿಕ್ ಸಿಟಿ ಆಗಿದ್ದರೆ, ಅದಕ್ಕೆ ದೇವರಾಜ ಅರಸು ರವರು ಕಾರಣೀಭೂತರು. ಇದಕ್ಕೂ ಸಹ ಶ್ರೀ ಡಿ.ದೇವರಾಜ ಅರಸುರವರ ಹೆಸರನ್ನು ಇಡಬೇಕೆಂದು ಮಾಜಿ ಮುಖ್ಯಮಂತ್ರಿಗಳಾಗಿದ್ದ ಶ್ರೀ ಸಿದ್ದರಾಮಯ್ಯನವರಿಗೂ ಸಹ ನಾನು ಮನವಿಯನ್ನು ಮಾಡಿದ್ದೆನು. ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ಶ್ರೀ ಡಿ.ದೇವರಾಜ ಅರಸು ರವರು ಪೆರಿಯಾರ್. ಕರ್ಪೂರಿ ಠಾಕೂರ್ ರವರು…., ಅವತ್ತಿನ ದಿವಸ ಶ್ರೀ ಡಿ.ದೇವರಾಜ ಅರಸುರವರು ಹಾವನೂರು ವರದಿಯನ್ನು ನೀಡಿದ್ದರು. ಇದು ನಮ್ಮ ಹಿಂದುಳಿದ ವರ್ಗಗಳ ಹಾಗೂ ಕರ್ನಾಟಕ ರಾಜ್ಯದ ಶೋಷಿತ ವರ್ಗಗಳ ಬೈಬಲ್ ಆಗಿದೆ. ಅದೇ ರೀತಿಯಾಗಿ ಶ್ರೀ ವಿ.ಪಿ.ಸಿಂಗ್ ರವರು ನೀಡಿದ ಮಂಡಲ್ ಆಯೋಗದ ವರದಿಯೂ ಸಹ ನಮ್ಮ ಹಿಂದುಳಿದ ವರ್ಗಗಳ ಬೈಬಲ್ ಆಗಿದೆ. ಅಂದು ನೀಡಿದ ಹಾವನೂರುರವರ ವರದಿಯಿಂದ ಇವತ್ತಿನ ದಿವಸ ಎಷ್ಟೋ ಜನ ಕೆ.ಎ.ಎಸ್., ಐ.ಎ.ಎಸ್., ಐ.ಪಿ.ಎಸ್. ಮತ್ತು ಐ.ಆರ್.ಎಸ್. ವೃಂದದ ಅಧಿಕಾರಿಗಳಾಗಿದ್ದಾರೆ. ಶೇಕಡಾ 74 ಜನಸಂಖ್ಯೆಯಲ್ಲಿ ಮಂಡಲ್ ಕಮಿಷನ್ ವರದಿಯಲ್ಲಿ ಕೇವಲ ಶೇಕಡಾ 27 ರಷ್ಟನ್ನು ಮಾತ್ರವೇ ನೀಡಿದ್ದಾರೆ. ಹೀಗಾಗಿ ನಾನು ಒತ್ತಾಯಿಸುವುದೇನೆಂದರೆ, ಶೇಕಡಾ 27 ರಷ್ಟು ಇರುವ ಮೀಸಲಾತಿಯಲ್ಲಿ…, ಕೇವಲ ಶೇಕಡಾ 3 ರಷ್ಟು ಮತ್ತು ಕೇವಲ ಶೇಕಡಾ 10 ರಷ್ಟು E.W.S.

economic reservation ಅನ್ನು ನೀಡಿದ್ದಾರೆ. ಹೀಗಾಗಿ ನಮಗೂ ಶೇಕಡಾ 54 ರಷ್ಟು ಮೀಸಲಾತಿಯನ್ನು ಕೇಂದ್ರ ಸರ್ಕಾರದ ಉದ್ಯೋಗ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಕೊಡಬೇಕು ಎಂದು ನಮ್ಮ ರಾಜ್ಯ ಸರ್ಕಾರವು ಒತ್ತಾಯಿಸಬೇಕೆಂದು ನಾನು ಅತ್ಯಂತ ಕಳಕಳಿಯಿಂದ ಮನವಿಯನ್ನು ಮಾಡುತ್ತೇನೆ. ಮಲ ಹೊರುವ ಪದ್ಧತಿಯನ್ನು ನಿವಾರಣೆ ಮಾಡಿದರು, ಋಣಮುಕ್ತ ಕಾಯ್ದೆಯನ್ನು ಮಾಡಿದರು ಎಂದು ಈಗಾಗಲೇ ಹೇಳಿದರು. 21 ಅಂಶಗಳ ಕಾರ್ಯಕ್ರಮವನ್ನು ಮಾಡಿದರು ಎಂದೂ ಸಹ ತಿಳಿಸಿದರು. ಹೌದು, ಇಂತಹ ಕಾರ್ಯಕ್ರಮಗಳನ್ನು ಮಾಡಿದರು. ವರ್ತಮಾನ ಕ್ರೂರವಾಗಿರುತ್ತದೆ. ಆದರೆ, ಈಗ ಭೂತಕಾಲವನ್ನಷ್ಟೇ ಸ್ಮರಣೆ ಮಾಡಿಕೊಳ್ಳುತ್ತೇವೆ. ನಾನು ಹೇಳುವುದೇನೆಂದರೆ, ನಾನು ಈಗಾಗಲೇ ಸಭಾನಾಯಕರಿಗೆ ಹಾಗೂ ಮುಖ್ಯಮಂತ್ರಿಗಳಿಗೆ ಪತ್ರವನ್ನು ಬರೆದಿದ್ದೇನೆ. ಮುಂಬರುವ ದಸರಾ ಉದ್ಘಾಟನೆಯನ್ನು ದೇವರಾಜ ಅರಸುರವರ ಗೌರವಾರ್ಥ ಪೌರ ಕಾರ್ಮಿಕರಿಂದ ಉದ್ಘಾಟನೆಯನ್ನು ಮಾಡಿಸಬೇಕು ಎಂಬ ಮನವಿಯನ್ನು ಮಾಡುತ್ತೇನೆ. ಆ ಮೂಲಕ ಹೊಸ ಸಂದೇಶವನ್ನು ಕೊಡಬೇಕು. ಯಾರೋ ಉದ್ದಿಮೆಗಳು, ಸ್ವಾಮೀಜಿಗಳು ಅಥವಾ ಮಠಾಧಿಪತಿಗಳಿಂದ ಉದ್ಘಾಟನೆ ಮಾಡುವುದಲ್ಲ; ಪ್ರತಿ ಕ್ಷಣ ನಗರ, ಪಟ್ಟಣ ಪ್ರದೇಶಗಳನ್ನು ಮತ್ತು ಗ್ರಾಮ ಪ್ರದೇಶಗಳನ್ನು ಸ್ವಚ್ಛ ಮಾಡುವ ಪೌರ ಸೇನಾನಿಗಳು, ಅಂದರೆ ಪೌರ ಕಾರ್ಮಿಕರಿಂದ ಉದ್ಘಾಟನೆ ಮಾಡುವುದರ ಮೂಲಕ ಇಡೀ ರಾಷ್ಟ್ರಕ್ಕೆ ಒಂದು ಸಂದೇಶವನ್ನು ಕೊಡಬೇಕು ಎಂದು ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

ಮುಂದುವರೆದು ಹೇಳುವುದಾದರೆ, ಶ್ರೀ ಡಿ.ದೇವರಾಜ ಅರಸು ಒಬ್ಬ ಮಹಾತ್ಮ. ಕರ್ನಾಟಕ ರಾಜ್ಯದ ಶೋಷಿತ ವರ್ಗಗಳ ಮಹಾತ್ಮಾ ಎಂದು ಯಾರಾದರೂ ಇದ್ದರೆ, ಅದು ದೇವರಾಜ ಅರಸು ಆಗಿದ್ದಾರೆ. ಅವರನ್ನು ನೆನೆಸಿಕೊಂಡಾಗ, ಕಣ್ಣಿನಲ್ಲಿ ನೀರು ಅಲ್ಲ; ರಕ್ತ ಬರುತ್ತದೆ. ನಾನು ಅವರ ಚರಿತ್ರೆಯನ್ನು ಓದಿದ್ದೇನೆ. ಅದೇ ರೀತಿಯಾಗಿ ಸಿದ್ದರಾಮಯ್ಯನವರೂ ಸಹ ಶ್ರೀ ಡಿ.ದೇವರಾಜ ಅರಸುರವರ ಗರಡಿಯಲ್ಲಿ ಪಳಗಿದವರಾಗಿದ್ದಾರೆ. ಅವರು ಹಾಕಿದ ದಾರಿಯಲ್ಲಿ ಇವರೂ ಸಹ ನಡೆದಿದ್ದಾರೆ. ಪಂಚ ಗ್ಯಾರಂಟಿಗಳ ಮೂಲಕ ಈ ರಾಜ್ಯದಲ್ಲಿ ಆರ್ಥಿಕ ಸಬಲೀಕರಣವನ್ನು ಮಾಡುವುದಕ್ಕೆ, ಅಂದರೆ ಮಹಿಳೆಯರಿಗೆ, ಹಿಂದುಳಿದವರಿಗೆ ಎಲ್ಲಾ ಬಡ ಜಾತಿ ಜನರಿಗೆ ಹಸಿವು ನೀಗಿಸಿ, ಹಸಿವು ಮುಕ್ತ ರಾಜ್ಯವನ್ನಾಗಿ ಮಾಡುವುದಕ್ಕೆ ಅವರೂ ಸಹ ದೇವರಾಜ ಅರಸುರವರ ಹಾದಿಯಲ್ಲಿಯೇ ಸಾಗಿದ್ದಾರೆ. ಇವರಿಬ್ಬರೂ ಸಹ ಮೈಸೂರಿನಿಂದ ಬಂದವರಾಗಿದ್ದಾರೆ. ಇಬ್ಬರೂ ಸಹ ಶೋಷಿತ ವರ್ಗಗಳ ಧ್ವನಿಯಾಗಿ ಈ ರಾಜ್ಯದಲ್ಲಿ ಕೆಲಸವನ್ನು ಮಾಡಿದ್ದಾರೆ.

ಇನ್ನು ಪರಿವರ್ತನೆಯ ಹರಿಕಾರ ರಾಜೀವ್ ಗಾಂಧಿಯವರ ಬಗ್ಗೆ ಹೇಳುವುದಾದರೆ, ಇವತ್ತಿನ ದಿವಸ ಐ.ಟಿ. ಕ್ಷೇತ್ರದಲ್ಲಿ revolution ಆಗಿದ್ದರೆ, ಅದಕ್ಕೆ ಶ್ರೀ ರಾಜೀವ್ ಗಾಂಧಿಯವರು ಕಾರಣರಾಗಿದ್ದಾರೆ. ಡಿಜಿಟಲ್ ಇಂಡಿಯಾ ಎಂಬ ಘೋಷಣೆಯನ್ನು ಮಾಡಲಾಗುತ್ತಿದೆ.

(ಮುಂದು)

(807)20-08-2026 6-50/bkp-ak (ಸಭಾಪತಿಯವರ ಉಪಸ್ಥಿತಿ)

**ಶ್ರೀ ಶಿವಣ್ಣ ಬಿ.ಎಸ್.(ಮುಂದು..)**

ಡಿಜಿಟಲ್ ಇಂಡಿಯಾ ಆಗಬೇಕಾದರೆ ಬಡ ಮಕ್ಕಳಿಗೆ ಲ್ಯಾಪ್‌ಟಾಪ್ ಅನ್ನು ಸರ್ಕಾರದ ವತಿಯಿಂದ ಕೊಡಿಸಬೇಕು. ಬಿ.ಪಿ.ಎಲ್. ಕಾರ್ಡ್ ಇರತಕ್ಕಂತಹ ಬಡ ಮತ್ತು ಪ್ರತಿಭಾವಂತಹ ವಿದ್ಯಾರ್ಥಿಗಳಿಗೆ ಉಚಿತವಾಗಿ ಲ್ಯಾಪ್‌ಟಾಪ್ ಅನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರ ಕೊಡತಕ್ಕಂತಹ ನಿರ್ಣಯವನ್ನು ಮಾಡುವುದರ ಮೂಲಕ ಶ್ರೀಮಾನ್ ಡಿ. ದೇವರಾಜ ಅರಸ್‌ರವರು ಮತ್ತು ರಾಜೀವ್ ಗಾಂಧಿಯವರ ಗೌರವವನ್ನು ಕಾಪಾಡಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ, ನಮಸ್ಕಾರ.

**ಶ್ರೀ ಪಿ. ವಿ. ಮೋಹನ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶ ಕೊಟ್ಟ ತಮಗೆ ಧನ್ಯವಾದಗಳು, ತಮಗೂ ಮತ್ತು ವಿರೋಧ ಪಕ್ಷದವರಿಗೂ ತಿಳಿಸುವುದು ಏನೆಂದರೆ, ನಾನು ಹೊಸ ಸದಸ್ಯನಾಗಿದ್ದು, ನಾನು 4-5 ದಿವಸಗಳಿಂದ ಏನಪ್ಪಾ ಸದನ ಈ ರೀತಿಯಲ್ಲಿ ನಡೆಯುತ್ತಿದೆ ಎಂದು ಹೇಳಿ ಈ ಸದನದ ಕಲಾಪವನ್ನು ನೋಡುತ್ತಿದ್ದೇನೆ. ಆದರೆ ಇವತ್ತು ಒಂದು ನೀವೆಲ್ಲರೂ ಸೇರಿಕೊಂಡು ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟದ್ದಕ್ಕೆ ಧನ್ಯವಾದಗಳು.

**ಸಭಾಪತಿಯವರು:-** ಇದು ಅದ್ಭುತ ಭಾಷಣಗಳು ಇವತ್ತು ನಡೆಯುತ್ತಿವೆ.

**ಶ್ರೀ ಪಿ. ವಿ. ಮೋಹನ್:-** ಒಳ್ಳೆಯ ಭಾಷಣಗಳು, ಒಳ್ಳೆಯ ವಿಚಾರಗಳು ಎಂದು ಗೊತ್ತಾಯಿತು. ಈಗ ಇಬ್ಬರು ಮಹಾನ್ ನಾಯಕರ ಹುಟ್ಟುಹಬ್ಬವನ್ನು ನಾವೆಲ್ಲರೂ ಆಚರಿಸುತ್ತಿದ್ದೇವೆ. ಶ್ರೀ ರಾಜೀವ್ ಗಾಂಧಿಯವರು ಒಂದು ಮಧ್ಯಮ ವರ್ಗವನ್ನು ಸೃಷ್ಟಿ ಮಾಡಿದವರಾದರೆ, ಶ್ರೀ ಡಿ. ದೇವರಾಜ ಅರಸ್ ರವರು ಹಿಂದುಳಿದ ವರ್ಗಕ್ಕೆ ಧ್ವನಿ ಕೊಟ್ಟು, ಒಂದು ಸ್ವಾಭಿಮಾನವನ್ನು ಕೊಟ್ಟವರವರು. ನಾನು ಶ್ರೀಮಾನ್ ಡಿ. ದೇವರಾಜ ಅರಸರನ್ನು ಕೇಳಿದ್ದೇನೆ, ನೋಡಿದ್ದೇನೆ. ಶ್ರೀಮಾನ್ ಡಿ. ದೇವರಾಜ ಅರಸರನ್ನು ನಮ್ಮ ಮನೆಗಳಲ್ಲೆಲ್ಲ ಆವೇಶ, ನಮಗೊಂದು ಆದರ್ಶ ಮತ್ತು ಸ್ವಲ್ಪ ಅಹಂ ಸಹ ಇದೆ. ನಮಗೆ ಅವರು ಅರಸರೆಂದು ಹೇಳಿಕೊಳ್ಳಲಿಕ್ಕೆ, ಅದು ಬರುತ್ತದೆ.

ನಾನು ಶ್ರೀಮಾನ್ ಡಿ. ದೇವರಾಜ ಅರಸರ ಬಗ್ಗೆ ವಡ್ಡ ಅರಸು ರಘುರಾಮ ಶೆಟ್ಟಿಯವರು ಬರೆದಂತಹ 'ಅರಸು ಬದುಕು' ಆ ಪುಸ್ತಕದ ಮೂಲಕ ಓದಿದ್ದೇನೆ ಮತ್ತು ವಡ್ಡ ಅರಸು ಶೆಟ್ಟಿಯವರ ಜೊತೆಗೆ ತುಂಬಾ ಮಾತನಾಡಿದ್ದೇನೆ. ನಾನು ಚಿಕ್ಕವನಿರುವಾಗ ನೆಹರೂ ಮೈದಾನದಲ್ಲಿ ಮೀಟಿಂಗ್ ಆಗುವಾಗ ಶ್ರೀಮಾನ್ ಡಿ. ದೇವರಾಜ ಅರಸರ ಒಂದು ಭಾಷಣ ಕೇಳಿದ್ದೆ. ಆ ಭಾಷಣದಲ್ಲಿ ನನಗೆ ಬಹಳ ಇಷ್ಟಪಟ್ಟ ಒಂದು ಮಾತೆಂದರೆ 'ಅದೃಶ್ಯ

ಮತದಾರರು' ಎಂದು ಹೇಳಿ. ಆ ಅದೃಶ್ಯ ಮತದಾರರ ಬಗ್ಗೆ ಇವತ್ತು ನಾನು ಚುನಾವಣೆಯಲ್ಲಿ ನನ್ನನ್ನು ಪಕ್ಷ ಕಳುಹಿಸುವಾಗ, ಆ ಎಲೆಕ್ಷನ್ ಮ್ಯಾನೇಜ್‌ಮೆಂಟ್‌ನಲ್ಲಿ ಈ ಅದೃಶ್ಯ ಮತದಾರರ ಬಗ್ಗೆ ನಾನು ಇವತ್ತು ಕೂಡ, wherever I go, ಅದನ್ನು ಅನುಷ್ಠಾನ ಮಾಡುತ್ತಿದ್ದೇನೆ. ಎಲ್ಲಿಯವರೆಗೆ ಹೋಗುತ್ತೇನೆಯೋ ಅಲ್ಲಿಯವರೆಗೆ. ಆಮೇಲೆ ನಾನು ರಘುರಾಮ ಶೆಟ್ಟರ ಹತ್ತಿರ ಮಾತನಾಡುವಾಗ ಅವರು ಒಂದು ವಿಷಯ ಹೇಳಿದರು. ಬಡವರಿಗೆ ಏನಾದರೂ ಅನುಕೂಲ ಮಾಡಬೇಕಾದರೆ ಶ್ರೀಮಾನ್ ಡಿ. ದೇವರಾಜ ಅರಸರು ತಮ್ಮ ಅಧಿಕಾರಿಗಳು ಹತ್ತಿರ ಹೇಳುತ್ತಾರೆ. ಆಗ ಅಧಿಕಾರಿಗಳು ಅದು ಆಗುವುದಿಲ್ಲ ಎಂದು ಹೇಳುತ್ತಾರೆ, ಆಗದಿದ್ದರೆ, ಆ ಕಾನೂನನ್ನು ಸ್ವಲ್ಪ ಬೆಂಡ್ ಮಾಡಿ ನೀವು ಎಂದು ಹೇಳುತ್ತಿದ್ದರು. ಆ ಕಾನೂನನ್ನು ಬೆಂಡ್ ಮಾಡಿದರೆ ನಿಮಗೆ ಆ ಬಡವನಿಗೆ ಉಪಕಾರ ಮಾಡಲಿಕ್ಕೆ ಸಾಧ್ಯ ಎಂದು ಹೇಳುತ್ತಿದ್ದರು.

ಇನ್ನೊಂದು ಮಾತು ಹೇಳಬೇಕೆಂದರೆ, ನಾವು ದಕ್ಷಿಣ ಕನ್ನಡ ಜಿಲ್ಲೆಯವರು ಈ ಭೂ ಮಸೂದೆ ಕಾಯಿದೆಯ ವಿಚಾರದಲ್ಲಿ ಬಹಳಷ್ಟು ದೊಡ್ಡ beneficiaries. ನಮ್ಮ ನೆರೆಯ ರಾಜ್ಯದಲ್ಲಿ ನೋಡುವಾಗ ಕೇರಳದಲ್ಲಿ ಈ ಭೂಮಿಯ ವಿಚಾರವಾಗಿ ದೊಡ್ಡ ಹೋರಾಟ ನಡೆದಿದೆ. ನಕ್ಸಲರ ಮೂಲಕ ದೊಡ್ಡ ರಕ್ತಕ್ರಾಂತಿ ಎಲ್ಲವೂ ಆಗಿದೆ. ಆದರೆ, ನಮ್ಮ ಜಿಲ್ಲೆಯಲ್ಲಿ ಎಲ್ಲಾ ಭೂಮಿಗಳಿರುವುದು ಅಲ್ಲಿಯ ಜೈನರು ಮತ್ತು ಬಂಟರ ಹತ್ತಿರ ಇದೆ. ಆದರೆ, ಶ್ರೀಮಾನ್ ಡಿ. ದೇವರಾಜ ಅರಸರು ಅದನ್ನೇನೋ ಬಹಳ ವಿಸ್ಮಯವಾಗಿ, ಶ್ರೀ ಸುಬ್ಬಯ್ಯ ಶೆಟ್ಟರು ಆಗ ಮಂತ್ರಿ, ಅವರ ಮೂಲಕ ಅಲ್ಲಿದ್ದ ಎಲ್ಲಾ ಬಂಟರುಗಳ, ಭೂ ಒಡೆಯರನ್ನೆಲ್ಲ ಮನವೊಲಿಸಿದರು. ನಮಗೆ, ಇಡೀ ಕರ್ನಾಟಕದಲ್ಲಿ highest beneficiaries ನಮ್ಮ ಕರಾವಳಿ ಜಿಲ್ಲೆಯವರು ಆಗಿರುತ್ತಾರೆ.

ಅದ್ದರಿಂದ, ನಾನು ಈ ವಿಚಾರವಾಗಿ ತಮಿಳುನಾಡಿನಲ್ಲಿ ನೋಡಿದ್ದೇನೆ. ತಮಿಳುನಾಡಿನಲ್ಲಿ ಎಂ.ಜಿ.ಆರ್. ಮುಖ್ಯಮಂತ್ರಿಯಾಗಿದ್ದರು. ಎಂ.ಜಿ.ಆರ್. ಇರುವಾಗ ಎಂ.ಜಿ.ಆರ್. ಅವರ ಯೂನಿವರ್ಸಿಟಿಗಳು, ಎಂ.ಜಿ.ಆರ್. ಜಿಲ್ಲೆಗಳು, ಎಂ.ಜಿ.ಆರ್. ಟ್ರೈನ್‌ಗಳು ಈ ರೀತಿಯಲ್ಲಿ ಎಲ್ಲವೂ ಇವೆ. ಅದೇ ರೀತಿ ನನಗೆ ನನ್ನ ಮನಸ್ಸಿನಲ್ಲಿ ಬಂದದ್ದು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯನ್ನು ಶ್ರೀ ಡಿ. ದೇವರಾಜ ಅರಸು ಜಿಲ್ಲೆಯೆಂದು ತಾವು ಘೋಷಣೆ ಮಾಡಲಿಕ್ಕೆ ಯಾವುದಾದರೂ ಕ್ರಮ ಕೈಗೊಂಡರೆ ನಮ್ಮ ಎಲ್ಲಾ ಜಿಲ್ಲೆಯವರು ನಿಜವಾಗಿ ಅದರಲ್ಲಿ ಸಂತೋಷಪಡುತ್ತೇವೆ ಎಂದು ಹೇಳುತ್ತಿದ್ದೇವೆ.

ಇನ್ನು, ಶ್ರೀಮಾನ್ ಡಿ. ದೇವರಾಜ ಅರಸರು ಬಹುಶಃ ಈಗ ಇದ್ದಿದ್ದರೆ ಏನು ಮಾಡುತ್ತಿದ್ದರೆಂದು ನನಗೆ ಅನಿಸುತ್ತದೆ. ಅರಸರು ಬಹುಶಃ ಇದ್ದಿದ್ದರೆ ಕುವೆಂಪು ಹೇಳಿದ '"ಸರ್ವ ಜನಾಂಗದ ಶಾಂತಿಯ ತೋಟ"', ಅದಕ್ಕಾಗಿ ಅವರು ಬಹುಶಃ ತಮ್ಮ ಇಡೀ ಜೀವನವನ್ನು ಮುಡಿಪಾಗಿಡುತ್ತಿದ್ದರು ಎಂದು ಅನಿಸುತ್ತದೆ. ಏಕೆಂದರೆ, ಈಗಿನ ರಾಜಕಾರಣ ಆಗ ಈ ರೀತಿ ರಾಜಕಾರಣ ಇರಲಿಲ್ಲ. ಇದನ್ನು ಇಷ್ಟೇ ಹೇಳಿ ನನಗೆ ನೀವು ಅವಕಾಶ ಕೊಟ್ಟಿದ್ದಕ್ಕೆ,

ತುಂಬಾ ಬರೆದಿಟ್ಟಿದ್ದೇನೆ, ಇನ್ನು ಮುಂದಕ್ಕೆ ನನಗೆ ಮಾತನಾಡಲು ತಾವು ಅವಕಾಶ ಕೊಡುತ್ತೀರಿ ಎಂದು ನಂಬಿ ನಾನು ನಿಮಗೆಲ್ಲರಿಗೂ ಕೃತಜ್ಞತೆ ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ತಮಗೆ ಮಾತನಾಡಲಿಕ್ಕೆ ಬೇರೆ ಸಮಯದಲ್ಲಿ ಅವಕಾಶವನ್ನು ಕೊಡುತೇನೆ.

**ಶ್ರೀ ಶಿವಕುಮಾರ್.ಕೆ(ನಾಮನಿರ್ದೇಶನ):–** ಮಾನ್ಯ ಸಭಾಪತಿಗಳೇ, ವಿರೋಧ ಪಕ್ಷದ ನಾಯಕರು ಮತ್ತೆ ಸಭಾನಾಯಕರು ಮಾತನಾಡುವ ಮೊದಲು ಒಂದು ನಿಮಿಷ ತೆಗೆದುಕೊಳ್ಳುತ್ತೇನೆ ಅಷ್ಟೇ.

**ಸಭಾಪತಿಯವರು:–** ನೀವು ಈಗಾಗಲೇ ಮಾತನಾಡಿ ಆಯಿತಲ್ಲ. ನಿಮ್ಮ ಕಡೆಯಿಂದ ಈಗಾಗಲೇ ಕ್ರಾಂತಿಕಾರಕ ಭಾಷಣವನ್ನು ಕೇಳ ಆಗಿದೆ.

**ಶ್ರೀ ಶಿವಕುಮಾರ್.ಕೆ:–** ಮಾನ್ಯ ಸಭಾಪತಿಯವರೆ, ಒಂದೇ ಒಂದು ನಿಮಿಷ. ಅವಕಾಶ ಕೊಡಿ. ನಾನು ಒಂದೇ ಒಂದು ನಿಮಿಷ. ಏಕೆಂದರೆ Devaraj Urs Chair ಎಂದು ಹೇಳ, ಮೈಸೂರು ಯೂನಿವರ್ಸಿಟಿಯಲ್ಲಿ ಒಂದು 25 ವರ್ಷದ ಹಿಂದೆ ಮಾಡಿದರು. ಒಂದು ಬಿಲ್ಡಿಂಗ್ ಕಟ್ಟಿಕೊಟ್ಟಿದ್ದಾರೆ. ನಿನ್ನೆ ಕ್ಲೀನ್ ಮಾಡಿದರಂತೆ, ಇವತ್ತು ಫಂಕ್ಷನ್ ಮಾಡಿದ್ದಾರೆ. ದಯಮಾಡಿ ಇಂತಹ inactive ಆಗಿರುವ Chair ಗಳಿಂದ ಶ್ರೀಮಾನ್ ಡಿ. ದೇವರಾಜ ಅರಸರಿಗೂ ಅವಮಾನವಾಗುತ್ತದೆ. ಅದನ್ನು ಯೂನಿವರ್ಸಿಟಿಗಳಲ್ಲಿ ವಿರೋಧ ಪಕ್ಷದ ನಾಯಕರು ಮತ್ತೆ ಸಭಾನಾಯಕರು ಅದನ್ನು ಸ್ವಲ್ಪ ಚೆನ್ನಾಗಿ ಫಂಕ್ಷನ್ ಮಾಡುವ ರೀತಿಯಲ್ಲಿ ಮಾಡಬೇಕು. ಅದು ಆಗುವುದರ ಮೂಲಕ ಶ್ರೀಮಾನ್ ದೇವರಾಜ ಅರಸ್‌ರವರ ಚೇರ್ ವಿಚಾರಗಳೆಲ್ಲ ಹೊರಗಡೆ ಬರಬೇಕು.

ಎರಡನೆಯದಾಗಿ, ನಮಗೆ ಜರ್ನಲಿಸ್ಟ್‌ಗಳಿಗೆ ಒಂದು ಮನೆ ಇರಬೇಕೆಂಬ ಒಂದು ಕಲ್ಪನೆ ಬಂದಿದ್ದು ಶ್ರೀ ದೇವರಾಜ ಅರಸರಿಗೆ ಬಂದು ಅವರುಗಳಿಗೆ ಬೆಂಗಳೂರಿನಲ್ಲಿ ಒಂದು 'Journalists' Layout' ಮಾಡಿಕೊಟ್ಟರು. ಅದನ್ನು ನಾನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳುತ್ತಿದ್ದೇನೆ. ಮತ್ತೆ, ಮಾನ್ಯ ರಾಹುಲ್ ಗಾಂಧಿಯವರ smartness ಬಗ್ಗೆ ನಮ್ಮ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟಿಯವರು ಹೇಳುತ್ತಿದ್ದರು, ಆ ಕಾಲರ್, ಇದು, ಅವರ getup, ಅವರ smartness ಎಲ್ಲಾ. ನನಗೆ ಕಂಠೀರವ ಸ್ಟೇಡಿಯಂನಲ್ಲಿ ನಾನು ಹಿಂಗೆ ಮೇಲ್ಗಡೆ ಗ್ಯಾಲರಿಯಲ್ಲಿ ಕುಳಿತಿದ್ದಾಗ ನೀವೆಲ್ಲಾ... ನೀವು ಸೇರಿ, ಶ್ರೀ ನರೇಂದ್ರಸ್ವಾಮಿ ಸೇರಿ ಇದ್ದುದು ನನಗೆ ಇನ್ನೂ ಕಣ್ಣಿಗೆ ಕಟ್ಟಿದಂತಿದೆ, ಬಂಡಾರಿ, ಬಾಲರಾಜ್ ಎಲ್ಲಾ... ರಾಹುಲ್ ಗಾಂಧಿಯವರು ನಡೆಯೋಕೆ ಬಿಡಲಿಲ್ಲ, ನೀವು ಸ್ಟೇಜ್ ಗೆ ಎತ್ಕೊಂಡು ಓಡಿಹೋಗಿದ್ದಿರಿ.

ಮಾನ್ಯ ರಾಜೀವ್ ಗಾಂಧಿಯವರು ಹೋಗಿದ್ದು, ನನಗೆ ಅದು ಇನ್ನೂ ನೆನಪು ಬರುತ್ತದೆ, ಅವರ smartness ಎಷ್ಟು ಚನ್ನಾಗಿದೆ ಅನ್ನೋದಕ್ಕೆ, ಅವತ್ತು ಅವರನ್ನು ತಗೊಂಡು ಹೋಗಿದ್ದೇ ನಿಮ್ಮ ಪುಣ್ಯ, ಹೋಗ್ಲಿ ಬಿಡಿ. ಇಷ್ಟು ಮಾತನಾಡಲು ಅವಕಾಶ ಕೊಟ್ಟ ಸಭಾಪತಿಯವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರು:-** ವಂದನೆಗಳು. ವಿರೋಧ ಪಕ್ಷದ ನಾಯಕರು ಮಾತನಾಡಬೇಕು.

**ಶ್ರೀ ಛಲವಾದಿ ಟಿ. ನಾರಾಯಣ ಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೇ, ಬಹುಶಃ ನಾನೇ ಕೊನೆ ಅಂತ ಕಾಣುತ್ತದೆ. ಅಥವಾ ಸಭಾನಾಯಕರು ಕೊನೆ ಇರಬಹುದು.

**ಸಭಾಪತಿಗಳು:-** ಅವರು ಸದನಕ್ಕೆ ಉತ್ತರ ಕೊಡಬೇಕಲ್ಲವೇ?

**ಶ್ರೀ ಛಲವಾದಿ ಟಿ. ನಾರಾಯಣ ಸ್ವಾಮಿ:-** ಇರಲಿ, ಒಳ್ಳೆಯ ವಿಷಯವನ್ನು ತಾವು ಪ್ರಸ್ತಾಪ ಮಾಡಿದ್ದಿರಿ. ನಾವೂ ಸ್ವಲ್ಪ ದಣಿದಿದ್ದೇವೆ. ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದನೆಗಳು. ನೋಡಿ, ಆದರೂ ಸಹ ಕರಕರ ಕರಕರ ಅನ್ನುತ್ತದೆ. ಮೊದಲಿನಷ್ಟಿಲ್ಲ, ಇರಲಿ ಬಿಡಿ ಪರವಾಗಿಲ್ಲ.

**ಸಭಾಪತಿಯವರು:-** ತಾವು 8-10 ಗ್ಲಾಸ್ ನೀರು ಕುಡಿದಿರುವುದನ್ನು ನಾನು ನೋಡುತ್ತಾ ಇದ್ದೆ.

**ಶ್ರೀ ಛಲವಾದಿ ಟಿ. ನಾರಾಯಣ ಸ್ವಾಮಿ:-** ಅದು ಏನಾಯಿತು ಎಂದರೆ, ಇವರು ಸ್ಲೋಗನ್ ಹಾಕುತ್ತಿದ್ದರು. ನುಂಗಿ ನೀರು ಕುಡಿದವರು ಅಂತ ನಾನು ಹೇಳುತ್ತೇನೆ. ನುಂಗಿದವರು ಬೇರೆ, ನೀರು ಕುಡಿದವರನ್ನು ನಾವು... ಇರಲಿ ಬಿಡಿ.

ಮಾನ್ಯ ಡಿ. ದೇವರಾಜ ಅರಸರವರು ಹೋಲಿಕೆ ಇಲ್ಲದ ನಾಯಕರು. ಇವತ್ತಿಗೂ ಕೂಡ ನಾವು ಯಾರನ್ನೂ ಅವರಿಗೆ ಹೋಲಿಕೆ ಮಾಡಲಿಕ್ಕೆ ಸಾಧ್ಯವಿಲ್ಲ. ಅವರ ಆಡಳಿತವನ್ನು ಅಷ್ಟೇ, ಅವರ ಕಾರ್ಯಕ್ರಮಗಳು ಇವತ್ತು ಎಲ್ಲರೂ ಕೂಡ ಸ್ಮರಿಸತಕ್ಕಂಥದ್ದೇ. ಅನೇಕರು ಅನೇಕ ರೀತಿಯಲ್ಲಿ ಅವರ ಕಾರ್ಯಗಳನ್ನು ಹೇಳಿದ್ದರಿಂದ ನಾನು ಮತ್ತೆ ಅದನ್ನು ರಿಪೀಟ್ ಮಾಡುವುದಕ್ಕೆ ಹೋಗುವುದಿಲ್ಲ. ನಾವ್ಯಾರೂ ಅವರ ಸಮಕಾಲೀನ ರಾಜಕಾರಣಿಗಳೂ ಅಲ್ಲ.

ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಸಾಹೇಬರು ಬಹುಶಃ ಅವರ ಎರಡು ವರ್ಷಗಳ ಕಾಲ ಅವರಜೊತೆ ಇದ್ದರು. ಆಗ ಅವರು, ನನಗೆ ಕೊಠಡಿಯೇ ಸಿಕ್ಕಿರಲಿಲ್ಲವೆಂದು ಇನ್ನೂ ಒಂದು ಮಾತು ಹೇಳುತ್ತಿದ್ದರು. ಕೊಠಡಿ ಸಂಖ್ಯೆ.435 ನ್ನು, ಅವರು ವಿರೋಧ ಪಕ್ಷದ ನಾಯಕರಾದ ಮೇಲೆ ಅವರಿಗೆ ಅಲಾಟ್ ಮಾಡಿಲ್ಲ, ಅಂದರೆ ಅವರು ಕೇಳಿಲ್ಲ. ಅವರ ಪಿ.ಎ.ಗಳು ಯಾರೋ ಇದ್ದವರು ಅವರ ಹೆಸರಿನಲ್ಲಿ ಬರೆಸಿಬಿಟ್ಟು ಅಲಾಟ್ ಮಾಡಿದ ಹಾಗೆ

ಮಾಡಿ ಇಟ್ಟುಬಿಟ್ಟಿದ್ದರಂತೆ. ಇವರು ಹೋಗಿ ಬೇರೆಯವರನ್ನು ಅಂದರೆ, ಶ್ರೀಸುಬ್ಬರಾವ್ ರವರನ್ನು. ಕೇಳಿಕೊಂಡರಂತೆ, ಆಗ ಇದು ಖಾಲಿ ಇದೆಯಾ, ಕೊಡ್ತೀನಿ ಅಂದರಂತೆ. ತದನಂತರ ಅವರು ಯಾರೋ ಇಲ್ಲ ಅದು ಅರಸರಿಗೆ ಅಲಾಟ್ ಆಗಿಬಿಟ್ಟಿದೆ ಎಂದು ಹೇಳಿದರಂತೆ. ಆಗ ಶ್ರೀ ಸುಬ್ಬರಾವ್ರವರಿಗೆ ಹೇಳಿದರೆ ಮತ್ತೆ ಹೇಳಿದರಂತೆ ಅವರು, ನೋಡಿ ಆ ಹುಡುಗ ಊರಿನಿಂದ first time ಎಂ.ಎಲ್.ಸಿ. ಆಗಿಬಿಟ್ಟು ಅಲ್ಲಿಂದ ಬಂದುಬಿಟ್ಟಿದ್ದಾರೆ, ಇರಲಿಕ್ಕೆ ರೂಮ್ ಇಲ್ಲ ಎಂದು ಹೇಳಿದಾಗ ಅವರು ನಾನು ರೂಮ್ ಅನ್ನು ತಗೊಂಡೇ ಇಲ್ಲವಲ್ಲಪ್ಪ ಎಂದು ಹೇಳಿದರಂತೆ. ಇಲ್ಲ ನಿಮ್ಮವರು ಯಾರೋ ತಗೊಂಡಿದ್ದಾರೆ ಎಂದು ಹೇಳಿದಾಗ , ನನಗೆ ಅದು ಬೇಡ ಅಂತ ಹೇಳಿ ಬರೆದುಕೊಟ್ಟು ಇವರಿಗೆ ಕೊಟ್ಟರಂತೆ. ಇವತ್ತಿಗೂ ಅವರು ಅದನ್ನೇ ಇಟ್ಟುಕೊಂಡೇ ಇದ್ದಾರಂತೆ. ಅಂದರೆ, ಈ ರೀತಿ ಅವರ ಸಮಕಾಲೀನರು.

ಮಾನ್ಯ ಡಿ. ದೇವರಾಜ ಅರಸರವರು ಅಧಿಕಾರದಲ್ಲಿದ್ದಾಗ ಮಾನ್ಯ ಡಿ. ದೇವರಾಜ ಅರಸರವರು ನಾವು ವಿದ್ಯಾರ್ಥಿಗಳು, ನೀವು ಕೂಡ. ವಿದ್ಯಾರ್ಥಿಗಳಾಗಿದ್ದವರು. ಆಗ ನಮಗೆ ಹೇಗಾದರೂ ಮಾಡಿ ಮಾನ್ಯ ಅರಸು ಅವರನ್ನು ಒಂದು ಸಾರಿ ನೋಡಿಬಿಡಬೇಕಲ್ಲ ಅನಿಸುತ್ತಿತ್ತು. ನಮ್ಮನ್ನು ಹೊರಗಡೆಗೆ ಬಿಡುತ್ತಿರಲಿಲ್ಲ. ನಾನು ಇಲ್ಲಿದ್ದೆ, ದೀನಸೇವಾ ಸಂಘ ಶಾಲೆಯಲ್ಲಿ ಓದುತ್ತಿದ್ದೆ. ಮೊದಲು ಈ ವಿಧಾನಸೌಧಕ್ಕೂ ಕಾಂಪೌಂಡ್ ಇರಲಿಲ್ಲ, ಎಲ್.ಹೆಚ್.ಗೂ ಕಾಂಪೌಂಡ್ ಇರಲಿಲ್ಲ. ಮುಂಭಾಗದಲ್ಲಿ ಕಾಂಪೌಂಡ್ ಮಾತ್ರ ಇತ್ತು, ಹಿಂದುಗಡೆಗೆ ಇರಲಿಲ್ಲ. ಅವರು ಅಧಿಕಾರದಲ್ಲಿ ಇದ್ದಂತಹ ಸಮಯದಲ್ಲಿ ನಾವುಗಳು ಆ ಕಲ್ಲುಗಳ ಮೇಲೆ ಕುಳಿತುಕೊಂಡು ಆಟವಾಡಿ ಹೋಗುತ್ತಿದ್ದೆವು. ಆಗ ಬಸ್ಸುಗಳು ಇಲ್ಲೇ ಪಕ್ಕದ ರಸ್ತೆಯಲ್ಲಿಯೇ ಓಡಾಡುತ್ತಿದ್ದವು, ಆಗ ಬರುತ್ತಿದ್ದೆವು. ಆಗ ಇರುವಾಗ ಅವರ ಆಡಳಿತ ಅಷ್ಟೊಂದು ಚೆನ್ನಾಗಿದ್ದು ಜನರು ಹೊಗಳುತ್ತಿದ್ದರು. ಹೇಗಾದರೂ ಮಾಡಿ ಇವರನ್ನು ಒಂದು ಬಾರಿ ನೋಡಬೇಕೆನಿಸುತ್ತಿತ್ತು. ನಾವು ಆಗ ಇಲ್ಲಿಗೆ ಬಂದಾಗ ಇದೇ ಶ್ರೀ ಬಿ.ಕೆ. ಹರಿಪ್ರಸಾದ್ರವರು ಮತ್ತು ಶ್ರೀ ಆಂಜನಪ್ಪ ಎನ್ನುವವರು ಸಹ ಇದ್ದರು. ಜೊತೆಗೆ ಶ್ರೀ ನಟರಾಜುರವರು ಸೇರಿದಂತೆ ಇಂತಹವರೆಲ್ಲರೂ ಅಲ್ಲಿಯೇ ತುಂಬಿಕೊಂಡು ಇರುತ್ತಿದ್ದರು. ನಾವು ಆಗ ವಿದ್ಯಾರ್ಥಿಗಳು. ಇಲ್ಲಿಗೆ ಬಂದು ಅವರನ್ನು ಹೇಗಾದರೂ ಮಾಡಿ ನೋಡಬೇಕೆಂದು ಹೇಳಿ ಹಿಂದಿನಿಂದ ಇಣುಕಿ ಇಣುಕಿ ನೋಡುತ್ತಿದ್ದೆವು. ಅಂತಹ ಒಂದು ವ್ಯಕ್ತಿತ್ವ ಅವರದ್ದಾಗಿತ್ತು. ಅವರು ಅಜಾನುಬಾಹು ದೇಹ ಅವರದ್ದಾಗಿತ್ತು. ಅವರು ಅಷ್ಟೊಂದು ಚೆನ್ನಾಗಿದ್ದರು. ಅವರನ್ನು ನೋಡಲಿಕ್ಕೆ ಖುಷಿಯಾಗುತ್ತಿತ್ತು. ಆದರೆ, ಅವರನ್ನು ಹತ್ತಿರದಿಂದ ನೋಡಲಿಕ್ಕೆ ಆಗುತ್ತಿರಲಿಲ್ಲ. ಕೊನೆಯಲ್ಲಿ ಅವರು ಅಧಿಕಾರವನ್ನು ಕಳೆದುಕೊಂಡ ಮೇಲೆ ಅವರ ಹತ್ತಿರ ಹೋಗಿ ಒಂದು ಬಾರಿ ಮಾತನಾಡಿಸಿದೆ. ಅದು ಯಾವಾಗ ಎಂದರೆ, ನೋಡಿ, ಅಧಿಕಾರದಲ್ಲಿದ್ದಾಗ ಯಾರು ಹತ್ತಿರ ಹೋಗಲಿಕ್ಕೆ ಬಿಡುವುದಿಲ್ಲ. ಈಗಲೂ ಅಷ್ಟೇ. ಅಧಿಕಾರದಲ್ಲಿದ್ದಾಗ ಎಲ್ಲರೂ ನೆಂಟರೇ. ಆಮೇಲೆ ಅವರನ್ನು ನಾನು ನೋಡಿದೆ. ಅಧಿಕಾರದಲ್ಲಿದ್ದಾಗ ಯಾರೂ ಬಿಡ್ತಾ ಇರಲಿಲ್ಲ. ಹೇಗಾದರು ಮಾಡಿ ಭೇಟಿ ಮಾಡಬೇಕೆಂದರೂ ಅದು ಅಗುತ್ತಿರಲಿಲ್ಲ. ಕಾಂಗ್ರೆಸ್ ಬಿಟ್ರು. ಅವರೇ ಒಂದು ಪಕ್ಷ ಕಟ್ಟಿದ್ರು. ಅದು ಆಗ ಎಲ್ಲಿತ್ತು ಎಂದರೆ, ಸುಭಾಷ್ ನಗರ ಬಸ್ ಸ್ಟಾಪ್ ಪಕ್ಕದಲ್ಲಿ ಇತ್ತು. ಅಂದರೆ, ಈ ಕಡೆ ಕೊನೆಯಲ್ಲಿ ಈಗ ಬಸ್ ಸ್ಟಾಪ್

ಆಗಿ ಹೋಗಿದೆ. ಆಗ ಖಾಲಿ ಇತ್ತು. ಅಲ್ಲಿ ಆಫೀಸ್ ಮಾಡಿಕೊಂಡು ಕುಳಿತಿದ್ರು. ಹೋಗಿ ನೋಡಿದ್ರೆ ಒಬ್ಬರೇ ಕುಳಿತಿದ್ದಾರೆ. ಎಲ್ಲಿ ಹೋದ್ರಪ್ಪ ನೆಂಟರೆಲ್ಲ ಅಂದುಕೊಂಡೆ. ಅಂದು ನಾನು ಅವರನ್ನ ನೇರವಾಗಿ ಭೇಟಿ ಮಾಡಿದ್ದಾಗಿತ್ತು. ಆಮೇಲೆ ಯಾವತ್ತೂ ನಾವು ಭೇಟಿ ಮಾಡಲಿಲ್ಲ. ಅದು ಏನೇ ಇರಲಿ, ಆದ್ರೆ ಅವರ ನಡವಳಿಕೆ ಹೇಗಿತ್ತು ಎಂದು ನೋಡಬೇಕಾಗಿತ್ತು. ನಾನು ಎಲ್ಲಾ ವಿಷಯಗಳನ್ನು ಹೇಳೋಕೆ ಹೋಗೋದಿಲ್ಲ.

(ಮುಂದು)

(808) 20.08.2026 07.00 ಎಸ್‌ವಿ-ಎಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ಮುಂದು):-**

ಒಂದು ಸಾರಿ ಅವರು ನನಗೆ ಒಂದು ಮಾತನ್ನು ಹೇಳಿದರು. ಶಿವಲಿಂಗಯ್ಯ ಮತ್ತು ನಂಜುಂಡಸ್ವಾಮಿ ಇವರೆಲ್ಲಾ ಚೀಫ್ ಇಂಜಿನಿಯರ್ಸ್ ಆಗಿದ್ದವರು, ಈಗ ತೀರಿಕೊಂಡಿದ್ದಾರೆ. ಅವರಿಗೆ ಅದೇನು ಅನಿಸಿತೋ ಗೊತ್ತಿಲ್ಲ. ಎಲ್ಲರೂ ಅಧಿಕಾರಕ್ಕೆ ಬರುತ್ತಾರೆ, ಎಲ್ಲರೂ ಮಂತ್ರಿಗಳಾಗುತ್ತಾರೆ, ಎಂ.ಎಲ್.ಎ.ಗಳಾಗುತ್ತಾರೆ, ನಾವು ಏಕೆ ಆಗಬಾರದು? ಎಂದು ಇವರಿಬ್ಬರು ಬಸವಲಿಂಗಪ್ಪನವರ ಬಳಿ ಹೋಗಿ ಟಿಕೆಟ್ ಕೇಳಿದ್ದಾರೆ. ಬಸವಲಿಂಗಪ್ಪನವರು ಇವರಿಬ್ಬರೂ ನಮ್ಮವರೇ, ಹೇಗೆ ನಾನು ಇವರಿಗೆ ಟಿಕೆಟ್ ಕೊಡುವುದು ಬೇಡ ಎಂದು ಹೇಳುವುದು ಎಂದು ಹೇಳಿ ಒಂದು ಕೆಲಸ ಮಾಡೋಣ, ಸಾಹೇಬರು ಅಲ್ಲಿ ಇರುತ್ತಾರೆ, ಹೋಗೋಣ ಬನ್ನಿ ಎಂದು ಕರೆದುಕೊಂಡು ಹೋದರಂತೆ. ಅವರ ಬಳಿ ಹೋಗಿ, ನೋಡಿ ಇವರಿಬ್ಬರೂ ನಮ್ಮವರು ಇಂಜಿನಿಯರ್‌ಗಳು ಏನೋ ಖ್ವಾಯಿಷ್ ಪಡುತ್ತಿದ್ದಾರೆ, ಆಸೆ ಪಡುತ್ತಿದ್ದಾರೆ. ಹೇಗಾದರೂ ಮಾಡಿ ಎಂ.ಎಲ್.ಎ. ಆಗಬೇಕೆಂದು ಬಂದಿದ್ದಾರೆ ಟಿಕೆಟ್ ಬೇಕಂತೆ ಎಂದು ಹೇಳಿದರು. ಹೌದೇನಪ್ಪಾ, ಬನ್ನಿ ಕುಳಿತುಕೊಳ್ಳಿ ಎಂದು ಕೂರಿಸಿದರಂತೆ. ಕೂರಿಸಿಬಿಟ್ಟು, ಏನಾಗಿದ್ದೀಯಪ್ಪ ಎಂದು ಕೇಳಿದರು. ನಾನು ಇಂಜಿನಿಯರ್. ನೀನಾಗಿದ್ದೀಯಪ್ಪ? ನಾನು ಇಂಜಿನಿಯರ್ ಸರ್. ಹೌದಾ? ನಿಮ್ಮ ಸಮುದಾಯದಲ್ಲಿ ಎಷ್ಟು ಜನ ಇಂಜಿನಿಯರ್‌ಗಳಿದ್ದಾರೆ ಎಂದು ಕೇಳಿದರು. ಹೆಚ್ಚು ಕಡಿಮೆ ಅವರೇ ಮೂಲ. ಅದಾದ ಮೇಲೆ ಈಗ ಬಹಳಷ್ಟು ಜನ ಇರಬಹುದು. ಅಲ್ರಪ್ಪಾ, ನೀವು ರಿಸರ್ವೇಷನ್ ತೆಗೆದುಕೊಂಡು ಸರ್ಕಾರದ ಕೋಟಾದಲ್ಲಿ ಓದಿದ್ದೀರಿ. ಇಂಜಿನಿಯರ್ ಆಗುವುದು ಇಷ್ಟು ಕಷ್ಟ. ನೀವಿಬ್ಬರೂ ಇಂಜಿನಿಯರ್ ಆಗಿ ಬಂದಿದ್ದೀರಿ. ಅಲ್ರೀ.. ಚಪ್ರಾಸಿಗಳು ಬಂದು ಎಂ.ಎಲ್.ಎ. ಆಗುವ ಕಾಲ ಬಂದಿದೆ ಈಗ.. ನೀವು ಇಂಜಿನಿಯರ್‌ಗಳಾಗಿ ಒಳ್ಳೆಯ ಕೆಲಸ ಮಾಡಿ ಸಮುದಾಯ ಕಟ್ಟಬೇಕು ಎನ್ನುವುದನ್ನು ಬಿಟ್ಟು ಇದಕ್ಕೆ ಬಂದಿದ್ದೀರಾ, ಎಲ್ಲಿಗೆ ಬೇಕೋ ಟ್ರಾನ್ಸ್‌ಫರ್ ಕೇಳಿರಿ, ಇಲ್ಲ ಏನು ಬೇಕೋ ಕೇಳಿರಿ, ಅದನ್ನು ನಾನು ಮಾಡಿಕೊಡುತ್ತೇನೆ. ಟಿಕೆಟ್ ಮಾತ್ರ ಕೊಡುವುದಿಲ್ಲ. ಬಸವಲಿಂಗಪ್ಪ, ಕರೆದುಕೊಂಡು ಹೋಗಿ ಇವರನ್ನು ಎಂದು ಹೇಳಿಬಿಟ್ಟರು. ಅಂದರೆ ಯಾರು ಎಲ್ಲಿ ಕೆಲಸ ಮಾಡಬೇಕೆಂಬುದು ಅವರ ಮನದ ಇಂಗಿತವಾಗಿತ್ತು.

ಮಾನ್ಯ ಎಸ್. ರವಿಯವರು ಆಗಲೇ ಒಂದು ಮಾತನ್ನು ಹೇಳಿದರು. ಬಹಳ ಖುಷಿಯಾಯಿತು. ಈಗ ಮಂತ್ರಿಯಾದರೆ ಅಥವಾ ಮುಖ್ಯಮಂತ್ರಿಯಾದರೆ ಮೂರು-ನಾಲ್ಕು ತಲೆಮಾರಿಗಾಗುವಷ್ಟು ಸಂಪಾದನೆ ಮಾಡಿಕೊಂಡು ಬಿಡುತ್ತಾರೆ. ಇದನ್ನು ಸ್ವಲ್ಪ ಯೋಚನೆ ಮಾಡಬೇಕು. ಜನಪ್ರತಿನಿಧಿಗಳಾಗಿ ನಾವು ಬರುವುದು ಹಣ, ಆಸ್ತಿ ಮಾಡುವುದಕ್ಕಲ್ಲ. ಇನ್ನೊಂದು ಘಟನೆಯನ್ನೂ ನಾನು ಹೇಳುತ್ತೇನೆ. ತಮಗೆ ಗೊತ್ತಿರುತ್ತದೆ. ಗುತ್ತೇದಾರ್ ಕುಟುಂಬದ ವೆಂಕಯ್ಯ ಗುತ್ತೇದಾರ್ ಎಂಬುವವರು ದೊಡ್ಡ ಗುತ್ತಿಗೆದಾರರು. ಕಂಟ್ರಾಕ್ಟರ್ ಆಗಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೆ ಮತ್ತು ದಿವಂಗತ ಧರಂ ಸಿಂಗ್ ಅವರಿಗೆ ಚುನಾವಣೆಗೆ ಸಪೋರ್ಟ್ ಮಾಡುವುದು, ದುಡ್ಡು ಕಾಸು ಕೊಡುವುದು ಇದನ್ನೆಲ್ಲಾ ಮಾಡುತ್ತಿದ್ದರಂತೆ. ನನಗೆ ಇದನ್ನು ಹೇಳಿದ್ದು ದಿವಂಗತ ಧರಂ ಸಿಂಗ್ ಅವರೇ. ಆ ಸಂದರ್ಭದಲ್ಲಿ ಅವರಿಗೆ ಏನು ಗೊತ್ತಾಯಿತೋ ಗೊತ್ತಿಲ್ಲ, ಮಾನ್ಯ ಖರ್ಗೆ ಅವರು ಮತ್ತು ಧರಂ ಸಿಂಗ್ ಅವರೂ ಮಾತನಾಡಿಕೊಂಡರಂತೆ. ವೆಂಕಯ್ಯ ಗುತ್ತೇದಾರ್ ಅವರನ್ನು ಹೇಗಾದರೂ ಮಾಡಿ ಶಾಸಕರಾಗಿ ಮಾಡಬೇಕೆಂದು ಹೇಳಿ, ಹೋಗಿ ಅರಸು ಅವರನ್ನು ಕೇಳೋಣ ಎಂದು ಕರೆದುಕೊಂಡು ಬಂದರಂತೆ. ಇದೇ ಬಾಲಬ್ರೂಯಿನಲ್ಲಿ ಅರಸು ಅವರು ಇದ್ದರು. ಅದೇ ಅವರ ಮನೆಯಾಗಿತ್ತು. ಅರಸು ಅವರು ಬಂದು "ಏನಯ್ಯಾ ಎಷ್ಟು ಹೊತ್ತಿನಿಂದ ನಿಂತಿದ್ದೀರಾ, ಏನು ಸಮಾಚಾರ" ಎಂದು ಕೇಳಿದರಂತೆ. ಒಂದು ನಿಮಿಷ ಮಾತನಾಡಬೇಕು ಎಂದು ಕೇಳಿದ್ದಕ್ಕೆ ಕುಳಿತುಕೊಳ್ಳಿ ರೂಮ್‌ನಲ್ಲಿ ಎಂದು ಹೇಳಿ ಯಾರನ್ನೋ ಕಳುಹಿಸಿ ಒಳಗೆ ಬಂದರಂತೆ. ಬಂದ ತಕ್ಷಣವೇ ಇವರಿಬ್ಬರೂ ಎದ್ದು ನಿಂತು "ನಮ್ಮ ವೆಂಕಯ್ಯ ಗುತ್ತೇದಾರ್ ತುಂಬ ಒಳ್ಳೆಯವರು. ನಮಗಿಬ್ಬರಿಗೂ ಚುನಾವಣೆಗೆ ಸಹಾಯ ಮಾಡುವುದೇ ಅವರು. ದಯವಿಟ್ಟು ಏನಾದರೂ ಮಾಡಿ ಅವರನ್ನು ಎಂ.ಎಲ್.ಸಿ. ಮಾಡಬೇಕು" ಎಂದು ಹೇಳಿದರು. ಅಷ್ಟೇನಾ... ಟೀ ಕುಡಿದ್ರಾ? ಆಯಿತು. ಗುತ್ತೇದಾರರೇ, ಒಂದು ನಿಮಿಷ ಹೊರಗಡೆ ಇರಿ ಎಂದು ಕಳುಹಿಸಿಬಿಟ್ಟರಂತೆ. ಇವರಿಬ್ಬರನ್ನೇ ಕೂರಿಸಿಕೊಂಡು ಏನಪ್ಪಾ ನಿಮಗೆ ಏನೇನು ಸಹಾಯ ಮಾಡುತ್ತಾರೆ ಅವರು ಎಂದು ಕೇಳಿದರು. ನಮಗೆ ಚುನಾವಣೆಯ ಸಮಯದಲ್ಲಿ ಹಣ ಕೊಡುತ್ತಾರೆ ಎಂದು ಇವರು ಹೇಳಿದರು. ಏಕೆ ಮಾಡುತ್ತಾರೆ ಹೇಳಿ. ನೀವು ಅವರಿಗೆ ಕೆಲಸ ಕೊಡುತ್ತೀರಿ. ಅವರು ಕಂಟ್ರಾಕ್ಟರ್ ಕೆಲಸ ಮಾಡುತ್ತಾರೆ. ಅವರ ಕೆಲಸ ಅವರೇ ಮಾಡಬೇಕು. ಯಾವತ್ತೂ ತಿಳಿದುಕೊಳ್ಳಿ. ನಿಮಗೆ ಸಹಾಯ ಮಾಡುತ್ತಾರೆ ಎನ್ನುವ ಕಾರಣಕ್ಕೆ ನೀವೇ ಎಂ.ಎಲ್.ಸಿ. ನೋ ಎಂ.ಎಲ್.ಎ. ನೋ ಮಾಡಿಬಿಟ್ಟರೆ ಆಮೇಲೆ ನಿಮಗೆ ಯಾರು ಕೊಡುತ್ತಾರೆ? ಅವರ ಕೆಲಸ ಅವರೇ ಮಾಡಬೇಕು. ನೀವು ಎಂ.ಎಲ್.ಎ., ಮಂತ್ರಿ ಆದರೆ ನಿಮ್ಮ ಕೆಲಸ ನೀವೇ ಮಾಡಬೇಕು. ಯಾವತ್ತೂ ಕೂಡ ವ್ಯಾಪಾರಿಯನ್ನು ರಾಜಕಾರಣಕ್ಕೆ ಬಿಡಬಾರದು. ರಾಜಕಾರಣಿಯನ್ನು ವ್ಯಾಪಾರ ಮಾಡುವುದಕ್ಕೆ ಬಿಡಬಾರದು. ಇವೆಲ್ಲವನ್ನೂ ನೀವು ಕಲಿತುಕೊಳ್ಳಬೇಕು. ನಾನು ಮತ್ತೆ ಮಾತನಾಡುತ್ತೇನೆ ಎಂದು ಏನಾದರೂ ಹೇಳಿ ಅವರನ್ನು ಕಳುಹಿಸಿ. ಈಗ ನೀವು ಹೋಗಿ ಎಂದು ಹೇಳಿದರು. ಈಗ ಈ ರೀತಿಯ ನಾಯಕತ್ವ ಇದೆಯೇ? ಇವತ್ತು ನೋಡಿ. ಎಲ್ಲಾ ಬರೀ ರಿಯಲ್ ಎಸ್ಟೇಟ್. ಏನಕ್ಕಪ್ಪಾ ರಾಜಕಾರಣ. ಏನಕ್ಕೆ ಎಂ.ಎಲ್.ಎ.

ಆಗಬೇಕು ಎಂದರೆ ರಿಯಲ್ ಎಸ್ಟೇಟ್ ಮಾಡುವುದಕ್ಕೆ. ಎಲ್ಲಾ ರಿಯಲ್ ಎಸ್ಟೇಟ್ ಆಫೀಸ್‌ಗಳು, ವ್ಯಾಪಾರಗಳು, ವ್ಯವಹಾರಗಳು. ಅದಕ್ಕೂ ಇದಕ್ಕೂ ವ್ಯತ್ಯಾಸ ಅಷ್ಟೇ.

ಮಾನ್ಯ ರವಿಯವರು ಹೇಳಿದ್ದಕ್ಕೆ ನಾನು ಇದನ್ನು ಹೇಳಿದೆ. ರಾಜಕಾರಣ ಮಾಡುವವರೂ ಉಳಿದುಕೊಳ್ಳಬೇಕು. ಕಾಲ ಬದಲಾಗಿದೆ, ಇಲ್ಲವೆಂದು ನಾನು ಹೇಳುವುದಿಲ್ಲ. ಆ ಕಾಲದಿಂದಲೂ ಇದೇ ರೀತಿ ನಡೆದುಕೊಂಡು ಬಂದವರು. ಅವರ ನಾಯಕತ್ವವಾಗಲೀ, ಅವರ ಅಧಿಕಾರಾವಧಿಯಲ್ಲಿ ಮಾಡಿದಂಥ ಕಾರ್ಯಕ್ರಮವಾಗಲೀ ಯಾರಿಗೂ ಕೂಡ ಸರಿಸಾಟಿಯಲ್ಲ. ಅಷ್ಟು ಉತ್ತಮವಾಗಿ ನಡೆದುಕೊಂಡು ಬಂದವರು. ನಾನು ಒಂದು ಮಾತನ್ನು ನೆನಪಿಸಿಕೊಳ್ಳುವುದಕ್ಕೆ ಬಯಸುತ್ತೇನೆ. ಇಷ್ಟೆಲ್ಲಾ ಮಾಡಿದ್ದರೂ ಕೂಡ ಅವರಿಗೆ ಗೌರವ ಕೊಟ್ಟಿಲ್ಲ. ಅವರ ಪ್ರತಿಮೆಯನ್ನು ಮಾಡಿದ್ದು ಮಾನ್ಯ ಯಡಿಯೂರಪ್ಪನವರು. ಇವತ್ತು ಇಲ್ಲಿ ಪ್ರತಿಮೆ ನಿಂತಿದೆ ಎಂದರೆ ಅದು ಮಾನ್ಯ ಯಡಿಯೂರಪ್ಪನವರ ಕೊಡುಗೆ. ಇದನ್ನು ನಾವು ನೆನಪಿಸಿಕೊಳ್ಳಬೇಕು. ಅದಕ್ಕೆ ನಾನು ಹೇಳುವುದು, ಯಾರೋ ಒಬ್ಬರು ಮಾಡಬೇಕಾಗಿತ್ತು. ಮಾಡಿದ್ದಾರೆ. ಆದರೆ ಈಗ ಮಾನ್ಯ ರವಿಕುಮಾರ್ ಅವರು ಅರಸು ಅವರ Photo Exhibition ಮಾಡಬೇಕೆಂದು ಹೇಳಿದ್ದಾರೆ. ತಮ್ಮ ಮೂಲಕ ನಾನು ಸರ್ಕಾರಕ್ಕೆ ಮನವಿ ಮಾಡುತ್ತೇನೆ. ಇಂಥ ಒಂದು ಉತ್ತಮ ಕಾರ್ಯವನ್ನು ಮಾಡಲಿಕ್ಕೆ ತಾವು ಕೂಡ ಸಹಕಾರ ಕೊಡಬೇಕು. ಇದು ಯಾವತ್ತೂ ಕೂಡ ನೆನಪಿಸಿಕೊಳ್ಳುವಂಥದ್ದು. ನೋಡಿ, ಅವರು ನಮ್ಮನ್ನು ಅಗಲಿ ಬಹುಕಾಲವಾದರೂ ಇವತ್ತು ಏಕೆ ಅವರನ್ನು ನೆನಪಿಸಿಕೊಳ್ಳುತ್ತೇವೆ. ಅವರು ಕೊಡುಗೆ ಕೊಟ್ಟಿರುವುದನ್ನು ನೆನಪಿಸುತ್ತೇವೆ. ಆ ಕಾರಣಕ್ಕೆ ಅದೇನಾದರೂ ಇಲ್ಲದೆ ಹೋದರೆ ಇಂದಿನ ಪೀಳಿಗೆ ಅದನ್ನು ಮರೆತೇ ಹೋಗಿಬಿಡುತ್ತಾರೆ. ಆ ಕಾರಣಕ್ಕಾಗಿ ಅದನ್ನು ನೆನಪಿಸುವುದಕ್ಕಾದರೂ ಈ ಕಾರ್ಯಕ್ರಮವನ್ನು ನಾವು ಮಾಡಬೇಕು.

ಮಾನ್ಯ ಸಭಾಪತಿಯವರೆ, ತಾವು ಕೊಟ್ಟ ಅವಕಾಶಕ್ಕೆ ವಂದಿಸಿ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ. ಧನ್ಯವಾದಗಳು.

**ಡಾ: ಯತೀಂದ್ರ ಎಸ್. (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಇವತ್ತು ಶ್ರೀ ಡಿ. ದೇವರಾಜ ಅರಸು ಅವರ ಜನ್ಮದಿನದ ಪ್ರಯುಕ್ತ ನಮ್ಮ ವಿಧಾನ ಪರಿಷತ್ತಿನಲ್ಲಿ ದೇವರಾಜ ಅರಸು ಅವರಿಗೆ ನುಡಿನಮನ ಸಲ್ಲಿಸುವುದಕ್ಕೆ ಈ ಒಂದು ವಿಷಯವನ್ನು ಚರ್ಚೆಗೆ ತಂದಿರುವುದು ಬಹಳ ಸಂತೋಷವಾದ ವಿಚಾರ. ನಮ್ಮ ಪ್ರತಿಪಕ್ಷದವರೂ ಕೂಡ ಇಷ್ಟು ದಿನಗಳು ಪರಿಷತ್ತಿನಲ್ಲಿ ಗದ್ದಲ ಮಾಡುತ್ತಾ, ಪರಿಷತ್ತಿನ ಕಾರ್ಯಕಲಾಪಗಳಿಗೆ ಅಡ್ಡಿ ಮಾಡುತ್ತಿದ್ದರು. ಆದರೆ ಈ ಒಂದು ಸಂದರ್ಭದಲ್ಲಿ ದೇವರಾಜ ಅರಸು ಅವರ ಗೌರವಾರ್ಥವಾಗಿ ಅವರೂ ಕೂಡ ನುಡಿ ನಮನ ಸಲ್ಲಿಸುವುದರಲ್ಲಿ ಭಾಗವಹಿಸಿದ್ದಾರೆ. ಬಹಳಷ್ಟು ಜನ ಭಾಗವಹಿಸಿದ್ದಾರೆ. ಅವರಿಗೂ ಕೂಡ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಡಿ. ದೇವರಾಜ ಅರಸು ಅವರು ಸಾಮಾಜಿಕ ನ್ಯಾಯದ ದೊಡ್ಡ ಹರಿಕಾರರು. ಸಮಾಜದಲ್ಲಿ ಆಮೂಲಾಗ್ರವಾದ ಬದಲಾವಣೆಯನ್ನು ತಂದವರು. ಅಂತಹ ಒಬ್ಬ ನಾಯಕರ ಬಗ್ಗೆ ಮಾತನಾಡುವ ಯೋಗ್ಯತೆ

ಅಥವಾ ಅರ್ಹತೆ ನನಗಿಲ್ಲ ಎಂದು ಭಾವಿಸುತ್ತೇನೆ. ಆದರೆ ಹಿಂದುಳಿದ ವರ್ಗದ ಒಬ್ಬ ಶಾಸಕನಾಗಿ ನಾನು ಇಲ್ಲಿ ನಿಂತಿದ್ದೇನೆ. ಇವತ್ತು ನಮ್ಮ ಹಿಂದುಳಿದ ವರ್ಗದವರು, ರೈತರು, ಅಲ್ಪಸಂಖ್ಯಾತರು, ಕಾರ್ಮಿಕರು ಹೀಗೆ ಎಲ್ಲಾ ಶೋಷಿತ ವರ್ಗದವರಲ್ಲಿ ರಾಜಕೀಯ ಪ್ರಜ್ಞೆಯನ್ನು ಬೆಳೆಸಿದ ಕಾರಣದಿಂದ ನಾನು ಇಲ್ಲಿ ನಿಂತಿದ್ದೇನೆ. ಅವರ ಬಗ್ಗೆ ಎರಡು ನುಡಿಗಳನ್ನಾಡುವ ಮೂಲಕ ನಮನ ಸಲ್ಲಿಸುವುದು ನನ್ನ ಕರ್ತವ್ಯ. ಅದಕ್ಕಾಗಿ ಈ ಒಂದು ಪ್ರಯತ್ನ ಮಾಡುತ್ತೇನೆ.

ಇವತ್ತು ನಮ್ಮ ಕರ್ನಾಟಕ ರಾಜಕೀಯ ಇತಿಹಾಸದಲ್ಲಿ ಯಾವುದಾದರೂ ಒಂದು ಅಧ್ಯಾಯವನ್ನು ಸುವರ್ಣಾಕ್ಷರದಲ್ಲಿ ಬರೆಯಬೇಕೆಂದರೆ ಅದು ಶ್ರೀ ಡಿ.ದೇವರಾಜ ಅರಸು ಅವರು ಮುಖ್ಯಮಂತ್ರಿಗಳಾಗಿದ್ದಾಗಿನ ಅವಧಿ. ಏಕೆಂದರೆ ಬೇಕಾದಷ್ಟು ಜನ ಮುಖ್ಯಮಂತ್ರಿಗಳು ಬಂದಿದ್ದಾರೆ. ಎಲ್ಲರೂ ಕೂಡ ಒಳ್ಳೆಯ ಕಾರ್ಯಕ್ರಮಗಳನ್ನು ನೀಡುವ ಮೂಲಕ ರಾಜ್ಯದ ಅಭಿವೃದ್ಧಿ ಮಾಡಿದ್ದಾರೆ. ಆದರೆ ಶಾಶ್ವತವಾಗಿ ಸಮಾಜದಲ್ಲಿ ಪರಿವರ್ತನೆ ತಂದವರು, ದನಿಯಿಲ್ಲದವರಿಗೆ ದನಿಯಾಗಿ, ಕೇವಲ ಅವರ ತಲೆಮಾರು ಮಾತ್ರವಲ್ಲ, ಮುಂದಿನ ಪೀಳಿಗೆ ಕೂಡ ಅದರ ಫಲವನ್ನು ಅನುಭವಿಸುವಂತಹ ಕಾರ್ಯಕ್ರಮಗಳನ್ನು ತಂದವರು ಶ್ರೀ ಡಿ. ದೇವರಾಜ ಅರಸು ಅವರು. ಈಗಾಗಲೇ ಹೇಳಿದ ಹಾಗೆ ಅವರು ಬಹಳಷ್ಟು ಕ್ರಾಂತಿಕಾರಿ ಕಾರ್ಯಕ್ರಮಗಳನ್ನು ತಂದಿದ್ದಾರೆ.

ಅದರಲ್ಲಿ ಮುಖ್ಯವಾದುದು ಭೂ ಸುಧಾರಣಾ ಕಾಯಿದೆ. ಸಣ್ಣ ಸಣ್ಣ ರೈತರು ತಲತಲಾಂತರಗಳಿಂದ ಜಮೀನ್ದಾರರ ಒಂದು ಭೂಮಿಯಲ್ಲಿ ಬಾಡಿಗೆ ಪಡೆದುಕೊಂಡು ಅಥವಾ ದೇಣಿಗೆ ಪಡೆದುಕೊಂಡು ಕೂಲಿ ಮಾಡುತ್ತಿದ್ದರು. ಅವರು ಅಷ್ಟು ವರ್ಷಗಳಿಂದ ಭೂಮಿಯನ್ನು ಉಳ್ಳುತ್ತಿದ್ದರೂ ಕೂಡ ಅವರಿಗೆ ಭೂಮಾಲೀಕತ್ವ ಪಡೆಯುವ ಅವಕಾಶವೇ ಇರುತ್ತಿರಲಿಲ್ಲ. ಆದರೆ ಶ್ರೀ ಡಿ. ದೇವರಾಜ ಅರಸು ಅವರು ರಾತ್ರೋರಾತ್ರಿ ಭೂಸುಧಾರಣೆ ಕಾಯಿದೆಯನ್ನು ತಂದು, ಯಾರು ಭೂಮಿ ಉಳುತ್ತಿರುತ್ತಾರೆಯೋ ಅವರನ್ನೇ ಭೂಮಾಲೀಕರೆಂದು ಮಾಡಿದರು. ಅಂಥ ಒಂದು ಕ್ರಾಂತಿಕಾರಕ ಬದಲಾವಣೆಯನ್ನು ತಂದರು. ಕೇವಲ ಆ ತಲೆಮಾರಿನ ರೈತರು ಮಾತ್ರ ಅನುಕೂಲ ಪಡೆದುಕೊಳ್ಳಲಿಲ್ಲ. ನಂತರದ ಎಲ್ಲಾ ಪೀಳಿಗೆಗಳವರು ಅದರ ಫಲಾನುಭವಿಗಳಾದರು. ಏಕೆಂದರೆ ಆ ಭೂಮಿ ಆಧಾರದಿಂದ ರೈತರು ಬದುಕನ್ನು ಕಟ್ಟಿಕೊಂಡರು. ಅವರ ಮಕ್ಕಳಿಗೆ ಶಿಕ್ಷಣ ಕೊಟ್ಟರು. ಅವರ ಮಕ್ಕಳು ವಿದ್ಯಾವಂತರಾದರು. ಅದರಿಂದಾಗಿ ಮುಂದಿನ ಪೀಳಿಗೆಯ ಎಲ್ಲಾ ಮಕ್ಕಳೂ ಮುಖ್ಯ ವಾಹಿನಿಗೆ ಬರುವುದಕ್ಕೆ ಸಾಧ್ಯವಾಯಿತು.

ಅವರು ಹಿಂದುಳಿದ ವರ್ಗದವರಿಗೆ ಮಾಡಿದ ದೊಡ್ಡ ಉಪಕಾರವೇನೆಂದರೆ ಎಲ್. ಜಿ. ಹಾವನೂರು ಆಯೋಗದ ವರದಿಯನ್ನು ಜಾರಿಗೆ ತಂದದ್ದು. 1972ರಲ್ಲಿ ಎಲ್. ಜಿ. ಹಾವನೂರು ಆಯೋಗವನ್ನು ರಚನೆ ಮಾಡಿದರು.

**(ಮುಂದು)**

(೮೦೯) 20-08-2026 (7.10) ಕೆಜಿ-ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

**ಡಾ॥ ಯತೀಂದ್ರ ಎಸ್ (ಮುಂದು):-**

ನಂತರ 1977 ರಲ್ಲಿ ಶ್ರೀ ಎಲ್.ಜಿ.ಹಾವನೂರು ರವರು ಆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದರು. ಮಾನ್ಯ ಡಿ.ದೇವರಾಜ ಅರಸುರವರು ಅದನ್ನು ಜಾರಿಗೆ ತಂದರು. ಅದನ್ನು ಜಾರಿಗೆ ತಂದು ಹಿಂದುಳಿದವರಿಗೂ ಸಹ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿಯನ್ನು ತಂದರು. ನಂತರ ಇಡೀ ದೇಶದಲ್ಲಿ ಹಿಂದುಳಿದವರಿಗೆ Mandal Commission ಮೂಲಕ ಮತ್ತೆ ಮೀಸಲಾತಿ ಸಿಕ್ಕಿತ್ತು. ಆ ಒಂದು Mandal Commission ಬರುವುದಕ್ಕೆ ಸ್ಫೂರ್ತಿ ಮತ್ತು ನಾಂದಿ ಎಂದರೆ, ಶ್ರೀ ಎಲ್.ಜಿ.ಹಾವನೂರುರವರ ವರದಿಯಾಗಿದೆ. ಹಾಗಾಗಿ, ಇಡೀ ದೇಶದ ಹಿಂದುಳಿದ ವರ್ಗದವರು ಕೂಡ ಅವರಿಗೆ ಈಗಲೂ ಸಹ ಕೃತಜ್ಞರಾಗಿರಬೇಕು.

ಮಾನ್ಯ ಸಭಾಪತಿಯವರೇ, ಇಷ್ಟೇ ಅಲ್ಲದೇ, ಅವರು ಬೇರೆ ಕಾಯಿದೆಗಳನ್ನು ಸಹ ತಂದರು. ಸಾಲ ಮುಕ್ತ ಕಾಯಿದೆಯನ್ನು ತಂದು ರೈತರು, ಕಾರ್ಮಿಕರು ಎಲ್ಲರೂ ಸಹ ಸಾಲಗಾರರ ಕಾಟದಿಂದ ತಪ್ಪಿಸಿಕೊಳ್ಳುವಂತೆ ಮಾಡಿದರು. ಈಗಾಗಲೇ ಎಲ್ಲಾ ಮಾನ್ಯ ಸದಸ್ಯರುಗಳು ಹೇಳಿರುವಂತೆ, ಮಾನ್ಯ ಬಿ.ಬಸವಲಿಂಗಪ್ಪನವರ ನೇತೃತ್ವದಲ್ಲಿ 'ಮಲ ಹೊರುವ' ಪದ್ಧತಿಯನ್ನು ನಿಷೇಧ ಮಾಡಿದರು. ಅದೇರೀತಿ 'ಜೀತ ಪದ್ಧತಿ'ಯನ್ನು ನಿಷೇಧ ಮಾಡಿದರು. ದಲಿತರು 'ಜೀತ ಪದ್ಧತಿ'ಯನ್ನು ಮಾಡುತ್ತಿದ್ದರು. ರೈತರ ಮನೆಗಳಲ್ಲಿ ದಲಿತರು ಜೀತಕ್ಕೆ ಅಂದರೆ, ಕೇವಲ ಎರಡು ಹೊತ್ತಿನ ಊಟದ ಜೀತಕ್ಕೆ ಗುಲಾಮರಾಗಿದ್ದರು. ಮಾನ್ಯ ಡಿ.ದೇವರಾಜ ಅರಸುರವರು ಅಂತಹ ಒಂದು ಪದ್ಧತಿಯನ್ನು ನಿಷೇಧ ಮಾಡಿ ದಲಿತರಿಗೆ ಸಂಪೂರ್ಣವಾದ ಒಂದು ಮುಕ್ತಿಯನ್ನು ಕೊಟ್ಟರು. ಮತ್ತೆ, ಹಿಂದುಳಿದ ವರ್ಗದವರಿಗೆ ಮತ್ತು ದಲಿತರಿಗೆ ನೂರಾರು ಹಾಸ್ಟೆಲ್‌ಗಳನ್ನು ಕಟ್ಟಿಕೊಟ್ಟು ಹಿಂದುಳಿದ ವರ್ಗದವರು ಮತ್ತು ದಲಿತರು ಶಿಕ್ಷಣ ಪಡೆಯುವುದಕ್ಕೆ ಅನುಕೂಲ ಮಾಡಿಕೊಟ್ಟರು. ಮಾನ್ಯ ಡಿ.ದೇವರಾಜ ಅರಸುರವರು ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯನ್ನು ಸರ್ಕಾರದಲ್ಲಿ ಪ್ರಾರಂಭ ಮಾಡಿದವರು ಎನ್ನುವಂತಹ ಮಾತನ್ನು ನಾನು ಸದನಕ್ಕೆ ತಿಳಿಸುವುದಕ್ಕೆ ಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯ 1956 ರಲ್ಲಿ 'ಕರ್ನಾಟಕ ಏಕೀಕರಣ' ಆದ ನಂತರವೂ 'ಮೈಸೂರು ರಾಜ್ಯ' ಎನ್ನುವಂತಹ ಹೆಸರೇ ಇತ್ತು. ಆದರೆ, ಮಾನ್ಯ ಡಿ.ದೇವರಾಜ ಅರಸುರವರು 'ಕರ್ನಾಟಕ' ಎಂಬ ಹೆಸರನ್ನು ತಂದರು. ಹೀಗೆ ನಮ್ಮ ಶೋಷಿತ ವರ್ಗದವರು, ಹಿಂದುಳಿದ ವರ್ಗದವರು, ದಲಿತರೆಲ್ಲರಿಗೂ ಸಹ ಶಾಶ್ವತವಾದ ಒಂದು ಬದಲಾವಣೆಯನ್ನು, ಸಾಮಾಜಿಕ ಪರಿವರ್ತನೆಯನ್ನು ಮಾನ್ಯ ಡಿ.ದೇವರಾಜ ಅರಸುರವರು

ತಂದರು. ಮತ್ತೆ ಅವರು ಮಾಡಿದ ಇನ್ನೊಂದು ದೊಡ್ಡ ಕೆಲಸ ಏನೆಂದರೆ, ಅವರು 2ನೇ ಹಂತದ ನಾಯಕರನ್ನು ಬೆಳೆಸಿದರು. ಇವತ್ತು ಈ ಸದನದಲ್ಲಿ ಮಾನ್ಯ ಡಿ.ದೇವರಾಜ ಅರಸುರವರ ಜೊತೆಯಲ್ಲಿ ಕೆಲಸ ಮಾಡಿದಂತಹವರು ಇದ್ದಾರೆ. ಅವರೆಲ್ಲರೂ ಇವತ್ತು ನಾಯಕರಾಗಿ ಬೆಳೆದಿದ್ದಾರೆ. ಮಾನ್ಯ ಡಿ.ದೇವರಾಜ ಅರಸುರವರು ಅವರೆಲ್ಲರನ್ನು ಮುನ್ನೆಲೆಗೆ ತಂದರು. ನಮ್ಮ ಪಕ್ಷದ ರಾಜ್ಯ ಅಧ್ಯಕ್ಷರಾದ ಶ್ರೀ ಬಿ.ಕೆ.ಹರಿಪ್ರಸಾದ್‌ರವರು ಮಾತನಾಡುವ ಸಂದರ್ಭದಲ್ಲಿ ಹೇಳಿದ ಹಾಗೆ, ಎಷ್ಟೋ ಜನರು ರಾಜಕೀಯಕ್ಕೆ ಬರಬರಬೇಕೆಂದು ಕನಸ್ಸನ್ನು ಕಂಡಿರಲ್ಲಿಲ್ಲ, ಯಾವತ್ತು ನಾವು ನಾಯಕರಾಗಬೇಕೆಂದು ಸಹ ಆಸೆ ಪಟ್ಟಿರಲ್ಲಿಲ್ಲ, ಅಂತಹ ಒಂದು ಹಿಂದುಳಿದವರ, ದಲಿತರನ್ನು ಮತ್ತು ಅಲ್ಪಸಂಖ್ಯಾತರನ್ನು ಎಲ್ಲೋ ಕೆಲಸ ಮಾಡುತ್ತಿದ್ದವರನ್ನು ಹುಡುಕಿ-ಹುಡುಕಿ ತಂದು ಅವರನ್ನು ನಿಗಮ-ಮಂಡಳಿಯ ಅಧ್ಯಕ್ಷರನ್ನಾಗಿ ಮಾಡಿ, ಚುನಾವಣೆಗೆ ಟಿಕೆಟ್ ಕೊಟ್ಟು ಅವರನ್ನು ಶಾಸಕರನ್ನಾಗಿ ಮಾಡಿ, ಮಂತ್ರಿಗಳನ್ನಾಗಿ ಮಾಡಿದ್ದಾರೆ.

ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಬಿ.ಎಸ್.ಶಿವಣ್ಣನವರು ಹೇಳಿದಂತೆ, ಶ್ರೀ ಡಿ.ದೇವರಾಜ ಅರಸುರವರ ಗರಡಿಯಲ್ಲಿ ಪಳಗಿದಂತಹ ನಾಯಕರು ಇವತ್ತು ಮುಖ್ಯಮಂತ್ರಿಗಳು ಸಹ ಆಗಿದ್ದಾರೆ. ಇವತ್ತು ನಮ್ಮ ರಾಜ್ಯದಲ್ಲಿ ಎಷ್ಟೋ ಜನ ನಾಯಕರನ್ನು ಕೊಡುಗೆಯನ್ನಾಗಿ ಕೊಟ್ಟಿರುವುದು ಶ್ರೀ ಡಿ.ದೇವರಾಜ ಅರಸುರವರ ಕೊಡುಗೆಯಾಗಿದೆ. ನಮ್ಮ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದ ಬಿ.ಕೆ.ಹರಿಪ್ರಸಾದ್‌ರವರು ಮಾತನಾಡುವ ಸಂದರ್ಭದಲ್ಲಿ ಯಾರಾದರೂ ತ್ರಿಶಂಕುಗಳು ಸಮಾಜದಲ್ಲಿ ಇದ್ದರೆ, ಅದು ಹಿಂದುಳಿದ ವರ್ಗದವರು ಎಂದು ಹೇಳಿದರು. ನಾವು ಇವತ್ತು ಹಿಂದುಳಿದವರು ಇಷ್ಟು ದೊಡ್ಡ ಸಂಖ್ಯೆಯಲ್ಲಿ ಇದ್ದರೂ ಸಹ, ಇವತ್ತು ನಮ್ಮ ಸ್ಥಿತಿಗತಿ ಏನಿದೆ, ಸಾಮಾಜಿವಾಗಿ, ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ನಾವು ಯಾವ ಸ್ಥಿತಿಯಲ್ಲಿದ್ದೇವೆ, ನಮ್ಮ ಜನಸಂಖ್ಯೆ ಎಷ್ಟಿದೆ ಎಂದು ತಿಳಿದುಕೊಳ್ಳುವುದಕ್ಕೆ ಒಂದು ಸಮೀಕ್ಷೆಯನ್ನು ಇದುವರೆವಿಗೂ ಮಾಡಿಸಿಕೊಳ್ಳುವುದಕ್ಕೆ ಆಗಲಿಲ್ಲ.

ಮಾನ್ಯ ಸಭಾಪತಿಯವರೇ, 1931ನೇ ಸಾಲಿನಲ್ಲಿ ಬಿಟ್ರಿಷ್‌ರವರ ಕಾಲದಲ್ಲಿ ಸಮೀಕ್ಷೆಯಾಗಿದೆ. ಅದಾದ ಮೇಲೆ ಇದುವರೆಗೂ ಸಹ ಆಗಿಲ್ಲ. ಈ ಹಿಂದೆ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಸಿದ್ದರಾಮಯ್ಯನವರು ಎರಡು ಬಾರಿ ಪ್ರಯತ್ನ ಮಾಡಿದ್ದರು. ಹಿಂದೆ ಶ್ರೀ ಹೆಚ್.ಕಾಂತರಾಜುರವರ ಆಯೋಗವನ್ನು ರಚಿಸಿ, ಅದರ ಮೂಲಕ ಸಾಮಾಜಿಕ ಮತ್ತು ಶೈಕ್ಷಣಿಕ ಹಾಗೂ ಜಾತಿ ಸಮೀಕ್ಷೆಯನ್ನು ನಡೆಸಿದರು. ಅದನ್ನು ಜಾರಿಗೆ ತರಬೇಕೆಂದು ಅಂದುಕೊಂಡರು. ಆದರೆ, ಅದು ಆಗಲಿಲ್ಲ. ಅದಾದ ಮೇಲೆ ಬಹಳ ವಿರೋಧ ಆಯಿತು. ಹಾಗಾಗಿ, ಎಲ್ಲರ ವಿಶ್ವಾಸವನ್ನು ತೆಗೆದುಕೊಳ್ಳಬೇಕು, ಮತ್ತೊಮ್ಮೆ ಆ ಸಮೀಕ್ಷೆ ವೈಜ್ಞಾನಿಕವಾಗಿ ಬರುತ್ತದೆ ಎಂಬ ಭರವಸೆ ತುಂಬಬೇಕೆಂದು ಹೇಳಿ,

ಮತ್ತೊಂದು ಆಯೋಗವನ್ನು ರಚನೆ ಮಾಡಿದರು. ಈಗ ಶ್ರೀ ಮಧುಸೂದನ್‌ನಾಯಕ್‌ರವರ ವರದಿ ತಯಾರು ಆಗಿದೆ. ಹಿಂದಿನ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಸಿದ್ದರಾಮಯ್ಯನವರು ಅಧಿಕಾರವನ್ನು ಬಿಟ್ಟುಕೊಡುವ ಒಂದು ದಿವಸ ಮುಂಚೆ ಆ ವರದಿಯನ್ನು ಸ್ವೀಕಾರ ಮಾಡಿದ್ದಾರೆ. ಇವತ್ತು ಎಲ್ಲಾ ಮಾನ್ಯ ಸದಸ್ಯರುಗಳು ಹಿಂದುಳಿದ ವರ್ಗದವರ ಬಗ್ಗೆ ಮತ್ತು ಮಾನ್ಯ ಡಿ.ದೇವರಾಜ ಅರಸುರವರು ಕೊಟ್ಟಂತಹ ಕೂಡುಗೆಗಳ ಬಗ್ಗೆ ಮಾತನಾಡಿದ್ದಾರೆ. ಜೊತೆಗೆ ಅವರ ರೀತಿಯಲ್ಲಿ ನಾವೆಲ್ಲರೂ ನಡೆಯಬೇಕೆಂದು ಸಹ ಹೇಳಿಕೊಂಡಿದ್ದಾರೆ. ಹಾಗಾಗಿ, ಈ ಸದನಕ್ಕೆ ಎಲ್ಲರ ವಿನಂತಿ ಏನೆಂದರೆ, ಆ ಒಂದು ಜಾತಿ ಸಮೀಕ್ಷೆಯನ್ನು ಜಾರಿಗೆ ತರುವಂತಹ ಸಂಕಲ್ಪವನ್ನು ಎಲ್ಲರೂ ಮಾಡಿ ಅದನ್ನು ಜಾರಿಗೆ ತಂದರೆ, ಹಿಂದುಳಿದ ವರ್ಗದವರಿಗೆ ನಿಜವಾಗಲೂ ಅನುಕೂಲ ಮಾಡಿಕೊಟ್ಟಂತೆ ಆಗುತ್ತದೆ. ಆ ಮೂಲಕ ನಾವು ಮಾನ್ಯ ಡಿ.ದೇವರಾಜ ಅರಸುರವರಿಗೆ ನಿಜವಾದಂತಹ ಶ್ರದ್ಧಾಂಜಲಿ ಸಲ್ಲಿಸಿದಂತೆ ಆಗುತ್ತದೆ. ಆ ಕೆಲಸ ಆಗಲಿ ಎಂದು ಹೇಳಿ ನಾನು ಈ ಸದನದಿಂದ ಆಶಯವನ್ನು ವ್ಯಕ್ತ ಪಡಿಸುತ್ತಿದ್ದೇನೆ.

ಮಾನ್ಯ ಸಭಾಪತಿಯವರೇ, ಅದೇರೀತಿ ಇಂದು ನಮ್ಮ ಕಾಂಗ್ರೆಸ್ ಪಕ್ಷದ ಮತ್ತೊಬ್ಬ ನಾಯಕರಾದ ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ ರಾಜೀವ್ ಗಾಂಧಿಯವರ ಸದ್ಭಾವನಾ ದಿವಸವಾಗಿದೆ. ನಮ್ಮ ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ ರಾಜೀವ್‌ಗಾಂಧಿಯವರ ಜಯಂತಿ. ಅವರನ್ನು ಸಹ ನಮ್ಮ ದೇಶ ಯಾವತ್ತಿಗೂ ಸಹ ಮರೆಯುವಂತಿಲ್ಲ. ಇವತ್ತು ಜೆನ್ ಝೀ (Gen Z) ಎಂದು ಅದರ ಬಗ್ಗೆ ಬಹಳಷ್ಟು ಜನರು ಮಾತನಾಡುತ್ತಾರೆ. ಯುವ ಶಕ್ತಿ ಮುಂದೆ ಎಂತಹ ಪ್ರಬಲವಾದ ಸರ್ಕಾರವಾದರೂ ಕೂಡ ಮಣಿಯಬೇಕೆಂದು ಜೆನ್ ಝೀಯವರು ತೋರಿಸಿಕೊಟ್ಟಿದ್ದಾರೆಂದು ಹೇಳುತ್ತಾರೆ. ಆದರೆ, ಶ್ರೀ ರಾಜೀವ್‌ಗಾಂಧಿಯವರು ಅಂತಹ ಯುವ ಶಕ್ತಿಯ ಬಗ್ಗೆ ಆಗಲೇ ತಿಳಿದುಕೊಂಡಿದ್ದರು. ಹಾಗಾಗಿ, 21 ವರ್ಷಕ್ಕೆ ಇದ್ದ ನಮ್ಮ Voting rights ಅನ್ನು ಮಾನ್ಯ ರಾಜೀವ್ ಗಾಂಧಿಯವರು 18 ವರ್ಷಕ್ಕೆ ಇಳಿಸಿದರು. ಅದೇರೀತಿ ಇವತ್ತು ನಮ್ಮ ದೇಶದಲ್ಲಿ ಇಷ್ಟೊಂದು ಅಭಿವೃದ್ಧಿಯಾಗಬೇಕೆಂದರೆ, ಅದಕ್ಕೆ ಮಾಹಿತಿ ತಂತ್ರಜ್ಞಾನ ಮತ್ತು Telecommuniation ನಲ್ಲಿ ಆದಂತಹ ಕ್ರಾಂತಿ ಕಾರಣವಾಗಿದೆ. ಶ್ರೀ ರಾಜೀವ್ ಗಾಂಧಿಜಿಯವರು ಆ ಕ್ರಾಂತಿಗೆ ಬುನಾದಿ ಮತ್ತು ಅಡಿಗಲ್ಲನ್ನು ಹಾಕಿದವರಾಗಿದ್ದಾರೆ. ಮತ್ತೆ ಮಾನ್ಯ ಡಿ.ದೇವರಾಜ ಅರಸುರವರು ಸಾಮಾಜಿಕ ನ್ಯಾಯದಲ್ಲಿ ಯಾವ ರೀತಿ ನಂಬಿಕೆಯನ್ನು ಇಟ್ಟುಕೊಂಡಿದ್ದರೋ, ಅದೇರೀತಿ ಶ್ರೀ ರಾಜೀವ್ ಗಾಂಧಿಜಿಯವರಿಗೂ ಸಹ ಸಾಮಾಜಿಕ ನ್ಯಾಯದಲ್ಲಿ ಅಷ್ಟೇ ನಂಬಿಕೆ ಇತ್ತು. ಹಾಗಾಗಿ, ಅಧಿಕಾರ ವಿಕೇಂದ್ರೀಕರಣ ಮಾಡಬೇಕೆಂದು ಹೇಳಿ, '73 ನೇ ತಿದ್ದುಪಡಿಯನ್ನು ಸಂವಿಧಾನಕ್ಕೆ' ತಂದು ಇವತ್ತು ಪಂಚಾಯತ್ ರಾಜ್ ವ್ಯವಸ್ಥೆಯನ್ನು ದೇಶಕ್ಕೆ ಪರಿಚಯ ಮಾಡಿಕೊಟ್ಟರು.

ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮಹಿಳೆಯರಿಗೆ, ದಲಿತರಿಗೆ ಮತ್ತು ಹಿಂದುಳಿದ ವರ್ಗದವರಿಗೂ ಕೂಡ ಮೀಸಲಾತಿಯನ್ನು ತರುವಂತಹ ಕೆಲಸವನ್ನು ಮಾಡಿದರು. ಹಾಗಾಗಿ, ಈ ಇಬ್ಬರು ಮಹಾನ್ ಚೇತನಗಳು ಸಮಾಜಕ್ಕೆ ಕೊಟ್ಟಂತಹ ಕೊಡುಗೆ ಬಹಳಷ್ಟು ಅಪಾರವಾಗಿದೆ ಮತ್ತು ಅನನ್ಯವಾಗಿದೆ. ಇವತ್ತು ಇವರುಗಳನ್ನು ನೆನಪಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದಕ್ಕೆ, ಮತ್ತೊಮ್ಮೆ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಅದೇರೀತಿ ವಿರೋಧ ಪಕ್ಷದವರು ಈ ಒಂದು ಚರ್ಚೆಯಲ್ಲಿ ಭಾಗವಹಿಸಿದಕ್ಕೆ ಅವರಿಗೂ ಸಹ ಕೃತಜ್ಞತೆಗಳನ್ನು ಸಲ್ಲಿಸುತ್ತಾ, ನಾನು ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸದನದಲ್ಲಿ ಮೂರು ಜನ ಮಾನ್ಯಸಚಿವರು ಹಾಗೂ ಸಭಾನಾಯಕರು ಇದ್ದಾರೆ. ಇವತ್ತು ಮಾನ್ಯ ಡಿ.ದೇವರಾಜ ಅರಸುರವರ ಹುಟ್ಟು ಹಬ್ಬದ ಸಂದರ್ಭದಲ್ಲಿ ಮಾನ್ಯ ಸಚಿವರು ಜಾತಿಗಣತಿ ವರದಿಯನ್ನು ಜಾರಿಗೊಳಿಸಬೇಕೆಂದು ಹೇಳಿದರು. ಇದಕ್ಕೆ ಒಂದು ನಿರ್ಣಯ ಮಾಡಿ, ಅದನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದು ಇದನ್ನು ಜಾರಿಗೊಳಿಸುವುದಕ್ಕೆ ವಿನಂತಿಯನ್ನು ಮಾಡಿಕೊಳ್ಳಬೇಕು, ಸದನ ಆಗ್ರಹ ಪಡಿಸಿದೆ. ಸದನದ ಎಲ್ಲರು ವ್ಯಕ್ತಪಡಿಸಿದ ಆಶಯವನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುವುದು ಒಳ್ಳೆಯದು ಎಂದು ನಾನು ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

**(ಗೊಂದಲ)**

**ಶ್ರೀ ಪಿ.ವಿ.ಮೋಹನ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, it is not a Caste Census. It is a Social Economic Census.

**(ಗೊಂದಲ)**

**ಸಭಾಪತಿಯವರು:-** ನಾಳೆ ಮಾತನಾಡಿ.

**(ಗೊಂದಲ)**

**ಡಾ॥ ಯತೀಂದ್ರ.ಎಸ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಹಲವಾರು ಮಾನ್ಯ ಸದಸ್ಯರುಗಳು ಮತ್ತು ಶಾಸಕರು Photo Exhibition ಮಾಡಬೇಕೆಂದು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ನನ್ನ ಉಸ್ತುವಾರಿಯಲ್ಲಿ ‘ಮೈಸೂರು ದಸರಾ’ ನಡೆಯುವುದರಿಂದ ಖಂಡಿತವಾಗಿ ಈ ಬಾರಿ ಮಾನ್ಯ ಡಿ.ದೇವರಾಜ ಅರಸುರವರ ಒಂದು Photo Exhibition ಅನ್ನು ಮಾಡುತ್ತೇನೆ. ಅದರ ಜೊತೆಗೆ ವಸ್ತು ಸಂಗ್ರಹಾಲಯವನ್ನು ಮಾಡಬೇಕೆಂದು ಕೆಲವು ಸದಸ್ಯರು ಸಲಹೆಯನ್ನು ಕೊಟ್ಟಿದ್ದಾರೆ. ಇದನ್ನು ಸರ್ಕಾರದ ಮತ್ತು ಮಾನ್ಯ

ಮುಖ್ಯಮಂತ್ರಿಯವರ ಗಮನಕ್ಕೆ ತಂದು, ಆ ನಿಟ್ಟಿನಲ್ಲಿಯೂ ಸಹ ಪ್ರಯತ್ನವನ್ನು ಮಾಡುತ್ತೇವೆ. ಅಲ್ಲದೇ, ತಾವು ಸಹ ಮೈಸೂರಿನಲ್ಲಿ ಡಿ.ದೇವರಾಜ ಅರಸುರವರ ಒಂದು ಪ್ರತಿಮೆ ಬರಬೇಕೆಂಬ ಆಶಯವನ್ನು ವ್ಯಕ್ತಿಪಡಿಸಿದ್ದೀರಿ. ಈಗಾಗಲೇ ಜಿಲ್ಲಾಧಿಕಾರಿಗಳ ಕಛೇರಿಗಳಲ್ಲಿ ಹಿಂದಿನ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಮಾನ್ಯ ಡಿ.ದೇವರಾಜ ಅರಸುರವರ ಪ್ರತಿಮೆಯನ್ನು ಸ್ಥಾಪನೆ ಮಾಡಿದ್ದಾರೆ. ಅದು ಉದ್ಘಾಟನೆ ಸಹ ಆಗಿದೆ.

**ಶ್ರೀ ಕಿಶೋರ್ ಕುಮಾರ್ ಪುತ್ತೂರು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಈಗ ಮಾನ್ಯ ಸಭಾನಾಯಕರು ಹೇಳಿರುವಂತಹದ್ದಕ್ಕೆ ನಮ್ಮೆಲ್ಲರ ಸಹಕಾರ ಇದೆ. ಶ್ರೀ ಮಧುಸೂದನ್ ನಾಯಕ್‌ರವರ ಆಯೋಗದ ವರದಿಯನ್ನು ಅವರು ಜಾರಿಗೆ ತರಬೇಕಾದರೆ, ಮಾನ್ಯ ಸಿದ್ದರಾಮಯ್ಯನವರು ಅಧಿಕಾರವನ್ನು ಬಿಟ್ಟುಕೊಡುವ ಮುಂಚಿನ ದಿವಸ ಆ ವರದಿಯನ್ನು ತೆಗೆದುಕೊಂಡಿದ್ದಾರೆಂಬ ಮಾತನ್ನು ಹೇಳಿದ್ದಾರೆ. ಅದು ಅವರ ಅಧಿಕಾರ, ಅದು ಅವರವರ ಮಾತುಕತೆಯಲ್ಲಿ ಆಗಿದೆ. ಆದರೆ, ಈಗಲೂ ಕಾಂಗ್ರೆಸ್ ಸರ್ಕಾರ ಇದೆ. ಈಗ ಅದನ್ನು ಜಾರಿಗೆ ತರಲಿ. ಅದಕ್ಕೆ ನಮ್ಮ ಸಹಕಾರ ಇದೆ. ಜಾತಿಗಣತಿಗೆ 400 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ. ಅದನ್ನು ಜಾರಿಗೆ ತರಲಿ ಎನ್ನುವುದು ನನ್ನ ಆಪೇಕ್ಷೆ ಇದೆ.

**ಶ್ರೀ ಆರ್.ರಘು:-** ಮಾನ್ಯ ಸಭಾಪತಿಯವರೇ, ಸಭಾನಾಯಕರು ಈ ಬಗ್ಗೆ ಒಂದು ಭರವಸೆಯನ್ನು ಕೊಡಬೇಕು.

**ಸಭಾಪತಿಯವರು:-** ಮಾನ್ಯ ಸದಸ್ಯರುಗಳೇ, ಅದನ್ನು ಚರ್ಚೆ ಮಾಡುತ್ತೇನೆ. ಅದನ್ನು Cabinet ನಲ್ಲಿ ತಂದು..

**(ಗೊಂದಲ)**

**ಶ್ರೀ ಕಿಶೋರ್ ಕುಮಾರ್ ಪುತ್ತೂರು:-** ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಸಿದ್ದರಾಮಯ್ಯನವರು ಅಧಿಕಾರ ಬಿಡುವ ಮುಂಚಿನ ದಿವಸ ತರಾತುರಿಯಲ್ಲಿ ಅದನ್ನು ತಂದರು ಎಂದರೆ, ಅದಕ್ಕೆ ಅರ್ಥ ಇಲ್ಲವೇ? ಈಗಲೂ ಸಹ ಅವರ ಪಕ್ಷದ ಮುಖ್ಯಮಂತ್ರಿಯವರೇ ಇದ್ದಾರೆ ಅಲ್ಲವೇ;..

**ಸಭಾಪತಿಯವರು:-** ಮಾನ್ಯ ಸದಸ್ಯರೇ, ನಾನು ಅದನ್ನು ಮುಖ್ಯಮಂತ್ರಿಯವರ ಗಮನಕ್ಕೆ ತರುತ್ತೇನೆ.

**ಶ್ರೀ ಕಿಶೋರ್ ಕುಮಾರ್ ಪುತ್ತೂರು:-** ಮಾನ್ಯ ಸಭಾಪತಿಯವರೇ, ನಾನು ಕೂಡ ಒಬ್ಬ ಹಿಂದುಳಿದ ವರ್ಗದವನಾಗಿದ್ದೇನೆ. ಆದಕಾರಣ ಅದನ್ನು ಜಾರಿಗೆ ತರಬೇಕೆಂದು ವಿನಂತಿಯನ್ನು ಮಾಡುತ್ತೇನೆ. ಮತ್ತೆ ಇದಕ್ಕೆ ಎಲ್ಲರ ಸಹಕಾರ ಉಂಟು.

**ಶ್ರೀ ಆರ್.ರಘು:-** ಮಾನ್ಯ ಸಭಾಪತಿಯವರೇ, ತಾವು ಭರವಸೆಯನ್ನು ಕೊಟ್ಟಿದ್ದೀರಿ. ಹಾಗಾಗಿ, ಅದನ್ನು ದಯಮಾಡಿ ಕ್ಯಾಬಿನೇಟ್‌ಗೆ ತರಿಸಿ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಆಯಿತು. ಸಾಕು ಬಿಡಿ.

**ಶ್ರೀ ಆರ್.ರಘು:-** ಮಾನ್ಯ ಸಭಾಪತಿಯವರೇ, ತಾವು ಕ್ಯಾಬಿನೇಟ್‌ಗೆ ತರಿಸುತ್ತೇವೆಂದು ಭರವಸೆ ಕೊಟ್ಟರೆ.,

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಈಗ ಅದೆಲ್ಲಾ ಬೇಡ ಬಿಡಿ. ಅದು ಕ್ಯಾಬಿನೇಟ್ ತೀರ್ಮಾನವಾಗಬೇಕು.

**(ಗೊಂದಲ)**

ಶ್ರೀ **ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಿದ್ದರಾಮಯ್ಯನವರು ಹೋರಾಟ ಮಾಡಿ, ಮಾಡುತ್ತೇವೆಂದು ಹೇಳಿದ್ದಾರೆ. ಇದಕ್ಕೆ ಹೋರಾಟ ಬೇಕಾಗಿಲ್ಲ. ಅದೇ ಸರ್ಕಾರ ಇದೆ. ಅದನ್ನು ಜಾರಿಗೊಳಿಸಲಿ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಮಾನ್ಯ ವಿರೋಧ ಪಕ್ಷದ ನಾಯಕರೇ, ಎಲ್ಲಾ ಗೌರವಾನ್ವಿತ ಸದಸ್ಯರುಗಳೇ, ನಿಜವಾಗಲೂ ಬಹಳ ಅರ್ಥ ಪೂರ್ಣವಾಗಿ, ಬಹಳ ಅದ್ಭುತ ಭಾಷಣಗಳನ್ನು ನಾವು ಇವತ್ತು ಕೇಳಿದ್ದೇವೆ. ಇದರಿಂದ ನಮಗೆಲ್ಲಾ ರೋಮಾಂಚನವಾಗಿದೆ. ದಿವಂಗತ ಡಿ.ದೇವರಾಜ ಅರಸುರವರ ಚಿಂತನೆ, ಅವರ ವಿಚಾರ ಧಾರೆಗಳು, ಅವರ ಹೋರಾಟ ಯಾವ ರೀತಿಯಲ್ಲಿ ಅದನ್ನು ಜನರ ಜೀವನದಲ್ಲಿ ಬದಲಾವಣೆ ಮಾಡುವಂತಹ ದೊಡ್ಡ ಕಾರ್ಯಕ್ರಮವನ್ನು ಅವರು ಮಾಡಿದ್ದರು. ಇವತ್ತು ನಿಜವಾಗಲೂ ಪ್ರತಿಯೊಬ್ಬರಿಗೂ ಮತ್ತು ಮುಂದಿನ ಯುವ ಪೀಳಿಗೆಗೆ ಇದೊಂದು ದಾರಿದೀಪ ಆಗಬೇಕಾಗಿದೆ. ಮಾನ್ಯ ಡಿ.ದೇವರಾಜ ಅರಸುರವರು ಸಾಮಾಜಿಕ ನ್ಯಾಯದ ಒಂದು ದೊಡ್ಡ ಶಿಲ್ಪಿ. ಅವರ ಚಿಂತನೆಗಳು ಕೇವಲ ಒಂದು ಕಾಲಘಟ್ಟಕ್ಕೆ ಸೀಮಿತವಾಗಿಲ್ಲ. ಅವರ ಸಾಮಾಜಿಕ ನ್ಯಾಯ, ಸಮಾನತೆ, ಪ್ರಜಾಪ್ರಭುತ್ವ ಮತ್ತು ಮಾನವನ ಘನತೆ ಮೇಲಿನ ಅವರ ನಂಬಿಕೆ ಇಂದಿಗೂ ಯುವ ಪೀಳಿಗೆಗೆ ದಾರಿದೀಪವಾಗಿದೆ. ಅವರ ಆದರ್ಶಗಳನ್ನು ಸ್ಮರಿಸುವುದರ ಜೊತೆಗೆ ಸಮಾಜದ ಪ್ರತಿಯೊಬ್ಬರಿಗೆ ಸಮಾನ ಅವಕಾಶ ನ್ಯಾಯ ದೊರಕುವಂತಹ ಕರ್ನಾಟಕವನ್ನು ನಿರ್ಮಿಸುವ ನಾವು ಸಂಕಲ್ಪವನ್ನು ಕೈಗೊಳ್ಳಬೇಕಾಗಿದೆ ಎಂಬ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಈಗಾಗಲೇ ಮಾನ್ಯ ಎಲ್ಲಾ ಮಾನ್ಯ ಸದಸ್ಯರುಗಳು ಇವತ್ತು ಬಹಳ ಅರ್ಥ ಪೂರ್ಣವಾಗಿ ಮಾತನಾಡಿದ್ದಾರೆ. ಹಾಗಾಗಿ, ಅವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಅದೇರೀತಿ ದಿವಂಗತ ಶ್ರೀ ರಾಜೀವ್ ಗಾಂಧಿಯವರ ಬಗ್ಗೆ ಹೇಳುವುದಾದರೆ, ಅವರ ಚಿಂತನೆ ಯಾವಾಗಲೂ ಯುವಕರ ಬಗ್ಗೆ ಇತ್ತು. ಅವರು ಪ್ರತಿಯೊಂದು ಭಾಷಣದಲ್ಲಿಯೂ ಹೇಳುತ್ತಿದ್ದರು. ಈ ದೇಶವನ್ನು 21ನೇ ಶತಮಾನಕ್ಕೆ ತೆಗೆದುಕೊಂಡು ಹೋಗುವಂತಹ ಕನಸ್ಸನ್ನು ಅವರು ಕಂಡಿದ್ದರು. ಇವತ್ತು ದೇಶದಲ್ಲಿ ದೊಡ್ಡ ಶಕ್ತಿ ಬರಬೇಕಾದರೆ, ಅದು ಯುವಕರಿಂದ ಮಾತ್ರ ಸಾಧ್ಯ ಹಾಗೂ ಈ ದೇಶ ಯುವಕರ ಕೈಯಲ್ಲಿ ಬರಬೇಕೆಂಬ ಮಾತನ್ನು ಹೇಳುತ್ತಿದ್ದರು. ಅಲ್ಲದೇ, 18 ವರ್ಷದ ಯುವಕರಿಗೆ ಅಧಿಕಾರ ಕೊಡಬೇಕೆಂಬ ಚಿಂತನೆ ಮಾಡಿದ್ದರು. ಹಲವಾರು ಮುಖಂಡರು ಹಾಗೂ ನಮ್ಮ ಪಕ್ಷದ ಕೆಲವು ಮುಖಂಡರು 'ಶ್ರೀ ರಾಜೀವ್ ಗಾಂಧಿಯವರೆ, ನೀವು ತಪ್ಪು ಮಾಡುತ್ತಿದ್ದೀರಿ, ಯುವಕರ ಕೈಗೆ ಅಧಿಕಾರ ಕೊಡಬೇಡಿ' ಎಂದು ಹೇಳಿದ್ದರು. ಅವರು ಒಂದು ಭಾವನಾತ್ಮಕ ಭಾಷಣವನ್ನು ಮಾಡಿದರು.

(ಮುಂದು)

(810) 20.08.2026/7.20/ಎಂವಿ-ಆರ್ಎನ್ (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು (ಮುಂದು):-**

ಈ ದೇಶ ಉಳಿಯಬೇಕಾದರೆ ಮತ್ತು ಈ ದೇಶ ಬೆಳೆಯಬೇಕಾದರೆ ಮತ್ತೆ ಈ ದೇಶ 21ನೇ ಶತಮಾನಕ್ಕೆ ಹೋಗಬೇಕಾದರೆ ಅದು ಯುವಕರಿಂದ ಮಾತ್ರ ಸಾಧ್ಯವೆಂದು ಹೇಳಿ, 18 ವರ್ಷದ ಯುವಕರಿಗೆ ಅಧಿಕಾರ ಕೊಟ್ಟಿದ್ದಾರೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ತಾವು ಮಾತನಾಡುವಾಗ ನಮ್ಮ ಪಕ್ಷ ಎಂದು ಹೇಳಿದ್ದೀರಿ. ಆದರೆ, ತಾವು ಆ ರೀತಿ ಹೇಳಬಾರದು.

**ಸಭಾಪತಿಯವರು:-** ನಮ್ಮ ಪಕ್ಷ ಎಂದು ಅಲ್ಲ. ನಾನು ಮಾನ್ಯ ಮಾಜಿ ಪ್ರಧಾನ ಮಂತ್ರಿಗಳಾದ ದಿವಂಗತ ರಾಜೀವ್ ಗಾಂಧಿಯವರ ಬಗ್ಗೆ ಹೇಳಿದ್ದು.

**ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ತಾವು ಆ ರೀತಿ ಹೇಳಿದ್ದೀರಿ.

**ಸಭಾಪತಿಯವರು:-** ಇದು ಮಾನ್ಯ ಮಾಜಿ ಪ್ರಧಾನ ಮಂತ್ರಿಗಳಾದ ದಿವಂಗತ ರಾಜೀವ್ ಗಾಂಧಿಯವರು ಹೇಳಿದ ಮಾತು. ತಾವುಗಳು ಎಲ್ಲದಕ್ಕೂ ತಪ್ಪು ಹುಡುಕುತ್ತೀರಿ. ಶ್ರೀ ರಾಜೀವ್ ಗಾಂಧಿಯವರು ಯುವಕರ ಬಗ್ಗೆ ಚಿಂತನೆ ಮಾಡಿದ್ದು. ಅದು ಕೇವಲ ಒಂದು ಪಕ್ಷದ ಬಗ್ಗೆ ಅಲ್ಲ. ಇಡೀ ದೇಶದ ಯುವಕರ ಬಗ್ಗೆ ಚಿಂತನೆ ಮಾಡಿ, 18 ವರ್ಷದ ಯುವಕರಿಗೆ ಹಕ್ಕನ್ನು ಕೊಟ್ಟಂತಹ ಒಬ್ಬ ಧೀಮಂತ ನಾಯಕ ಎಂದರೆ, ಅದು ದಿವಂಗತ ರಾಜೀವ್

ಗಾಂಧಿಯವರು. ಇಲ್ಲಿ ಹಲವಾರು ಮುಖಂಡರು ಶ್ರೀ ರಾಜೀವ್ ಗಾಂಧಿಯವರ ಬಗ್ಗೆ ಮಾತನಾಡುವುದಕ್ಕೆ ಅವಕಾಶ ನೀಡಬೇಡಿ ಎಂದು ಹೇಳಿದರು. ಆದರೆ, ಅವರಿಗೆ ಯುವಕರ ಬಗ್ಗೆ ಒಂದು ನಂಬಿಕೆ ಇತ್ತು. ಇವತ್ತು ದೇಶವನ್ನು ಆಳುವಂತಹ ಶಕ್ತಿ ಯುವಕರ ಕೈಯಲ್ಲಿರುವ ಹಿನ್ನೆಲೆಯಲ್ಲಿ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಇವತ್ತು ಸಂಪರ್ಕ ಕ್ರಾಂತಿ ಏನಿದೆ, ಅದು ಮೊಬೈಲ್, ಲ್ಯಾಪ್‌ಟಾಪ್ ಮತ್ತು ಕಂಪ್ಯೂಟರ್ ಇರಬಹುದು. ಇದೆಲ್ಲಾ ಶ್ರೀ ರಾಜೀವ್ ಗಾಂಧಿಯವರ ಕೊಡುಗೆಯಾಗಿದೆ. ಆ ಹಿನ್ನೆಲೆಯಲ್ಲಿ ದೇಶ ಅಭಿವೃದ್ಧಿಯಾಗಬೇಕಾಗಿರುವುದಕ್ಕೆ ಮಾಜಿ ಪ್ರಧಾನ ಮಂತ್ರಿಗಳಾದ ದಿವಂಗತ ರಾಜೀವ್ ಗಾಂಧಿಯವರು ಒಂದು ದೊಡ್ಡ ಶಕ್ತಿಯನ್ನು ನೀಡಿದ್ದಾರೆ. ಅದೇ ರೀತಿ ಡಿ. ದೇವರಾಜ ಅರಸುರವರ ಬಗ್ಗೆ ಈಗಾಗಲೇ ಸಾಕಷ್ಟು ಜನ ಮಾನ್ಯ ಸದಸ್ಯರು ಗುಣಗಾನ ಮಾಡಿದ್ದಾರೆ. ಆ ಹಿನ್ನೆಲೆಯಲ್ಲಿ ನಾವು ಅವರ ಆದರ್ಶಗಳಿಗೆ ಅನುಗುಣವಾಗಿ ಕೆಲಸ ಮಾಡೋಣ. ಅವರು ಏನು ಸಂದೇಶ ಕೊಟ್ಟಿದ್ದಾರೆ, ಆ ಸಂದೇಶವನ್ನು ಜನರಿಗ ತಲುಪಿಸುವಂತಹ ಕೆಲಸವನ್ನು ಮಾಡೋಣವೆಂಬ ಮಾತನ್ನು ಹೇಳುತ್ತೇನೆ.

## ೮. ಪ್ರಕಟಣೆಗಳು

**"ವಿಧಾನಸಭೆಯಿಂದ ಅಂಗೀಕೃತಾಗಿರುವ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ಕೋರಿರುವ ಕುರಿತು."**

**ಸಭಾಪತಿಯವರು:–** ಮಾನ್ಯ ಸಭಾಧ್ಯಕ್ಷರವರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ:

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ, ವಿಧಾನ ಸಭೆಯು ದಿನಾಂಕ 20.08.2026ರಂದು ಈ ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಿರುತ್ತದೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1. 2026ನೇ ಸಾಲಿನ ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ.
2. 2026ನೇ ಸಾಲಿನ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ.
3. 2026ನೇ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ.

ಇದನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಈಗ ಸದನವನ್ನು ನಾಳೆ ಬೆಳಗ್ಗೆ 11 ಗಂಟೆ 30 ನಿಮಿಷದವರೆಗೆ ಮುಂದೂಡುತ್ತಿದ್ದೇನೆ.

**(ಸದನವು ರಾತ್ರಿ 7 ಗಂಟೆ 22 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 21ನೇ ಆಗಸ್ಟ್ ಮಾಹೆ 2026ರಂದು ಶುಕ್ರವಾರ ಬೆಳಗ್ಗೆ 11 ಗಂಟೆ 30 ನಿಮಿಷಕ್ಕೆ ಸಮಾವೇಶಗೊಳ್ಳಲು ತೀರ್ಮಾನಿಸಿತು)**

****[XXX] ಈ ಚಿಹ್ನೆಯು ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆದುಹಾಕಲಾಗಿದೆ ಎಂಬುದನ್ನು ಸೂಚಿಸುತ್ತದೆ.**